ಭಾನುವಾರ, ಅಕ್ಟೋಬರ್ 19, 2025 ₹ 7.00
www.prajavani.net
prajavani.net prajavani

# ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

**ಹಾಯಾಗಿ ಮಲಗಿರು ನೀನು...**



ದೆಹಲಿಯ ಗಾಜಿಪುರ ಹೂವಿನ ಮಾರುಕಟ್ಟೆಯಲ್ಲಿ ಇರಿಸಲಾಗಿದ್ದ, ಚೆಂಡು ಹೂವಿನ ಚೀಲಗಳಿಗೆ ಒರಗಿ ಮಲಗಿದ್ದ ಶ್ವಾನ

**ಧನತ್ರಯೋದಶಿ ಖರೀದಿ**




ಧನತ್ರಯೋದಶಿಯ ಭಾಗವಾಗಿ ದೇಶದಾದ್ಯಂತ ಅಂದಾಜು ₹60 ಸಾವಿರ ಕೋಟಿ ಮೌಲ್ಯದ ಚಿನ್ನ, ಬೆಳ್ಳಿಯನ್ನು ಗ್ರಾಹಕರು ಖರೀದಿಸಿದ್ದಾರೆ

# ಪಿಎಸ್‌ಟಿ: 6–7ನೇ ತರಗತಿ ಬೋಧನೆಗೆ ಅಸ್ತು

## ಶಿಕ್ಷಣ ಇಲಾಖೆಯಿಂದ ಅಧಿಸೂಚನೆ; ಆಕ್ಷೇಪಣೆಗೆ 15 ದಿನಗಳ ಅವಕಾಶ

ಪ್ರಜಾವಾಣಿ ವಾರ್ತೆ


**ಬೆಂಗಳೂರು:** ಪ್ರಾಥಮಿಕ ಶಾಲಾ ಶಿಕ್ಷಕರಿಗೆ (ಪಿಎಸ್‌ಟಿ) ಆರು ಮತ್ತು ಏಳನೇ ತರಗತಿಗೆ ಪಾಠ ಮಾಡಲು ಅವಕಾಶ ಕಲ್ಪಿಸಿ ಶಾಲಾ ಶಿಕ್ಷಣ ಇಲಾಖೆ ಅಧಿಸೂಚನೆ ಹೊರಡಿಸಿದ್ದು, ಆಕ್ಷೇಪಣೆ ಸಲ್ಲಿಸಲು 15 ದಿನಗಳ ಅವಕಾಶ ನೀಡಿದೆ.

ವೃಂದ ಮತ್ತು ನೇಮಕಾತಿ ನಿಯಮ–2017ಕ್ಕೆ ಸರ್ಕಾರ ತಿದ್ದುಪಡಿ ತಂದಿದೆ. ಇದರಿಂದ ಪದವಿ, ಶಿಕ್ಷಕರ ಅರ್ಹತಾ ಪರೀಕ್ಷೆ (ಟಿಇಟಿ) ಪ್ರಮಾಣ ಪತ್ರ ಹೊಂದಿದ ಪ್ರಾಥಮಿಕ ಶಾಲಾ ಶಿಕ್ಷಕರಿಗೆ, ವೃಂದ ಮತ್ತು ನೇಮಕಾತಿ ನಿಯಮಕ್ಕೆ 2017ರಲ್ಲಿ ತಿದ್ದುಪಡಿ ತರುವುದಕ್ಕೆ ಮೊದಲು ಜಾರಿಯಲ್ಲಿದ್ದಂತೆ ಏಳನೇ ತರಗತಿಯವರೆಗೂ ಬೋಧಿಸಲು ಅವಕಾಶ ಸಿಗಲಿದೆ.

ರಾಷ್ಟ್ರೀಯ ಶಿಕ್ಷಣ ನೀತಿಯ ಶಿಫಾರಸುಗಳಿಗೆ ಅನುಗುಣವಾಗಿ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಯ ಪದನಾಮ ಬದಲಾಯಿಸಿ, ಹೊಸ ವೃಂದ ಮತ್ತು ನೇಮಕಾತಿ ನಿಯಮವನ್ನು ರೂಪಿಸಲಾಗಿತ್ತು. ಇದರಿಂದ 1ರಿಂದ 5ನೇ ತರಗತಿಯವರೆಗೆ ಬೋಧಿಸುವ ಶಿಕ್ಷಕರನ್ನು ಪ್ರಾಥಮಿಕ ಶಾಲಾ ಶಿಕ್ಷಕರು ಹಾಗೂ 6 ರಿಂದ 8ನೇ ತರಗತಿ ಬೋಧಿಸುವ ಶಿಕ್ಷಕರನ್ನು ಪದವೀಧರ ಶಿಕ್ಷಕರೆಂದು ಪ್ರತ್ಯೇಕಗೊಳಿಸಲಾಗಿತ್ತು. ಇದರ ಪರಿಣಾಮ 2016ಕ್ಕಿಂತ ಮೊದಲು 1ರಿಂದ 7 ಹಾಗೂ 1ರಿಂದ 8ರ ವೃಂದಕ್ಕೆ ನೇಮಕವಾಗಿದ್ದ ಎಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರು 1ರಿಂದ 5ನೇ ತರಗತಿಗೆ ಸೀಮಿತಗೊಂಡಿದ್ದರು.


**ಮುಖ್ಯಾಂಶಗಳು**

- ಪ್ರಾಥಮಿಕ, ಪ್ರೌಢಶಾಲಾ ಶಿಕ್ಷಕರ ಸಹಶಿಕ್ಷಕರ ಬಡ್ತಿ– ಪದವೀಧರರಿಗೆ ಆದ್ಯತೆ
- ಅನ್ಯಾಯ ಖಂಡಿಸಿ 2017ರಿಂದಲೂ ಹೋರಾಟ ನಡೆಸುತ್ತಿದ್ದ ಶಿಕ್ಷಕರ ಸಂಘ



ಪ್ರಾಥಮಿಕ ಶಾಲೆಗಳ ಮುಖ್ಯ ಶಿಕ್ಷಕರ ಹುದ್ದೆ ಹಾಗೂ ಪ್ರೌಢಶಾಲಾ ಸಹಶಿಕ್ಷಕರ ಹುದ್ದೆಗಳ ಬಡ್ತಿಯಲ್ಲೂ ಪದವೀಧರ ಶಿಕ್ಷಕರಿಗೆ ಹೆಚ್ಚಿನ ಆದ್ಯತೆ ನೀಡಲಾಗಿತ್ತು. ಹಲವಾರು ವರ್ಷಗಳಿಂದ ಕರ್ತವ್ಯ ಸಲ್ಲಿಸುತ್ತಿರುವ ಪ್ರಾಥಮಿಕ ಶಾಲಾ ಶಿಕ್ಷಕರು, ಇತ್ತೀಚಿಗೆ ಬಂದ ಪದವೀಧರ ಶಿಕ್ಷಕರ ಕೈಕೆಳಗೆ ಕೆಲಸ ಮಾಡುವಂತಾಗಿತ್ತು. ಹುದ್ದೆಗಳ ಮರುವಿಂಗಡಣೆಯಲ್ಲೂ ಪದವೀಧರ ಶಿಕ್ಷಕರಿಗೆ ಆದ್ಯತೆ ನೀಡಿದ್ದರಿಂದ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಹುದ್ದೆಗಳ ಕೊರತೆ ಎದುರಾಗಿತ್ತು.

### ಟಿಇಟಿ ಅರ್ಹತೆಗೆ ಶಿಕ್ಷಕರ ಸಂಘ ಆಕ್ಷೇಪ



ಚಂದ್ರಶೇಖರ ನುಗ್ಗಲಿ

ಪ್ರಾಥಮಿಕ ಶಾಲೆಯ ಎಲ್ಲ ಶಿಕ್ಷಕರಿಗೂ 2017ಕ್ಕೂ ಹಿಂದೆ ಇದ್ದಂತೆ ಅವಕಾಶ ನೀಡಬೇಕು. ಟಿಇಟಿ ಅರ್ಹತೆಯನ್ನು ಕಡ್ಡಾಯ ಮಾಡಬಾರದು ಎಂದು ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಚಂದ್ರಶೇಖರ ನುಗ್ಗಲಿ ಒತ್ತಾಯಿಸಿದ್ದಾರೆ.

ಸರ್ಕಾರ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಬಡ್ತಿ ನೀಡುತ್ತಿಲ್ಲ. ಹಿಂದೆ ಇದ್ದ ಅವಕಾಶವನ್ನು ಕಿತ್ತುಕೊಂಡಿದ್ದನ್ನು ಮರಳಿಸುತ್ತಿದೆ. ಸುಪ್ರೀಂಕೋರ್ಟ್ ತೀರ್ಪು ಮುಂದಿಟ್ಟುಕೊಂಡು ಟಿಇಟಿ ಅರ್ಹತೆಯನ್ನು ಪೂರ್ವಾನ್ವಯ ಮಾಡಬಾರದು. ವೃಂದ ಮತ್ತು ನೇಮಕಾತಿಗೆ ಏಳು ವರ್ಷಗಳ ಹಿಂದೆ ತಿದ್ದುಪಡಿ ತರುವ ಮೊದಲು ಇದ್ದಂತೆ ಪುನರ್ ಸ್ಥಾಪನೆ ಮಾಡಬೇಕು ಎಂದು ಆಗ್ರಹಿಸಿದ್ದಾರೆ.

ಈ ಕುರಿತು ಅಧಿಸೂಚನೆಗೆ ಆಕ್ಷೇಪಣೆ ಸಲ್ಲಿಸಲಾಗುವುದು. ಸುಪ್ರೀಂಕೋರ್ಟ್‌ಗೆ ಈಗಾಗಲೇ ರಾಷ್ಟ್ರೀಯ ಶಿಕ್ಷಕರ ಫೆಡರೇಷನ್ ವತಿಯಿಂದ ಪುನರ್‌ಪರಿಶೀಲನಾ ಅರ್ಜಿ ಸಲ್ಲಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

### ಟಿಇಟಿ: 23ರಿಂದ ಅರ್ಜಿ ಸಲ್ಲಿಕೆ

**ಬೆಂಗಳೂರು:** 'ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆ (ಟಿಇಟಿ)' ಡಿಸೆಂಬರ್ 7ರಂದು ನಡೆಯಲಿದ್ದು, ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅ.23 ರಿಂದ ನ.9ರವರೆಗೆ ಅರ್ಜಿ ಸಲ್ಲಿಸಬಹುದು.

ಮಾಹಿತಿಗೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ವೆಬ್‌ಸೈಟ್ www.schooleducation.kar.nic.in ನಲ್ಲಿ ಪ್ರಕಟಿಸಿರುವ ಸೂಚನೆಗಳನ್ನು ಗಮನಿಸಬೇಕು ಎಂದು ಕೇಂದ್ರೀಕೃತ ದಾಖಲಾತಿ ಘಟಕ ಸೂಚಿಸಿದೆ.

'ಡಿ.31ರ ಒಳಗೆ ಫಲಿತಾಂಶ ಪ್ರಕಟಿಸಲಾಗುವುದು. ನಂತರ ಕಲ್ಯಾಣ ಕರ್ನಾಟಕ ಸೇರಿದಂತೆ 18 ಸಾವಿರ ಶಿಕ್ಷಕರ ಹುದ್ದೆಗಳ ಭರ್ತಿಗೆ ಸಿಇಟಿ ನಡೆಸಲಾಗುವುದು. ಆಯ್ಕೆಯಾದ ಅಭ್ಯರ್ಥಿಗಳಿಗೆ ಮುಂದಿನ ಶೈಕ್ಷಣಿಕ ವರ್ಷದ ವೇಳೆಗೆ ನೇಮಕಾತಿ ಆದೇಶ ನೀಡಲಾಗುವುದು' ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಮಾಹಿತಿ ನೀಡಿದ್ದಾರೆ.

ಅನ್ಯಾಯ ಖಂಡಿಸಿ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ 2017ರಿಂದಲೂ ಹೋರಾಟ ನಡೆಸುತ್ತಾ ಬಂದಿತ್ತು. ಒಂದು ಬಾರಿ ವೇತನ ಬಡ್ತಿ ಹಾಗೂ ಮುಖ್ಯ ಶಿಕ್ಷಕರ ಹುದ್ದೆಗೆ ಬಡ್ತಿಗೆ ಅವಕಾಶ ಕಲ್ಪಿಸಲು ವೃಂದ ಮತ್ತು ನೇಮಕಾತಿ ನಿಯಮ–2017ಕ್ಕೆ ತಿದ್ದುಪಡಿ ತರಲು ಈಚೆಗೆ ನಡೆದ ಸಂಪುಟ ಸಭೆ ಸಮ್ಮತಿಸಿತ್ತು.

## ಸುದ್ದಿ 2 ನಿಮಿಷ

### 'ಮಂತ್ರಿಗಿರಿಗಾಗಿ ರಾಹುಲ್ ಮನವೊಲಿಸುವ ತಂತ್ರ'

**ಕಲಬುರಗಿ:** 'ಆಳಂದ ವಿಧಾನಸಭಾ ಕ್ಷೇತ್ರದಲ್ಲಿ ಮತಗಳ್ಳತನ ನಡೆದಿದೆ ಎಂದು ಆರೋಪಿಸುವ ಮೂಲಕ ಶಾಸಕ ಬಿ.ಆರ್. ಪಾಟೀಲ ಅವರು ಮಂತ್ರಿಗಿರಿಗಾಗಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಮನವೊಲಿಸುವ ತಂತ್ರ ಮಾಡುತ್ತಿದ್ದಾರೆ' ಎಂದು ಆಳಂದ ಕ್ಷೇತ್ರದ ಬಿಜೆಪಿ ಮಾಜಿ ಶಾಸಕ ಸುಭಾಷ ಗುತ್ತೇದಾರ ಆರೋಪಿಸಿದರು.

ನಗರದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಒಂದು ವೇಳೆ ಮತಗಳ್ಳತನ ಮಾಡಿದ್ದರೆ 2023ರ ವಿಧಾನಸಭಾ ಚುನಾವಣೆಯಲ್ಲಿ ನಾನೇ ಆಯ್ಕೆಯಾಗುತ್ತಿದ್ದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಿ.ಆರ್.ಪಾಟೀಲ ಅವರನ್ನು ಮಂತ್ರಿ ಮಾಡುತ್ತಿಲ್ಲ. ಹಾಗಾಗಿ ರಾಹುಲ್ ಗಾಂಧಿ ಅವರ ಮೂಲಕ ಹೇಳಿಸಿ ಮಂತ್ರಿಯಾಗಲು ಮತಗಳ್ಳತನದ ಷಡ್ಯಂತ್ರ ರೂಪಿಸಿದ್ದಾರೆ' ಎಂದು ಆರೋಪಿಸಿದರು.

ಎಸ್‌ಐಟಿ ಶೋಧದ ವೇಳೆ ಆಳಂದದಲ್ಲಿರುವ ಮನೆಯ ಎದುರು ಮತದಾರರ ಪಟ್ಟಿ, ಮತದಾರರ ಚೀಟಿಗಳನ್ನು ಸುಟ್ಟಿರುವ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಗುತ್ತೇದಾರ, 'ಆ ವೇಳೆ ನಾನು ಮನೆಯಲ್ಲಿರಲಿಲ್ಲ. ದೀಪಾವಳಿಯ ಸಂದರ್ಭದಲ್ಲಿ ಮನೆ ಸ್ವಚ್ಛ ಮಾಡುವುದು ಸಹಜ. ನಮ್ಮ ಮನೆಯಾಳುಗಳು ಮನೆಯಲ್ಲಿದ್ದ ತ್ಯಾಜ್ಯವನ್ನು ಸುಟ್ಟಿದ್ದಾರೆ. ಅದೂ ಅಲ್ಲದೇ ನಾನು ಮಾಜಿ ಎಂಎಲ್‌ಎ ಆಗಿರುವುದರಿಂದ ಮತದಾರರ ಪಟ್ಟಿ ಇರುವುದು ಸಾಮಾನ್ಯ' ಎಂದು ಅವರು ಸಮರ್ಥಿಸಿಕೊಂಡರು.



### ಸಿಸಿಟಿವಿ ಡಿವಿಆರ್, ಸುಟ್ಟ ಕಾಗದ ಹೊತ್ತೊಯ್ದ ತಂಡ

**ಆಳಂದ (ಕಲಬುರಗಿ ಜಿಲ್ಲೆ):** ಪಟ್ಟಣದ ರೇವಣಸಿದ್ದೇಶ್ವರ ಕಾಲೊನಿಯಲ್ಲಿರುವ ಮಾಜಿ ಶಾಸಕ ಸುಭಾಷ ಗುತ್ತೇದಾರ ಅವರ ಮನೆ ಮೇಲೆ ದಾಳಿ ನಡೆಸಿದ್ದ ಎಸ್‌ಐಟಿ ಅಧಿಕಾರಿಗಳ ತಂಡವು ಶುಕ್ರವಾರ ತಡರಾತ್ರಿಯವರೆಗೂ ಪರಿಶೀಲನೆ ನಡೆಸಿ ಸಿಸಿಟಿವಿ ಕ್ಯಾಮೆರಾದ ಡಿವಿಆರ್ ಹಾಗೂ ಮನೆ ಮುಂದೆ ಸುಟ್ಟು ಹಾಕಿದ್ದ ದಾಖಲೆಗಳು ಹಾಗೂ ಬೂದಿಯನ್ನು ಸಂಗ್ರಹಿಸಿ ತೆಗೆದುಕೊಂಡು ಹೋಗಿದೆ.

ಎಸ್‌ಐಟಿ ತಂಡದ ನೇತೃತ್ವ ವಹಿಸಿದ್ದ ಎಸ್ಪಿ ಶುಭನ್ವಿತಾ, ಡಿವೈಎಸ್‌ಪಿ ಅಸ್ಲಂ ಪಾಷಾ, ಶರಣಗೌಡ ನೇತೃತ್ವದಲ್ಲಿ ಶುಕ್ರವಾರ ಸಂಜೆ ಮಾಜಿ ಶಾಸಕರ ಮನೆ ಮೇಲೆ ದಾಳಿ ನಡೆಸಿ ಮಹತ್ವದ ದಾಖಲೆ ಸಂಗ್ರಹಿಸಿದರು.

ತಾಲ್ಲೂಕಿನ ಶಕಾಪುರ ಸೇತುವೆ ಬಳಿ ಬಿಸಾಡಿದ ಮತದಾರರ ಪಟ್ಟಿ, ಫಾರ್ಮ್, ಚುನಾವಣೆಗೆ ಸಂಬಂಧಿಸಿದಂತೆ ವಿವಿಧ ಅರ್ಜಿ ನಮೂನೆಗಳು ಹಾಗೂ ಕರಪತ್ರ ಮತ್ತಿತರ ದಾಖಲೆಗಳ ಹರಿದ ಚೂರು, ಹಳ್ಳದ ನೀರಿನಲ್ಲಿ ತೇಲಾಡುತ್ತಿದ್ದ ಕಾಗದ ಮತ್ತು ದಂಡೆಯಲ್ಲಿ ಬಿದ್ದ ವಿವಿಧ ಕಾಗದಗಳ ತುಣುಕುಗಳನ್ನು ಎಸ್‌ಐಟಿ ಅಧಿಕಾರಿ ಶರಣಗೌಡ ಹಾಗೂ ಪೊಲೀಸ್ ಸಿಬ್ಬಂದಿ ಸಂಗ್ರಹಿಸಿಕೊಂಡು ಹೋದರು.

'ಹಲವು ಮಹತ್ವದ ದಾಖಲೆಗಳನ್ನು ವಶಕ್ಕೆ ಪಡೆಯಲಾಗಿದ್ದು, ವಿಧಿವಿಜ್ಞಾನ ಪ್ರಯೋಗಾಲದ ತಜ್ಞರು ಪರಿಶೀಲನೆ ನಡೆಸುತ್ತಿದ್ದಾರೆ. ಅದಾದ ಬಳಿಕ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಎಸ್‌ಐಟಿ ಅಧಿಕಾರಿಗಳು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

# ಸರ್ಕಾರಕ್ಕೆ ಗುತ್ತಿಗೆದಾರರ ಗಡುವು

## 'ಡಿಸೆಂಬರ್ ವೇಳೆಗೆ ಬಾಕಿ ಪಾವತಿಸದಿದ್ದರೆ ಕಾಮಗಾರಿ ಸ್ಥಗಿತ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಪೂರ್ಣಗೊಂಡಿರುವ ಕಾಮಗಾರಿಗಳ ಬಿಲ್‌ಗಳನ್ನು ಡಿಸೆಂಬರ್ ಅಂತ್ಯದೊಳಗೆ ಪಾವತಿ ಮಾಡದಿದ್ದರೆ, ರಾಜ್ಯದಾದ್ಯಂತ ಎಲ್ಲ ರೀತಿಯ ಕಾಮಗಾರಿಗಳನ್ನು ಸ್ಥಗಿತಗೊಳಿಸಲಾಗುತ್ತದೆ' ಎಂದು ರಾಜ್ಯ ಗುತ್ತಿಗೆದಾರರ ಸಂಘ ಸರ್ಕಾರಕ್ಕೆ ಎಚ್ಚರಿಸಿದೆ.

'ಕಾಮಗಾರಿ ನಡೆಸಿದ ಬಾಬ್ತು, ಸರ್ಕಾರ ವಿವಿಧ ಇಲಾಖೆಗಳಲ್ಲಿ ₹33 ಸಾವಿರ ಕೋಟಿ ಬಾಕಿ ಉಳಿದಿದೆ. ಎರಡೂವರೆ ವರ್ಷಗಳಿಂದ ಬಾಕಿ ಉಳಿದಿರುವ ಹಣವನ್ನು ಪಾವತಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಇಲಾಖೆಗಳ ಸಚಿವರನ್ನು ಭೇಟಿ ಮಾಡಿ ಮನವಿ ಮಾಡಿಕೊಂಡಿದ್ದರೂ ಕ್ರಮವಾಗಿಲ್ಲ. ಹೀಗಾಗಿ, ಅಂತಿಮ ಗಡುವು ನೀಡಲಾಗುತ್ತಿದೆ' ಎಂದು ಪತ್ರಿಕಾಗೋಷ್ಠಿಯಲ್ಲಿ ಸಂಘದ ಅಧ್ಯಕ್ಷ ಆರ್.ಮಂಜುನಾಥ್ ಹೇಳಿದರು.

'ಒಂದೇ ಬಾರಿಯಲ್ಲದಿದ್ದರೂ ಹಂತಹಂತವಾಗಿ ಹಣ ಬಿಡುಗಡೆ ಮಾಡುವ ಪ್ರಾಮಾಣಿಕತೆಯನ್ನು ಸರ್ಕಾರ ತೋರಬೇಕಿತ್ತು. ಆದರೆ, ಸರ್ಕಾರ ಗುತ್ತಿಗೆದಾರರನ್ನು ನಿರ್ಲಕ್ಷಿಸುತ್ತಲೇ ಬಂದಿದೆ. ಗೌರಿ– ಗಣೇಶ, ದಸರಾ, ದೀಪಾವಳಿ ಸಂದರ್ಭದಲ್ಲೂ ಬಾಕಿ ಹಣ ಬಿಡುಗಡೆ ಮಾಡುವ ಪರಿಪಾಟವನ್ನೂ ಈ ಸರ್ಕಾರ ಪಾಲಿಸಿಲ್ಲ' ಎಂದು ದೂರಿದರು.

'ಕಾರ್ಮಿಕ ಇಲಾಖೆಗಳಲ್ಲಿ ಅಧಿಕಾರಿಗಳು ₹784 ಕೋಟಿ ಮೊತ್ತದ ಕಾಮಗಾರಿಗಳು ಬಲಾಢ್ಯ ಗುತ್ತಿಗೆದಾರರಿಗೆ ಅನುಕೂಲವಾಗುವ ರೀತಿಯಲ್ಲಿ ಎಂಟು–ಒಂಬತ್ತು ಜಿಲ್ಲೆಗಳನ್ನು ಸೇರಿಸಿ ನಾಲ್ಕು ಪ್ಯಾಕೇಜ್ ಮಾಡಿದ್ದಾರೆ. ಇದರಿಂದ ಹೊರ ರಾಜ್ಯದ ಗುತ್ತಿಗೆದಾರರಿಗೆ ಅನುಕೂಲವಾಗಲಿದ್ದು, ನಮ್ಮ ಗುತ್ತಿಗೆದಾರರನ್ನು ಹೊರಗಿಡಲೇ ಇಂತಹ ಕೆಲಸ ಮಾಡಲಾಗುತ್ತಿದೆ. ಅಧಿಕಾರಿಗಳನ್ನು ಕೇಳಿದರೆ ಹಾರಿಕೆ ಉತ್ತರ ನೀಡುತ್ತಾರೆ. ಮುಖ್ಯಮಂತ್ರಿಯವರು ಈ ಬಗ್ಗೆ ಮಧ್ಯಪ್ರವೇಶಿಸಿ, ಪ್ಯಾಕೇಜ್ ಟೆಂಡರ್ ರದ್ದುಪಡಿಸಬೇಕು' ಎಂದು ಆಗ್ರಹಿಸಿದರು.

'ನಗರಾಭಿವೃದ್ಧಿ ಇಲಾಖೆಯ 10 ಮಹಾನಗರ ಪಾಲಿಕೆಗಳಲ್ಲೂ ಪ್ಯಾಕೇಜ್ ಟೆಂಡರ್ ಕರೆದು ಸಣ್ಣ ಮತ್ತು ಮಧ್ಯಮ ವರ್ಗದ ಗುತ್ತಿಗೆದಾರರಿಗೆ ತುಂಬಾ ಅನ್ಯಾಯ ಮಾಡುತ್ತಿದ್ದಾರೆ. ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಲ್ಲಿರುವ ಸಮಸ್ಯೆಗಳನನ್ನು ಸಚಿವರು ಹಾಗೂ ಸರ್ಕಾರದ ಕಾರ್ಯದರ್ಶಿ ಮಟ್ಟದಲ್ಲಿ ಹಲವಾರು ಸಭೆ ನಡೆಸಿದ್ದರೂ ಸಮಸ್ಯೆ ಬಗೆಹರಿದಿಲ್ಲ' ಎಂದು ಮಂಜುನಾಥ್ ದೂರಿದರು.

### ನ್ಯಾಯಾಲಯಕ್ಕೆ ಹೋಗಲಿ: ಸಿ.ಎಂ

'ಆರೋಪ ಮಾಡುತ್ತಿರುವವರು ನ್ಯಾಯಾಲಯದ ಮೊರೆಹೋಗಲಿ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕಾಂಗ್ರೆಸ್ ಸರ್ಕಾರದಲ್ಲಿಯೂ ಕಮೀಷನ್ ದಂಧೆ ನಡೆಯುತ್ತಿದೆ ಎಂದು ಗುತ್ತಿಗೆದಾರರ ಸಂಘ ಆರೋಪಿಸಿರುವ ಬಗ್ಗೆ ಮೈಸೂರಿನಲ್ಲಿ ಪ್ರತಿಕ್ರಿಯಿಸಿದ ಅವರು, 'ಸರ್ಕಾರದ ವಿರುದ್ಧ ಉದ್ದೇಶಪೂರ್ವಕವಾಗಿ ಆರೋಪಿಸಲಾಗುತ್ತಿದೆ' ಎಂದರು. ಪಾವತಿಯಾಗದಿದ್ದರೆ ರಾಜ್ಯಪಾಲರನ್ನು ಭೇಟಿಮಾಡುವುದಾಗಿ ಕೂಗೆದ್ದಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಈ ಬಗ್ಗೆ ಸಂಬಂಧಪಟ್ಟ ಸಚಿವರು ಕ್ರಮ ಕೈಗೊಳ್ಳಲಿದ್ದಾರೆ' ಎಂದು ಸ್ಪಷ್ಟಪಡಿಸಿದರು.

### ಗುತ್ತಿಗೆದಾರರಿಗೆ ಬೆದರಿಕೆಗೆ ಬಗ್ಗಲ್ಲ: ಡಿ.ಕೆ. ಶಿವಕುಮಾರ್

'ಗುತ್ತಿಗೆದಾರರಿಗೆ ಬಾಕಿ ಇರುವ ಹಣವನ್ನು ನಾವು ಕೊಡಲೇ ಬೇಕು, ಕೊಡುತ್ತೇವೆ. ಗಡುವು ನೀಡುವ ಬೆದರಿಕೆ ಹಾಕಿದರೆ ನಾವು ಬಗ್ಗಲ್ಲ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ರಾಜ್ಯ ಗುತ್ತಿಗೆದಾರರ ಸಂಘದ ಪದಾಧಿಕಾರಿಗಳೊಂದಿಗೆ ಶನಿವಾರ ಸಭೆ ನಡೆಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಬಜೆಟ್‌ನಲ್ಲಿ ಹಣ ಇಲ್ಲದೆ ಬಿಜೆಪಿಯವರು ಹಿಂದೆ ಕಾಮಗಾರಿ ನೀಡಿದ್ದರು. ಅದನ್ನು ಕೊಡಲು ಸಮಸ್ಯೆಯಾಗಿವೆ. ಇರುವ ಒಂದಷ್ಟು ಹಣ ನೀಡುತ್ತೇವೆ. ಗುತ್ತಿಗೆದಾರರೇ ಹಂಚಿಕೊಳ್ಳಲಿ' ಎಂದರು.

'ಜಲ ಸಂಪನ್ಮೂಲ ಇಲಾಖೆಯಲ್ಲಿ ಹೆಚ್ಚು ಬಾಕಿ ಇಲ್ಲ. ಅದನ್ನು ಶೀಘ್ರ ಕೊಡುತ್ತೇನೆ ಎಂದು ಹೇಳಿದ್ದೇನೆ. ಇತರೆ ಇಲಾಖೆಗಳಲ್ಲಿ ಸಮಸ್ಯೆ ಇದ್ದು, ಮುಖ್ಯಮಂತ್ರಿಯವರ ಭೇಟಿಗೆ ಅವಕಾಶ ಮಾಡಿಕೊಡುತ್ತೇನೆ. ಮಾತನಾಡಿ ಎಂದು ಅವರಿಗೆ ಹೇಳಿದ್ದೇನೆ' ಎಂದರು.

'ಕಾಂಗ್ರೆಸ್ ಹೈಕಮಾಂಡ್‌ಗೆ ದೂರು ಕೊಡುವುದಾದರೆ, ನಾನೇ ಅವರಿಗೆ ಅಪಾಯಿಂಟ್‌ಮೆಂಟ್ ಕೊಡಿಸುತ್ತೇನೆ, ಹೋಗಿ ಹೇಳಿಕೊಳ್ಳಲಿ' ಎಂದು ಪ್ರತಿಕ್ರಿಯಿಸಿದರು.

## ಪ್ರಶಸ್ತಿ ಪ್ರದಾನ

ಪ್ರಜಾವಾಣಿ ಚಿತ್ರ



ಮೈಸೂರಿನಲ್ಲಿ ಶನಿವಾರ ಮೈಸೂರು ಜಿಲ್ಲಾ ಪತ್ರಿಕಾ ಛಾಯಾಗ್ರಾಹಕರ ಸಂಘವು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ, ರಾಜ್ಯ ಮಟ್ಟದ ಛಾಯಾಚಿತ್ರ ಸ್ಪರ್ಧೆ ವಿಜೇತರಾದ 'ವಿಜಯ ಕರ್ನಾಟಕ' ಪತ್ರಿಕೆಯ ಛಾಯಾಗ್ರಾಹಕ ಸುಧೀಂದ್ರ ಕುಲಕರ್ಣಿ, 'ನ್ಯೂಸ್ ಟ್ರಯಲ್' ಪತ್ರಿಕೆಯ ಬಿ. ಸತೀಶ್, 'ಪ್ರಜಾವಾಣಿ'ಯ ಛಾಯಾಗ್ರಾಹಕರಾದ ಎಂ.ಎಸ್. ಮಂಜುನಾಥ್, ಪಿ. ರಂಜು ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ' ಮುಖ್ಯಮಂತ್ರಿ ಸಿದ್ದರಾಮಯ್ಯ ಕಪ್" ಪ್ರಶಸ್ತಿ ನೀಡಿದರು. ಅನುರಾಗ್ ಬಸವರಾಜು, ನಂದನ್, ಲಕ್ಷ್ಮಿನಾರಾಯಣ ಯಾದವ್, ಪ್ರೊ. ಎನ್.ಕೆ. ಲೋಕನಾಥ್, ಕೆ. ಹರೀಶ್ ಗೌಡ, ಪ್ರಗತಿ ಗೋಪಾಲಕೃಷ್ಣ, ಡಿ. ತಿಮ್ಮಯ್ಯ, ಕೆ. ಶಿವಕುಮಾರ್ ಹಾಗೂ ಕೆ.ವಿ. ಪ್ರಭಾಕರ್ ಜೊತೆಗಿದ್ದರು – ಪ್ರಜಾವಾಣಿ ಚಿತ್ರ

## ಪಿಜಿ ವೈದ್ಯಕೀಯ: 422 ಸೀಟು ಹೆಚ್ಚಳ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 2025–26ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಅನ್ವಯವಾಗುವಂತೆ ರಾಜ್ಯದ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ 422 ಸ್ನಾತಕೋತ್ತರ ಪದವಿ (ಪಿಜಿ) ಸೀಟುಗಳು ಹೆಚ್ಚಳವಾಗಿವೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ ಪಾಟೀಲ ತಿಳಿಸಿದರು.



ಶರಣಪ್ರಕಾಶ ಪಾಟೀಲ

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಪಿಜಿ ಹಂತದಲ್ಲಿ ಒಟ್ಟು 572 ಸೀಟುಗಳನ್ನು ಮಂಜೂರು ಮಾಡುವಂತೆ ಕೇಂದ್ರಕ್ಕೆ ಮನವಿ ಸಲ್ಲಿಸಿದ್ದೆವು. ಅದರಲ್ಲಿ 422 ಸೀಟುಗಳ ಮಂಜೂರಾಗಿವೆ. ಪ್ರಿ-ಕ್ಲಿನಿಕಲ್, ಪ್ಯಾರಾ–ಕ್ಲಿನಿಕಲ್ ಮತ್ತು ಕ್ಲಿನಿಕಲ್ ವಿಭಾಗಗಳಲ್ಲಿ ಈ ಹೆಚ್ಚುವರಿ ಸೀಟುಗಳನ್ನು ಹಂಚಿಕೆ ಮಾಡಲಾಗುತ್ತದೆ' ಎಂದರು.

'ರಾಜ್ಯಕ್ಕೆ ಈಗಾಗಲೇ 450 ವೈದ್ಯಕೀಯ ಸೀಟುಗಳನ್ನು ಹೆಚ್ಚಳ ಮಾಡಿ ರಾಷ್ಟ್ರೀಯ ವೈದ್ಯಕೀಯ ಆಯೋಗ ಆದೇಶಿಸಿತ್ತು. ಈಗ ಪಿಜಿ ಸೀಟುಗಳ ಸಂಖ್ಯೆಯೂ ಹೆಚ್ಚಳವಾಗಿದ್ದು, ರಾಜ್ಯದ ವಿದ್ಯಾರ್ಥಿಗಳಿಗೆ ದೀಪಾವಳಿಯ ಉಡುಗೊರೆ ಸಿಕ್ಕಂತಾಗಿದೆ' ಎಂದರು.

**ಅಂಕಿ ಅಂಶಗಳು**

**1,694** ಹಿಂದಿನ ವರ್ಷ ರಾಜ್ಯಕ್ಕೆ ಲಭ್ಯವಿದ್ದ ಸೀಟುಗಳು

**422** ಈ ಶೈಕ್ಷಣಿಕ ವರ್ಷಕ್ಕೆ ಮಂಜುರಾದ ಹೆಚ್ಚುವರಿ ಸೀಟುಗಳು

**2,116** ಈ ಶೈಕ್ಷಣಿಕ ವರ್ಷದಲ್ಲಿ ರಾಜ್ಯಕ್ಕೆ ಲಭ್ಯವಿರಲಿರುವ ಒಟ್ಟು ಸೀಟುಗಳು

# 'ಹೊಸಬರಿಗೆ ಸಚಿವ ಸ್ಥಾನ ಕೊಡಿ'

## ಗುಜರಾತಿನಂತೆ ರಾಜ್ಯದಲ್ಲೂ ಸಚಿವ ಸಂಪುಟ ಪುನರ್ ರಚನೆಯಾಗಲಿ: ನಂಜೇಗೌಡ

ಪ್ರಜಾವಾಣಿ ವಾರ್ತೆ

**ಕೋಲಾರ:** ಗುಜರಾತ್ ರೀತಿ ಕರ್ನಾಟಕದಲ್ಲೂ ಸಚಿವ ಸಂಪುಟ ಪುನರ್ ರಚನೆಯಾಗಬೇಕು. ಹಳಬರನ್ನು ಕೈಬಿಟ್ಟು ಹೊಸಬರಿಗೆ ಅವಕಾಶ ಮಾಡಿಕೊಡಬೇಕು ಎಂದು ಮಾಲೂರು ಕಾಂಗ್ರೆಸ್ ಶಾಸಕ ಕೆ.ವೈ.ನಂಜೇಗೌಡ ಒತ್ತಾಯಿಸಿದರು.



ನಂಜೇಗೌಡ

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಎಲ್ಲ ಮಂತ್ರಿಗಳನ್ನು ಬದಲಾಯಿಸಬೇಕು. ಕೋಲಾರ ಜಿಲ್ಲೆಯಲ್ಲಿ ನಾಲ್ವರು ಕಾಂಗ್ರೆಸ್ ಶಾಸಕರಿದ್ದು, ಮಂತ್ರಿ ಸ್ಥಾನ ಕೊಟ್ಟಿಲ್ಲ. ಈ ಬಗ್ಗೆ ನೋವಿದೆ. ನಮಗೂ ಅವಕಾಶ ಮಾಡಿಕೊಡಬೇಕು. ನಾವೆಲ್ಲ ಕಷ್ಟಪಟ್ಟು ಶಾಸಕರಾಗಿದ್ದೇವೆ. ಜಿಲ್ಲೆಯ ಕಾಂಗ್ರೆಸ್ ಶಾಸಕರು ಒಗ್ಗಟ್ಟಾಗಿದ್ದರೆ ಅವಕಾಶ ಖಂಡಿತ ಸಿಗಲಿದೆ' ಎಂದರು.

'ಮುಖ್ಯಮಂತ್ರಿ ಬದಲಾವಣೆ ಬಗ್ಗೆ ಮಾತನಾಡುವುದಿಲ್ಲ. ಈ ಸಂಬಂಧ ಹೈಕಮಾಂಡ್ ತೀರ್ಮಾನ ಕೈಗೊಳ್ಳುತ್ತದೆ. ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಸಂಬಂಧ ಚೆನ್ನಾಗಿದೆ. ಎಲ್ಲ ಶಾಸಕರಿಗೂ ಸಹಕಾರ ನೀಡುತ್ತಿದ್ದಾರೆ' ಎಂದು ಹೇಳಿದರು.

### 'ಪ್ರಿಯಾಂಕ್‌ರನ್ನು ಸಿಎಂ ಮಾಡಲು ಹೈಕಮಾಂಡ್ ಚಿಂತನೆ'

**ಗುರುಮಠಕಲ್ (ಯಾದಗಿರಿ ಜಿಲ್ಲೆ):** 'ಸಚಿವ ಪ್ರಿಯಾಂಕ್ ಖರ್ಗೆ ಅವರು ರಾಜ್ಯದ ಕ್ರಿಯಾಶೀಲ ನಾಯಕರಾಗಿದ್ದು, ಮುಂದಿನ ದಿನಗಳಲ್ಲಿ ಅವರನ್ನು ಮುಖ್ಯಮಂತ್ರಿಯಾಗಿಸಲು ಹೈಕಮಾಂಡ್ ಚಿಂತಿಸುತ್ತಿದೆ' ಎಂದು ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಾಬುರಾವ್ ಚಿಂಚನಸೂರ್ ಹೇಳಿದರು.

ಪಟ್ಟಣದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಪ್ರಿಯಾಂಕ್ ಅವರು ಮುಖ್ಯಮಂತ್ರಿ ಆಗುವುದನ್ನು ನೋಡಲು ಪಕ್ಷದ ನಾಯಕರು ಮತ್ತು ಕಾರ್ಯಕರ್ತರು ಕಾತುರರಾಗಿದ್ದಾರೆ. ಪ್ರಿಯಾಂಕ್ ಅವರ ಅಭಿವೃದ್ಧಿ ಕೆಲಸ, ಜನಪ್ರಿಯತೆ ಕಂಡರೆ ಬಿಜೆಪಿಗರಿಗೆ ಹೊಟ್ಟೆಕಿಚ್ಚು. ಹೀಗಾಗಿ, ಸಾಮಾಜಿಕ ಜಾಲತಾಣದಲ್ಲಿ ನಿಂದಿಸಿ, ಬೆದರಿಕೆ ಹಾಕುತ್ತಿದ್ದಾರೆ' ಎಂದು ಹೇಳಿದರು.

### ಜಿ.ಪರಮೇಶ್ವರ ಕ್ಷೇತ್ರ ಬಿಟ್ಟು ಕೊಡಲಿ: ಕೆ.ಎನ್. ರಾಜಣ್ಣ

ತುಮಕೂರು: ಜಿಲ್ಲಾ ಉಸ್ತುವಾರಿ ಸಚಿವ ಜಿ.ಪರಮೇಶ್ವರ ಸಾಮಾನ್ಯ ಕ್ಷೇತ್ರದಲ್ಲಿ ಯಾಕೆ ನಿಲ್ಲಬಾರದು. ಅವರು ಸಾಮಾನ್ಯ ಕ್ಷೇತ್ರದಲ್ಲಿ ಸ್ಪರ್ಧಿಸಿದರೆ ಮೀಸಲು ಕ್ಷೇತ್ರದಿಂದ ಮತ್ತೊಬ್ಬರಿಗೆ ಸಹಾಯ ಆಗುವುದಿಲ್ಲವೇ ಎಂದು ಶಾಸಕ ಕೆ.ಎನ್.ರಾಜಣ್ಣ ಪ್ರಶ್ನಿಸಿದರು.

ನಗರದಲ್ಲಿ ಶನಿವಾರ ಜಾಗೃತ ಕರ್ನಾಟಕ ಸಂಘಟನೆಯಿಂದ ಆಯೋಜಿಸಿದ್ದ 'ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ– ಈಡೇರುವುದೇ ಸರ್ವ ಸಮುದಾಯಗಳ ನಿರೀಕ್ಷೆ' ವಿಚಾರಗೋಷ್ಠಿಯಲ್ಲಿ ಮಾತನಾಡಿದರು.

ಮೀಸಲು ಕ್ಷೇತ್ರ ಬಿಟ್ಟುಕೊಡುವ ಮನಃಸ್ಥಿತಿ ನಮ್ಮಲ್ಲಿ ಬರಬೇಕು. ಎಲ್ಲವನ್ನು ನಾವೇ ಬಳಸಿಕೊಂಡು ಕೂತರೆ ಬೇರೆಯವರು ಎಲ್ಲಿಗೆ ಹೋಗುತ್ತಾರೆ. ನಮ್ಮಲ್ಲಿ ಧೈರ್ಯದ ಕೊರತೆ ಇದ್ದು, ಅದು ಹೋಗಬೇಕು ಎಂದು ಪರಮೇಶ್ವರ ಅವರಿಗೆ ಸಲಹೆ ನೀಡಿದರು.

# ಲಂಚ: ಮೂವರ ಬಂಧನ



ತಮ್ಮಣ್ಣ



ಶಿವಾನಂದ



ಗೂಳಪ್ಪ

**ಹಾವೇರಿ:** ಜಿಲ್ಲೆಯ ಹಾನಗಲ್ ತಹಶೀಲ್ದಾರ್ ಕಚೇರಿಯಲ್ಲಿ ₹ 12 ಸಾವಿರ ಲಂಚ ಪಡೆಯುತ್ತಿದ್ದ ಆರೋಪದ ಮೇಲೆ ಶಿರಸ್ತೇದಾರ ಮತ್ತು ಇಬ್ಬರು ದ್ವಿತೀಯ ದರ್ಜೆ ಸಹಾಯಕರನ್ನು (ಎಸ್‌ಡಿಎ) ಹಾವೇರಿ ಜಿಲ್ಲಾ ಲೋಕಾಯುಕ್ತ ಪೊಲೀಸರು ಶನಿವಾರ ಬಂಧಿಸಿದ್ದಾರೆ.

'ಹಾನಗಲ್ ತಾಲ್ಲೂಕಿನ ಬೊಮ್ಮನಹಳ್ಳಿ ಗ್ರಾಮದ ನವೀನ ಬಸನಗೌಡ ಪಾಟೀಲ ಎಂಬುವರು ನೀಡಿದ್ದ ದೂರು ಆಧರಿಸಿ ಕಾರ್ಯಾಚರಣೆ ನಡೆಸಲಾಗಿತ್ತು. ಪಹಣಿ ಪತ್ರ (ಆರ್‌ಟಿಸಿ) ದುರಸ್ತಿ ಮಾಡಿಸಲು ₹ 12 ಸಾವಿರ ಲಂಚ ಪಡೆಯುತ್ತಿದ್ದಾಗಲೇ ಶಿರಸ್ತೇದಾರ ತಮ್ಮಣ್ಣ ಕಾಂಬಳೆ, ಎಸ್‌ಡಿಎ ಗೂಳಪ್ಪ ಮನಗೂಳಿ ಹಾಗೂ ಕೃತ್ಯಕ್ಕೆ ಸಹಕರಿಸಿದ್ದ ಎಸ್‌ಡಿಎ ಶಿವಾನಂದ ಬಡಿಗೇರ್ ಎಂಬುವವರನ್ನು ಬಂಧಿಸಲಾಗಿದೆ' ಎಂದು ಲೋಕಾಯುಕ್ತ ಪೊಲೀಸ್ ಡಿವೈಎಸ್‌ಪಿ ಮಧುಸೂದನ್ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ನವೀನ್ ಅವರ ಪರಿಚಯಸ್ಥರಾದ ಶಂಕ್ರಪ್ಪ ಗುಮಗುಂಡಿ ಅವರು ಕೆಡಿಟಿ ಪ್ರಕಾರ ಪಹಣಿ ಪತ್ರ ದುರಸ್ತಿಗಾಗಿ ಹಾನಗಲ್ ತಹಶೀಲ್ದಾರ್ ಕಚೇರಿಗೆ ಅರ್ಜಿ ಸಲ್ಲಿಸಿದ್ದರು. ದುರಸ್ತಿ ಮಾಡಲು ಆರೋಪಿಗಳು ₹ 12 ಸಾವಿರ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಹಾನಗಲ್ ತಹಶೀಲ್ದಾರ್ ಕಚೇರಿಯಲ್ಲಿ ಶನಿವಾರ ಹಣ ಪಡೆಯುತ್ತಿದ್ದ ವೇಳೆಯೇ ಕಾರ್ಯಾಚರಣೆ ನಡೆಸಿದೆವು' ಎಂದರು.

## ಜನರನ್ನು ನಿಯಂತ್ರಿಸಿ: ಡಿಸಿಗೆ ಎಸ್ಪಿ ಪತ್ರ

ಪ್ರಜಾವಾಣಿ ವಾರ್ತೆ

**ಹಾಸನ:** 'ಹಾಸನಾಂಬ ದರ್ಶನೋತ್ಸವಕ್ಕೆ ಬರುತ್ತಿರುವ ಭಕ್ತರು ಹೆಚ್ಚಾಗಿದ್ದು, ನೂಕು ನುಗ್ಗಲು ಉಂಟಾಗಿ ಅಹಿತಕರ ಘಟನೆ ನಡೆದರೆ ಪೊಲೀಸ್ ಇಲಾಖೆ ಜವಾಬ್ದಾರಿಯಾಗದು' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮ್ಮದ್ ಸುಜೀತಾ ಅವರು ಜಿಲ್ಲಾಧಿಕಾರಿಗೆ ಬರೆದಿರುವ ಪತ್ರ ಸಾಮಾಜಿಕ ಮಾಧ್ಯಮಗಳಲ್ಲಿ ಶನಿವಾರ ಹರಿದಾಡಿತ್ತು.

ಶುಕ್ರವಾರ ಎಸ್ಪಿ ಪತ್ರ ಬರೆದಿದ್ದು, 'ಅಕ್ಟೋಬರ್ 9 ರಿಂದ 23ರ ವರೆಗೆ ದರ್ಶನೋತ್ಸವ ನಡೆಯುತ್ತಿದ್ದು, ಹೊರ ಜಿಲ್ಲೆಗಳಿಂದ ಭಕ್ತರು ಬರುತ್ತಿದ್ದಾರೆ. ಜನರನ್ನು ನಿಯಂತ್ರಿಸಲು ಕ್ರಮ ಕೈಗೊಳ್ಳಬೇಕಿದೆ. ದರ್ಶನಕ್ಕೆ ವ್ಯವಸ್ಥೆ ಮಾಡಿರುವ ಸ್ಥಳಾವಕಾಶ ಕಡಿಮೆಯಾಗುತ್ತಿದೆ' ಎಂದಿದ್ದಾರೆ.


'ಎಲ್ಲ ಸಾಲುಗಳು ನಿಗದಿತ ಪ್ರಮಾಣ ಮೀರಿ ಮೂರ್ನಾಲ್ಕು ಕಿ.ಮೀ. ವರೆಗೂ ಬಂದಿದೆ. ದೀಪಾವಳಿ ಹಬ್ಬದ ಪ್ರಯುಕ್ತ ಸಾಲು ರಜೆಗಳಿದ್ದು, ದರ್ಶನಕ್ಕೆ ಸಾವಿರಾರು ಭಕ್ತರು ಬರಲಿದ್ದಾರೆ. ನೂಕುನುಗ್ಗಲು ಉಂಟಾಗುತ್ತದೆ. ಅಹಿತಕರ ಘಟನೆಗಳು ನಡೆಯುವ ಸಾಧ್ಯತೆ ಹೆಚ್ಚಾಗಿದ್ದು, ಕಾನೂನು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಸಾರಿಗೆ ಬಸ್ ಮತ್ತು ಇತರೆ ವಾಹನಗಳಲ್ಲಿ ಬರುತ್ತಿರುವ ಭಕ್ತರನ್ನು ನಿಯಂತ್ರಿಸಲು ಕ್ರಮ ವಹಿಸಬೇಕು' ಎಂದು ಕೋರಿದ್ದಾರೆ.

ಈ ಕುರಿತು ಪ್ರತಿಕ್ರಿಯೆ ಪಡೆಯಲು ಎಸ್ಪಿಯವರನ್ನು ಸಂಪರ್ಕಿಸಲು ಪ್ರಯತ್ನಿಸಿದರೂ ಲಭ್ಯರಾಗಲಿಲ್ಲ.

# ಜೀವನರಾಗ ನಿಲ್ಲಿಸಿದ ವಿದುಷಿ ರಮಾಮಣಿ

• ಉಮಾ ಅನಂತ್

ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ 'ಅವಧಾನ ಪಲ್ಲವಿ' ಒಂದು ವಿಶಿಷ್ಟ ಗಾಯನ ಪ್ರಕಾರ. ಇದನ್ನು ದಕ್ಷಿಣ ಭಾರತದಲ್ಲಿ ಮೊದಲ ಬಾರಿಗೆ ಪರಿಚಯಿಸಿ ಹಾಡಿ ಜನಪ್ರಿಯಗೊಳಿಸಿದವರು ವಿದುಷಿ ಆರ್.ಎ. ರಮಾಮಣಿ.



ರಮಾಮಣಿ

'ಅವಧಾನ ಪಲ್ಲವಿ' ಹಾಡುವುದು ಬಹಳ ಕಷ್ಟ. ಅಪಾರ ಪರಿಶ್ರಮ, ನೈಪುಣ್ಯತೆ, ತಾಳ್ಮೆ ಮತ್ತು ಶ್ರದ್ಧೆ ಮೇಲಾಗಿ ಸಂಗೀತದ ಆಳವಾದ ಜ್ಞಾನ ಇದ್ದರೆ ಮಾತ್ರ ಇದನ್ನು ಹಾಡಬಹುದು. ಎರಡು ಕೈಗಳಲ್ಲಿ ಬೇರೆ ಬೇರೆ ತಾಳ ಹಾಕುವ ಮೂಲಕ ರಾಗವನ್ನು ಮನೋಧರ್ಮಕ್ಕೆ ಕೊಂಚವೂ ಧಕ್ಕೆಯಾಗದಂತೆ ಹಾಡಬೇಕು. ಇದನ್ನು ಸಿದ್ಧಿಸಿಕೊಂಡು ವಿದ್ವಾಂಸರನ್ನೇ ಬೆರಗುಗೊಳಿಸುವಂತೆ ಹಾಡುತ್ತಿದ್ದ ಅಪರೂಪದ ವಿದುಷಿ ರಮಾಮಣಿಯವರು.

ತಮ್ಮ ಪತಿ ಟಿ.ಎ.ಎಸ್. ಮಣಿ ಅವರೊಂದಿಗೆ ಸೇರಿ ಜಾಸ್ ಸಂಗೀತವನ್ನು ಯುರೋಪ್ ಸೇರಿದಂತೆ ವಿಶ್ವದ ನಾನಾ ಭಾಗಗಳಲ್ಲಿ ಹಾಡಿದ ರಮಾಮಣಿಯವರು ಕರ್ನಾಟಕ ಸಂಗೀತದೊಂದಿಗೆ ಪಾಶ್ಚಾತ್ಯ ಸಂಗೀತವನ್ನು ಬೆಸೆಯುವ ಮೂಲಕ ವಿಶ್ವಮಟ್ಟದಲ್ಲಿ ಗುರುತಿಸಿಕೊಂಡವರು. ಸುಮಾರು ಐದು ದಶಕಗಳ ಕಾಲ ಸಂಗೀತ ಕ್ಷೇತ್ರದಲ್ಲಿ ಸಾಧನೆ ಮಾಡಿದ ಗಾಯಕಿ ಇವರು.

'ಸಂಗೀತದಲ್ಲಿ ರಮಾಮಣಿ ಅವರದು ಅದ್ಭುತ ಸಾಧನೆ. ಹಲವು ಶಿಷ್ಯಂದಿರನ್ನು ತಯಾರು ಮಾಡಿರುವ ರಮಾಮಣಿ ಅವರು ಅಂತರರಾಷ್ಟ್ರೀಯ ಮಟ್ಟದಲ್ಲಿ ಹಲವು ಸಾಧನೆ ಮಾಡಿದ ಅಪರೂಪದ ಗಾಯಕಿ' ಎನ್ನುತ್ತಾರೆ ಖ್ಯಾತ ಮೃದಂಗ ವಿದ್ವಾಂಸ ಆನೂರು ಅನಂತಕೃಷ್ಣ ಶರ್ಮ.

ಕರ್ನಾಟಕ ಗಾನಕಲಾಭೂಷಣ, ಗಾನಕಲಾಶ್ರೀ ಸೇರಿದಂತೆ ಸಂಗೀತದ ಹಲವು ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡ ಇವರು ಆಕಾಶವಾಣಿ ಟಾಪ್ ಗ್ರೇಡ್ ಕಲಾವಿದೆ. ಇಂತಹ ಅಸಾಧಾರಣ ಪ್ರತಿಭೆಯ ಗಾಯಕಿ ಇನ್ನು ನೆನಪಷ್ಟೆ.

### ಅಂತ್ಯಕ್ರಿಯೆ ಇಂದು

**ಬೆಂಗಳೂರು:** ಕರ್ನಾಟಕ ಶಾಸ್ತ್ರೀಯ ಸಂಗೀತದ ಹೆಸರಾಂತ ಕಲಾವಿದೆ ವಿದುಷಿ ಆರ್.ಎ. ರಮಾಮಣಿ ಶನಿವಾರ ಸಂಜೆ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಅವರಿಗೆ 75 ವರ್ಷ (ಜನನ 1950) ವಯಸ್ಸಾಗಿತ್ತು.

ಬೆಂಗಳೂರಿನವರೇ ಆದ ಅವರು ಖ್ಯಾತ ಮೃದಂಗ ವಿದ್ವಾನ್ ದಿವಂಗತ ಟಿ.ಎ.ಎಸ್. ಮಣಿ ಅವರ ಪತ್ನಿ. ರಮಾಮಣಿ ಅವರು ಪುತ್ರ ಘಟಂ ವಾದಕ ಕಾರ್ತಿಕ್ ಮಣಿ ಅವರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಭಾನುವಾರ ಬೆಳಿಗ್ಗೆ 11 ಗಂಟೆ ಸುಮಾರಿಗೆ ಶ್ರೀರಾಮಪುರ ಬಳಿಯ ಹರಿಶ್ಚಂದ್ರ ಘಾಟ್‌ನಲ್ಲಿ ನಡೆಯಲಿದೆ ಎಂದು ಅವರ ಕುಟುಂಬದವರು ತಿಳಿಸಿದ್ದಾರೆ.

ಭಾನುವಾರ, ಅಕ್ಟೋಬರ್ 19, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 289 | ಪುಟ 26

www.prajavani.net prajavani.net prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



**'ತೆಯ್ಯಂ'**
ರಾಜಸ್ಥಾನದ ಜೈಪುರದಲ್ಲಿ ನಡೆದ 'ಲೋಕರಂಗ ಉತ್ಸವ 2025'ರಲ್ಲಿ 'ತೆಯ್ಯಂ' ನೃತ್ಯ ಪ್ರದರ್ಶಿಸಿದ ಕೇರಳ ಕಲಾವಿದ



**ಜ್ಯೋತಿಗೆ ಚಾರಿತ್ರಿಕ ಕಂಚು**
ಭಾರತದ ಬಿಲ್ಗಾರ್ತಿ ಜ್ಯೋತಿ ಸುರೇಖಾ ವೆನ್ನಂ ಅವರು ಚೀನಾದ ನಾನ್‌ಜಿಂಗ್‌ನಲ್ಲಿ ಶನಿವಾರ ನಡೆದ ಆರ್ಚರಿ ವಿಶ್ವಕಪ್ ಫೈನಲ್‌ನ ಕಾಂಪೌಂಡ್ ವಿಭಾಗದಲ್ಲಿ ಚಾರಿತ್ರಿಕ ಕಂಚಿನ ಪದಕ ಗೆದ್ದರು

6 ಸಾವಿರ ಕೆ.ಜಿ ಚಿನ್ನ ಮಾರಾಟ 12 | 'ಬ್ರಹ್ಮೋಸ್‌ನಿಂದ ಪಾಕ್‌ಗೆ ತಪ್ಪಿಸಿಕೊಳ್ಳಲಾಗದು' 13

# ಹೆಸರಿಗೆ ಹಸಿರು: ಒಳಗೆ 'ವಿಷ'

## ನಕಲಿ ಲೋಗೊ, ಕ್ಯುಆರ್ ಕೋಡ್ ಬಳಸಿ ಸಾಂಪ್ರದಾಯಿಕ ಪಟಾಕಿಗಳ ಮಾರಾಟ

• ಜಯಸಿಂಹ ಆರ್.
ಬಾಲಕೃಷ್ಣ ಪಿ.ಎಚ್.

ಒಳನೋಟ

**ಬೆಂಗಳೂರು:** ಸುಪ್ರೀಂಕೋರ್ಟ್, ಮಾಲಿನ್ಯ ನಿಯಂತ್ರಣ ಮಂಡಳಿ ಏನೆಲ್ಲಾ ಕಟ್ಟುನಿಟ್ಟಿನ ಆದೇಶಗಳನ್ನು ಹೊರಡಿಸಿದರೂ ಜೀವಾನಿಲ ವಿಷವಾಗದಂತೆ ಇರಬೇಕಾದ 'ಹಸಿರು ಪಟಾಕಿ' ಹೆಸರಿಗಷ್ಟೇ ಸೀಮಿತವಾಗಿದೆ. ಬಣ್ಣಬಣ್ಣದ ಪಟಾಕಿ ಪೊಟ್ಟಣಗಳ ಮೇಲೆ 'ಹಸಿರಿನ ಗುರುತು' ಇದ್ದರೂ ಪೊಟ್ಟಣ ಬಿಚ್ಚಿದರೆ ಒಳಗಿರುವ 'ವಿಷಾವತಾರ'ದ ಬಣ್ಣ ಬಯಲಾಗುತ್ತದೆ.

ಕಿವಿಗಡಚಿಕ್ಕುವ ಶಬ್ದಾಡಂಬರ ಇಲ್ಲದ, ನೆಲ–ಮುಗಿಲಿನಲ್ಲಿ ಬಣ್ಣದ ಲೋಕವನ್ನೇ ಸೃಷ್ಟಿಸುವ ಪಟಾಕಿಗಳ ಮೇಲಿನ ಜನರ ಮೋಹವನ್ನೇ ಬಂಡವಾಳ ಮಾಡಿಕೊಂಡಿರುವ ತಯಾರಕರು ಹಾಗೂ ಮಾರಾಟಗಾರರು, ತಮ್ಮ ಧನದಾಹಕ್ಕೆ ವಾತಾವರಣವನ್ನೇ ವಿಷಕಾರಿಯಾಗಿಸುತ್ತಿದ್ದಾರೆ. ರಾಜ್ಯದ ಎಲ್ಲೆಡೆಯೂ ಹಸಿರು ಪಟಾಕಿಯನ್ನಷ್ಟೇ ಮಾರಾಟ ಮಾಡಬೇಕು ಮತ್ತು ಪರವಾನಗಿ ಇದ್ದವರಷ್ಟೇ ವ್ಯಾಪಾರ ನಡೆಸಬೇಕು ಎಂಬ ನಿಯಮ ಜಾರಿಯಲ್ಲಿದೆ. ಆದರೆ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಹಸಿರು ಪಟಾಕಿ ಹೆಸರಿನಲ್ಲಿ ಸಾಂಪ್ರದಾಯಿಕ ಪಟಾಕಿಗಳ ಮಾರಾಟ ಅವ್ಯಾಹತವಾಗಿ ನಡೆದಿದೆ, ಪರವಾನಗಿ ಇಲ್ಲದವರೂ ಮಾರಾಟ ಮಾಡುತ್ತಿದ್ದಾರೆ.

ಈ ಮೊದಲು ರಾಜ್ಯದೆಲ್ಲೆಡೆ ದೀಪಾವಳಿ ಸಂದರ್ಭದಲ್ಲಿ ಸಾಮಾನ್ಯ ಪಟಾಕಿಗಳನ್ನು ಮಾರಾಟ ಮಾಡಲಾಗುತ್ತಿತ್ತು. 2024ರ ದೀಪಾವಳಿ ವೇಳೆ ತಮಿಳುನಾಡಿನ ಹೊಸೂರಿನ ಗಡಿಗೆ ಹೊಂದಿಕೊಂಡಿರುವ ಅತ್ತಿಬೆಲೆಯಲ್ಲಿ ಹಲವು ಪಟಾಕಿ ಅಂಗಡಿಗಳಿಗೆ ಬೆಂಕಿ ಬಿದ್ದು, 14 ಮಂದಿ ಮೃತಪಟ್ಟಿದ್ದರು ಮತ್ತು ಹಲವರು ಗಾಯಗೊಂಡಿದ್ದರು. ಆನಂತರ ಎಚ್ಚೆತ್ತಿದ್ದ ರಾಜ್ಯ ಸರ್ಕಾರವು, ಸುರಕ್ಷತಾ ಕ್ರಮಗಳನ್ನು ಹೊಂದಿದ ಅಂಗಡಿಗಳಷ್ಟೇ ಪರವಾನಗಿ ಪಡೆದು ಪಟಾಕಿ ಮಾರಾಟ ಮಾಡಬೇಕು ಎಂಬ ನಿಯಮದ ಕಟ್ಟುನಿಟ್ಟಿನ ಜಾರಿಗೆ ಮುಂದಾಯಿತು. ಮೇಲ್ನೋಟಕ್ಕೆ ಈ ನಿಯಮ ಕಟ್ಟುನಿಟ್ಟಾಗಿ ಜಾರಿಯಾದಂತೆ ಕಾಣುತ್ತದೆ ಯಾದರೂ, ಬೆಂಗಳೂರಿನ ಕೃಷ್ಣರಾಜ ಮಾರುಕಟ್ಟೆಯ ಸುತ್ತಮುತ್ತಲ ಪ್ರದೇಶದ ಬೀದಿಬದಿಯಲ್ಲಿ ಇರಿಸಿಕೊಂಡೇ ಪಟಾಕಿ ಮಾರಾಟ ಮಾಡಲಾಗುತ್ತಿದೆ. ಬೆಂಗಳೂರಿನ ಸುಲ್ತಾನ್ ಪೇಟೆಯು ಸುತ್ತಮುತ್ತಲ ಐದಾರು ಜಿಲ್ಲೆಗಳಿಗೆ ಪಟಾಕಿ ಪೂರೈಕೆ ಮಾಡುವ ಪ್ರಮುಖ ಕೇಂದ್ರ. ಬೇರೆಲ್ಲಾ ಜಿಲ್ಲೆಗಳ ವ್ಯಾಪಾರಿಗಳು ಹೊಸೂರಿನಿಂದ ಪಟಾಕಿ ಖರೀದಿಸುತ್ತರಾದರೂ, ಸಣ್ಣ–ಪುಟ್ಟ ವ್ಯಾಪಾರಿಗಳು ಸುಲ್ತಾನ್ ಪೇಟೆಯ ವ್ಯಾಪಾರಿಗಳಿಂದಲೇ ಖರೀದಿಸುತ್ತಾರೆ. ಆದರೆ ಪಟಾಕಿ ಮಾರಾಟ ನಿಯಮಗಳನ್ನು ಸರ್ಕಾರವು ಬಿಗಿಗೊಳಿಸಿರುವ ಕಾರಣ, ಸುಲ್ತಾನ್ ಪೇಟೆಯ ಅಂಗಡಿಗಳಿಗೆ ಬೀಗ ಬಿದ್ದಿದೆ. ಪರವಾನಗಿ ಹೊಂದಿರುವ ಮೂರು ಅಂಗಡಿಗಳಲ್ಲಿ ಮಾತ್ರವೇ ಮಾರಾಟ ನಡೆಯುತ್ತಿದೆ.

ಪರವಾನಗಿ ಇಲ್ಲದವರು ಕದ್ದುಮುಚ್ಚಿ, ಸುಲ್ತಾನ್ ಪೇಟೆಯಲ್ಲಿ ವ್ಯಾಪಾರ ಮಾಡುತ್ತಲೇ ಇದ್ದಾರೆ. ಇಂತಹ ವ್ಯಾಪಾರಿಗಳು ಸ್ಥಳೀಯ ತಮಿಳು ಮಹಿಳೆಯರ ಐದಾರು ಗುಂಪುಗಳನ್ನು ಮಾಡಿದ್ದು, ಅವರಿಗೆ ತಲಾ ಒಂದೆರಡು ಪಟಾಕಿ ಬಾಕ್ಸ್‌ಗಳನ್ನು ನೀಡಿರುತ್ತಾರೆ. ರಸ್ತೆಬದಿಯಲ್ಲಿ ಅವನ್ನು ಇರಿಸಿಕೊಂಡು ಆ ಮಹಿಳೆಯರು ಮಾರಾಟ ನಡೆಸುತ್ತಾರೆ. ▸4



ಬೆಂಗಳೂರಿಗೆ ಸಮೀಪದಲ್ಲಿರುವ ತಮಿಳುನಾಡಿನ ಹೊಸೂರಿನಲ್ಲಿ ಎಲ್ಲಾ ನಮೂನೆಯ ಪಟಾಕಿ ಮಾರಾಟ ಭರಾಟೆಯಿಂದ ನಡೆಯುತ್ತಿದೆ
ಪ್ರಜಾವಾಣಿ ಚಿತ್ರ: ಕೃಷ್ಣಕುಮಾರ್ ಪಿ.ಎಸ್.

# 95 ಲಕ್ಷ ರೆವಿನ್ಯೂ ಆಸ್ತಿಗೆ 'ಇ–ಸ್ವತ್ತು'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಗ್ರಾಮೀಣ ಪ್ರದೇಶದ ಕಂದಾಯ ಜಮೀನುಗಳಲ್ಲಿನ ನಿವೇಶನ, ಅಕ್ರಮ ಕಟ್ಟಡ ಸೇರಿದಂತೆ 95.75 ಲಕ್ಷ ಸ್ವತ್ತುಗಳಿಗೆ 'ಇ–ಸ್ವತ್ತು' ನೀಡುವ ಮಹತ್ವದ ಯೋಜನೆಗೆ ಪಂಚಾಯತ್ ರಾಜ್ ಇಲಾಖೆಗೆ ಚಾಲನೆ ನೀಡಿದೆ.

ಇದಕ್ಕಾಗಿ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ–1993ಕ್ಕೆ ತಿದ್ದುಪಡಿ ತರಲಾಗಿದೆ.

ಗ್ರಾಮೀಣ ಪ್ರದೇಶಗಳ ಜನರು ಭೂಪರಿವರ್ತನೆ ಮಾಡಿಕೊಳ್ಳದೆ, ಸಕ್ಷಮ ಪ್ರಾಧಿಕಾರಗಳಿಂದ ಅನುಮೋದನೆ ಪಡೆಯದೆ ನಿವೇಶನ, ಮನೆ, ಕಟ್ಟಡಗಳನ್ನು ದಶಕಗಳಿಂದ ನಿರ್ಮಿಸಿಕೊಂಡಿದ್ದರು. ಖಾತಾ ಸ್ವತ್ತುಗಳಾಗದ ಕಾರಣ ಗ್ರಾಮ ಪಂಚಾಯಿತಿಗಳು ತೆರಿಗೆ ಸಂಗ್ರಹವನ್ನೂ ಮಾಡುತ್ತಿರಲಿಲ್ಲ. ರಸ್ತೆ, ನೀರು, ವಿದ್ಯುತ್ ಸಂಪರ್ಕ ಕಲ್ಪಿಸಿದ ಪಂಚಾಯಿತಿಗಳು ಮಾತ್ರ ನಮೂನೆ–9, 9–ಎ ಮತ್ತು 11–ಎ ವಿತರಿಸಿ ತೆರಿಗೆ ಸಂಗ್ರಹ ಮಾಡುತ್ತಿದ್ದವು.

ಪಂಚಾಯತ್ ರಾಜ್ ವ್ಯವಸ್ಥೆಯ ಬಲವರ್ಧನೆಗಾಗಿ ಮತ್ತು ಗ್ರಾಮೀಣ ಜನರಿಗೆ ವ್ಯವಸ್ಥಿತ ರೀತಿಯಲ್ಲಿ ಸೇವೆಗಳನ್ನು ಒದಗಿಸಲು ಇಂತಹ ಆಸ್ತಿಗಳಿಗೆ ಪ್ರಮಾಣ ಪತ್ರಗಳನ್ನು ವಿತರಿಸಲು ಇ-ಸ್ವತ್ತು ಅಭಿಯಾನವನ್ನು ಆರಂಭಿಸಲಾಗುವುದು ಎಂದು 2025-26ನೇ ಸಾಲಿನ ಬಜೆಟ್‌ನಲ್ಲಿ ಘೋಷಿಸಲಾಗಿತ್ತು. ▸5



### ಪಿಡಿಒ ಅನುಮೋದನೆಗೂ ಕಾಲಮಿತಿ

ನೂತನ ನಿಯಮಗಳಲ್ಲಿ ತೆರಿಗೆ ಲೆಕ್ಕಾಚಾರ ಪ್ರಕ್ರಿಯೆಯನ್ನು ಸರಳೀಕರಣ ಗೊಳಿಸಲಾಗಿದೆ. ಇ-ಸ್ವತ್ತು ನಮೂನೆ ವಿತರಿಸಲು ನಿಗದಿತ ಕಾಲಾವಧಿಯನ್ನು 45 ದಿನಗಳಿಂದ 15 ದಿನಗಳಿಗೆ ಕಡಿತಗೊಳಿಸಲಾಗಿದೆ.

ನಿಗದಿತ ಅವಧಿಯ ಒಳಗೆ ಗ್ರಾಮ ಅಭಿವೃದ್ಧಿ ಅಧಿಕಾರಿಗಳು (ಪಿಡಿಒ), ಕಾರ್ಯದರ್ಶಿ ಅನುಮೋದನೆ ನೀಡದಿದ್ದಲ್ಲಿ ಸ್ವಂಚಾಲಿತ ಅನುಮೋದನೆಗೆ ಅವಕಾಶ ಕಲ್ಪಿಸಲಾಗಿದೆ. ಅದಕ್ಕೆ ಪೂರಕವಾಗಿ ಎರಡು ವಾರಗಳಲ್ಲಿ ತಂತ್ರಾಂಶದಲ್ಲಿ ಬದಲಾವಣೆ ತರಲಾಗುವುದು ಎಂದು ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.



**ಹೊಸದಾದ ಐತಿಹಾಸಿಕ ನಿಯಮಗಳಿಂದ ಜನರಿಗೆ ಅನುಕೂಲವಾಗಲಿದೆ. ಗ್ರಾಮ ಪಂಚಾಯಿತಿಗಳ ಸಂಪನ್ಮೂಲದ ಹೆಚ್ಚಳವಾಗಲಿದ್ದು, ಸ್ವಯಂ ಸರ್ಕಾರಗಳಾಗಿ ಕಾರ್ಯನಿರ್ವಹಿಸಲಿವೆ**
**ಪ್ರಿಯಾಂಕ್ ಖರ್ಗೆ**
ಪಂಚಾಯತ್ ರಾಜ್ ಸಚಿವ

### ಬೇಕಾದ ದಾಖಲೆ

- ಭೂ ನೋಂದಣಿ ಪ್ರಮಾಣಪತ್ರ
- 2025ನೇ ಏಪ್ರಿಲ್‌ಗೂ ಹಿಂದಿನ ತೆರಿಗೆ ಪಾವತಿ ರಸೀದಿ
- ವಿದ್ಯುತ್ ಬಿಲ್, ಋಣಭಾರ ಪ್ರಮಾಣಪತ್ರ (ಇಸಿ)
- ಭೂಪರಿವರ್ತನೆ ಆದೇಶ (ಇದ್ದರೆ ಮಾತ್ರ)
- ಬಡಾವಣೆ ಅನುಮೋದಿತ ವಿನ್ಯಾಸ (ಇದ್ದರೆ)
- ನೋಂದಾಯಿತ ಪರಿತ್ಯಾಜನಾ ಪತ್ರ
- ಭೂ ಮಂಜೂರಾತಿ ಆದೇಶ

# ಚಿತ್ತಾಪುರ: ಪಥಸಂಚಲನ ಜಟಾಪಟಿ

## ಆರ್‌ಎಸ್‌ಎಸ್‌ಗೆ ಪ್ರತಿಯಾಗಿ ಭೀಮ ಆರ್ಮಿಯಿಂದಲೂ 'ಪಥಸಂಚಲನ' ತಯಾರಿ

ಪ್ರಜಾವಾಣಿ ವಾರ್ತೆ

**ಚಿತ್ತಾಪುರ (ಕಲಬುರಗಿ ಜಿಲ್ಲೆ):** ರಾಷ್ಟ್ರೀಯ ಸ್ವಯಂ ಸೇವಕ ಸಂಘವು (ಆರ್‌ಎಸ್‌ಎಸ್) ಪಟ್ಟಣದಲ್ಲಿ ಭಾನುವಾರ ಆಯೋಜಿಸಲು ಉದ್ದೇಶಿಸಿದ್ದ ಪಥಸಂಚಲನಕ್ಕೆ ಪ್ರತಿಯಾಗಿ ಭೀಮ ಆರ್ಮಿ ಸಂಘಟನೆಯು 'ಭೀಮ ಪಥಸಂಚಲನ' ನಡೆಸಲು ಮುಂದಾಗಿದ್ದು, ತಾಲ್ಲೂಕು ಆಡಳಿತ ಇಕ್ಕಟ್ಟಿಗೆ ಸಿಲುಕಿದೆ. ಹೀಗಾಗಿ ಶನಿವಾರ ತಡರಾತ್ರಿಯವರೆಗೆ ಯಾವ ಸಂಘಟನೆಗೂ ಅನುಮತಿ ಸಿಕ್ಕಿಲ್ಲ.

ಸಾರ್ವಜನಿಕ ಸ್ಥಳಗಳಲ್ಲಿ ಆರ್‌ಎಸ್‌ಎಸ್ ಚಟುವಟಿಕೆಯನ್ನು ನಿಷೇಧಿಸಬೇಕು ಎಂದು ಸಚಿವ ಪ್ರಿಯಾಂಕ್ ಖರ್ಗೆ ಮುಖ್ಯಮಂತ್ರಿಗೆ ಪತ್ರ ಬರೆದಿದ್ದು ವಿವಾದಕ್ಕೆ ಎಡೆಮಾಡಿ ಕೊಟ್ಟಿತ್ತು. ಇದರ ಬೆನ್ನಲ್ಲೇ ಆರ್‌ಎಸ್‌ಎಸ್ ಮುಖಂಡರು ಪ್ರಿಯಾಂಕ್ ತವರು ಕ್ಷೇತ್ರದಲ್ಲೇ ವಿಜಯದಶಮಿ ಅಂಗವಾಗಿ ಅದ್ದೂರಿಯಾಗಿ ಪಥಸಂಚಲನ ನಡೆಸಲು ಸಿದ್ಧತೆ ಮಾಡಿಕೊಂಡಿದ್ದರು. ▸6



### ಭಗವಾಧ್ವಜ, ಬ್ಯಾನರ್ ತೆರವು

ಪಥಸಂಚಲನ ನಡೆಸಲು ಉದ್ದೇಶಿಸಿದ್ದರಿಂದ ಆರ್‌ಎಸ್‌ಎಸ್ ಕಾರ್ಯಕರ್ತರು ಚಿತ್ತಾಪುರ ಪಟ್ಟಣದ ಮುಖ್ಯ ಬೀದಿಗಳಲ್ಲಿ ಅಳವಡಿಸಿದ್ದ ಬಂಟಿಂಗ್ಸ್, ಭಗವಾಧ್ವಜ ಮತ್ತು ಕಟೌಟ್‌ಗಳನ್ನು ಶನಿವಾರ ಬೆಳಗಿನ ಜಾವ ಪುರಸಭೆ ಆಡಳಿತವು ಪೊಲೀಸ್ ಬಿಗಿ ಭದ್ರತೆಯಲ್ಲಿ ತೆರವುಗೊಳಿಸಿದೆ.

ಧ್ವಜ, ಬ್ಯಾನರ್ ತೆರವು ಮಾಡುತ್ತಿರುವ ವಿಷಯ ತಿಳಿಯುತ್ತಿದ್ದಂತೆ ಬಿಜೆಪಿ ಮುಖಂಡರು, ಕಾರ್ಯಕರ್ತರು ಪಟ್ಟಣದಲ್ಲಿ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.



ಕಲಬುರಗಿ ಜಿಲ್ಲೆಯ ಚಿತ್ತಾಪುರ ಪಟ್ಟಣದಲ್ಲಿ ಆರ್‌ಎಸ್‌ಎಸ್ ಕಾರ್ಯಕರ್ತರು ಅಳವಡಿಸಿದ್ದ ಭಗವಾಧ್ವಜವನ್ನು ಪುರಸಭೆ ಸಿಬ್ಬಂದಿ ಶನಿವಾರ ತೆರವುಗೊಳಿಸಿದರು

### ಪ್ರವೀಣ್ ಪರ ವಕಾಲತ್ತು ತೇಜಸ್ವಿ ಸೂರ್ಯ ಹೇಳಿಕೆ



**ಬೆಂಗಳೂರು:** 'ಆರ್‌ಎಸ್‌ಎಸ್ ಪಥಸಂಚಲನದಲ್ಲಿ ಭಾಗವಹಿಸಿದ ಕಾರಣಕ್ಕೆ ಅಮಾನತಾಗಿರುವ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಪ್ರವೀಣ್ ಕುಮಾರ್ ಪರವಾಗಿ ನ್ಯಾಯಾಲಯಗಳಲ್ಲಿ ನಾನೇ ವಕಾಲತ್ತು ವಹಿಸುತ್ತೇನೆ' ಎಂದು ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಹೇಳಿದ್ದಾರೆ.

'ಪ್ರವೀಣ್ ಜತೆ ಮಾತನಾಡಿ ಸಾಂತ್ವನ ಹೇಳಿದ್ದೇನೆ. ಸಿದ್ದರಾಮಯ್ಯ ಅವರ ಸರ್ಕಾರದ ಈ ಕಾನೂನುಬಾಹಿರ ಮತ್ತು ಅಕ್ರಮ ಅಮಾನತು ಆದೇಶವನ್ನು ಪ್ರಶ್ನಿಸಲು ಸಂಬಂಧಪಟ್ಟ ನ್ಯಾಯಮಂಡಳಿ ಮತ್ತು ನ್ಯಾಯಾಲಯಗಳಿಗೆ ನಾನೇ ಹಾಜರಾಗುತ್ತೇನೆ' ಎಂದಿದ್ದಾರೆ. ▸6

### ನಮಾಜ್: ಅನುಮತಿ ಪಡೆಯುವರೆ?



**ತುಮಕೂರು:** 'ಈದ್ಗಾ ಮೈದಾನ, ರಸ್ತೆಯಲ್ಲಿ ನಮಾಜ್ ಮಾಡಲು ಮುಸ್ಲಿಮರು ಅನುಮತಿ ಪಡೆದುಕೊಳ್ಳುತ್ತಾರೆಯೇ? ಇದನ್ನು ತಡೆಯಲು ಸಾಧ್ಯವಿದೆಯೇ' ಎಂದು ಶಾಸಕ ಕೆ.ಎನ್.ರಾಜಣ್ಣ ಶನಿವಾರ ಪ್ರಶ್ನಿಸಿದರು. 'ಅನುಮತಿ ಇಲ್ಲದೆ ರಸ್ತೆಯಲ್ಲಿ ನಮಾಜ್ ಮಾಡಿದರೆ ತಡೆಯುವ ಶಕ್ತಿ ಇದೆಯೇ? ಅನುಮತಿ ಕೊಡಿ ಎಂದು ಅವರು ಬರುತ್ತಾರೆಯೇ? ಅನುಮತಿ ತೆಗೆದುಕೊಳ್ಳಿ ಎಂದು ನಾವು ಹೇಳುತ್ತೇವೆಯೆ' ಎಂದು ಪತ್ರಿಕಾಗೋಷ್ಠಿಯಲ್ಲಿ ಕೇಳಿದರು. ▸6

### ಪೂರ್ವಾನುಮತಿ ಕಡ್ಡಾಯ

**ಬೆಂಗಳೂರು:** ಸಾರ್ವಜನಿಕ ಸ್ಥಳಗಳಲ್ಲಿ ಸಂಘ–ಸಂಸ್ಥೆಗಳು, ನಾಗರಿಕ ಗುಂಪುಗಳು, ಖಾಸಗಿ ವ್ಯಕ್ತಿಗಳು ಕಾರ್ಯಕ್ರಮ ಆಯೋಜಿಸುವುದಕ್ಕೂ ಮುನ್ನ ಪೊಲೀಸ್ ಕಮಿಷನರ್ ಅಥವಾ ಎಸ್‌ಪಿ ಅವರಿಂದ ಪೂರ್ವಾನುಮತಿ ಪಡೆಯಬೇಕು ಎಂದು ಗೃಹ ಇಲಾಖೆಯು ಶನಿವಾರ ಆದೇಶಿಸಿದೆ. ತಕ್ಷಣದಿಂದಲೇ ಈ ಆದೇಶ ಜಾರಿಯಾಗಲಿದೆ ಎಂದು ತಿಳಿಸಿದೆ. ▸6

## 'ಇಂಡಿಯಾ' ಮೈತ್ರಿ ಪರಸ್ಪರ ಕಾದಾಟ

ವಿವರ ▸6

**ಚಿನಕುರುಳಿ** ಪ್ರಕಾಶ್ ಶೆಟ್ಟಿ




# ಜಾತಿವಾರು ಸಮೀಕ್ಷೆ: ಇಂದು ಕೊನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಆಯೋಗ ವತಿಯಿಂದ ನಡೆಯುತ್ತಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ (ಜಾತಿವಾರು ಸಮೀಕ್ಷೆ) ನಿಯೋಜನೆಗೊಂಡಿರುವ ಶಿಕ್ಷಕರು ಭಾನುವಾರ (ಅ.19) ಸಂಜೆಯವರೆಗೆ ಕಾರ್ಯ ನಿರ್ವಹಿಸಲಿದ್ದಾರೆ. ಆ ಬಳಿಕ ಅವರು ಸಮೀಕ್ಷಾ ಕಾರ್ಯದಿಂದ ಮುಕ್ತರಾಗಲಿದ್ದಾರೆ.

'ಸಮೀಕ್ಷೆ ಕಾರ್ಯ ಇದೇ 30ರವರೆಗೆ ಮುಂದುವರಿಯ ಲಿದೆ. ಮನೆ ಮನೆ ಸಮೀಕ್ಷೆಯಲ್ಲಿ ಭಾಗಿ ಆಗದೇ ಇರುವವರು ಆನ್‌ಲೈನ್ ಮೂಲಕ ಮಾಹಿತಿ ನೀಡಬಹುದು. ಬಾಕಿ ಇರುವ ಸಮೀಕ್ಷಾ ಕಾರ್ಯದ ಅಂತಿಮ ಚಟುವಟಿಕೆಗಳ ಬಗ್ಗೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಮತ್ತು ಜಿಲ್ಲಾಧಿಕಾರಿಗಳ ಹಂತದಲ್ಲಿ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಆಯೋಗದ ಸದಸ್ಯ ಕಾರ್ಯದರ್ಶಿ ಕೆ.ಎ. ದಯಾನಂದ ತಿಳಿಸಿದರು.

'ರಾಜ್ಯದಲ್ಲಿ (ಜಿಬಿಎ ವ್ಯಾಪ್ತಿ ಹೊರತುಪಡಿಸಿ) ಶನಿವಾರದವರೆಗೆ (ಅ. 18) ಶೇ 96.35ರಷ್ಟು ಮನೆಗಳ ಸಮೀಕ್ಷೆ ಸಂಪೂರ್ಣ ಆಗಿದೆ. ಜಿಬಿಎ ವ್ಯಾಪ್ತಿಯಲ್ಲಿ ಶೇ 39.76ರಷ್ಟು ಸಮೀಕ್ಷೆ ಆಗಿದೆ' ಎಂದೂ ಅವರು ಮಾಹಿತಿ ನೀಡಿದರು. ▸5A

**ರಾಜ್ಯದಲ್ಲಿ (ಜಿಬಿಎ ಬಿಟ್ಟು) ಸಮೀಕ್ಷೆಯ ಪ್ರಗತಿ (ಅ. 18ರವರೆಗೆ)**

| | |
|---|---|
| ಒಟ್ಟು ಮನೆಗಳ ಗುರಿ | 1,48,14,286 |
| ಮನೆಗಳ ಸಮೀಕ್ಷೆ ಅ. 18ರ ಪ್ರಗತಿ | 1,60,865 |
| ಒಟ್ಟು ಮನೆಗಳ ಸಮೀಕ್ಷೆ (ಈವರೆಗೆ) | 1,42,74,031 |
| ಮನೆಗಳ ಶೇಕಡಾವಾರು ಪ್ರಗತಿ | 96.3 |
| ಸಮೀಕ್ಷೆಗೆ ಒಳಗಾದ ಒಟ್ಟು ಜನಸಂಖ್ಯೆ | 5,29,63,614 |
| ಒಟ್ಟು ಜನಸಂಖ್ಯೆಗೆ ಶೇಕಡಾವಾರು ಪ್ರಗತಿ | 87.32 |

### 'ಸರ್ಕಾರದ ಪ್ರಾಯೋಜಿತ ಕೃತ್ಯ'

ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ಭಾಗವಹಿಸಲು ಇನ್ಫೊಸಿಸ್ ಸಹ ಸಂಸ್ಥಾಪಕ ನಾರಾಯಣ ಮೂರ್ತಿ ಮತ್ತು ರಾಜ್ಯಸಭಾ ಸದಸ್ಯೆ ಸುಧಾ ಮೂರ್ತಿ ಅವರು ನಿರಾಕರಿಸಿ ನೀಡಿರುವ ಸ್ವಯಂ ಘೋಷಣಾ ಪತ್ರ ಬಹಿರಂಗಗೊಂಡಿರುವುದು 'ಗೌರವಾನ್ವಿತ ವ್ಯಕ್ತಿಗಳ ತೇಜೋವಧೆ ಮಾಡುವ ಸರ್ಕಾರದ ಪ್ರಾಯೋಜಿತ ಕೃತ್ಯ' ಎಂದು ಜೆಡಿಎಸ್ ಆರೋಪಿಸಿದೆ. ಈ ಕುರಿತು 'ಎಕ್ಸ್'ನಲ್ಲಿ ಕಿಡಿಕಾರಿರುವ ಜೆಡಿಎಸ್, 'ಸಮೀಕ್ಷೆಯಲ್ಲಿ ಭಾಗವಹಿಸುವುದಿಲ್ಲ ಎಂದು ಮೂರ್ತಿ ದಂಪತಿ ನೀಡಿದ್ದ ಸ್ವಯಂ ದೃಢೀಕರಣ ಪತ್ರವನ್ನು ಸಾರ್ವಜನಿಕಗೊಳಿಸಿರುವುದು ಮಾಹಿತಿ ಸೋರಿಕೆಗೆ ಸ್ಪಷ್ಟ ನಿದರ್ಶನ' ಎಂದು ದೂರಿದೆ.

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ, ಅಲ್ಲಲ್ಲಿ ಮಳೆ ಸಾಧ್ಯತೆ

# ‘ರಸ್ತೆ ಗುಂಡಿ: ರಾಜಕೀಯಕ್ಕೆ ದೂಷಿಸಬೇಡಿ’

## ಸಂಚಾರ ಪೊಲೀಸರು, ಹೋಂಡಾ ಇಂಡಿಯಾ ಫೌಂಡೇಶನ್ ಸಹಯೋಗದಲ್ಲಿ ಕಾರ್ಯಕ್ರಮ • 50 ಗಸ್ತು ವಾಹನ ಹಸ್ತಾಂತರ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಮಳೆ ಬಂದಾಗ ರಸ್ತೆಗಳು ಗುಂಡಿ ಬೀಳುತ್ತವೆ. ಅವುಗಳ ದುರಸ್ತಿಗೆ ಸಮಯ ಬೇಕು. ಆದರೆ, ರಾಜಕೀಯ ಕಾರಣಕ್ಕೆ ಟೀಕೆ ಮಾಡುವುದು ಸರಿಯಲ್ಲ’ ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

ವಿಧಾನಸೌಧದ ಮುಂಭಾಗ ಬೆಂಗಳೂರು ನಗರ ಸಂಚಾರ ಪೊಲೀಸರು ಹಾಗೂ ಹೋಂಡಾ ಇಂಡಿಯಾ ಫೌಂಡೇಶನ್ ಸಹಯೋಗದಲ್ಲಿ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 50 ಗಸ್ತು ವಾಹನಗಳನ್ನು ಹಸ್ತಾಂತರಿಸಿ ಮಾತನಾಡಿದರು.

‘ಗುಂಡಿ ಮುಚ್ಚಲು ಕೆಲ ಸಮಯ ಬೇಕಾಗುತ್ತದೆ. ಅದಕ್ಕಾಗಿ ಸರ್ಕಾರದ ಕಾರ್ಯವೈಖರಿ ಬಗ್ಗೆ ಟೀಕೆ, ಟಿಪ್ಪಣಿ ಮಾಡುವುದು ಸರಿಯಲ್ಲ. ಕರ್ನಾಟಕ ಶಾಂತಿಯ ನಾಡು. ಬೆಂಗಳೂರು ವಾಸಯೋಗ್ಯಕ್ಕೆ ಸೂಕ್ತ ನಗರ. ಯಾವುದೋ ಕಾರಣಕ್ಕೆ ಕಂಪನಿಗಳು ಹೊರ ರಾಜ್ಯಕ್ಕೆ ಹೋಗುತ್ತವೆ. ಅದನ್ನು ರಾಜಕೀಯ ಮಾಡಬಾರದು. ಕಳೆದ ವರ್ಷ ನಡೆದ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ ₹10.22 ಲಕ್ಷ ಕೋಟಿ ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ಈಗಾಗಲೇ ₹ 4 ಲಕ್ಷ ಕೋಟಿ ಬಂಡವಾಳ ಹೂಡಿಕೆ ಮಾಡಲಾಗಿದೆ’ ಎಂದು ಮಾಹಿತಿ ನೀಡಿದರು.

₹1.30 ಕೋಟಿ ವೆಚ್ಚದಲ್ಲಿ 350 ಸಿಸಿ ಸಾಮರ್ಥ್ಯದ 50 ವಾಹನಗಳನ್ನು ಹೋಂಡಾ ಇಂಡಿಯಾ ಫೌಂಡೇಶನ್ ತನ್ನ ಖಾಸಗಿ ಸಂಸ್ಥೆಗಳ ಸಾಮಾಜಿಕ ಹೊಣೆಗಾರಿಕೆ ಯೋಜನೆ ಅಡಿ ನೀಡಿದೆ. ರಾಯಲ್ ಎನ್‌ಫೀಲ್ಡ್ ವಾಹನಕ್ಕೆ ಸರಿಸಮಾನವಾಗಿ ವಾಹನ ತಯಾರಿಸಲಾಗಿದೆ. ಇವು ಸಂಚಾರ ದಟ್ಟಣೆ ನಿಯಂತ್ರಿಸಲು ಪೊಲೀಸರಿಗೆ ಸಹಕಾರಿಯಾಗಲಿವೆ. ಎಷ್ಟು ಕೆಲಸ ಮಾಡಿದರೂ ನಗರದಲ್ಲಿ ಟ್ರಾಫಿಕ್ ಸಮಸ್ಯೆ ಬಗೆಗಿನ ಟೀಕೆ ನಿಂತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.



ವಿಧಾನಸೌಧದ ಮುಂಭಾಗ ನಡೆದ ಕಾರ್ಯಕ್ರಮದಲ್ಲಿ ಹೋಂಡಾ ಇಂಡಿಯಾ ಫೌಂಡೇಶನ್ ನೀಡಿದ 50 ಗಸ್ತು ವಾಹನಗಳಲ್ಲಿ ನಗರ ಸಂಚಾರ ಪೊಲೀಸರು ಸಾಗಿದರು ಚಿತ್ರ: ಕೃಷ್ಣಕುಮಾರ್ ಪಿ.ಎಸ್.

ದೆಹಲಿ, ಮುಂಬೈ, ಕೋಲ್ಕತ್ತ ಮಹಾನಗರಗಳಿಗೆ ಹೋಲಿಸಿದರೆ ಬೆಂಗಳೂರು ನಗರದಲ್ಲಿ ಸಂಚಾರ ಸುವ್ಯವಸ್ಥೆ ಉತ್ತಮ ಸ್ಥಿತಿಯಲ್ಲಿದೆ. ಈ ವರ್ಷ 500 ವಾಹನಗಳನ್ನು ಖರೀದಿಸಿ ಇಲಾಖೆಗೆ ನೀಡಲಾಗಿದೆ ಎಂದರು.

ಪೊಲೀಸ್ ಅಧಿಕಾರಿಗಳ ನಿಯೋಗವನ್ನು ಲಂಡನ್‌ಗೆ ಕರೆದೊಯ್ಯಲಾಗಿತ್ತು. ಲಂಡನ್ ಮೆಟ್ರೊ ಪೊಲೀಸರು ಕಮಾಂಡ್ ಸೆಂಟರ್‌ನ ಕಾರ್ಯವೈಖರಿಯನ್ನು ಪರಿಚಯಿಸಿದ್ದರು. ಅಪಘಾತ ಸೇರಿ ಯಾವುದೇ ತುರ್ತು ಸಂದರ್ಭಗಳಲ್ಲಿ ಸ್ಪಂದಿಸಲು ಅನುಕೂಲವಾಗುವ ನಿಟ್ಟಿನಲ್ಲಿ ನಿರ್ಮಿಸಿದ್ದರು. ಅದೇ ರೀತಿಯ ಕಮಾಂಡ್ ಸೆಂಟರ್ ಅನ್ನು ನಗರದಲ್ಲಿ ₹26 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿದೆ. ಸಾರ್ವಜನಿಕರ ಯಾವುದೇ ರೀತಿಯ ತುರ್ತು ಕರೆಗಳಿಗೆ ಪೊಲೀಸರು 9 ನಿಮಿಷದಲ್ಲಿ ಸ್ಪಂದಿಸುತ್ತಾರೆ ಎಂದು ತಿಳಿಸಿದರು.

ಡ್ರಗ್ಸ್ ದಂಧೆಯನ್ನು ಮಟ್ಟ ಹಾಕುವ ನಿಟ್ಟಿನಲ್ಲಿ ನಗರ ಪೊಲೀಸರು ಉತ್ತಮವಾಗಿ ಕೆಲಸ ಮಾಡುತ್ತಿದ್ದಾರೆ. ಪೊಲೀಸರು ಶಾಲಾ-ಕಾಲೇಜುಗಳಿಗೆ ಭೇಟಿ ನೀಡಿ, ವಿದ್ಯಾರ್ಥಿಗಳಿಗೆ ಮತ್ತು ಯುವಕರಿಗೆ ಡ್ರಗ್ಸ್ ದುಷ್ಪರಿಣಾಮದ ಕುರಿತು ಅರಿವು ಮೂಡಿಸುವ ನಿಟ್ಟಿನಲ್ಲಿ ನಿರಂತರವಾಗಿ ಕೆಲಸ ಮಾಡುತ್ತಿದ್ದಾರೆ ಎಂದರು.

ಗೃಹ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್, ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ. ಎಂ.ಎ.ಸಲೀಂ, ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್, ನಗರ ಸಂಚಾರ ವಿಭಾಗದ ಜಂಟಿ ಪೊಲೀಸ್ ಕಮಿಷನರ್ ಕಾರ್ತಿಕ್ ರೆಡ್ಡಿ, ಹೋಂಡಾ ಇಂಡಿಯಾ ಸಂಸ್ಥೆಯ ಕಾರ್ಯಾಚರಣೆ ಅಧಿಕಾರಿಗಳಾದ ಸುನಿಲ್ ಕುಮಾರ್ ಮಿತ್ತಲ್, ಪ್ರಭು ನಾಗರಾಜ್, ಡಿಸಿಪಿ ಅನೂಪ್ ಶೆಟ್ಟಿ ಹಾಜರಿದ್ದರು.

### ಇ–ಆಕ್ಸಿಡೆಂಟ್ ರಿಪೋರ್ಟ್ ಸೌಲಭ್ಯ




ನಗರ ಸಂಚಾರ ಪೊಲೀಸರು ‘ಅಸ್ತ್ರಂ’ ಆ್ಯಪ್ ಮೂಲಕ ಇ-ಆ್ಯಕ್ಸಿಡೆಂಟ್ ರಿಪೋರ್ಟ್ ಸೌಲಭ್ಯವನ್ನು ಪರಿಚಯಿಸಿದ್ದಾರೆ. ಸಂಚಾರ ಪೊಲೀಸ್ ಠಾಣೆಯೊಂದಕ್ಕೆ ಅಪಘಾತದ ವಿಮೆ ಕ್ಲೈಮ್ ಉದ್ದೇಶಕ್ಕಾಗಿ ದಿನಕ್ಕೆ 3–4 ಅರ್ಜಿ ಬರುತ್ತವೆ. ಎಫ್‌ಐಆರ್ ಅಗತ್ಯವಿಲ್ಲದ ಸಣ್ಣ ಅಪಘಾತದ ಸಂದರ್ಭದಲ್ಲಿ ನಾಗರಿಕರು ಅಪಘಾತದ ವರದಿ ಸಲ್ಲಿಸಲು ಮತ್ತು ವಿಮಾ ಕ್ಲೈಮ್‌ಗೆ ಅಂಗೀಕಾರ ಪಡೆಯಲು ಠಾಣೆಗೆ ಭೇಟಿ ನೀಡಬೇಕಾಗುತ್ತದೆ. ಇದರಿಂದ ಸಾಕಷ್ಟು ಸಮಯ ವ್ಯರ್ಥವಾಗುತ್ತದೆ. ಇದರ ಒತ್ತಡ ಕಡಿಮೆ ಮಾಡಲು ‘ಅಸ್ತ್ರಂ’ ಆ್ಯಪ್ ಡೌನ್‌ಲೋಡ್ ಮಾಡಿಕೊಂಡು ಅಪಘಾತದ ವರದಿ ನಮೂದಿಸಿ, ಫೋಟೊಗಳನ್ನು ಅಪ್‌ಲೋಡ್ ಮಾಡಿ, ಅಂಗೀಕಾರ ಪಡೆದು ವಿಮೆಗೆ ಸಲ್ಲಿಸಬಹುದು ಎಂದು ಸಂಚಾರ ಪೊಲೀಸರು ತಿಳಿಸಿದ್ದಾರೆ.





## ನಟರಾಜ್ ಹೊನ್ನವಳ್ಳಿ, ದಿಲೀಪ್ ಕುಮಾರ್‌ಗೆ ‘ಶಾ.ಬಾಲುರಾವ್ ಪ್ರಶಸ್ತಿ’

ಪ್ರಜಾವಾಣಿ ವಾರ್ತೆ



ನಟರಾಜ್ ಹೊನ್ನವಳ್ಳಿ



ಆರ್.ದಿಲೀಪ್ ಕುಮಾರ್

**ಬೆಂಗಳೂರು:** ಬಿ.ಎಂ.ಶ್ರೀ ಪ್ರತಿಷ್ಠಾನ ನೀಡುವ 2024ನೇ ಸಾಲಿನ ‘ಶಾ. ಬಾಲುರಾವ್ ಅನುವಾದ ಪ್ರಶಸ್ತಿ’ಗೆ ರಂಗ ನಿರ್ದೇಶಕ ನಟರಾಜ್ ಹೊನ್ನವಳ್ಳಿ ಅವರ ‘ಆ ಲಯ ಈ ಲಯ’ ನಾಟಕ ಹಾಗೂ ‘ಶಾ. ಬಾಲುರಾವ್ ಯುವ ಬರಹಗಾರ ಪ್ರಶಸ್ತಿ’ಗೆ ಲೇಖಕ ಆರ್. ದಿಲೀಪ್ ಕುಮಾರ್ ಅವರ ‘ಶಬ್ದ ಸೋಪಾನ’ ಕೃತಿ ಆಯ್ಕೆಯಾಗಿವೆ.

ಈ ಪ್ರಶಸ್ತಿಗಳು ತಲಾ ₹25 ಸಾವಿರ ನಗದು ಹಾಗೂ ಫಲಕವನ್ನು ಒಳಗೊಂಡಿವೆ. 2024ರಲ್ಲಿ ಮೊದಲ ಮುದ್ರಣಗೊಂಡ ಕೃತಿಗಳನ್ನು ಈ ಪ್ರಶಸ್ತಿಗಳಿಗೆ ಆಯ್ಕೆ ಮಾಡಲಾಗಿದೆ. ಬಸವರಾಜ ಕಲ್ಗುಡಿ, ವಿ. ಕೃಷ್ಣಮೂರ್ತಿ ರಾವ್, ಪದ್ಮಿನಿ ನಾಗರಾಜು ಹಾಗೂ ಡಿ. ಭರತ್ ಅವರನ್ನು ಒಳಗೊಂಡ ಸಮಿತಿ ಈ ಆಯ್ಕೆ ಮಾಡಿದೆ.

ಇದೇ 26ರಂದು ಎನ್.ಆರ್. ಕಾಲೊನಿಯ ಬಿಎಂಶ್ರೀ ಪ್ರತಿಷ್ಠಾನದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದ್ದು, ಅನುವಾದಕ ವಿ. ಕೃಷ್ಣಮೂರ್ತಿ ರಾವ್ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ವಿಮರ್ಶಕ ಬಸವರಾಜ ಕಲ್ಗುಡಿ ಅವರು ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದು, ಕಮಲಿನಿ ಶಾ. ಬಾಲುರಾವ್ ಉಪಸ್ಥಿತರಿರುತ್ತಾರೆ ಎಂದು ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಶಾಂತರಾಜು ತಿಳಿಸಿದ್ದಾರೆ.

## ಭಗವದ್ಗೀತಾ ಅಭಿಯಾನ 25ಕ್ಕೆ

ಪ್ರಜಾವಾಣಿ ವಾರ್ತೆ

**ಶಿವಮೊಗ್ಗ:** ‘ಪ್ರಸಕ್ತ ಸಾಲಿನ ಶ್ರೀ ಭಗವದ್ಗೀತಾ ಅಭಿಯಾನ ಕಾರ್ಯಕ್ರಮಕ್ಕೆ ಅ.25 ರಂದು ಮಧ್ಯಾಹ್ನ 3 ಗಂಟೆಗೆ ಶಿವಮೊಗ್ಗ ಸೇರಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಏಕ ಕಾಲದಲ್ಲಿ ಚಾಲನೆ ನೀಡಲಾಗುತ್ತಿದೆ’ ಎಂದು ಸೋಂದಾ ಸ್ವರ್ಣವಲ್ಲಿ ಮಹಾಸಂಸ್ಥಾನ ಮಠ ಜಗದ್ಗುರು ಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿ ತಿಳಿಸಿದರು.



ಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿ

‘ಸೋಂದಾ ಸ್ವರ್ಣವಲ್ಲಿ ಮಹಾಸಂಸ್ಥಾನ ಮತ್ತು ಸ್ವರ್ಣರಶ್ಮೀ ಟ್ರಸ್ಟ್‌ನ ಸಂಯುಕ್ತಾಶ್ರಯದಲ್ಲಿ ಈ ಅಭಿಯಾನ ನಡೆಯುತ್ತಿದೆ. ಅಭಿಯಾನದ ಉದ್ಘಾಟನೆಗೆ ಸಕಲ ಸಿದ್ಧತೆ ಪೂರ್ಣಗೊಂಡಿವೆ’ ಎಂದು ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಹೇಳಿದರು.

‘ಶಿವಮೊಗ್ಗ ಜಿಲ್ಲೆಯ 157, ರಾಜ್ಯದ ಇತರೆ 337 ಸ್ಥಳಗಳಲ್ಲಿ ಅಂದು ಉದ್ಘಾಟನಾ ಸಮಾರಂಭ ನಡೆಯಲಿದೆ. ಅಭಿಯಾನದ ವೇಳೆ ಶಾಲೆ, ದೇವಸ್ಥಾನಗಳಲ್ಲಿ ಹಾಗೂ ವಿವಿಧ ಧಾರ್ಮಿಕ ಕೇಂದ್ರಗಳಲ್ಲಿ ಭಗವದ್ಗೀತೆಯ 11ನೇ ಅಧ್ಯಾಯದ ಶ್ಲೋಕಗಳನ್ನು ಹೇಳಿಕೊಡಲಾಗುತ್ತಿದೆ. ವ್ಯಕ್ತಿತ್ವ ವಿಕಸನ, ನೈತಿಕತೆಯ ಪುನರುತ್ಥಾನ, ಸಾಮಾಜಿಕ ಸಾಮರಸ್ಯ ಮತ್ತು ರಾಷ್ಟ್ರೀಯ ಭಾವೈಕ್ಯ ಸಾಧಿಸುವುದು ಈ ಅಭಿಯಾನದ ಮೂಲ ಉದ್ದೇಶ’ ಎಂದರು.

‘ನ.30ರಂದು ಶಿವಮೊಗ್ಗದ ಅಲ್ಲಮ ಪ್ರಭು ಬಯಲಿನಲ್ಲಿ ಭಗವದ್ಗೀತೆ ಅಭಿಯಾನದ ರಾಜ್ಯಮಟ್ಟದ ಮಹಾ ಸಮರ್ಪಣೆ ಸಮಾರಂಭ ನಡೆಯಲಿದೆ’ ಎಂದರು.

**ವಿಚಾರ ಸಂಕಿರಣ:** ಶಂಕರಘಟ್ಟದ ಕುವೆಂಪು ವಿಶ್ವವಿದ್ಯಾಲಯದಲ್ಲಿ ‘ಭಗವದ್ಗೀತೆ ಮತ್ತು ಅಪರಾಧ ನಿಯಂತ್ರಣ’ ವಿಷಯ ಕುರಿತ ವಿಚಾರ ಸಂಕಿರಣವನ್ನು ನ. 18ರಂದು ಆಯೋಜಿಸಲಾಗಿದೆ. ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎಚ್. ಬಿಲ್ಲಪ್ಪ ಉದ್ಘಾಟಿಸುವರು ಎಂದು ಶ್ರೀಗಳು ತಿಳಿಸಿದರು.

ಅಭಿಯಾನದ ಗೌರವಾಧ್ಯಕ್ಷ ಕೆ.ಎಸ್.ಈಶ್ವರಪ್ಪ, ಕಾರ್ಯಾಧ್ಯಕ್ಷ ಅಶೋಕ ಜಿ.ಭಟ್ ಇದ್ದರು.



ಮಹದೇಶ್ವರ ಬೆಟ್ಟದಲ್ಲಿರುವ ಮಾದಪ್ಪನ ಸನ್ನಿಧಿಯಲ್ಲಿ ಶನಿವಾರ ದೀಪಾವಳಿ ಜಾತ್ರಾ ಮಹೋತ್ಸವಕ್ಕೆ ಚಾಲನೆ ದೊರೆತಿದ್ದು, ಸಹಸ್ರಾರು ಭಕ್ತರು ಪಾಲ್ಗೊಂಡಿದ್ದರು

## ಮಾದಪ್ಪನ ದೀಪಾವಳಿ ಜಾತ್ರೆ

ಪ್ರಜಾವಾಣಿ ವಾರ್ತೆ

**ಮಹದೇಶ್ವರ ಬೆಟ್ಟ (ಚಾಮರಾಜನಗರ ಜಿಲ್ಲೆ):** ಮಹದೇಶ್ವರನ ಬೆಟ್ಟದಲ್ಲಿರುವ ಮಾದಪ್ಪನ ಸನ್ನಿಧಿಯಲ್ಲಿ ಶನಿವಾರ ದೀಪಾವಳಿ ಜಾತ್ರಾ ಮಹೋತ್ಸವಕ್ಕೆ ಚಾಲನೆ ದೊರೆಯಿತು.

ನಸುಕಿನಲ್ಲಿ ದೇವರಿಗೆ ವಿಶೇಷ ಪೂಜೆ, ಅಭಿಷೇಕ, ಎಣ್ಣೆಮಜ್ಜನ ಸೇವೆ ನೆರವೇರಿಸಿ ಭಕ್ತರಿಗೆ ದರ್ಶನಕ್ಕೆ ಅವಕಾಶ ನೀಡಲಾಯಿತು. ಐದು ದಿನಗಳ ಜಾತ್ರೆಯಲ್ಲಿ ನಾಡಿನ ಹಲವೆಡೆಗಳಿಂದ ಲಕ್ಷಾಂತರ ಭಕ್ತರು ಭಾಗವಹಿಸಲಿದ್ದಾರೆ. 21ರಂದು ಅಮಾವಾಸ್ಯೆಯ ಪ್ರಯುಕ್ತ ಹಾಲರುವೆ ಉತ್ಸವ, 22ರಂದು ಮಹದೇಶ್ವರ ಸ್ವಾಮಿಯ ಮಹಾ ರಥೋತ್ಸವ ಜರುಗಲಿದೆ. ಅಂದು ರಾತ್ರಿ ಅದ್ದೂರಿ ತೆಪ್ಪೋತ್ಸವದ ಮೂಲಕ ದೀಪಾವಳಿ ಜಾತ್ರೆಗೆ ತೆರೆ ಬೀಳಲಿದೆ.

ಕರ್ನಾಟ, ತಮಿಳುನಾಡು ಸಾರಿಗೆ ಸಂಸ್ಥೆಗಳು ಮಾದಪ್ಪನ ಕ್ಷೇತ್ರಕ್ಕೆ ಹೆಚ್ಚುವರಿ ಬಸ್‌ಗಳ ವ್ಯವಸ್ಥೆ ಮಾಡಿವೆ. ಭಕ್ತರಿಗೆ ನಿತ್ಯ ದಾಸೋಹದ ವ್ಯವಸ್ಥೆ ಮಾಡಲಾಗಿದೆ.

## ಅಥ್ಲೆಟಿಕ್ಸ್: ಪ್ರತೀಕ್‌ಗೆ ಕಂಚು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕರ್ನಾಟಕದ ಡಿ.ಪ್ರತೀಕ್ ಅವರು ಶನಿವಾರ ಮುಕ್ತಾಯಗೊಂಡ ಇಂಡಿಯಾ ಓಪನ್ 23 ವರ್ಷದೊಳಗಿನವರ ಅಥ್ಲೆಟಿಕ್ ಕೂಟದ ಪುರುಷರ 200 ಮೀ. ಓಟದಲ್ಲಿ ಕಂಚಿನ ಪದಕ ಜಯಿಸಿದರು.

ಪ್ರತೀಕ್ ಅವರು 21.30 ಸೆಕೆಂಡುಗಳಲ್ಲಿ ಗುರಿ ತಲುಪಿ ಕಂಚಿನ ಪದಕಕ್ಕೆ ಕೊರಳೊಡ್ಡಿದರು.

ಒಡಿಶಾದ ದೊಂಡಪತಿ (21.10ಸೆ.) ಅವರು ಚಿನ್ನದ ಪದಕ ಗೆದ್ದುಕೊಂಡರೆ, ಹರಿಯಾಣದ ರಾಜಾ ಬಾಬು (21.26ಸೆ.) ಅವರು ಬೆಳ್ಳಿ ಪದಕವನ್ನು ತಮ್ಮದಾಗಿಸಿಕೊಂಡರು.

# ಮಾನಸಿಕ ಆರೋಗ್ಯ ವ್ಯವಸ್ಥೆ ದರ್ಶನ

## ನಿಮ್ಹಾನ್ಸ್ ಹಮ್ಮಿಕೊಂಡಿದ್ದ 'ಮಾನಸಿಕ ಆರೋಗ್ಯ ಸಂತೆ' ಸಂಪನ್ನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆಯು (ನಿಮ್ಹಾನ್ಸ್) ನಗರದಲ್ಲಿ ಹಮ್ಮಿಕೊಂಡಿದ್ದ ಎರಡು ದಿನಗಳ 'ಮಾನಸಿಕ ಆರೋಗ್ಯ ಸಂತೆ'ಯಲ್ಲಿ ಮಾನಸಿಕ ಆರೋಗ್ಯದ ಬಗ್ಗೆ ಅರಿವು ಮೂಡಿಸಲಾಯಿತು.

ವಿವಿಧ ಸರ್ಕಾರೇತರ ಸಂಸ್ಥೆಗಳ ಸಹಯೋಗದಲ್ಲಿ ಶುಕ್ರವಾರ ಹಾಗೂ ಶನಿವಾರ ನಡೆದ ಈ ಸಂತೆಯು, ಮಾನಸಿಕ ಆರೋಗ್ಯದ ಮಹತ್ವವನ್ನು ಸಾರುವ ಜತೆಗೆ ವಿವಿಧ ಸಮಸ್ಯೆಗಳಿಗೆ ಚಿಕಿತ್ಸಾ ವ್ಯವಸ್ಥೆಯನ್ನು ಪರಿಚಯಿಸಿತು.

ವಿದ್ಯಾರ್ಥಿಗಳು, ಸಾರ್ವಜನಿಕರು ಸೇರಿ ಮೂರು ಸಾವಿರಕ್ಕೂ ಅಧಿಕ ಮಂದಿ ಈ ಸಂತೆಯಲ್ಲಿ ಪಾಲ್ಗೊಂಡಿದ್ದರು.

ಮಾನಸಿಕ ಆರೋಗ್ಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಜಾಗೃತಿ ಮೂಡಿಸಲು ವಿವಿಧ ಮಳಿಗೆಗಳೂ ಸಂತೆಯಲ್ಲಿದ್ದವು. ಈ ಮಳಿಗೆಗಳಲ್ಲಿದ್ದ ಸಂಪನ್ಮೂಲ ವ್ಯಕ್ತಿಗಳು, ಮಾನಸಿಕ ಆರೋಗ್ಯ ನಿರ್ವಹಣೆ, ಸಮಸ್ಯೆಗಳ ನಿವಾರಣೆ ಹಾಗೂ ಚಿಕಿತ್ಸೆಯ ಬಗ್ಗೆ ತಿಳಿಸಿದರು.

ಮಿದುಳಿನ ಕಾರ್ಯವೈಖರಿ ಬಗ್ಗೆ ಪ್ರಾತ್ಯಕ್ಷಿಕೆ ಯನ್ನೂ ನೀಡಲಾಯಿತು. ಮಾನಸಿಕ ಆರೋಗ್ಯಕ್ಕೆ ಸಂಬಂಧಿಸಿದ ಸಾಕ್ಷ್ಯಚಿತ್ರ ಪ್ರದರ್ಶನವು ನಡೆಯಿತು.

'ಇಂದಿಗೂ ಮಾನಸಿಕ ಆರೋಗ್ಯ ಸಮಸ್ಯೆ ಹೊಂದಿರುವವರನ್ನು ಕೀಳಾಗಿ ಕಾಣುವುದು, ಅವರನ್ನು ನಿರ್ಲಕ್ಷ್ಯ ಮಾಡುವುದು ಕಾಣಬಹುದಾಗಿದೆ. ಜನರು ಮಾನಸಿಕ ಕಾಯಿಲೆಗಳಿಗೆ ಚಿಕಿತ್ಸೆ ಪಡೆಯಲು ಹಿಂಜರಿಯುತ್ತಿದ್ದಾರೆ. ಹೀಗಾಗಿ, ಮಾನಸಿಕ ಆರೋಗ್ಯ ಕಾಪಾಡಿಕೊಳ್ಳುವ ಮಹತ್ವದ ಬಗ್ಗೆ ಅರಿವು ಮೂಡಿಸುವ ಅಗತ್ಯ ಇದೆ. ದೈಹಿಕ ಆರೋಗ್ಯದ ಜತೆಗೆ ಮಾನಸಿಕ ಆರೋಗ್ಯವೂ ಅತಿ ಮುಖ್ಯ' ಎಂದು ಮನೋವೈದ್ಯರು ಅಭಿಪ್ರಾಯಪಟ್ಟರು.



ಸಂತೆಯಲ್ಲಿದ್ದ ಮಳಿಗೆಗಳಿಗೆ ಡಾ. ಸುದರ್ಶನ್ ಎಚ್. ಹಾಗೂ ನಿಮ್ಹಾನ್ಸ್‌ನ ಪ್ರಾಧ್ಯಾಪಕರು ಭೇಟಿ ನೀಡಿದರು

> ಮಾನಸಿಕ ಆರೋಗ್ಯ ಕುರಿತ ತಿಳಿವಳಿಕೆಯ ಕೊರತೆ ನಿವಾರಿಸಿ, ಸಮಸ್ಯೆಗಳನ್ನು ಗುರುತಿಸುವುದರ ಜತೆಗೆ ಚಿಕಿತ್ಸೆ ಬಗ್ಗೆ ಅರಿವು ಮೂಡಿಸಬೇಕಿದೆ
> **ಡಾ. ಪ್ರತಿಮಾ ಮೂರ್ತಿ,** ನಿಮ್ಹಾನ್ಸ್ ನಿರ್ದೇಶಕಿ

**ಸಮಾನ ಸ್ವೀಕಾರ:** ಮಾನಸಿಕ ಆರೋಗ್ಯ ಸಂತೆಯ ಉದ್ಘಾಟನಾ ಸಮಾರಂಭದಲ್ಲಿ ಕರುಣಾ ಟ್ರಸ್ಟ್ ಅಧ್ಯಕ್ಷ ಡಾ. ಸುದರ್ಶನ್ ಎಚ್. ಮಾತನಾಡಿ, 'ಜೀವನದಲ್ಲಿ ಸುಖ–ದುಃಖ ಸಹಜ. ಇವನ್ನು ಸಮಾನವಾಗಿ ಸ್ವೀಕರಿಸಿ, ಜೀವನದ ಸವಾಲುಗಳನ್ನು ಜಯಿಸಬೇಕು. ದುಃಖದ ಸಂದರ್ಭದಲ್ಲಿ ಕುಗ್ಗದೆ, ಆಪ್ತರ ಜತೆಗೆ ಸಮಾಲೋಚನೆ ನಡೆಸುವ ಮೂಲಕ ಮನಸ್ಸಿನ ಭಾರವನ್ನು ಕಡಿಮೆ ಮಾಡಿಕೊಳ್ಳಬೇಕು' ಎಂದು ಹೇಳಿದರು.

# ನವೆಂಬರ್‌ನಲ್ಲಿ 'ಪಾಂಚಜನ್ಯ ಯಾತ್ರೆ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ವಿಶ್ವಕರ್ಮ ಸಮಾಜದ ಏಕತೆ, ಸಂಘಟನೆ ಹಾಗೂ ಅವರ ಹಕ್ಕು ಬಾಧ್ಯತೆಗಳ ಕುರಿತು ಅರಿವು ಮೂಡಿಸುವ ಉದ್ದೇಶದಿಂದ ನವೆಂಬರ್ ಕೊನೆಯ ವಾರದಲ್ಲಿ ವಿಶ್ವಕರ್ಮ ಪಾಂಚಜನ್ಯ ಯಾತ್ರೆ ನಡೆಸಲಾಗುವುದು ಎಂದು ವಿಶ್ವಕರ್ಮ ಮಹಾ ಒಕ್ಕೂಟ ತಿಳಿಸಿದೆ.

ಶನಿವಾರ ನಡೆದ ಪಾಂಚಜನ್ಯ ಯಾತ್ರೆಯ ಪೂರ್ವ ಸಿದ್ಧತಾ ಸಭೆಯಲ್ಲಿ ಮಾತನಾಡಿದ ಒಕ್ಕೂಟದ ರಾಜ್ಯ ಘಟಕದ ಅಧ್ಯಕ್ಷ ವಿಜಯಕುಮಾರ ಪತ್ತಾರ, 'ವಿಶ್ವಕರ್ಮ ಮಹಾ ಒಕ್ಕೂಟವು 2024ರ ನವೆಂಬರ್‌ನಲ್ಲಿ ಅಸ್ತಿತ್ವಕ್ಕೆ ಬಂದಿದೆ. ಈಗ ಒಂದು ವರ್ಷ ಪೂರೈಸುತ್ತಿರುವುದರಿಂದ ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ಪಾಂಚಜನ್ಯ ಯಾತ್ರೆ ಮೂಲಕ ಸಮುದಾಯದ ಅಭಿವೃದ್ಧಿ ಕುರಿತು ಜಾಗೃತಿ ಮೂಡಿಸಲು ನಿರ್ಧರಿಸಲಾಗಿದೆ' ಎಂದು ತಿಳಿಸಿದರು.

'ಕಳೆದ ಒಂದು ವರ್ಷದಲ್ಲಿ ವಿಶ್ವಕರ್ಮ ಸಮಾಜದ ಏಳಿಗೆಗೆ ಒಕ್ಕೂಟ ಕೈಗೊಂಡ ಸಮಾಜಮುಖಿ ಕೆಲಸಗಳನ್ನು ಈ ಸಂದರ್ಭದಲ್ಲಿ ಪರಾಮರ್ಶೆ ನಡೆಸಲಾಗುತ್ತದೆ. ವಿಶ್ವಕರ್ಮ ಸಮಾಜಕ್ಕೆ ರಾಜಕೀಯದಲ್ಲಿ ಸ್ಥಾನ ನೀಡುವುದು, ಮುಜರಾಯಿ ದೇವಸ್ಥಾನಗಳ ಆಡಳಿತ ಮಂಡಳಿಗಳಲ್ಲಿ ಇಬ್ಬರು ವಿಶ್ವಕರ್ಮರಿಗೆ ಪ್ರಾತಿನಿಧ್ಯ ನೀಡುವ ತಿದ್ದುಪಡಿ ಮಸೂದೆಯನ್ನು ಮುಂಬರುವ ಅಧಿವೇಶನದಲ್ಲಿ ಮಂಡಿಸಲು ಒತ್ತಾಯಿಸಲಾಗುವುದು' ಎಂದು ತಿಳಿಸಿದರು.

ಇದೇ ವೇಳೆ ಒಕ್ಕೂಟದ ಜಾಗೃತಿ ಗೀತೆ ಮತ್ತು ಮಾಹಿತಿ ಕೈಪಿಡಿಯ ಮುಖಪುಟ ವಿನ್ಯಾಸ ಬಿಡುಗಡೆ ಮಾಡಲಾಯಿತು.

ಒಕ್ಕೂಟದ ಗೌರವ ಅಧ್ಯಕ್ಷ ಸರ್ವೇಶ ಆಚಾರ್, ಉಪಾಧ್ಯಕ್ಷ ಮಹಾದೇವ ಪಂಚಾಳ, ಪ್ರಧಾನ ಸಂಚಾಲಕ ಈಶ್ವರ ವಿಶ್ವಕರ್ಮ, ಖಜಾಂಚಿ ಸುರೇಶ ಪತ್ತಾರ, ಸಂಘಟನಾ ಕಾರ್ಯದರ್ಶಿ ಮೋಹನ ನರಗುಂದ ಉಪಸ್ಥಿತರಿದ್ದರು.



ವಿಶ್ವಕರ್ಮ ಒಕ್ಕೂಟದ ಸಭೆಯಲ್ಲಿ ಸಮುದಾಯದ ಮಾಹಿತಿ ಕೈಪಿಡಿಯ ಮುಖಪುಟದ ವಿನ್ಯಾಸವನ್ನು ಬಿಡುಗಡೆಗೊಳಿಸಲಾಯಿತು

# ಕತ್ತಲಲ್ಲಿ ಕುಂಬಾರರ ಬದುಕು

## ಆಧುನಿಕತೆ ಮಧ್ಯೆ ನಲುಗಿದ ಕುಲಕಸುಬು ● ಅಂಧಕಾರದಲ್ಲಿ ಕುಂಬಾರಿಕೆ



ದೀಪಾವಳಿ ಹಬ್ಬದ ಅಂಗವಾಗಿ ಕಲಬುರಗಿ ತಾಲ್ಲೂಕಿನ ಮೇಳಕುಂದಾ.ಕೆ ಗ್ರಾಮದಲ್ಲಿ ಕುಂಬಾರ ಕುಟುಂಬದವರು ಮನೆ ಆವರಣದಲ್ಲಿ ಮಣ್ಣಿನ ಹಣತೆ ತಯಾರಿಕೆಯಲ್ಲಿ ತೊಡಗಿರುವುದು

ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

● ಪ್ರಭು ಬ. ಅಡವಿಹಾಳ

**ಕಲಬುರಗಿ:** 'ಯಾರ್ ಬಿ, ನಮ್ಮ ನಸೀಬು ಖರಾಬದ. ಹಜಾರ್ ರೂಪಾಯಿ ಕೊಟ್ರೂ ಕೆಸರಾಗ ಕೈಯಾಡಿಸಾಕ ಯಾರೂ ಬರಲ್ಲ. ಕೂಲಿಮಾಡೋದು ಪಾಡದ. ಆದ್ರ ನಮ್ ಹಿರಿಯರು ಮಾಡ್ಕೋತಾ ಬಂದಾರಂತ ನಡಿಸಿಕೋತ ಹೊಂಟೇವು. ಹೊಟ್ಟೆ ತುಂಬಿದ್ರೇನು, ಅರ್ಧ ಆದ್ರೇನೂ ಯಾರು ಕೇಳ್ತಾರ, ನಮ್ ಕೆಲಸ ಮಾಡ್ಲೇಬೇಕಲ...'

ರಾಡಿ ನೀರಾಗ ಕೈಯಾಡಿಸುತ್ತಾ ಕುಳಿತಿದ್ದ ಕಲಬುರಗಿ ತಾಲ್ಲೂಕಿನ ಮೇಳಕುಂದಾ(ಕೆ) ಗ್ರಾಮದ ರಾಜಶ್ರೀ ಕುಂಬಾರ ಸೆರಗಂಚಲ್ಲಿ ಕಣ್ಣು ಒರೆಸಿಕೊಂಡರು. ಕೆಸರು ರೆಪ್ಪೆಗೂ ಮೆತ್ತಿಕೊಂಡಿತು.

'ಯಾಕ್ರೀ ಅವ್ವಾ ದುಡಿಮೆ ಚೊಲೋ ಇಲ್ಲನು?' ಎಂದು ಪ್ರಶ್ನಿಸಿದಾಗ ಮಾತಿಗಿಳಿದ ರಾಜಶ್ರೀ, 'ಏನ್ ಮಾಡೂದ್ರಿಬಿ, ಮನೇಸ ಮಂದಿನ ದುಡಿದ್ರೂ ತಿಂಗಳಿಗೆ ₹10 ಸಾವಿರ ಹುಟ್ಟೂದಿಲ್ಲ. ಮಕ್ಕಳು, ಮೊಮ್ಮಕ್ಕಳೂ ದಿನ ಇದ ಉದ್ಯೋಗ ಮಾಡ್ತೀವಿ. ರಾಜಸ್ತಾನ, ಗುಜರಾತ್, ಚೀನಾದಿಂದ ಬರೋ ಮಾಲ್ ಮುಂದ ನಮ್ಮನ್ನು ಯಾರೂ ಕೇಳೋದಿಲ್ಲ. ಅವರು ಫ್ಯಾಕ್ಟರ್ಯಾಗ ರೆಡಿ ಮಾಡ್ತಾರ. ಬಣ್ಣ, ಚಿತ್ತಾರ ಇರ್ತಾವು ಅಂತ ಹೇಳಿದಷ್ಟು ದುಡ್ಡು ಕೊಟ್ಟು ತಂಗೊಂಡ್ ಹೋಗ್ತಾರ. ನಾವು ಕೈಲೇ ಮಾಡ್ತೀವಿ, ಕೂಲಿ ಆದ್ರೂ ಸಿಗಲಿ ಅಂದ್ರೆ, ಚೌಕಾಸಿ ಮಾಡ್ತಾರ. ಹಳ್ಳಿ ಮಂದಿ ಈಟ್ ತಗೊಂಡ್ ಹೋಗ್ತಾರ. ಸಿಟಿ ಮಂದಿ ಅಂತೂ ನಮ್ ಕಡೆ ಸುಳಿಯೋದೇ ಇಲ್ಲ' ಎಂದು ನಿಟ್ಟುಸಿರು ಬಿಟ್ಟರು.

'ತಲೆಮಾರುಗಳಿಂದ ಮಣ್ಣನ್ನೇ ನಂಬಿ ಕುಂಬಾರಿಕೆ ವೃತ್ತಿಯಲ್ಲೇ ಬದುಕು ಕಟ್ಟಿಕೊಂಡಿದ್ದೇವೆ. ಲಾಭ ಇಲ್ಲದಿದ್ದರೂ ಕುಲಕಸುಬನ್ನು ಬಿಡಲು ಮನಸೊಪ್ಪದೇ, ಜೀವನ ನಿಭಾಯಿಸುವಷ್ಟು ಆದಾಯಕ್ಕೆ ಕೊರತೆಯಿಲ್ಲ ಎಂಬ ನಂಬಿಕೆಯಿಂದ ಕುಂಬಾರಿಕೆಯನ್ನು ಮುಂದುವರಿಸಿದ್ದೇವೆ' ಎಂದು ಕೆಲಸದಲ್ಲಿ ತಲ್ಲೀನರಾದರು ಧಾರವಾಡ ಜಿಲ್ಲೆ ಉಪ್ಪಿನಬೆಟಗೇರಿಯ ಮಲ್ಲಪ್ಪ ಕುಂಬಾರ.

ದೀಪಾವಳಿಗೆ ಪ್ರತಿ ಮನೆಯಲ್ಲೂ ದೀಪಗಳು ಝಗಮಗಿಸುತ್ತಿವೆ. ಆದರೆ, ಆ ದೀಪಗಳ ಹಣತೆ ತಯಾರಿಸೋ ಕುಂಬಾರರ ಬದುಕು ಮಾತ್ರ ಅಂಧಕಾರದಲ್ಲಿ ಮುಳುಗಿದೆ. ತಲೆತಲಾಂತರದಿಂದ ಮಣ್ಣನ್ನೇ ನಂಬಿ ಜೀವನ ಸಾಗಿಸುತ್ತಿರುವ ಬಹುತೇಕ ಕುಂಬಾರರ ಕಥೆ ಇದೇ ಆಗಿದೆ.


ರಾಜ್ಯದೆಲ್ಲೆಡೆ ವಿಭಿನ್ನ ರೀತಿಯ ಪ್ರದೇಶವಿರುವುದರಿಂದ ಕುಂಬಾರಿಕೆಗೆ ಒಂದೇ ರೀತಿಯ ಮಣ್ಣು ಸಿಗುವುದು ಸವಾಲಿನ ಕೆಲಸವಾಗಿದೆ. ಆದರೆ, ಬೆಳಗಾವಿ ಜಿಲ್ಲೆಯ ಖಾನಾಪುರದ ಮಣ್ಣು ಜಿಗುಟಿನಿಂದ ಕೂಡಿರುವುದರಿಂದ ಕುಲಕಸುಬಿಗೆ ಯೋಗ್ಯ ಅನ್ನೋದು ಕುಂಬಾರರ ಮಾತು. ಹೀಗಾಗಿ ಬೆಳಗಾವಿ, ಬಾಗಲಕೋಟೆ, ಹಾವೇರಿ, ಗದಗ, ಹುಬ್ಬಳ್ಳಿ– ಧಾರವಾಡ, ಉತ್ತರ ಕನ್ನಡದ ಬಹುತೇಕ ಕುಂಬಾರರು ಖಾನಾಪುರದ ಮಣ್ಣನ್ನು ತರಿಸುತ್ತಾರೆ. ಕಲಬುರಗಿ, ಬೀದರ್‌ನವರು ಜಮೀನಿನ ಕರಿ ಮಣ್ಣು, ಕೆರೆ ಮಣ್ಣನ್ನು ಬಳಸುತ್ತಾರೆ.

'ರಾಜರ ಕಾಲದಾಗ ಕುಂಬಾರ ಕುಂಟೆ ಅಂತ ಜಮೀನು ಕೊಡ್ತಿದ್ರು. ಅದರಾಗಿನ ಮಣ್ಣು ತಂದು ಕಸುಬು ಮಾಡ್ತಿದ್ರು. ಆದ್ರೀಗ ಸರ್ಕಾರ ಜಮೀನು ಕೊಡೋದಿರಲಿ, ನಾವು ಅದೀವಿ ಅಂತಾನೇ ತಿಳಿದಿಲ್ಲ' ಎಂದು ಮೇಳಕುಂದಾ(ಕೆ) ಗ್ರಾಮದ ರಾಜಣ್ಣ ಕುಂಬಾರ ಬೇಸರ ವ್ಯಕ್ತಪಡಿಸುತ್ತಾರೆ.

'ಅವಿಭಕ್ತ ಕುಟುಂಬಗಳಿದ್ದಾಗ ಕುಂಬಾರಿಕೆ ವೃತ್ತಿ ನಡೆಸುವುದು ಸುಲಭವಾಗಿತ್ತು. ವಿಭಕ್ತ ಕುಟುಂಬಗಳೇ ಹೆಚ್ಚಿರುವ ಕಾರಣ ಇಂದು ವೃತ್ತಿ ಕೈಬಿಡುವುದು ಅನಿವಾರ್ಯ' ಎಂಬುದು ಉತ್ತರ ಕನ್ನಡ ಜಿಲ್ಲೆಯ ಅಂಕೋಲಾದ ವಾಸುದೇವ ಗುನಗಾ ಅವರ ಹತಾಶ ನುಡಿ.

**ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ:** ಒಂದು ಮಡಿಕೆ ತಯಾರಿಸಲು ಕನಿಷ್ಠ ಹತ್ತು ದಿನ ಬೇಕು. ಎರಡು ಕೊಡ ನೀರು ಹಿಡಿಯುವ ಮಡಿಕೆ ಮಾಡಲು 4 ಕೆಜಿ ಮಣ್ಣು ಬೇಕು. ಇದು ಒಬ್ಬರೇ ಮಾಡುವ ಕೆಲಸವಲ್ಲ. ಇಡೀ ಕುಟುಂಬದವರು ಕೈಗೂಡಿಸಿದಾಗ ಮಡಿಕೆ ತಯಾರಾಗುತ್ತದೆ. ಮೊದಲು ಮಣ್ಣನ್ನು ಜರಡಿ ಹಿಡಿಯಬೇಕು. ಬಳಿಕ ರಾಡಿ ಮಾಡಿ ಸೋಸಿ ಹರಳು, ಕಸ ಕಡ್ಡಿ ಬೇರ್ಪಡಿಸ ಬೇಕು. ಅದು ಕೆಸರಾದ ನಂತರ ಬೂದಿ ಕಲೆಸಿ ಮಡಿಕೆ ಮಾಡಬೇಕು. ನೆರಳಲ್ಲೇ 8 ದಿನ ಒಣಗಿಸಿ 9ನೇ ದಿನ ಬಿಸಿಲಲ್ಲಿ ಒಣಗಿಸಬೇಕು. ಬಳಿಕ ಭಟ್ಟಿಯಲ್ಲಿ ಹದವಾಗಿ ಸುಡಬೇಕು. ಆಗ ಮಡಿಕೆ ಬಳಕೆಗೆ ಯೋಗ್ಯವಾಗುತ್ತದೆ. ಇಷ್ಟೆಲ್ಲ ಪರಿಶ್ರಮದಿಂದ ತಯಾರಿಸುವ ಇದರ ಬೆಲೆ ಮಾತ್ರ ₹100ರಿಂದ ₹150 ಇದ್ದರೆ ಹೆಚ್ಚು!

ರಾಜಧಾನಿ ಬೆಂಗಳೂರು, ಕರಾವಳಿಯ ಮಂಗಳೂರು ಭಾಗದಲ್ಲಿ 'ಕುಲಾಲ' ಎಂದು ಕರೆಯಲ್ಪಡುವ ಸಮುದಾಯಕ್ಕೆ ಧಾರವಾಡ, ಬಾಗಲಕೋಟೆಯಲ್ಲಿ ಚಕ್ರಸಾಲಿ ಎನ್ನುತ್ತಾರೆ. ಗುಜರಾತ್‌ನಲ್ಲಿ ಪ್ರಜಾಪತಿ, ರಾಜಸ್ಥಾನದಲ್ಲಿ ಕುಮ್ಹಾರ್, ಮಹಾರಾಷ್ಟ್ರದಲ್ಲಿ ಮರಾಠ ಕುಂಬಾರ, ಆಂಧ್ರ, ತೆಲಂಗಾಣದಲ್ಲಿ ತೆಲುಗು ಕುಂಬಾರ ಎಂದು ಹೆಸರಾಗಿರುವ ಈ ಸಮುದಾಯವನ್ನು 17 ಉಪನಾಮಗಳಿಂದ ಕರೆಯಲಾಗುತ್ತದೆ. ಸಾಕ್ಷರತೆ ಪ್ರಮಾಣ ಕೇವಲ ಶೇ 15 ರಷ್ಟಿದ್ದರೆ, ನಿರುದ್ಯೋಗ ಶೇ 30ರಷ್ಟಿದೆ. ಶೇ 10ರಷ್ಟು ಮಂದಿ ಕೂಲಿ ಕೆಲಸ ಮಾಡಿಕೊಂಡು ಬದುಕುತ್ತಿದ್ದಾರೆ. ಸರ್ಕಾರಿ, ಅರೆ ಸರ್ಕಾರಿ ನೌಕರಿ ಹಿಡಿದವರು ಕೇವಲ ಶೇ 2ರಷ್ಟು ಜನ ಮಾತ್ರ ಎನ್ನುತ್ತಾರೆ ಸಮುದಾಯದ ಮುಖಂಡರು.



### ಕಸುಬಷ್ಟೇ ಅಲ್ಲ, ಕಲೆಯೂ ಹೌದು!

ರಾಜ್ಯದಲ್ಲಿ ಸುಮಾರು 20 ಲಕ್ಷ ಜನಸಂಖ್ಯೆ ಇರುವ ಕುಂಬಾರರಿಗೆ ಮಣ್ಣೇ ಬದುಕಿನ ಆಸ್ತಿ. ಮಣ್ಣಿನ ಜೊತೆಯೇ ಹುಟ್ಟ, ಅದರ ಜೊತೆಗೆ ಆಡಿ ಬೆಳೆದು, ಮಣ್ಣನ್ನು ನಂಬಿಯೇ ಹೊಟ್ಟೆ ತುಂಬಿಸಿಕೊಂಡು ಬದುಕುವ ಸಮುದಾಯ. ಕುಂಬಾರಿಕೆ ಕಸುಬಷ್ಟೇ ಅಲ್ಲ, ಕಲೆಯೂ ಹೌದು. ಹೀಗಾಗಿ ಶೇ 20ರಷ್ಟು ಜನ ಇನ್ನೂ ಕುಲಕಸುಬಾದ ಕುಂಬಾರಿಕೆಯನ್ನೇ ನಂಬಿಕೊಂಡು ಬದುಕುತ್ತಿದ್ದಾರೆ. ದಸರಾ ಮುಗಿಯುತ್ತಿದ್ದಂತೆ ಹಣತೆಗಳನ್ನು ತಯಾರಿಸುವ ಈ ಜನ ದೀಪಾವಳಿ ಬಳಿಕ ಮತ್ತೆ ಮೇ ತಿಂಗಳವರೆಗೂ ಮಡಿಕೆ, ಕುಡಿಕೆ, ಗಡಿಗೆಗಳನ್ನು ತಯಾರಿಸುತ್ತಾರೆ. ಮಳೆಗಾಲದ ಭರ್ತಿ ನಾಲ್ಕು ತಿಂಗಳು ನಿರುದ್ಯೋಗಿಗಳು.

ಕುಲಕಸುಬನ್ನೇ ಮುಂದುವರಿಸಲು ಈ ಸಮುದಾಯಕ್ಕೆ ಉತ್ಪಾದನೆ ಮತ್ತು ಮಾರುಕಟ್ಟೆ ವ್ಯವಸ್ಥೆ ಎರಡೂ ಸಮಸ್ಯೆ ಇದೆ. ಜಮೀನನ್ನೇ ಹೊಂದಿರದ ಈ ಸಮುದಾಯ ಮಣ್ಣನ್ನೂ ಕೊಂಡು ತರಬೇಕು. ಟಿಪ್ಪರ್‌ಗೆ ₹ 15 ಸಾವಿರ ಬೆಲೆ ಕೊಟ್ಟು ಖರೀದಿಸುತ್ತಾರೆ. ಮಣ್ಣನ್ನು ಜರಡಿ ಹಿಡಿದು, ಸೋಸಿ, ರಾಡಿ ಮಾಡಿ ಮಡಿಕೆ, ಕುಡಿಕೆ ತಯಾರಿಸಿ, ಸುಡಬೇಕು. ಸುಡಲು ಕಟ್ಟಿಗೆಯನ್ನೂ ಕೊಳ್ಳಲೇಬೇಕು. ಎಲ್ಲವನ್ನೂ ಕೊಂಡು ಕಸುಬು ಮಾಡುವ ಇವರ ಉತ್ಪಾದನೆಗೆ ಬೆಲೆ ಮಾತ್ರ ಪುಡಿಗಾಸು.

'ನಮ್ಮ ಭರವಸೆ ಕುಗ್ಗಿಲ್ಲ. 95 ವರ್ಷದ ನನ್ನ ತಂದೆ ಈಗಲೂ ಕುಂಬಾರಿಕೆ ಮಾಡುತ್ತಾರೆ. ಜೀವನ ನಿಭಾಯಿಸುವುದಕ್ಕೇನೂ ಕಡಿಮೆಯಿಲ್ಲ. ಆದರೆ, ಆರ್ಥಿಕ ಪ್ರಗತಿ ಮಾತ್ರ ಶೂನ್ಯ. ಹೀಗಾಗಿ ಕುಂಬಾರಿಕೆಗೆ ಉತ್ತೇಜನ ಬೇಕಿದೆ' ಎನ್ನುತ್ತಾರೆ ಬಾಗಲಕೋಟೆ ಜಿಲ್ಲೆಯ ರಬಕವಿಯ ಪ್ರಕಾಶ ಕುಂಬಾರ.

'ನಾನು ಬಿಇ ಪದವೀಧರ. ನಮ್ಮ ಕುಂಬಾರಿಕೆ ಉದ್ಯೋಗದಲ್ಲೂ ಆಧುನಿಕತೆ ಅಳವಡಿಸಿಕೊಳ್ಳುವ ಅಗತ್ಯವಿದೆ. ಅದಕ್ಕೆ ಸರ್ಕಾರ ಯೋಜನೆಗಳನ್ನು ರೂಪಿಸಿ ತರಬೇತಿ ನೀಡಬೇಕು. ಉತ್ಪಾದನೆ, ಮಾರಾಟಕ್ಕೆ ಜಾಗ ನೀಡಬೇಕು' ಎಂದು ಕಲಬುರಗಿಯ ಯುವಕ ಶರಣು ಕುಂಬಾರ ಮನವಿ ಮಾಡುತ್ತಾರೆ.

**ಕರೆಂಟ್ ಫ್ರೀ ಕೊಡ್ರಿ:** 'ಈ ಹಿಂದೆ ಬಂಡಿಗಾಲಿ ಇಟ್ಟು ತಿಗರಿ ಮಾಡ್ತಿದ್ರು. ಮನುಷ್ಯನೇ ಅದರಲ್ಲಿ ಕಟ್ಟಿಗೆ ಇಟ್ಟು ತಿರುಗಿಸಿ ಮಡಿಕೆ ಮಾಡುತ್ತಿದ್ದ. ಆದ್ರೀಗ ಕರೆಂಟ್ ಬಳಕೆ ಮಾಡಿ ತಿಗರಿ ತಿರುಗಿಸಲಾಗುತ್ತದೆ. ಪರಿಣಾಮ ಕರೆಂಟ್ ಬಿಲ್ ತಿಂಗಳಿಗೆ ₹2 ಸಾವಿರದಿಂದ ₹3 ಸಾವಿರ ಬರುತ್ತಿದೆ. ಕನಿಷ್ಠ ಸರ್ಕಾರ ಅದನ್ನಾದರೂ ಮನ್ನಾ ಮಾಡಿ ನಮಗೆ ನೆರವಾಗಲಿ' ಎನ್ನುತ್ತಾರೆ ಕಲಬುರಗಿಯ ಲಕ್ಷ್ಮೀ ಕುಂಬಾರ.

'ಸರ್ಕಾರ ಮನೆಗೊಂದು ಮಡಿಕೆ, ಊರಿಗೊಂದು ಮಳಿಗೆ ಎನ್ನುವ ಯೋಜನೆ ಜಾರಿಗೆ ತರಬೇಕು. ಕುಂಬಾರರ ಬದುಕು ಹಸನುಗೊಳಿಸಲು, ತರಬೇತಿ, ಸಹಾಯಧನ ನೀಡಬೇಕು' ಎಂದು ಕುಂಬಾರ ಯುವಸೈನ್ಯದ ರಾಜ್ಯಾಧ್ಯಕ್ಷ ಶಂಕರ್ ಶೆಟ್ಟಿ ಕುಂಬಾರ್ ಒತ್ತಾಯಿಸುತ್ತಾರೆ.

ಕುಂಬಾರರ ಬದುಕು ಪ್ಲಾಸ್ಟಿಕ್, ಪಿಂಗಾಣಿ, ಅಲ್ಯುಮಿನಿಯಂಗಳೊಂದಿಗೆ ಸ್ಪರ್ಧೆಗಿಳಿಯಲಾಗದೇ ನಲುಗುತ್ತಿದೆ. ವ್ಯಾಪಾರಿಗಳು ಜನರ ಅಭಿರುಚಿಗೆ ತಲೆಬಾಗಿ ಸ್ಥಳೀಯ ಕುಂಬಾರರನ್ನು ಬಿಟ್ಟು, ಹೊರರಾಜ್ಯದಿಂದ ಹಣತೆಗಳನ್ನು ತರಿಸುತ್ತಿರುವುದು ಕುಂಬಾರರಿಗೆ ತಮ್ಮ ಕುಲಕಸುಬಿನ ಮೇಲಿನ ಭರವಸೆಗೆ ಪೆಟ್ಟು ಕೊಡುತ್ತಿದೆ.

ಪೂರಕ ಮಾಹಿತಿ: ಸುಷ್ಮಾ ಸವಸುದ್ದಿ, ಗಣಪತಿ ಹೆಗಡೆ

# ಹೆಸರಿಗೆ ಹಸಿರು: ಒಳಗೆ 'ವಿಷ'

ಒಂದನೇ ಪುಟದಿಂದ..

ಅವು ಖಾಲಿಯಾದಂತೆ, ಗೋದಾಮಿಗೆ ಹೋಗಿ ಮತ್ತೆರಡು ಬಾಕ್ಸ್‌ಗಳನ್ನು ತಂದು ವ್ಯಾಪಾರಕ್ಕೆ ಕೂರುತ್ತಾರೆ. ಸುಲ್ತಾನ್ ಪೇಟೆಯ ಉದ್ದಕ್ಕೂ ಇಂತಹ ವ್ಯಾಪಾರ ನಡೆಯುತ್ತಿದೆ. ಇದು ನೇರವಾಗಿ ಅಂಗಡಿಯಲ್ಲಿ ನಡೆಯುವ ವ್ಯಾಪಾರವಾದರೆ, ಪಟಾಕಿ ಚೀಟಿ ಹೆಸರಿನಲ್ಲಿ ಬೆಂಗಳೂರು, ಬೆಂಗಳೂರು ಗ್ರಾಮಾಂತರ, ಬೆಂಗಳೂರು ದಕ್ಷಿಣ, ಚಿಕ್ಕಬಳ್ಳಾಪುರ, ಕೋಲಾರ, ತುಮಕೂರು, ಮಂಡ್ಯ, ಹಾಸನ, ಮೈಸೂರು, ಚಿತ್ರದುರ್ಗ, ಚಿಕ್ಕಮಗಳೂರು, ಶಿವಮೊಗ್ಗ ಜಿಲ್ಲೆಗಳಲ್ಲಿ ಈಗಾಗಲೇ ಲಕ್ಷಾಂತರ ಪಟಾಕಿ ಬಾಕ್ಸ್‌ಗಳು ಮನೆ-ಮನೆ ಸೇರಿವೆ. ಎಲ್ಲ ಜಿಲ್ಲೆಗಳಲ್ಲಿ ಪರವಾನಗಿ ಹೊಂದಿರುವವರೂ ಮಾರಾಟ ಮಾಡುವುದಕ್ಕೆ, ಶನಿವಾರದವರೆಗೆ ನಿರ್ಬಂಧವಿತ್ತು. ಹೀಗಿದ್ದೂ ತಿಂಗಳ ಮೊದಲೇ ಹೊಸೂರಿನಿಂದ ಖರೀದಿಸಿ ತರಲಾಗಿರುವ ಪಟಾಕಿ ಬಾಕ್ಸ್‌ಗಳನ್ನು ಅಲ್ಲಲ್ಲಿ ಸಂಗ್ರಹಿಸಿ ಇಡಲಾಗಿದೆ. ಪಟಾಕಿ ಚೀಟಿ ಹಾಕಿರುವವರೇ ಸ್ವತಃ ಗೋದಾಮಿಗೆ ಹೋಗಿ ಬಾಕ್ಸ್‌ಗಳನ್ನು ಪಡೆದುಕೊಂಡಿದ್ದಾರೆ. ಬಹುತೇಕ ಜಿಲ್ಲೆಗಳಲ್ಲಿ ಶುಕ್ರವಾರದಿಂದಲೇ ಪಟಾಕಿ ಸದ್ದು ಕೇಳಲಾರಂಭಿಸಿದೆ.

ಬೆಂಗಳೂರು ಮತ್ತು ಸುತ್ತಮುತ್ತಲ ಜಿಲ್ಲೆಗಳನ್ನು ಹೊರತುಪಡಿಸಿದರೆ, ಅತಿಹೆಚ್ಚು ಪಟಾಕಿ ವ್ಯಾಪಾರ ನಡೆಯುವುದು ಹುಬ್ಬಳ್ಳಿ–ಧಾರವಾಡ ಮತ್ತು ಬೆಳಗಾವಿಯಲ್ಲಿ. ಅಕ್ಕಪಕ್ಕದ ಜಿಲ್ಲೆಗಳಿಗೆ ಈ ಜಿಲ್ಲೆಗಳಿಂದ ಪಟಾಕಿ ವಿತರಣೆಯಾಗುತ್ತದೆ. ತಿಂಗಳ ಹಿಂದೆಯೇ ಈ ಜಿಲ್ಲೆಗಳಿಗೆ ಲಕ್ಷಾಂತರ ಬಾಕ್ಸ್‌ಗಳಷ್ಟು ಪಟಾಕಿ ಮತ್ತು ಬಿಡಿ ಪಟಾಕಿಗಳೂ ಪೂರೈಕೆಯಾಗಿವೆ. ಅವುಗಳಲ್ಲಿ ಬಹುತೇಕ ಮಾಲು ಈಗಾಗಲೇ ಮಾರಾಟವಾಗಿದ್ದು, ಶಿವಕಾಶಿಯಿಂದ ಮತ್ತೆ ಹೊಸದಾಗಿ ಪೂರೈಕೆಯಾಗಲಿದೆ ಎಂಬುದು ಬೆಳಗಾವಿಯಲ್ಲಿ ಪರವಾನಗಿ ಹೊಂದಿರುವ ಡೀಲರ್ ಒಬ್ಬರು ನೀಡಿದ ಮಾಹಿತಿ.

ರಾಜ್ಯದಲ್ಲಿ ಪಟಾಕಿ ತಯಾರಿಕಾ ಘಟಕಗಳೇ ಇಲ್ಲ ಎನ್ನಬಹುದು. 'ಸಿಎಸ್‌ಐಆರ್–ನೀರಿ'ಯಿಂದ ಪರವಾನಗಿ ಪಡೆದ 1,403 ತಯಾರಕರಲ್ಲಿ ಕರ್ನಾಟಕದ ಒಂದು ಕಂಪನಿಯೂ ಇಲ್ಲ. ಹೀಗಾಗಿ ರಾಜ್ಯದಲ್ಲಿ ಬಳಕೆಯಾಗುವ ಪಟಾಕಿಗಳು ತಮಿಳುನಾಡಿನ ಶಿವಕಾಶಿಯಿಂದ, ಹೊಸೂರು ಮೂಲಕವೇ ರಾಜ್ಯಕ್ಕೆ ಪ್ರವೇಶಿಸುತ್ತವೆ. ಆದರೆ ಹೊಸೂರು–ಅತ್ತಿಬೆಲೆ ಗಡಿಯಲ್ಲಿ ವಾಹನಗಳನ್ನು ಸರಿಯಾಗಿ ತಪಾಸಣೆ ನಡೆಸದೇ ಬಿಡಲಾಗುತ್ತಿರುವ ಕಾರಣ, ರಾಜ್ಯಕ್ಕೆ ಎಷ್ಟು ಪಟಾಕಿ ಬಂದಿತು ಎಂಬುದರ ಲೆಕ್ಕವೇ ಇರುವುದಿಲ್ಲ. ಒಟ್ಟಿನಲ್ಲಿ ಪರವಾನಗಿ ಇಲ್ಲದವರು ಪಟಾಕಿ ಮಾರುವುದಕ್ಕೆ ನಿಷೇಧವಿದ್ದರೂ, ಬೀದಿಬದಿಗಳಲ್ಲಿ ಎಗ್ಗಿಲ್ಲದೆ ಪಟಾಕಿ ಮಾರಾಟ ಮಾಡಲಾಗುತ್ತಿದೆ.

ಹೊಸೂರಿನಿಂದ ತರಲಾದ, ಸುಲ್ತಾನ್ ಪೇಟೆಯಲ್ಲಿ ಖರೀದಿಸಲಾದ, ರಾಜ್ಯದ ಬೇರೆ ಬೇರೆ ಜಿಲ್ಲೆಗಳಲ್ಲಿ ಮಾರಾಟವಾಗುತ್ತಿರುವ ಪಟಾಕಿ ಬಾಕ್ಸ್‌ಗಳ ಮಾದರಿಗಳನ್ನು ಪರಿಶೀಲಿಸಿದಾಗ, ಅವೆಲ್ಲವೂ ಹಸಿರು ಪಟಾಕಿ ಹೆಸರಿನಲ್ಲಿರುವ ಸಾಂಪ್ರದಾಯಿಕ ಪಟಾಕಿಗಳು ಎಂಬುದು ಗೊತ್ತಾಯಿತು.

ಕೇಂದ್ರ ಸರ್ಕಾರದ 'ಸಿಎಸ್‌ಐಆರ್–ನೀರಿ' ಸಂಸ್ಥೆಯು ಹಸಿರು ಪಟಾಕಿಯ ರಾಸಾಯನಿಕ ಸಂಯೋಜನೆಯನ್ನು ನಿಗದಿ ಮಾಡಿದ್ದು, ಅವುಗಳ ಆಧಾರದಲ್ಲಿ ಪಟಾಕಿಗಳನ್ನು ತಯಾರಿಸಬೇಕು. ಅಂತಹ ಪಟಾಕಿಗಳಿಗಷ್ಟೇ, 'ಹಸಿರು ಪಟಾಕಿ' ಪರವಾನಗಿ ನೀಡಲಾಗುತ್ತದೆ. ಈ ಪರವಾನಗಿ ಲೋಗೊವು ಎಲ್ಲ ಸ್ವರೂಪದ ಪಟಾಕಿಗಳಿಗೂ ಭಿನ್ನವಾಗಿರುತ್ತದೆ. ತಯಾರಕರಿಗೆ ನೀಡಲಾದ ಪರವಾನಗಿಯ ಸಂಖ್ಯೆ ಉಳ್ಳ ಲೋಗೊವನ್ನು ಬಾಕ್ಸ್‌ನ ಮೇಲೆ ಮುದ್ರಿಸಿರಬೇಕು ಮತ್ತು ಕ್ಯುಆರ್ ಕೋಡ್ ಅನ್ನೂ ಮುದ್ರಿಸಿರಬೇಕು. ಆ ಕ್ಯುಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿದರೆ, ತಯಾರಕರ ಪರವಾನಗಿ ಪತ್ರ ಮತ್ತು ವಿವರಗಳು ತೆರೆದುಕೊಳ್ಳುತ್ತವೆ. ಬಾಕ್ಸ್‌ನಲ್ಲಿರುವ ವಿವಿಧ ಸ್ವರೂಪದ ಪಟಾಕಿಗಳಿಗೂ ಪ್ರತ್ಯೇಕ ಲೋಗೊ ಜತೆಗೆ, ಪ್ರತ್ಯೇಕ ಪರವಾನಗಿಯ ಸಂಖ್ಯೆಯೂ ಇರಬೇಕು ಎಂಬುದು ನಿಯಮ.

### ಮುನ್ನೆಚ್ಚರಿಕಾ ಕ್ರಮಗಳು

- ಪಟಾಕಿ ಖರೀದಿಸಲೇ ಬೇಕಾದಲ್ಲಿ ಐಎಸ್‌ಐ ಪ್ರಮಾಣೀಕರಣದ ಹಸಿರು ಪಟಾಕಿಗಳನ್ನು ಖರೀದಿಸಿ
- ಪಟಾಕಿಗಳ ಮೇಲಿರುವ ಎಚ್ಚರಿಕೆ, ಸೂಚನೆ ಅನುಸರಿಸಿ. ಮೈದಾನ, ಖಾಲಿ ಜಾಗಗಳಲ್ಲಷ್ಟೇ ಪಟಾಕಿ ಹಚ್ಚಿ
- ಕನಿಷ್ಠ 2-3 ಅಡಿ ದೂರದಿಂದ ಪಟಾಕಿ ಹಚ್ಚಿ, ಕಣ್ಣುಗಳ ರಕ್ಷಣೆಗೆ ಸುರಕ್ಷತಾ ಕನ್ನಡಕ ಧರಿಸಿ. ಪಟಾಕಿ ಹಚ್ಚಲು ಉದ್ದನೆಯ ಊದುಬತ್ತಿ ಬಳಸಿ
- ಮಕ್ಕಳು ಒಂಟಿಯಾಗಿ ಪಟಾಕಿ ಸಿಡಿಸುವುದಕ್ಕೆ ಅವಕಾಶ ನೀಡಬೇಡಿ. ಜತೆಯಲ್ಲಿ ಪಾಲಕರು ಇರಲಿ
- ಪಟಾಕಿ ಸಿಡಿದಾಗ ಕಿಡಿ ಬಿದ್ದರೆ ಕಣ್ಣನ್ನು ಉಜ್ಜಿಕೊಳ್ಳಬೇಡಿ. ಪಟಾಕಿಯಿಂದ ಕಣ್ಣಿಗೆ ಹಾನಿಯಾದಲ್ಲಿ ಸ್ವಚ್ಛ ನೀರಿನಿಂದ ನಿಧಾನವಾಗಿ ಕಣ್ಣನ್ನು ತೊಳೆಯಿರಿ. ಬಳಿಕ ಹತ್ತಿರದ ಆಸ್ಪತ್ರೆಗೆ ತೆರಳಿ ಚಿಕಿತ್ಸೆ ಪಡೆದುಕೊಳ್ಳಿ
- ಕೈಯಲ್ಲೇ ಪಟಾಕಿ ಸಿಡಿಸುವ ಸಾಹಸ ಬೇಡ
- ಪಟಾಕಿ ಸಿಡಿದ ಅಥವಾ ಸುಟ್ಟ ಬಳಿಕ ಅದರ ಮೇಲೆ ನೀರು ಹಾಕಿ. ಇದರಿಂದ ಮಾಲಿನ್ಯದ ಪ್ರಮಾಣ ಕಡಿಮೆ ಆಗುವ ಜತೆಗೆ ಸುಟ್ಟ ಪಟಾಕಿಗಳ ಬಿಸಿ ತುಂಡುಗಳನ್ನು ಅರಿವಿಲ್ಲದೆ ಮೆಟ್ಟುವುದು ತಪ್ಪಲಿದೆ

ಮೇಲೆ ಉಲ್ಲೇಖಿಸಲಾದ ಪಟಾಕಿ ಬಾಕ್ಸ್‌ಗಳ ಮಾದರಿಗಳ ಮೇಲೆ ಇದ್ದ 'ಹಸಿರು ಪಟಾಕಿ' ಲೋಗೊಗಳು ನಕಲಿಯಾಗಿದ್ದವು. ಈ ಲೋಗೊಗಳ ಮೇಲೆ ತಯಾರಕರ ಪರವಾನಗಿ ಸಂಖ್ಯೆ ಮತ್ತು ಪರವಾನಗಿ ನೀಡಿದ ಕೇಂದ್ರದ ವಿಳಾಸ ಇರಲಿಲ್ಲ. ಇನ್ನು ಬಾಕ್ಸ್‌ನೊಳಗಿದ್ದ ಪಟಾಕಿಗಳ ಪೈಕಿ ಯಾವೊಂದರ ಪೊಟ್ಟಣದ ಮೇಲೂ ಹಸಿರು ಪಟಾಕಿಯ ಲೋಗೊ ಇರಲಿಲ್ಲ. ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿದರೆ, ಯಾವ ಪರವಾನಗಿ ಪತ್ರವೂ ತೆರೆದುಕೊಳ್ಳುತ್ತಿರಲಿಲ್ಲ. ವಾಸ್ತವದಲ್ಲಿ ಆ ಕ್ಯುಆರ್ ಕೋಡ್‌ಗೆ ಯಾವುದೇ ವಿಳಾಸ ಇರಲಿಲ್ಲ. ಬಾಕ್ಸ್ ಒಳಗಿನ ಬಿಡಿ ಪಟಾಕಿಗಳ ಪೊಟ್ಟಣಗಳದ್ದೂ ಇದೇ ಕತೆ. ಒಟ್ಟಿನಲ್ಲಿ ಹಸಿರು ಪಟಾಕಿ ಎಂಬುದು ಸರ್ಕಾರದ ಸುತ್ತೋಲೆಗಳಲ್ಲಿ, ಪಟಾಕಿ ಬಾಕ್ಸ್‌ಗಳ ಮೇಲಿನ ನಕಲಿ ಲೋಗೊಗಳ ಮೇಲಷ್ಟೇ ಉಳಿದಿದೆ.

### ಹಸಿರು ಪಟಾಕಿ ಎಂದರೇನು?

ಸಾಂಪ್ರದಾಯಿಕ ಪಟಾಕಿಗಳಿಗೂ ಹಸಿರು ಪಟಾಕಿಗಳಿಗೂ ಇರುವ ಬಹುದೊಡ್ಡ ವ್ಯತ್ಯಾಸವೆಂದರೆ, ಅವು ಮಾಡುವ ಮಾಲಿನ್ಯದ ಪ್ರಮಾಣ. ಪಟಾಕಿ ಸುಟ್ಟಾಗ ಅವುಗಳಿಂದ ಸದ್ದು, ಹೊಗೆ ಬರುತ್ತದೆ. ಆ ಹೊಗೆಯಲ್ಲಿ ಇರುವುದು ಹಾನಿಕಾರಕ ಗಂಧಕದ ಡೈಆಕ್ಸೈಡ್ (ಎಸ್‌ಒ2) ಮತ್ತು ಸಾರಜನಕದ ಡೈಆಕ್ಸೈಡ್ (ಎನ್‌ಒ2).

ಸಾಂಪ್ರದಾಯಿಕ ಪಟಾಕಿಗಳು ಉಗುಳುವ ಎಸ್‌ಒ2 ಮತ್ತು ಎನ್‌ಒ2 ಪರಿಮಾಣಕ್ಕೆ ಹೋಲಿಸಿದರೆ, ಹಸಿರು ಪಟಾಕಿಗಳಲ್ಲಿ ಇವೇ ಆಕ್ಸೈಡ್‌ಗಳನ್ನು ಶೇ 30ರಷ್ಟು ಕಡಿಮೆ ಉಗುಳಬೇಕು ಎಂಬುದು ಸಿಎಸ್‌ಐಆರ್–ನೀರಿಯ ನಿಯಮ.

ಯಾವುದೇ ಕಂಪನಿ ತಾನು ಅಭಿವೃದ್ಧಿ ಪಡಿಸುವ ಹಸಿರು ಪಟಾಕಿಯನ್ನು ಸಿಎಸ್‌ಐಆರ್–ನೀರಿಗೆ ಸಲ್ಲಿಸಿ, ಪರೀಕ್ಷಿಸಬೇಕು. ಮೇಲಿನ ಷರತ್ತುಗಳನ್ನು ಪೂರೈಸಿದರಷ್ಟೇ ಆ ಪಟಾಕಿಗಳಿಗೆ 'ಹಸಿರು ಪಟಾಕಿ' ಎಂಬ ಪರವಾನಗಿ ಸಿಗುತ್ತದೆ. ತಯಾರಿಕಾ ಕಂಪನಿಗೆ ನೀಡುವ ಪರವಾನಗಿ ಮತ್ತು ಪಟಾಕಿಗೆ ನೀಡುವ ಪರವಾನಗಿ ಒಂದೇ ಅಲ್ಲ. ಪಟಾಕಿ ಬಾಕ್ಸ್ ಮೇಲೆ ಹಸಿರು ಪಟಾಕಿಯ ಅಧಿಕೃತ ಲೋಗೊ ಇದ್ದರೂ, ಅದರೊಳಗೆ ಇರುವ ಪ್ರತಿ ಪಟಾಕಿ ಪೊಟ್ಟಣಕ್ಕೆ ಪ್ರತ್ಯೇಕ ಲೋಗೊ ಮತ್ತು ಅವುಗಳ ಪರವಾನಗಿ ಸಂಖ್ಯೆ ಇರಬೇಕು. ಆಗ ಮಾತ್ರವೇ ಅದು ಹಸಿರು ಪಟಾಕಿ.

### ತೆರಿಗೆ ತಪ್ಪಿಸಿ ಕಳ್ಳಸಾಗಣೆ...

ಬೆಂಗಳೂರು ಮತ್ತು ಸುತ್ತಮುತ್ತಲ ಜಿಲ್ಲೆಗಳಿಗೆ ಬಹುಪಾಲು ಪಟಾಕಿ ಪೂರೈಕೆ ಆಗುವುದು ಪಕ್ಕದ ತಮಿಳುನಾಡಿನ ಹೊಸೂರಿನಿಂದ. ಶಿವಕಾಶಿಯಿಂದ ತರಲಾದ ಪಟಾಕಿಗಳನ್ನು, ಅತ್ತಿಬೆಲೆಯ ಗಡಿಯಾಚೆಗೆ ಹೊಸೂರಿನ ಹೆದ್ದಾರಿಯ ಎರಡೂ ಬದಿ ನೂರರಷ್ಟು ಅಂಗಡಿಗಳಲ್ಲಿ ಮಾರಾಟ ಮಾಡಲಾಗುತ್ತದೆ. ಪಟಾಕಿ ಬಾಕ್ಸ್ ಮೇಲೆ ಇರುವ ಗರಿಷ್ಠ ಮಾರಾಟ ಬೆಲೆಯ (ಎಂಆರ್‌ಪಿ) ಮೇಲೆ ಶೇ 90ರವರೆಗೂ ರಿಯಾಯಿತಿ ಇದೆ. ಹೀಗಾಗಿ ಬೆಂಗಳೂರು, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ದಕ್ಷಿಣ, ಕೋಲಾರ, ತುಮಕೂರು, ಚಿತ್ರದುರ್ಗ, ಹಾಸನ, ಮಂಡ್ಯ ಜಿಲ್ಲೆಗಳ ವ್ಯಾಪಾರಿಗಳು ಹೊಸೂರಿನಿಂದಲೇ ಪಟಾಕಿ ಖರೀದಿಸುತ್ತಾರೆ.

ಹೊಸೂರಿಗೆ ಭೇಟಿ ನೀಡಿದಾಗ, ಅಲ್ಲಿನ ಬಹುತೇಕ ಅಂಗಡಿಗಳಲ್ಲಿ ಜಿಎಸ್‌ಟಿ ರಸೀದಿ ನೀಡುತ್ತಿರಲಿಲ್ಲ ಎಂಬುದು ಪತ್ತೆಯಾಯಿತು. ಬಿಲ್ ಕೇಳಿದರೆ, ಜಿಎಸ್‌ಟಿ ಅಷ್ಟಾಗುತ್ತದೆ ಮತ್ತು ಅದನ್ನು ಪಾವತಿ ಮಾಡಬೇಕು ಎಂದೇ ಅಂಗಡಿಯವರು ಹೇಳುತ್ತಿದ್ದರು. ಕೆಲವರು ನಕಲಿ ಜಿಎಸ್‌ಟಿ ರಸೀದಿ ನೀಡುತ್ತಿದ್ದರು. ಇನ್ನು ಇಲ್ಲಿ ಖರೀದಿಸಲಾದ ಪಟಾಕಿಗಳನ್ನು ಖಾಸಗಿ ಕಾರುಗಳಲ್ಲಿ ತಮಿಳುನಾಡಿನಿಂದ ಕರ್ನಾಟಕಕ್ಕೆ ಸಾಗಿಸಲಾಗುತ್ತದೆ. ಕರ್ನಾಟಕಕ್ಕೆ ಸಾಗಿಸಬೇಕಾದ ಪಟಾಕಿಗಳಿಗೆ ನಿಯಮಗಳ ಪ್ರಕಾರ ಶೇ 18ರಷ್ಟು ಐಜಿಎಸ್‌ಟಿ ಪಾವತಿ ಮಾಡಬೇಕು. ಆದರೆ ಐಜಿಎಸ್‌ಟಿ ಪಾವತಿ ಮಾಡದೆ, ಖಾಸಗಿ ವಾಹನಗಳಲ್ಲಿ ತಮಿಳುನಾಡಿನ ಪಟಾಕಿಗಳು ಸುಲಭವಾಗಿ ಕರ್ನಾಟಕ ಪ್ರವೇಶಿಸುತ್ತಿದ್ದವು.

ವಾಣಿಜ್ಯ ವಾಹನಗಳ ಮೂಲಕ ಬರುವ ಪಟಾಕಿಗಳನ್ನಷ್ಟೇ ಗಡಿಠಾಣೆಯಲ್ಲಿ ತಪಾಸಣೆ ಮಾಡಲಾಗುತ್ತಿದೆ. ಇದನ್ನು ಅರಿತಿರುವ ವ್ಯಾಪಾರಿಗಳು ದೊಡ್ಡ ಎಸ್‌ಯುವಿಗಳಲ್ಲಿ, ವ್ಯಾನ್‌ಗಳಲ್ಲಿ ಭಾರಿ ಸಂಖ್ಯೆಯಲ್ಲಿ ಪಟಾಕಿ ಬಾಕ್ಸ್‌ಗಳನ್ನು ಕರ್ನಾಟಕದೊಳಕ್ಕೆ ತರುತ್ತಿದ್ದಾರೆ. ಶೇ 70ರಿಂದ ಶೇ 90ರಷ್ಟು ರಿಯಾಯಿತಿಯಲ್ಲಿ ಖರೀದಿಸಿದ ಪಟಾಕಿಗಳನ್ನು ಶೇ 40–50ರ ರಿಯಾಯಿತಿಯಲ್ಲಿ ಮಾರಾಟ ಮಾಡುತ್ತಾರೆ. ಭಾರಿ ಪ್ರಮಾಣದ ರಿಯಾಯಿತಿ ಇರುವ ಕಾರಣ, ಒಂದೆರಡು ಬಾಕ್ಸ್‌ಗಳ ಖರೀದಿಗೂ ಬೆಂಗಳೂರಿನ ಮಂದಿ ಅಲ್ಲಿಗೆ ಹೋಗುತ್ತಾರೆ. ಆ ಪಟಾಕಿಗಳೂ ತೆರಿಗೆ ಇಲ್ಲದೆ, ಕರ್ನಾಟಕ ಪ್ರವೇಶಿಸುತ್ತವೆ.

ದೀಪಾವಳಿ ಸಂದರ್ಭದಲ್ಲಿ ದೇಶದಾದ್ಯಂತ ಸುಮಾರು ₹15,000 ಕೋಟಿಯಷ್ಟು ಪಟಾಕಿ ವಹಿವಾಟು ನಡೆಯುತ್ತದೆ. ಬೆಂಗಳೂರಿನಲ್ಲೇ ₹150 ಕೋಟಿಯಷ್ಟು, ಸುತ್ತಮುತ್ತಲ ಜಿಲ್ಲೆಗಳಲ್ಲಿ ₹100 ಕೋಟಿ ಮೌಲ್ಯದಷ್ಟು ಪಟಾಕಿ ಮಾರಾಟವಾಗುತ್ತದೆ. ಇವೆಲ್ಲವೂ ಶಿವಕಾಶಿ–ಹೊಸೂರಿನಿಂದಲೇ ಪೂರೈಕೆಯಾಗುತ್ತವೆ. ಇಲ್ಲಿರುವ ಲೆಕ್ಕಾಚಾರವು ಶಿವಕಾಶಿಯಲ್ಲಿ ಮಾರಾಟವಾದ ಸರಕಿನ ಮೌಲ್ಯ. ಇವೆಲ್ಲವೂ ತೆರಿಗೆ ಪಾವತಿಸಿಯೇ (ಐಜಿಎಸ್‌ಟಿ) ಬೆಂಗಳೂರು ಮತ್ತು ಸುತ್ತಮುತ್ತಲ ಜಿಲ್ಲೆ ತಲುಪುತ್ತವೆ ಎಂದು ಹೇಳಲಾಗದು.

### 'ದೀಪ, ಬೆಳಕಿನ ಹಬ್ಬವಾಗಲಿ'



ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ರಾಜ್ಯದಲ್ಲಿ ಸಾಂಪ್ರಾಯಿಕ–ರಾಸಾಯನಿಕ ಪಟಾಕಿಗಳನ್ನು ನಿಷೇಧಿಸಲಾಗಿದೆ. ಹಸಿರು ಪಟಾಕಿಗೆ ಮಾತ್ರ ಅವಕಾಶ ಮಾಡಿಕೊಡಲಾಗಿದೆ. ಆದರೆ, ಹಸಿರು ಪಟಾಕಿ ಸಿಡಿಸುವುದೂ ಕೊನೆಯ ಆಯ್ಕೆಯಾಗಿರಬೇಕು. ದೀಪಾವಳಿ ದೀಪ–ಬೆಳಕಿನ ಹಬ್ಬವಾಗಬೇಕು ಎಂಬುದು ನಮ್ಮ ಆಶಯವಾಗಿದೆ ಎಂದು ಮಂಡಳಿಯ ಅಧ್ಯಕ್ಷ ಪಿ.ಎಂ.ನರೇಂದ್ರಸ್ವಾಮಿ ತಿಳಿಸಿದರು.

ಜನರು ಜವಾಬ್ದಾರಿಯನ್ನು ಅರಿತುಕೊಳ್ಳಬೇಕು. ಅವರ ಮನೆಯಲ್ಲಿರುವ ವೃದ್ಧರು, ಮಕ್ಕಳ ಬಗ್ಗೆ ಚಿಂತಿಸಬೇಕು. ಕುಟುಂಬದವರ ಉಸಿರಾಟದ ತೊಂದರೆ ಮಾಡುವ ಪಟಾಕಿಗಳಿಂದ ದೂರವಾಗಬೇಕು. ಶಿಕ್ಷಣದಲ್ಲಿ ಪರಿಸರದ ಬಗ್ಗೆ ಮಕ್ಕಳಿಗೆ ಅರಿವು ಮೂಡಿಸಿದರೆ, ಪಟಾಕಿಯಂತಹ ಮಾಲಿನ್ಯ ಮನೆ, ಅಂಗಳ, ರಸ್ತೆ, ಹಳ್ಳಿ, ಪಟ್ಟಣ, ನಗರದಿಂದ ದೂರವಾಗುತ್ತದೆ. ಸಾರ್ವಜನಿಕ ಸಭೆ ಸಮಾರಂಭಗಳಲ್ಲೂ ಪಟಾಕಿ ಬಳಸಬಾರದು ಎಂದರು.

## ಗುಂಡಣ್ಣ




## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

**19 ಅಕ್ಟೋಬರ್ 2025 ಭಾನುವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ:** ಆಶ್ವಯುಜ ಕೃಷ್ಣತ್ರಯೋದಶಿ ಗಂ. 13-52 **ನಕ್ಷತ್ರ:** ಉತ್ತರಫಲ್ಗುನಿ ಗಂ. 17-50 ಯೋಗ: ಐಂದ್ರ ಗಂ. 26-05 ಕರಣ: ವಣಿಜ, ಗಂ. 13-52 ತುಲಾ ಮಾಸದ 02 ನೇ ದಿನ. ಮಳೆ ನಕ್ಷತ್ರ : ಚಿತ್ತಾ 3 ನೇ ಪಾದ. **ರಾಹುಕಾಲ :** ಸಾಯಂಕಾಲ 04-30 06-00 **ಸೂರ್ಯೋದಯ :** 06-25 **ಸೂರ್ಯಾಸ್ತ :** 06-06, **ಮುಸ್ಲಿಂ ದಿನಾಂಕ :** 26 ರಬಿಯುಸ್ಸಾನಿ **ದಿನ ವಿಶೇಷ :** ನೀರು ತುಂಬುವ ಹಬ್ಬ **ಅದೃಷ್ಟ ಸಂಖ್ಯೆ :** 3, 6

**ಮೇಷ:** ಕೆಲವು ವಿಷಯಗಳು ಹೀಗಾಗಬಹುದು ಎಂಬ ಅನುಭವವಿದ್ದರೂ ಅವಘಡವನ್ನು ತಪ್ಪಿಸಲು ಸಾಧ್ಯವಾಗುವುದಿಲ್ಲ. ಕುಲದೇವರ ದರ್ಶನ ಮಾಡುವ ಮನಸ್ಸಾಗಬಹುದು.

**ವೃಷಭ:** ಅನ್ವೇಷಣೆಯ ಸ್ವಭಾವವು ವೃತ್ತಿಯ ಬದುಕಿನಲ್ಲಿ ಹೊಸ ತಿರುವು ತರಲಿದೆ. ಅಮೂಲ್ಯ ವಸ್ತುವಿನ ಪ್ರಾಪ್ತಿಯಿಂದ ಸಂತೋಷ ಹೊಂದುವಿರಿ. ಜೀವನದ ಹಾದಿ ಬದಲಾಗುವುದನ್ನು ಕಾಣುವಿರಿ.

**ಮಿಥುನ:** ಒಂದೇ ಬಾರಿ ಹೆಚ್ಚು ಹಣವನ್ನು ಒಂದು ಕೆಲಸಕ್ಕೆ ವಿನಿಯೋಗಿಸುವುದರ ಬದಲು ಕಂತಿನಲ್ಲಿ ತೀರಿಸುವ ಬಗ್ಗೆ ಯೋಚಿಸಿ. ನಿತ್ಯದ ಕಾರ್ಯಗಳಿಂದ ಸ್ವಲ್ಪ ಮುಕ್ತಿ ಸಿಗುವ ಅವಕಾಶವಿದೆ. ಭೂ ವ್ಯವಹಾರಗಳು ಲಾಭದಾಯಕ.

**ಕರ್ಕಾಟಕ:** ಅಭಿರುಚಿಗೆ ಹೊಂದುವಂಥ ಜನರೊಂದಿಗೆ ಒಡನಾಟ ಬೆಳೆಸಿಕೊಳ್ಳುವಿರಿ. ಮೊಮ್ಮಗನ ವಯಸ್ಸಿಗೆ ಮೀರಿದ ಕೆಲವು ಆಟೋಟಗಳನ್ನು ನೋಡಿ ಮನಸ್ಸು ಪ್ರಫುಲ್ಲವಾಗುವುದು. ವೃತ್ತಿ ಉತ್ತಮ ಸ್ಥಿತಿಯಲ್ಲಿರುವುದು.

**ಸಿಂಹ:** ಹಲವು ದಿನಗಳಿಂದ ಪರ ಊರಿನ ಪ್ರಯಾಣ ಆಯಾಸ ಉಂಟುಮಾಡುವುದು. ಕಟ್ಟಡ ನಿರ್ಮಾಣ ಕಾರ್ಮಿಕರಿಗೆ ಸಂಪಾದನೆ ಇರುತ್ತದೆ. ಆಪ್ತರೊಬ್ಬರು ನೆರವಿಗೆ ನಿಲ್ಲಲಿದ್ದಾರೆ.

**ಕನ್ಯಾ:** ಅಸೂಯೆಯಾಗದಂತೆ ಕಾರ್ಯಗಳನ್ನು ಸಾಧಿಸಿಕೊಳ್ಳುವ ಉತ್ತಮ ಗುಣ ನಿಮ್ಮಲ್ಲಿರುವುದರಿಂದ ಯಶಸ್ಸನ್ನು ಕಾಣುವಿರಿ. ನವಗ್ರಹ ಸ್ತೋತ್ರ ಪಠಿಸುವುದರಿಂದ ಶುಭವಾಗುತ್ತದೆ.

**ತುಲಾ:** ದೂರದ ಸಂಬಂಧಿಗಳು ವೈಯಕ್ತಿಕ ವಿಷಯದಲ್ಲಿ ಮೂಗುತೂರಿಸುವುದು ಮನಸ್ತಾಪಕ್ಕೆ ಕಾರಣವಾಗುತ್ತದೆ. ನಿಷ್ಠಾವಂತ ಸಂಗಾತಿಗೆ ವಿಶೇಷ ಉಡುಗೊರೆ ದೊರೆಯುವ ಸಂಭವವಿದೆ.

**ವೃಶ್ಚಿಕ:** ಮಿತ್ರರ ಸಹಕಾರದಿಂದ ಮತ್ತು ಅವರ ಚಾಣಾಕ್ಷ ವರ್ತನೆಯಿಂದ ವ್ಯಾಪಾರದಲ್ಲಿ ಪ್ರಗತಿ ಇರುವುದು. ಹಿರಿಯರ ಆರೋಗ್ಯ ಸುಧಾರಿಸುವುದರಿಂದ ಸಂತಸವಿರುತ್ತದೆ. ಅಭಿಮಾನಿಗಳ ಅಭಿಲಾಶೆಯನ್ನು ಕಡೆಗಣಿಸದಿರಿ.

**ಧನು:** ಮನೆ ಖರೀದಿಯ ವಿಷಯದ ಬಗ್ಗೆ ಮನೆಯವರಿಂದ ಮಾಹಿತಿಯನ್ನು ಪಡೆಯುವಿರಿ. ರಹಸ್ಯವಾಗಿ ಸಿಗುವ ಬೆಂಬಲದಿಂದ ಕನಸುಗಳು ನನಸಾಗಲಿವೆ. ಗೃಹೋಪಕರಣದ ತಯಾರಕರಿಗೆ ಅವಕಾಶಗಳು ಸಿಗಲಿವೆ.

**ಮಕರ:** ಮುಕ್ತ ಮಾತುಕತೆ ಮೂಲಕ ಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸಿಕೊಂಡು ಇರುವ ಅವಕಾಶಗಳನ್ನು ಬಳಸಿಕೊಳ್ಳಿ. ರಾಜಕೀಯ ವಿದ್ಯಮಾನಗಳಿಂದಾಗಿ ಓಡಾಟವಾಗುವುದು. ಮಕ್ಕಳ ಮೇಲೆ ನಿಗಾ ಇರಲಿ.

**ಕುಂಭ:** ಯೋಜಿತ ಕೆಲಸ ಕಾರ್ಯಗಳನ್ನು ಕಾರ್ಯರೂಪಕ್ಕೆ ತರಲು ಪರಿಶ್ರಮ ಅಗತ್ಯವಿದೆ. ಮಧ್ಯಾಹ್ನದ ಸಮಯದಲ್ಲಿ ಸಂತಸ ಭರಿತ ಸುದ್ದಿ ತಲುಪುತ್ತದೆ. ಸೇವಾ ಸಂಸ್ಥೆಯವರಿಗೆ ಅನುಕೂಲವಿರುವುದು.

**ಮೀನ:** ರಾಜಕೀಯ ವರ್ಗದವರು ಸಾರ್ವಜನಿಕರ ಮನ್ನಣೆ ಪಡೆದುಕೊಂಡು ಉತ್ತಮ ಶುಭ ಫಲಗಳನ್ನು ಅನುಭವಿಸುವ ನಿರೀಕ್ಷೆಯನ್ನು ಮಾಡಬಹುದು. ಮನಸ್ಸಿನ ದುಗುಡದ ನಿವಾರಣೆಗೆ ತಾಳ್ಮೆ ಅತ್ಯವಶ್ಯ.

## 25 ವರ್ಷಗಳ ಹಿಂದೆ

ಗುರುವಾರ, 19-10-2000

**● ಸರ್ಕಾರದ ಸ್ಪಷ್ಟೀಕರಣಕ್ಕೆ ಸುಪ್ರೀಂ ಕೋರ್ಟ್ ಆದೇಶ**

ನವದೆಹಲಿ, ಅ.18– ಟಾಡಾ ಕೈದಿಗಳನ್ನು ಬಿಡುಗಡೆ ಮಾಡುವ ಮುನ್ನ ಅದರ ಪರಿಣಾಮಗಳ ಬಗ್ಗೆ ಸರ್ಕಾರ ಏನು ಯೋಚನೆ ಮಾಡಿದೆ ಮತ್ತು ಕೈದಿಗಳನ್ನು ಬಿಡುಗಡೆ ಮಾಡಿದ ನಂತರ ರಾಜಕುಮಾರ್ ಅವರನ್ನು ವೀರಪ್ಪನ್ ಬಿಡುಗಡೆ ಮಾಡಲಿದ್ದಾನೆ ಎಂಬ ಖಾತರಿ ಏನಿದೆ?.

ಸುಪ್ರೀಂಕೋರ್ಟ್ ಇಂದು ಈ ಎರಡು ಮುಖ್ಯ ಪ್ರಶ್ನೆಗಳನ್ನು ಎತ್ತಿ ಅದಕ್ಕೆ ಕರ್ನಾಟಕ ಸರ್ಕಾರದಿಂದ ಸ್ಪಷ್ಟೀಕರಣ ಬಯಸಿತು. 'ಆತ ಹೊಸ ಬೇಡಿಕೆ ಸಲ್ಲಿಸಿರುವ ವರದಿಗಳಿವೆ, ನಿಜವೇ?' ಎಂದೂ ಪ್ರಶ್ನಿಸಿತು.

## 75 ವರ್ಷಗಳ ಹಿಂದೆ

ಗುರುವಾರ, 19-10-1950

**● ಕಬ್ಬು ಮತ್ತು ಸಕ್ಕರೆ ಬೆಲೆಯಲ್ಲಿ ವ್ಯತ್ಯಾಸವಿಲ್ಲ**

ದೆಹಲಿ, ಅ.18– ಕಬ್ಬು ಮತ್ತು ಸಕ್ಕರೆ ಬೆಲೆಯು ಕಳೆದ ವರ್ಷವಿದ್ದಂತೆ ಈ ವರ್ಷವೂ ಬದಲಾವಣೆಯಾಗದೆ ಇರಬೇಕೆಂದು ಭಾರದ ಸರ್ಕಾರ ತೀರ್ಮಾನಿಸಿದೆ. ಹೋದವರ್ಷ ಕಬ್ಬಿನ ಬೆಲೆ ಮಣ ಒಂದಕ್ಕೆ ಒಂದು ರೂಪಾಯಿ ಹತ್ತು ಆಣೆಯೂ, ಸಕ್ಕರೆಯ ಬೆಲೆ ಮಣ ಒಂದಕ್ಕೆ 28 ರೂಪಾಯಿ 8 ಆಣೆಯೂ ಇದ್ದಿತು.

ಡಿಸೆಂಬರ್ 15ರವರೆಗೂ ತಯಾರಾಗುವ ಸಕ್ಕರೆಯಲ್ಲಿ ಒಂದು ಲಕ್ಷ ಟನ್ ಸಕ್ಕರೆಗಿಂತಲೂ ಹೆಚ್ಚಿಲ್ಲದಷ್ಟನ್ನು ಹೆಚ್ಚು ಬೆಲೆ ಕೊಟ್ಟು ಖರೀದಿಸಲು ನಿರ್ಧರಿಸಿದೆ.

## ಪದಬಂಧ 6198


ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**

1. ಅಂಕಗಣಿತದ ಕೋಷ್ಟಕ (2)
3. ವಿಜ್ಞಾನಿಯ ಜೊತೆಗೆ ಬಲ್ಲವನಿದ್ದಾನೆ (2)
5. ಲಲಾಟಲಿಪಿಯಿದು (5)
6. ಗಡಕ್ಕನೆ ಬಂದೆರಗಿದ ಗಂಡು ಕೋತಿ (3)
7. ಜಳ ಜಳ ಹರಿವ ನೀರಿನಲ್ಲಿನ ಸ್ನಾನ (3)
8. ಮಧ್ಯಸ್ತಿಕೆಯನ್ನು ಹೀಗೆನ್ನಿ (5)
9. ನಿಧಾನವಾಗಿ ರೂಢಿಸಿಕೊಂಡ ರೀತಿ! (3)
10. ದೇವರನ್ನೇ ನಂಬದವನು (3)
13. ಪಾಕಕ್ಕೆ ದೊರೆತ ಉಡುಗೊರೆ (5)
14. ನೆನಪಲ್ಲೇ ಇರುವ ಕಾರಣ (2)
15. ಮಚ್ಚೆಯುಳ್ಳವ ಹಿಡಿದಿರುವ ಕಡಿಗತ್ತಿ (2)

**ಮೇಲಿಂದ ಕೆಳಕ್ಕೆ**

1. ಮಗನಲ್ಲಿ ಅಪಸ್ಮಾರವೇ? (4)
2. ಮೂಗಿನಲ್ಲಿ ಸುರಿಯುವ ಶ್ಲೇಷ್ಮ (3)
4. ಸ್ವಲ್ಪವೂ ಪ್ರಯೋಜನಕ್ಕೆ ಬಾರದುದು (4)
5. ಅಶ್ವದ ಮೊಗವಿದು (5)
7. ಈ ಲೀಡರ್ ಪಕ್ಕಾ ಕನ್ನಡಿಗ! (5)
9. ಜ್ಞಾಪಕದಿಂದ ಮಾಡಿರುವ ಮನವಿ (4)
11. ಅಕ್ಕಿ ತೊಳೆದ ನೀರು (4)
12. ಆನಂದ ಹೀಗೆ ಬಂದಿದೆ (3)



**ಎಡದಿಂದ ಬಲಕ್ಕೆ:**
1.ತುರಗ 3.ಶಾಪ
5.ತತ್ತಿ 6.ರಿಬಡ
7.ಗುಲ್ಮ 8.ವಿಚಾರಸರಣಿ
10.ಉತ್ತರಕನ್ನಡ 14.ಕಾಡು
15.ತವಕ 16.ನಾಡಿ
17.ರತಿ 18.ತಲ್ಲಣ
**ಮೇಲಿಂದ ಕೆಳಕ್ಕೆ:** 1.ತಡಗುಣಿ
2.ಗಯೋನಿವಿ 4.ಪರಿಹಾಸ
5.ತಡಗುಣಿ 9.ರಜಕ
10.ಉಡುತಡಿ 11.ರತ್ನಾಕರ
12.ಡಕಾಯಿತ 13.ಪರಿಮಾಣ

## ಸುಡೊಕು 6582

**ಹೀಗೆ ಆಡಿ:** ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

| | | | | | | | | |
|---|---|---|---|---|---|---|---|---|
| 7 | | | | 1 | | | 8 | |
| | 3 | 6 | 8 | | 9 | 5 | 1 | 7 |
| 4 | | | 7 | | | | 9 | |
| | 7 | | | | | | | 8 |
| | | 4 | 9 | 3 | 8 | | 7 | |
| 8 | | 1 | | | | | | |
| | 8 | | | 9 | | | 4 | |
| 1 | | 2 | | 8 | | 7 | | |
| | 4 | | 1 | | 7 | | 2 | |

6581 ಸುಡೊಕು

| | | | | | | | | |
|---|---|---|---|---|---|---|---|---|
| 5 | 2 | 1 | 4 | 7 | 3 | 9 | 6 | 8 |
| 7 | 9 | 8 | 6 | 1 | 2 | 3 | 4 | 5 |
| 4 | 6 | 3 | 5 | 9 | 8 | 7 | 2 | 1 |
| 1 | 4 | 9 | 2 | 3 | 5 | 6 | 8 | 7 |
| 2 | 3 | 7 | 1 | 8 | 6 | 4 | 5 | 9 |
| 8 | 5 | 6 | 7 | 4 | 9 | 2 | 1 | 3 |
| 6 | 7 | 5 | 9 | 2 | 1 | 8 | 3 | 4 |
| 3 | 1 | 4 | 8 | 6 | 7 | 5 | 9 | 2 |
| 9 | 8 | 2 | 3 | 5 | 4 | 1 | 7 | 6 |

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. 

# ಖಾಸಗಿ ಕಾರ್ಯಕ್ರಮಗಳಿಗೆ ಅಂಕುಶ

## ತಕ್ಷಣದಿಂದಲೇ ಆದೇಶ ಜಾರಿ ಮಾಡಿದ ಗೃಹ ಇಲಾಖೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಖಾಸಗಿ ವ್ಯಕ್ತಿಗಳು, ಸಂಘ ಸಂಸ್ಥೆಗಳು, ಸಂಘಟನೆಗಳು ಸಾರ್ವಜನಿಕ ಸ್ಥಳಗಳಲ್ಲಿ ಕಾರ್ಯಕ್ರಮ ಆಯೋಜಿಸುವುದಕ್ಕೂ ಮುನ್ನ ಪೊಲೀಸ್ ಕಮಿಷನರ್ ಅಥವಾ ಎಸ್‌ಪಿ ಅವರಿಂದ ಪೂರ್ವಾನುಮತಿ ಪಡೆದುಕೊಳ್ಳಲೇ ಬೇಕು ಎಂದು ಗೃಹ ಇಲಾಖೆಯು ಅ.18ರಂದು ಹೊರಡಿಸಿದ ಆದೇಶದಲ್ಲಿ ಹೇಳಿದೆ.

ಸಾರ್ವಜನಿಕ ಸ್ಥಳಗಳಲ್ಲಿ ಕಾರ್ಯಕ್ರಮ ಆಯೋಜಿಸಲು ಮತ್ತು ಅದಕ್ಕೆ ಅನುಮತಿ ಪಡೆದುಕೊಳ್ಳಲು ಷರತ್ತುಗಳನ್ನು ರೂಪಿಸಿ, ಇಲಾಖೆಯು ಆದೇಶ ಹೊರಡಿಸಿದೆ. ನೋಂದಣಿ ಮಾಡಿಸಿದ ಅಥವಾ ನೋಂದಣಿ ಮಾಡಿಸದ ಸಂಘಟನೆಗಳಿಗೂ ಇದು ಅನ್ವಯವಾಗುತ್ತದೆ. ಸಾರ್ವಜನಿಕ ರಸ್ತೆಗಳಲ್ಲಿ ಮೆರವಣಿಗೆ, ಕಾರ್ಯಕ್ರಮ ನಡೆಸುವ ಪೂರ್ವದಲ್ಲಿಯೇ ಅನುಮತಿ ಪಡೆಯುವುದು ಕಡ್ಡಾಯವಾಗಲಿದೆ.

ಈ ಪ್ರಕಾರ ಯಾವುದೇ ಖಾಸಗಿ ವ್ಯಕ್ತಿ ಅಥವಾ ಸಂಘಟನೆಗಳು ಕಾರ್ಯಕ್ರಮ ಆಯೋಜಿಸುವುದಕ್ಕೂ ಕನಿಷ್ಠ ಮೂರು ದಿನ ಮೊದಲು ಅನುಮತಿಗಾಗಿ ಅರ್ಜಿ ಸಲ್ಲಿಸಬೇಕು. ಸಂಬಂಧಿತ ಇಲಾಖೆ, ರಸ್ತೆ ಬಳಸುವುದಿದ್ದರೆ ಸ್ಥಳೀಯ ಸಂಸ್ಥೆಗಳು ಅಥವಾ ಲೋಕೋಪಯೋಗಿ ಇಲಾಖೆ, ಅಗ್ನಿಶಾಮಕ ದಳ ಮತ್ತು ಎಸ್ಕಾಂಗಳಿಂದ ನಿರಾಕ್ಷೇಪಣಾ ಪತ್ರ (ಎನ್‌ಒಸಿ) ಪಡೆದುಕೊಳ್ಳಬೇಕು ಸೂಚಿಸಿದೆ.

ಕಾರ್ಯಕ್ರಮ ಅಥವಾ ಮೆರವಣಿಗೆ ವೇಳೆ ಸಾರ್ವಜನಿಕ ಸ್ವತ್ತಿಗೆ ಹಾನಿಯಾದರೆ, ಪೂರ್ವಾನುಮತಿಗಾಗಿ ಅರ್ಜಿ ಸಲ್ಲಿಸಿದ್ದವರೇ ಅದರ ಹೊಣೆ ಹೊರಬೇಕಾಗುತ್ತದೆ. ಜತೆಗೆ ಇಂತಹ ಕಾರ್ಯಕ್ರಮಗಳ ವೇಳೆ ಕಾನೂನು ಬಾಹಿರ ಚಟುವಟಿಕೆಗಳು, ಅಪರಾಧ ಕೃತ್ಯಗಳು ಸಂಭವಿಸಿದರೆ ಅವರ ವಿರುದ್ಧ ಅಪರಾಧ ಪ್ರಕರಣಗಳು ದಾಖಲಾಗಲಿದೆ.

### ಮುಖ್ಯಾಂಶಗಳು

- ಅನುಮತಿ ಸಿಕ್ಕ ನಂತರವಷ್ಟೇ ಸಿದ್ಧತೆ ಮಾಡಿಕೊಳ್ಳಬೇಕು
- ಸಾರ್ವಜನಿಕ ಸ್ವತ್ತಿಗೆ ಹಾನಿಯಾದರೆ ಆಯೋಜಕರೇ ಹೊಣೆ
- ಕಾನೂನು ಬಾಹಿರ ಚಟುವಟಿಕೆ ನಡೆದರೆ ಪ್ರಕರಣ ದಾಖಲು

### ಪೂರ್ವಾನುಮತಿ ಯಾರಿಂದ?

- ಸರ್ಕಾರಿ ಅಥವಾ ಅನುದಾನಿತ ಶಾಲಾ ಮೈದಾನಗಳಲ್ಲಿನ ಕಾರ್ಯಕ್ರಮಗಳಿಗೆ ಶಾಲಾ ಶಿಕ್ಷಣ ಇಲಾಖೆ
- ಕಾಲೇಜು–ವಿಶ್ವವಿದ್ಯಾಲಯಗಳ ಆವರಣದಲ್ಲಿ ನಡೆಸುವುದಿದ್ದರೆ ಉನ್ನತ ಶಿಕ್ಷಣ ಇಲಾಖೆ
- ಸಾರ್ವಜನಿಕ ಮೈದಾನ ಮತ್ತು ಉದ್ಯಾನಗಳಲ್ಲಿ ನಡೆಸುವುದಿದ್ದರೆ ನಗರಾಭಿವೃದ್ಧಿ ಇಲಾಖೆ, ಸ್ಥಳೀಯ ಸಂಸ್ಥೆ

## ರಾಜೇಂದ್ರ ಚೆನ್ನಿಗೆ 'ಕಾವ್ಯಾನಂದ ಪ್ರಶಸ್ತಿ'


ರಾಜೇಂದ್ರ ಚೆನ್ನಿ

**ಬೆಂಗಳೂರು:** ಕನ್ನಡ ಸಾಹಿತ್ಯ ಸಂವರ್ಧಕ ಟ್ರಸ್ಟ್‌ನ 2024ರ 'ಕಾವ್ಯಾನಂದ ಪುರಸ್ಕಾರ'ಕ್ಕೆ ರಾಜೇಂದ್ರ ಚೆನ್ನಿ ಅವರ 'ಸಾಂಸ್ಕೃತಿಕ ರಾಜಕೀಯ–ಇಂದಿನ ಇತಿಹಾಸ' ಕೃತಿ ಆಯ್ಕೆಯಾಗಿದೆ.

ಡಾ. ಸಿದ್ಧಯ್ಯ ಪುರಾಣಿಕ ಅವರ ಕಾವ್ಯನಾಮವಾದ 'ಕಾವ್ಯಾನಂದ' ಹೆಸರಿನಲ್ಲಿ ನೀಡುವ ಪ್ರಶಸ್ತಿಯು ₹50 ಸಾವಿರ ನಗದು ಹಾಗೂ ಪ್ರಶಸ್ತಿ ಫಲಕವನ್ನು ಒಳಗೊಂಡಿದೆ.

2025ರ ಡಿಸೆಂಬರ್ 19ರಂದು ಬೆಂಗಳೂರಿನಲ್ಲಿ ನಡೆಯುವ ಸಮಾರಂಭದಲ್ಲಿ ಪುರಸ್ಕಾರ ಪ್ರದಾನ ಮಾಡಲಾಗುತ್ತದೆ ಎಂದು ಟ್ರಸ್ಟ್ ಅಧ್ಯಕ್ಷೆ ವಿಜಯಾ ನಂದೀಶ್ವರ ತಿಳಿಸಿದ್ದಾರೆ.

## 'ಒಳ ಮೀಸಲು: ನೇಮಕಕ್ಕೆ ಒಪ್ಪಿಗೆ–ಆದೇಶಕ್ಕೆ ತಡೆ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಪರಿಶಿಷ್ಟ ಜಾತಿಗಳಲ್ಲಿ ಒಳ ಮೀಸಲಾತಿ ಕಲ್ಪಿಸಿ ರಾಜ್ಯ ಸರ್ಕಾರ 2025ರ ಆಗಸ್ಟ್ 25ರಂದು ಹೊರಡಿಸಿರುವ ಆದೇಶವನ್ನು ಪ್ರಶ್ನಿಸಲಾದ ಅರ್ಜಿಗೆ ಸಂಬಂಧಿಸಿದ ಪ್ರಕರಣದಲ್ಲಿ 'ನೇಮಕಾತಿ ಪ್ರಕ್ರಿಯೆ ನಡೆಸಬಹುದು. ಆದರೆ, ನೇಮಕಾತಿ ಆದೇಶ ಹೊರಡಿಸುವಂತಿಲ್ಲ' ಎಂದು ಹೈಕೋರ್ಟ್ ಆದೇಶಿಸಿದೆ.

ಸರ್ಕಾರದ ಆದೇಶವನ್ನು ಪ್ರಶ್ನಿಸಿ 'ಕರ್ನಾಟಕ ಅಸ್ಪೃಶ್ಯ ಅಲೆಮಾರಿಗಳ ಮಹಾ ಒಕ್ಕೂಟದ ಅಧ್ಯಕ್ಷ ಶೇಷಪ್ಪ ಮತ್ತಿತರರು' ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ಅರ್ಜಿದಾರರ ಪರ ಹೈಕೋರ್ಟ್ ವಕೀಲ ಎಚ್.ವಿ.ಮಂಜುನಾಥ್ ಅವರ ವಾದ ಆಲಿಸಿದ ನ್ಯಾಯಪೀಠ



ಪ್ರತಿವಾದಿಗಳಾದ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ, ಸಮಾಜ ಕಲ್ಯಾಣ ಇಲಾಖೆ ಕಾರ್ಯದರ್ಶಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದೆ. ಆಕ್ಷೇಪಣೆ ಸಲ್ಲಿಸಲು ಕಾಲಾವಕಾಶ ನೀಡಿ ವಿಚಾರಣೆಯನ್ನು ನವೆಂಬರ್ 13ಕ್ಕೆ ಮುಂದೂಡಿದೆ.

ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ನೇತೃತ್ವದ ಆಯೋಗ ಪರಿಶಿಷ್ಟ ಜಾತಿಗಳನ್ನು ಪ್ರವರ್ಗ ಎ, ಬಿ, ಸಿ, ಡಿ ಮತ್ತು ಇ ಎಂದು ಐದು ಗುಂಪುಗಳಾಗಿ ವರ್ಗೀಕರಿಸಿ ಕ್ರಮವಾಗಿ ಶೇ 1,6,5,4,1 ರಂತೆ ಮೀಸಲು ಹಂಚಿ ಮಾಡಿ ಸರ್ಕಾರಕ್ಕೆ ಶಿಫಾರಸು ಮಾಡಿತ್ತು. ಅದನ್ನು ಮಾರ್ಪಾಡು ಮಾಡಿದ್ದ ಸರ್ಕಾರ, ಐದು ಗುಂಪುಗಳ ಬದಲಾಗಿ ಪ್ರವರ್ಗ ಎ, ಪ್ರವರ್ಗ ಬಿ ಮತ್ತು ಪ್ರವರ್ಗ ಸಿ ಎಂದು ಮೂರು ಗುಂಪುಗಳನ್ನಾಗಿ ಮಾಡಿ ಶೇ 6, 6, 5 ರಂತೆ ಒಳಮೀಸಲಾತಿ ನಿಗದಿಪಡಿಸಿ ಆಗಸ್ಟ್ 25ರಂದು ಆದೇಶ ಹೊರಡಿಸಿತ್ತು.

ಆಯೋಗವು 59 ಅಸ್ಪೃಶ್ಯ ಅಲೆಮಾರಿ, ಅರೆ-ಅಲೆಮಾರಿ ಮತ್ತು ಅತಿ ಸೂಕ್ಷ್ಮ ಜಾತಿಗಳನ್ನು ಅತ್ಯಂತ ಹಿಂದುಳಿದವರು ಎಂದು ಪರಿಗಣಿಸಿ ಪ್ರತ್ಯೇಕ ಗುಂಪಾಗಿ 'ಪ್ರವರ್ಗ ಎ' ಅಡಿ ಶೇ 1ರಷ್ಟು ಒಳ ಮೀಸಲಾತಿ ಕಲ್ಪಿಸಿತ್ತು. ಆದರೆ, ಸರ್ಕಾರವು ಈ ಜಾತಿಗಳನ್ನು ಭೋವಿ, ಲಂಬಾಣಿ, ಕೊರಮ ಮತ್ತು ಕೊರಚ ಜಾತಿಗಳೊಂದಿಗೆ 'ಪ್ರವರ್ಗ ಸಿ' ಅಡಿ ಸೇರಿಸಿ ಶೇ 5ರಷ್ಟು ಒಳ ಮೀಸಲಾತಿ ಕಲ್ಪಿಸಿದೆ. ಸರ್ಕಾರದ ಈ ನೀತಿಯನ್ನು ಅರ್ಜಿದಾರರು ಪ್ರಶ್ನಿಸಿದ್ದಾರೆ.

## 95ಲಕ್ಷ ರೆವಿನ್ಯೂ ಆಸ್ತಿಗೆ 'ಇ–ಸ್ವತ್ತು'

ಒಂದನೇ ಪುಟದಿಂದ...

ಅದರಂತೆ ಕಾಯ್ದೆಗೆ ತಿದ್ದುಪಡಿ ತಂದು ಪ್ರಕರಣ 199(ಬಿ) ಹಾಗೂ ಪ್ರಕರಣ 199(ಸಿ) ಸೇರಿಸಲಾಗಿತ್ತು. ಪ್ರಕರಣ ಸ್ವತ್ತುಗಳಿಗೆ ಖಾತಾ ಮಾಡುವುದು (199–ಬಿ), ಕಟ್ಟಡ ಮತ್ತು ಪರಿವರ್ತನೆಯಾಗದ, ಪರಿವರ್ತನೆಯಾದ ಭೂಮಿ. ಕಂದಾಯ ಭೂಮಿಯಲ್ಲಿನ ಬಡಾವಣೆಗಳ ಮೇಲಿನ ತೆರಿಗೆಗಳನ್ನು (199–ಸಿ) ಸೇರಿಸಲಾಗಿತ್ತು.

ಈ ಕುರಿತು ಮಾಹಿತಿ ನೀಡಿರುವ ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ, 'ತಿದ್ದುಪಡಿಯನ್ನು ಆಧರಿಸಿ ಅಸ್ತಿತ್ವದಲ್ಲಿದ್ದ ತೆರಿಗೆ ನಿಯಮಗಳು 2021ನ್ನು ರದ್ದು ಮಾಡಲಾಗಿದೆ. ಹೊಸದಾಗಿ ಗ್ರಾಮ ಪಂಚಾಯಿತಿಗಳ ತೆರಿಗೆ, ದರ ಮತ್ತು ಶುಲ್ಕ ನಿಯಮಗಳನ್ನು ರೂಪಿಸಿ ಅಧಿಸೂಚನೆ ಹೊರಡಿಸಲಾಗಿದೆ. ತೆರಿಗೆ, ಶುಲ್ಕ, ನಿರಾಕ್ಷೇಪಣಾ (ಎನ್‌ಒಸಿ) ಪರವಾನಗಿ ದರಗಳನ್ನು ವೈಜ್ಞಾನಿಕವಾಗಿ ನಿಗದಿ ಮಾಡಲಾಗಿದ್ದು, ಆ ಮೂಲಕ ಗ್ರಾಮಗಳಲ್ಲಿ ಇ-ಸ್ವತ್ತು ಅಭಿಯಾನವನ್ನು ಯಶಸ್ವಿಯಾಗಿ ಕೈಗೊಳ್ಳಲು ಇದ್ದ ಎಲ್ಲ ಅಡತಡೆಗಳನ್ನು ನಿವಾರಣೆ ಮಾಡಲಾಗಿದೆ' ಎಂದಿದ್ದಾರೆ.

ಗ್ರಾಮ ಪಂಚಾಯಿತಿಯ ಎಲ್ಲಾ ಆಸ್ತಿಗಳ ಕರಡು ಪ್ರತಿಗಳನ್ನು ಸಾರ್ವಜನಿಕರಿಗೆ ತಂತ್ರಾಂಶದ ಮೂಲಕ ಒದಗಿಸಿ ತಮ್ಮ ಆಸ್ತಿಗಳ ಮಾಹಿತಿಯನ್ನು ಸರಿಪಡಿಸಿಕೊಳ್ಳಬಹುದು. ಆಸ್ತಿ ಮಾಲೀಕರು ತೆರಿಗೆಯನ್ನು ಗ್ರಾಮ ಪಂಚಾಯಿತಿಗೆ ಪಾವತಿಸುವ ಮೂಲಕ ದಾಖಲೆ ಪಡೆಯಬಹುದು ಎಂದು ಮಾಹಿತಿ ನೀಡಿದ್ದಾರೆ.

ತೆರಿಗೆ, ದರ ಅಥವಾ ಶುಲ್ಕಗಳ ನಿರ್ಧರಣೆ, ವಸೂಲಿ ಅಥವಾ ವಿಧಿಸುವಿಕೆಯಿಂದ ತೊಂದರೆಯಾದವರು ಉಪ ಕಾರ್ಯದರ್ಶಿಗೆ (ಅಭಿವೃದ್ಧಿ) ಮೇಲ್ಮನವಿ ಸಲ್ಲಿಸಲು ಅವಕಾಶ ಮಾಡಲಾಗಿದೆ. 2ನೇ ಮೇಲ್ಮನವಿಯನ್ನು ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ಸಲ್ಲಿಸಬಹುದು ಎಂದು ಮಾಹಿತಿ ನೀಡಿದ್ದಾರೆ.

## ಮಾಜಿ ದೇವದಾಸಿಯರ ಮರು ಸಮೀಕ್ಷೆ ಅವಧಿ ಡಿ.31ರವರೆಗೆ ವಿಸ್ತರಣೆ

**ಬೆಂಗಳೂರು:** ಮಾಜಿ ದೇವದಾಸಿಯರ ಮರು ಸಮೀಕ್ಷೆಯ ಅವಧಿಯನ್ನು 2025ರ ಡಿಸೆಂಬರ್ 31ರವರೆಗೆ ವಿಸ್ತರಿಸಿ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ಆದೇಶಿಸಿದೆ.

ಸೆಪ್ಟೆಂಬರ್ 15ರಿಂದ 15 ಜಿಲ್ಲೆಗಳಲ್ಲಿ ಮರು ಸಮೀಕ್ಷೆಯನ್ನು ಪ್ರಾರಂಭಿಸಲಾಗಿತ್ತು. ಈ ಜಿಲ್ಲೆಗಳ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಯಲ್ಲಿ ಸಮೀಕ್ಷೆ ನಡೆಸಲಾಗುತ್ತಿದೆ. ಅಕ್ಟೋಬರ್ 15ರಂದು ಸಮುದಾಯದ ಸಂಸ್ಥೆಗಳೊಂದಿಗೆ ನಡೆದ ಸಭೆಯಲ್ಲಿ ಮರು ಸಮೀಕ್ಷೆಯ ಅವಧಿಯನ್ನು ವಿಸ್ತರಿಸುವ ನಿರ್ಧಾರ ಕೈಗೊಳ್ಳಲಾಗಿದೆ ಎಂದು ನಿಗಮದ ವ್ಯವಸ್ಥಾಪಕ ನಿರ್ದೇಶಕರು ಆದೇಶದಲ್ಲಿ ತಿಳಿಸಿದ್ದಾರೆ.

# ಲಂಚ ಕೇಳಿದ ಆರ್‌ಓ ವಿರುದ್ಧ ಕ್ರಮ

## ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೂಚನೆ • ಅಹವಾಲು ಸ್ವೀಕಾರ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಖಾತಾ ಮಾಡಿಸಲು ಲಂಚ ಕೇಳುತ್ತಿದ್ದ ಕಂದಾಯ ಅಧಿಕಾರಿ (ಆರ್‌ಒ) ವಿರುದ್ಧ ಕ್ರಮ ಕೈಗೊಳ್ಳಲು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೂಚಿಸಿದರು.

ಕೆ.ಆರ್.ಪುರ ಟಿ.ಸಿ. ಪಾಳ್ಯದ ವೆಂಗಯ್ಯ ಪಾರ್ಕ್‌ನಲ್ಲಿ ಶನಿವಾರ ಹಮ್ಮಿಕೊಂಡಿದ್ದ 'ಬೆಂಗಳೂರು ನಡಿಗೆ' ಅಭಿಯಾನದಲ್ಲಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸುವ ವೇಳೆ ಜನರು ನೀಡಿದ ದೂರಿನಂತೆ ಈ ಸೂಚನೆ ನೀಡಿದರು.

'ಖಾತಾ ಮಾಡಿಸಲು ಕಂದಾಯ ಅಧಿಕಾರಿಗಳು ಹೆಚ್ಚು ಲಂಚ ಕೇಳುತ್ತಾರೆ. ಈ ವಿಚಾರವಾಗಿ ಪಾಲಿಕೆ ಕಮಿಷನರ್ ಬಳಿ ದೂರು ನೀಡಿದ್ದೇನೆ' ಎಂದು ಸ್ಥಳೀಯರಾದ ಸುಲ್ತಾನ್ ಮಿರ್ಜಾ ದೂರಿದರು.

'ಅಧಿಕಾರಿಯ ಹೆಸರು ಹೇಳಿ. ಇಲ್ಲಿಯೇ ಅಮಾನತು ಮಾಡುತ್ತೇನೆ' ಎಂದು ಶಿವಕುಮಾರ್ ಭರವಸೆ ನೀಡಿದರು.

'ಬಸವರಾಜ್ ಅವರು ₹10ಸಾವಿರದಿಂದ 15 ಸಾವಿರ ಬೇಡಿಕೆ ಇಡುತ್ತಿದ್ದಾರೆ. ಎರಡು ತಿಂಗಳಿಂದ ಅಲೆದಾಡಿಸುತ್ತಿದ್ದಾರೆ. ಹೊರಮಾವು ಕಚೇರಿಗೆ ಕಳುಹಿಸುತ್ತಾರೆ. ಅಲ್ಲಿ ಹೋದರೆ ವಿಜಿನಾಪುರ ಪಾಲಿಕೆ ಕಚೇರಿಗೆ ಕಳುಹಿಸುತ್ತಾರೆ' ಎಂದು ಮಾಹಿತಿ ನೀಡಿದರು.

'ಲಂಚ ಬೇಡಿಕೆ ವಿಚಾರವಾಗಿ ಶೀಘ್ರ ಪರಿಶೀಲನೆ ನಡೆಸಿ ಶನಿವಾರ ಸಂಜೆಯೊಳಗೆ ಕ್ರಮ ತೆಗೆದುಕೊಳ್ಳಿ' ಎಂದು ಪಾಲಿಕೆ ಆಯುಕ್ತರಿಗೆ ಉಪ ಮುಖ್ಯಮಂತ್ರಿ ಸೂಚಿಸಿದರು. 'ಜಂಟಿ ಆಯುಕ್ತ, ಪೊಲೀಸ್ ಇಲಾಖೆ ಮತ್ತು ಪಾಲಿಕೆ ಕ್ರಮ ತೆಗೆದುಕೊಳ್ಳಲಿದೆ' ಎಂದು ಹೇಳಿದರು.

**ಬೆದರಿಕೆ ಹಾಕಿದರೆ ಕಾನೂನು ಕ್ರಮ:** 'ನಾನು ಎರಡು ವರ್ಷಗಳಿಂದ ನಿವೇಶನದಲ್ಲಿ ಮನೆ ಕಟ್ಟಿದ್ದೇನೆ. ಆ ಜಾಗ ಖರೀದಿ ಮಾಡಬೇಕೆಂದು ಕೊಂಡಿದ್ದ ನೆರೆ ಮನೆಯ ವ್ಯಕ್ತಿ ಮಲ್ಲಿಕಾರ್ಜುನ ನಾನು ಕಟ್ಟಿರುವ ಮನೆಗೆ ಹೋಗಲು ಬಿಡುತ್ತಿಲ್ಲ. ₹ 10 ಲಕ್ಷ ಹಣ ನೀಡಬೇಕು. ಆಗ ಮಾತ್ರ ಮನೆ ಪ್ರವೇಶಿಸಿ ಎಂದು ರೌಡಿಗಳು ಹಾಗೂ ಕನ್ನಡಪರ ಸಂಘಟನೆಗಳ ಮೂಲಕ ಬೆದರಿಸುತ್ತಿದ್ದಾರೆ' ಎಂದು ಎನ್.ಆರ್. ಲೇಔಟ್ ನಿವಾಸಿ ವಿಶ್ವೇಶ್ ಕಣ್ಣೀರು ಹಾಕಿದರು.

'ಪೊಲೀಸ್ ಠಾಣೆಯಲ್ಲಿ ದೂರು ನೀಡಿ. ಯಾರೇ ಅಡಚಣೆ ಮಾಡಿದರೂ ಅವರ ವಿರುದ್ಧ ಕ್ರಮ ಕೈಗೊಳ್ಳುತ್ತೇನೆ. ಹಣ ಕೇಳಿರುವ ಬಗ್ಗೆಯೂ ಲಿಖಿತವಾಗಿ ದೂರು ನೀಡಿ. ಅನಂತರ ದೂರಿಗೆ ಬದ್ಧರಾಗಿರಬೇಕು' ಎಂದು ಶಿವಕುಮಾರ್ ತಿಳಿಸಿದರು.

'ಪಾಲಿಕೆ ಅಧಿಕಾರಿಗಳು ಆ ಜಾಗಕ್ಕೆ ಹೋಗಿ ಪರಿಶೀಲಿಸಬೇಕು. ಹಣ ಕೇಳಿ ಬೆದರಿಕೆ ಹಾಕಿದ್ದರೆ ಕಾನೂನು ಪ್ರಕಾರ ಕ್ರಮ ಕೈಗೊಳ್ಳಬೇಕು' ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

'ಬೆಂಗಳೂರು ನಡಿಗೆ'

### 'ಗೃಹಲಕ್ಷ್ಮೀ' ಹಣ ಬಂದಿದ್ದರೂ ಸುಳ್ಳು ಮಾಹಿತಿ

ಆರು ತಿಂಗಳಿನಿಂದ ಗೃಹಲಕ್ಷ್ಮೀ ಹಣ ಬಂದಿಲ್ಲ ಎಂದು ಮಹಿಳೆಯೊಬ್ಬರು ದೂರಿದರು. 'ಆರು ತಿಂಗಳಿನಿಂದ ಬಾಕಿ ಇಲ್ಲ. ಅಧಿಕಾರಿಗಳಿಂದ ತಪ್ಪಾಗಿರಬೇಕು. ಇಲ್ಲವೇ ನಿಮ್ಮ ಆರೋಪ ಸುಳ್ಳಾಗಿರಬೇಕು' ಎಂದು ತಿಳಿಸಿದ ಡಿ.ಕೆ. ಶಿವಕುಮಾರ್ ಅವರು ಕರೆ ಮೂಲಕ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿಗಳಲ್ಲಿ ವಿಚಾರಿಸಿದರು.

ಜುಲೈ ತಿಂಗಳವರೆಗೆ ಹಣ ಪಾವತಿ ಆಗಿರುವ ಬಗ್ಗೆ ಮಾಹಿತಿ ಪಡೆದ ಬಳಿಕ ಮಹಿಳೆಯ ಮೊಬೈಲ್ ಪರಿಶೀಲಿಸಲಾಯಿತು. ಈ ಮಹಿಳೆಯ ಖಾತೆಗೂ ಜುಲೈಯ ಗೃಹಲಕ್ಷ್ಮೀ ಹಣ ಅಕ್ಟೋಬರ್ 3ಕ್ಕೆ ಬಂದಿರುವ ಸಂದೇಶ ಮೊಬೈಲ್‌ನಲ್ಲಿತ್ತು. 'ಮಹಿಳೆಯ ಮಾತು ಕೇಳಿ ಅಧಿಕಾರಿಯನ್ನೇ ಅಮಾನತು ಮಾಡಿಬಿಡುತ್ತಿದ್ದೆ. ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್‌ರನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದೆ. ಅವರು ಕರೆ ಸ್ವೀಕರಿಸದೇ ಇದ್ದಿದ್ದರಿಂದ ಆಯಿತು. ಮಹಿಳೆಯ ಆರೋಪ ಸುಳ್ಳು. ಆಗಸ್ಟ್‌ನ ಹಣ ಸಂದಾಯದ ಪ್ರಕ್ರಿಯೆ ನಡೆಯುತ್ತಿದೆ' ಎಂದು ಶಿವಕುಮಾರ ಹೇಳಿದರು.



ಕೆ.ಆರ್.ಪುರದಲ್ಲಿ ಶನಿವಾರ ಹಮ್ಮಿಕೊಂಡಿದ್ದ 'ಬೆಂಗಳೂರು ನಡಿಗೆ'ಯಲ್ಲಿ ಡಿ.ಕೆ.ಶಿವಕುಮಾರ್ ಸಾರ್ವಜನಿಕರ ಅಹವಾಲು ಆಲಿಸಿದರು

### 'ಐಟಿ-ಬಿಟಿ ಕಂಪನಿಗಳೊಂದಿಗೆ ಸಭೆ'

'ಐಟಿ- ಬಿಟಿ ಕಂಪನಿಗಳ ಜೊತೆ ನಾನು ಹಾಗೂ ಐಟಿ, ಕೈಗಾರಿಕೆ, ವಿಜ್ಞಾನ ಹಾಗೂ ತಂತ್ರಜ್ಞಾನ ಸಚಿವರು ಪ್ರತ್ಯೇಕವಾಗಿ ಸಭೆ ನಡೆಸಿ ಅವರ ಸಮಸ್ಯೆಗಳನ್ನು ಆಲಿಸುತ್ತೇವೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

'ನೂತನ ಐದು ಪಾಲಿಕೆಗಳು ಬೆಂಗಳೂರಿನ ಅಭಿವೃದ್ಧಿಯಲ್ಲಿ ಇತಿಹಾಸ ಸೃಷ್ಟಿಸಲಿವೆ. ಬೆಂಗಳೂರು ನಗರದಿಂದ ₹ 6 ಸಾವಿರ ಕೋಟಿ ತೆರಿಗೆ ಸಂಗ್ರಹವಾಗುತ್ತಿದೆ. ಇದರಲ್ಲಿ ಬೆಂಗಳೂರು ನಗರ ಪೂರ್ವ ಪಾಲಿಕೆ ₹ 1,600 ಕೋಟಿ ಪಾಲು ಹೊಂದಿದೆ. ಈ ಮೊದಲು ಎಲ್ಲ ಭಾಗಗಳ ತೆರಿಗೆ ಹಂಚಿಕೆಯಾಗುತ್ತಿತ್ತು. ಈಗ ಆಯಾ ಪ್ರದೇಶಗಳ ತೆರಿಗೆ ಅಲ್ಲಿಯೇ ವಿನಿಯೋಗವಾಗಲಿದೆ' ಎಂದು ತಿಳಿಸಿದರು.

'ಅಕ್ರಮವಾಗಿ ಕಟ್ಟುವ ಕಟ್ಟಡಗಳನ್ನು ಸುಪ್ರೀಂ ಕೋರ್ಟ್ ನಿರ್ದೇಶನದ ಮೇರೆಗೆ ನೆಲಸಮ ಮಾಡಲಾಗುವುದು. ಕಡಿಮೆ ವಿಸ್ತೀರ್ಣದ ನಿವೇಶನದಲ್ಲಿ ನಿಗದಿತ ಸಂಖ್ಯೆಗಿಂತ ಹೆಚ್ಚು ಮಹಡಿ ನಿರ್ಮಾಣ, ಸೆಟ್‌ಬ್ಯಾಕ್ ಬಿಡದೆ ಒತ್ತೊತ್ತಾಗಿ ಮನೆ ಕಟ್ಟುವುದಕ್ಕೆ ಅವಕಾಶ ನೀಡುವುದಿಲ್ಲ' ಎಂದು ತಿಳಿಸಿದರು.

'ಕೆ.ಆರ್.ಪುರ ಸಂತೆ ನಡೆಯುವ ಜಾಗವನ್ನು ಎಲ್ಲಿಗೆ ಸ್ಥಳಾಂತರ ಮಾಡಬಹುದು ಎಂಬುದರ ಬಗ್ಗೆಯೂ ಪರಿಶೀಲನೆ ನಡೆಸಲಾಗುವುದು" ಎಂದು ಭರವಸೆ ನೀಡಿದರು.

## ಸಂಕ್ಷಿಪ್ತ ಸುದ್ದಿ

### ಬ್ರಾಹ್ಮಣ ಮಹಾಸಭಾ ಕಾರ್ಯಕಾರಿ ಸಮಿತಿ ಪುನರ್ ರಚನೆ

**ಬೆಂಗಳೂರು:** 'ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಕೇಂದ್ರ ಕಾರ್ಯಕಾರಿಣಿ ಸಮಿತಿಯನ್ನು ಬೈಲಾ ಪ್ರಕಾರ ಮುಂದಿನ ದಿನಗಳಲ್ಲಿ ಪುನರ್ ರಚನೆ ಮಾಡಲಾಗುವುದು' ಎಂದು ಮಹಾಸಭೆಯ ಅಧ್ಯಕ್ಷ ಎಸ್. ರಘುನಾಥ್ ತಿಳಿಸಿದ್ದಾರೆ.

'ಹೆಚ್ಚುವರಿ ನೇಮಕಾತಿಗೆ ಸಂಬಂಧಿಸಿದಂತೆ ಮಹಾಸಭೆಯ ಉಪಾಧ್ಯಕ್ಷರಾಗಿದ್ದ ಕೆ. ಮೋಹನ್ ಅವರು ನೀಡಿದ ದೂರಿನ ಆಧಾರಿಸಿ, ಸಹಕಾರ ಇಲಾಖೆಯ ವಿಚಾರಣಾ ನೋಟಿಸ್ ನೀಡಿತ್ತು. ಈ ವಿಚಾರವಾಗಿ ಅ.10 ಮತ್ತು 16ರಂದು ಜಿಲ್ಲಾ ಪ್ರತಿನಿಧಿಗಳು ಹಾಗೂ ಆಡಳಿತ ಮಂಡಳಿಯ ಸದಸ್ಯರ ಜತೆ ಸಭೆ ನಡೆಸಲಾಗಿತ್ತು. ಎಲ್ಲ ಪದಾಧಿಕಾರಿಗಳ ನೇಮಕಾತಿಯನ್ನು ವಾಪಸ್ ಪಡೆದು, ಬೈಲಾ ಪ್ರಕಾರ ಮರು ನೇಮಕಾತಿ ಮಾಡಬೇಕೆಂಬ ಅಭಿಪ್ರಾಯ ಸಭೆಯಲ್ಲಿ ವ್ಯಕ್ತವಾಯಿತು. ಕೇಂದ್ರ ಕಾರ್ಯಕಾರಿಣಿ ಸಮಿತಿಯನ್ನು ಪುನರ್ ರಚಿಸಲು ಒಪ್ಪಿಗೆ ನೀಡಲಾಯಿತು. ಅಲ್ಲದೆ, ಕೆ. ಮೋಹನ್ ಅವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ಸಲಹೆಗಳನ್ನು ನೀಡಿದರು' ಎಂದು ರಘುನಾಥ್ ಹೇಳಿದ್ದಾರೆ.

'ಸಭೆಯ ತೀರ್ಮಾನದಂತೆ ಯಾವುದೇ ಪ್ರತಿಷ್ಠೆಗೆ ಒಳಗಾಗದೆ ಬೈಲಾ ಪ್ರಕಾರ ಕೇಂದ್ರ ಕಾರ್ಯಕಾರಿಣಿ ಸಮಿತಿಯನ್ನು ಪುನರ್ ರಚಿಸಲಾಗುವುದು. ಈ ಹಿಂದೆ ನೇಮಕ ಮಾಡಲಾಗಿರುವ ಮಹಾಸಭೆಯ ಕೇಂದ್ರ ಕಾರ್ಯಕಾರಿಣಿ ಸಮಿತಿಯ ನೇಮಕಾತಿ ಹಿಂಪಡೆಯಲಾಗುವುದು' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸುದ್ದಿ 2 ನಿಮಿಷ

### ಪೆರೋಲ್ ಮಂಜೂರು ಪ್ರಕ್ರಿಯೆ ಡಿಜಿಟಲೀಕರಣಕ್ಕೆ ಆದೇಶ

**ಬೆಂಗಳೂರು:** 'ಕೈದಿಗಳಿಗೆ ಪೆರೋಲ್ ಮಂಜೂರು ಮಾಡುವ ಪ್ರಕ್ರಿಯೆಯನ್ನು ಡಿಜಿಟಲೀಕರಣಗೊಳಿಸಿ' ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

ಅತ್ಯಾಚಾರ ಪ್ರಕರಣದಲ್ಲಿ ಶಿಕ್ಷೆಗೆ ಒಳಗಾಗಿರುವ ಅಪರಾಧಿಯೊಬ್ಬರ ತಾಯಿ, 'ನಮ್ಮ ಮನೆ ದುರಸ್ತಿ ಮಾಡಬೇಕಿದ್ದು, ಮಗನ ಸಹಾಯ ಬೇಕಿದೆ. ಅವನಿಗೆ 30 ದಿನಗಳ ಪೆರೋಲ್ ಮಂಜೂರು ಮಾಡಲು ನಿರ್ದೇಶಿಸಬೇಕು' ಎಂದು ಕೋರಿದ್ದ ಅರ್ಜಿ ಪುರಸ್ಕರಿಸಿರುವ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಅರ್ಜಿ ಸಲ್ಲಿಸುವ ಹಾಲಿ ಪ್ರಕ್ರಿಯೆಯ ಬದಲಿಗೆ, ಪೆರೋಲ್ ಅರ್ಜಿ ಸಲ್ಲಿಕೆಯಿಂದ ಹಿಡಿದು ಅದನ್ನು ಪರಿಶೀಲಿಸಿ ಮಂಜೂರು ಮಾಡುವವರೆಗಿನ ಒಟ್ಟಾರೆ ಪ್ರಕ್ರಿಯೆಯನ್ನು ಆನ್‌ಲೈನ್ ವ್ಯವಸ್ಥೆಗೆ ಪರಿವರ್ತಿಸುವ ಬಗ್ಗೆ ನಾಲ್ಕು ವಾರಗಳಲ್ಲಿ ವಿಸ್ತೃತ ಯೋಜನಾ ವರದಿ ಸಲ್ಲಿಸಿ' ಎಂದು ಮಾಹಿತಿ ತಂತ್ರಜ್ಞಾನ ವಿಭಾಗದ ಡಿಜಿಪಿಗೆ ನಿರ್ದೇಶಿಸಿದೆ.

'2021ರ ಪೆರೋಲ್ ನಿಯಮಾವಳಿಯಲ್ಲಿ ಕೆಲವು ದೋಷಗಳಿದ್ದು, ಅವುಗಳನ್ನೂ ಸರಿಪಡಿಸಬೇಕಿದೆ' ಎಂದು ನ್ಯಾಯಪೀಠ ಸೂಚಿಸಿದೆ.

'ಹಾಲಿ ವ್ಯವಸ್ಥೆಯಲ್ಲಿ ಯಾವುದೇ ಅಪರಾಧಿ ಪೆರೋಲ್ ಬೇಕೆಂದರೂ ಭೌತಿಕವಾಗಿ (ಮುಖತಃ) ಅರ್ಜಿ ಸಲ್ಲಿಸಬೇಕು ಮತ್ತು ಅರ್ಜಿಯ ಫಾಲೋ ಅಪ್ ಮಾಡಬೇಕಿದೆ. ಇನ್ನೂ ಈ ಹಳೆಯ ಪದ್ಧತಿಯನ್ನೇ ಮುಂದುವರಿಸುವುದು ಸೂಕ್ತವಲ್ಲ. ಹಾಗಾಗಿ, ಇನ್ನು ಮುಂದೆ ಪೆರೋಲ್ ಅರ್ಜಿ ಸಲ್ಲಿಸಲು ಆನ್ ಲೈನ್ ನಲ್ಲಿಯೂ ಅವಕಾಶ ಕಲ್ಪಿಸಬೇಕು' ಎಂದು ನ್ಯಾಯಪೀಠ ತಾಕೀತು ಮಾಡಿದೆ.

### ದೇವೇಗೌಡರ ಆರೋಗ್ಯ ವಿಚಾರಿಸಿದ ಚಾರುಶ್ರೀ



**ಬೆಂಗಳೂರು:** ಶ್ರವಣಬೆಳಗೊಳ ಮಠದ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಅವರು ಶನಿವಾರ ರಾಜ್ಯಸಭಾ ಸದಸ್ಯ ಎಚ್.ಡಿ.ದೇವೇಗೌಡ ಅವರನ್ನು ಭೇಟಿ ಮಾಡಿ, ಆರೋಗ್ಯ ವಿಚಾರಿಸಿ ಬೇಗ ಗುಣಮುಖರಾಗುವಂತೆ ಹಾರೈಸಿದರು.

ದೇವರ ಪ್ರಸಾದ, ಶ್ರೀಮಠದ ಫಲ ತಾಂಬೂಲ, ಪುಷ್ಪಮಾಲೆಯೊಂದಿಗೆ ಪದ್ಮನಾಭನಗರದಲ್ಲಿರುವ ಅವರ ಮನೆಗೆ ತೆರಳಿದ ಸ್ವಾಮೀಜಿ, ದೇವೇಗೌಡರ ಹಣೆ ಹಾಗೂ ತಲೆಗೆ ಗಂಧೋದಕ ಹಚ್ಚಿದರು.

ಜಿನೈಕ್ಯರಾದ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಅವರ ಕೊಡುಗೆ, ಬಾಂಧವ್ಯವನ್ನು ಗೌಡರು ಸ್ಮರಿಸಿದರು.

ಜ್ವರ, ಮೂತ್ರ ಸೋಂಕಿನ ಹಿನ್ನೆಲೆಯಲ್ಲಿ ಮಣಿಪಾಲ್ ಆಸ್ಪತ್ರೆಗೆ ದಾಖಲಾಗಿದ್ದ ಗೌಡರು, ಕೆಲ ದಿನಗಳ ಹಿಂದೆ ಆಸ್ಪತ್ರೆಯಿಂದ ಬಿಡುಗಡೆಯಾಗಿ ಮನೆಯಲ್ಲೇ ವಿಶ್ರಾಂತಿ ಪಡೆಯುತ್ತಿದ್ದಾರೆ.





'ಕೆನರಾ ಬ್ಯಾಂಕ್ ಮ್ಯಾರಥಾನ್ 2025' ರ ಮೂರನೇ ಆವೃತ್ತಿ ಅಂಗವಾಗಿ ಜರ್ಸಿಗಳನ್ನು ಬಿಡುಗಡೆ ಮಾಡಲಾಯಿತು

## ಮ್ಯಾರಥಾನ್: ಜರ್ಸಿ ಅನಾವರಣ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನವೆಂಬರ್ 23ರಂದು ನಡೆಯಲಿರುವ 'ಕೆನರಾ ಬ್ಯಾಂಕ್ ಮ್ಯಾರಥಾನ್ 2025'ರ ಮೂರನೇ ಆವೃತ್ತಿ ಅಂಗವಾಗಿ ಜರ್ಸಿಗಳನ್ನು ಬಿಡುಗಡೆ ಮಾಡಲಾಯಿತು.

3ಕೆ, 5ಕೆ ಮತ್ತು 10ಕೆ ಓಟಗಳನ್ನು ಹೊಂದಿದ್ದು, ಎಲ್ಲಾ ವಿಭಾಗಗಳಲ್ಲೂ ಭಾಗವಹಿಸಲು ಮುಕ್ತ ಪ್ರವೇಶವಿದೆ. ಈ ವರ್ಷ ಹತ್ತು ಸಾವಿರಕ್ಕೂ ಹೆಚ್ಚು ಜನರು ಭಾಗವಹಿಸುವ ನಿರೀಕ್ಷೆ ಇದೆ ಎಂದು ಬ್ಯಾಂಕ್ ವ್ಯವಸ್ಥಾಪಕ ನಿರ್ದೇಶಕ ಕೆ. ಸತ್ಯನಾರಾಯಣ ರಾಜು ಹೇಳಿದರು.

ಭಾಗವಹಿಸುವವರು ಕೆನರಾ ಬ್ಯಾಂಕ್ ವೆಬ್‌ಸೈಟ್ https://www.canarabankmarathon.com/ಗೆ ಭೇಟಿ ನೀಡುವ ಮೂಲಕ ನೋಂದಾಯಿಸಿಕೊಳ್ಳಬಹುದು. ಪ್ರತಿಭಾ 9591380816, pratibha.sg@veritasreputation.com ಸಂಪರ್ಕಿಸಬಹುದು.

## ವಿಶ್ವ ಒಕ್ಕಲಿಗರ ಮಹಾ ವೇದಿಕೆ ವತಿಯಿಂದ ಕಾರ್ಯಕ್ರಮ

# 'ನಮ್ಮ ಕೆಂಪೇಗೌಡ ಮೆಟ್ರೊ ಹೆಸರಿಡಿ'

ಪ್ರಜಾವಾಣಿ ವಾರ್ತೆ


**ಬೆಂಗಳೂರು:** 'ಹೆಸರಿನ ಹಿಂದೆ ಪರಂಪರೆ, ಅಸ್ಮಿತೆ ಮತ್ತು ಅಸ್ತಿತ್ವ ಇರುತ್ತದೆ. ಹಾಗಾಗಿ ನಮ್ಮ ಮೆಟ್ರೊಗೆ 'ನಮ್ಮ ಕೆಂಪೇಗೌಡ ಮೆಟ್ರೊ' ಎಂದು ಹೆಸರಿಡಬೇಕು' ಎಂದು ಶಿಕ್ಷಣ ತಜ್ಞ ಕೆ.ಇ. ರಾಧಾಕೃಷ್ಣ ಆಗ್ರಹಿಸಿದರು.

ನಮ್ಮ ಮೆಟ್ರೊಗೆ 'ನಾಡಪ್ರಭು ಕೆಂಪೇಗೌಡ ಮೆಟ್ರೊ' ಎಂದು ಮರುನಾಮಕರಣಕ್ಕೆ ಒತ್ತಾಯಿಸಿ ವಿಶ್ವ ಒಕ್ಕಲಿಗರ ಮಹಾ ವೇದಿಕೆ ಶನಿವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಕೆಂಪೇಗೌಡರು ಬೆಂಗಳೂರು ನಗರವನ್ನು ಮಾತ್ರ ಕಟ್ಟಿದ್ದಲ್ಲ. ಸುತ್ತಮುತ್ತಲಿನ ನೀರಿಲ್ಲದ ಪ್ರದೇಶಗಳಲ್ಲಿ ಕೆರೆ ಕಟ್ಟಿ ಕೃಷಿ ಭೂಮಿಯನ್ನಾಗಿ ಮಾಡಿದ್ದರು. ಕೃತಜ್ಞಾ ಪೂರ್ವಕವಾಗಿ ಅವರ ಹೆಸರನ್ನು ಮೆಟ್ರೊಗೆ ಇಡಬೇಕು' ಎಂದು ಹೇಳಿದರು.

'ಬಸವಣ್ಣ ಅವರ ವಿಚಾರಧಾರೆ ದೇಶಕ್ಕೆ ಅನ್ವಯವಾಗುವಂಥದ್ದು. ಅವರನ್ನು ರಾಜ್ಯಕ್ಕೆ ಸೀಮಿತಗೊಳಿಸದೇ ದೇಶಕ್ಕೆ ಅನ್ವಯವಾಗುವ ಯೋಜನೆಗೆ ಅವರ ಹೆಸರು ಇಡಬೇಕು' ಎಂದು ಸಲಹೆ ನೀಡಿದರು.

'ಆಸ್ಪತ್ರೆಗೆ 'ವಿಕ್ಟೋರಿಯಾ' ಹೆಸರು ಇಟ್ಟಿರುವುದು ಸರಿಯಲ್ಲ. ವಿಕ್ಟೋರಿಯಾ ಸೇರಿದಂತೆ ಎಲ್ಲ ಇಂಗ್ಲಿಷರ ಹೆಸರನ್ನು ತೆಗೆಯಬೇಕು. ಜನಪರ ಆಡಳಿತ ನೀಡಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್, ಸಾಹಿತಿಗಳಾದ ಕುವೆಂಪು, ಬೇಂದ್ರೆ, ಕಾರಂತ, ಸಂಗೀತ ಕ್ಷೇತ್ರದ ಅದ್ವರ್ಯು ಇಬ್ರಾಹಿಂ ಆದಿಲ್ ಶಾ ಹೆಸರು ಇಡಬೇಕು' ಎಂದು ಹೇಳಿದರು.



ಸಭೆಯಲ್ಲಿ ವಿವೇಕ್ ಸುಬ್ಬಾರೆಡ್ಡಿ, ಕೆ.ಇ. ರಾಧಾಕೃಷ್ಣ ಚರ್ಚೆಯಲ್ಲಿ ತೊಡಗಿದ್ದರು. ಟಿ.ಕೋನಪ್ಪರೆಡ್ಡಿ, ಭಾರತಿ ಶಂಕರ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ವಿಶ್ವ ಒಕ್ಕಲಿಗರ ಸಂಘದ ಅಧ್ಯಕ್ಷ ವೈ.ಡಿ. ರವಿಶಂಕರ್ ಮಾತನಾಡಿ, 'ನಮ್ಮ ಮೆಟ್ರೊಗೆ ನಾಡಪ್ರಭು ಕೆಂಪೇಗೌಡರ ಹೆಸರು ಇಡಲು ಸರ್ಕಾರ ಮುಕ್ತವಾಗಿದೆ ಎಂದು 10 ವರ್ಷಗಳ ಹಿಂದೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದರು. ಈಗ ಬಸವಣ್ಣನ ಹೆಸರಿಡುವ ಬಗ್ಗೆ ಹೇಳಿದ್ದಾರೆ. ಹಿಂದೆ ಹೇಳಿರುವುದನ್ನು ನೆನಪಿಟ್ಟುಕೊಂಡು ಕೆಂಪೇಗೌಡರ ಹೆಸರನ್ನು 'ಇಡಬೇಕು' ಎಂದು ಆಗ್ರಹಿಸಿದರು.

ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ ಮಾತನಾಡಿ, 'ಕೆಂಪೇಗೌಡರು ಒಕ್ಕಲಿಗರಿಗಷ್ಟೇ ಸೇರಿದವರಲ್ಲ. ಮೆಟ್ರೊಗೆ ಅವರ ಹೆಸರು ಇಡಲು ಎಲ್ಲ ಸಮುದಾಯದವರು ಹೋರಾಟ ಮಾಡಬೇಕು' ಎಂದು ಹೇಳಿದರು. ರಾಜ್ಯ ಒಕ್ಕಲಿಗರ ಸಂಘದ ಪ್ರಧಾನ ಕಾರ್ಯದರ್ಶಿ ಟಿ. ಕೋನಪ್ಪರೆಡ್ಡಿ, ವಿಶ್ವ ಒಕ್ಕಲಿಗರ ಮಹಿಳಾ ವೇದಿಕೆ ಅಧ್ಯಕ್ಷೆ ಭಾರತಿ ಶಂಕರ್ ಉಪಸ್ಥಿತರಿದ್ದರು.

## ಸಾಕ್ಷಿ ದೂರುದಾರನ ವಿಚಾರಣೆ

**ಮಂಗಳೂರು:** ಧರ್ಮಸ್ಥಳ ಗ್ರಾಮದಲ್ಲಿ ನಡೆದಿದೆ ಎನ್ನಲಾದ ಅಪರಾಧ ಕೃತ್ಯಗಳ ಮೃತದೇಹಗಳನ್ನು ಹೂತು ಹಾಕಲಾಗಿದೆ ಎಂದು ಆರೋಪಿಸಲಾದ ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡದ ಅಧಿಕಾರಿಗಳು, ನ್ಯಾಯಾಲಯದ ಅನುಮತಿ ಪಡೆದು ಪ್ರಕರಣದ ಸಾಕ್ಷಿ ದೂರುದಾರನನ್ನು ಶಿವಮೊಗ್ಗದ ಜೈಲಿನಲ್ಲಿ ವಿಚಾರಣೆ ನಡೆಸಿದ್ದಾರೆ.

ಪ್ರಕರಣದ ತನಿಖಾಧಿಕಾರಿ ಜಿತೇಂದ್ರ ಕುಮಾರ್ ದಯಾಮ ನೇತೃತ್ವದಲ್ಲಿ ಎಸ್‌ಐಟಿ ಅಧಿಕಾರಿಗಳು ಎರಡು ದಿನಗಳ ಕಾಲ ಶಿವಮೊಗ್ಗದಲ್ಲೇ ಉಳಿದುಕೊಂಡು ಸಾಕ್ಷಿ ದೂರುದಾರನನ್ನು ವಿಚಾರಣೆಗೆ ಒಳಪಡಿಸಿದ್ದಾರೆ. ಈ ವೇಳೆ ನ್ಯಾಯಾಲಯದ ಸೂಚನೆಯನ್ನು ಕಟ್ಟುನಿಟ್ಟಾಗಿ ಪಾಲಿಸಲಾಗಿದೆ ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.





ಕೆ.ಆರ್.ಪುರದ ವೆಂಕಟೇಶ್ವರ ಕಾಲೇಜಿನಲ್ಲಿ ಯೂತ್ ರೆಡ್ ಕ್ರಾಸ್, ರಾಷ್ಟ್ರೀಯ ಸೇವಾ ಯೋಜನಾ ಘಟಕ ಹಾಗೂ ನಾರಾಯಣ ಹೃದಯಾಲಯ ರಕ್ತನಿಧಿ ಕೇಂದ್ರ ಸಂಯುಕ್ತಾಶ್ರಯದಲ್ಲಿ ಶನಿವಾರ ಆಯೋಜಿಸಿದ್ದ ರಕ್ತದಾನ ಶಿಬಿರಕ್ಕೆ ಡಾ.ಸಿಯೋನ ಚಾಲನೆ ನೀಡಿದರು. ಡಾ.ಕೆ.ವಿ.ಮುನಿಸ್ವಾಮಿ, ಕಾಲೇಜಿನ ವ್ಯವಸ್ಥಾಪಕ ನಿರ್ದೇಶಕ ರವಿ ವಿ.ಎಂ., ಪ್ರಾಂಶುಪಾಲ ಸತ್ಯಶೀಲನ್ ನಾಯರ್, ಜಿ.ಇ.ಪ್ರಕಾಶ್, ಎನ್‌ಎಸ್‌ಎಸ್ ಅಧಿಕಾರಿ ಚಂದ್ರಯ್ಯ, ರಮೇಶ್, ಮಂಜುನಾಥ್, ನಾಗಾರ್ಜುನ ಉಪಸ್ಥಿತರಿದ್ದರು

## 'ನೀರುಗಂಟಿ ಆತ್ಮಹತ್ಯೆ: ₹50 ಲಕ್ಷ ಪರಿಹಾರ ನೀಡಿ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಚಾಮರಾಜನಗರ ಜಿಲ್ಲೆಯ ಗ್ರಾಮ ಪಂಚಾಯಿತಿ ನೀರುಗಂಟಿ ಚಿಕ್ಕೂಸ ನಾಯಕ ಆತ್ಮಹತ್ಯೆ ಸೇರಿ ರಾಜ್ಯದಲ್ಲಿ ನಡೆಯುತ್ತಿರುವ ಕಾರ್ಮಿಕರ ಸರಣಿ ಆತ್ಮಹತ್ಯೆಗಳ ಕುರಿತು ಕಳವಳ ವ್ಯಕ್ತಪಡಿಸಿರುವ ಆಲ್ ಇಂಡಿಯಾ ಯುನೈಟೆಡ್ ಟ್ರೇಡ್ ಯೂನಿಯನ್ ಸೆಂಟರ್ (ಎಐಯುಟಿಯುಸಿ), ಸರ್ಕಾರದ ಹೊಣೆಗೇಡಿತನವನ್ನು ಖಂಡಿಸಿದೆ.

ಈ ಬಗ್ಗೆ ಹೇಳಿಕೆ ನೀಡಿರುವ ಎಐಯುಟಿಯುಸಿ ಕಾರ್ಯದರ್ಶಿ ಕೆ.ಸೋಮಶೇಖರ್ ಯಾದಗಿರಿ, 'ಮೃತರ ಕುಟುಂಬಕ್ಕೆ ಕೂಡಲೇ ₹50 ಲಕ್ಷ ನೆರವು ಹಾಗೂ ಅವರ ಕುಟುಂಬದ ಒಬ್ಬ ಸದಸ್ಯರಿಗೆ ಸರ್ಕಾರಿ ನೌಕರಿ ನೀಡಬೇಕು. ಮೃತರಿಗೆ ಬಾಕಿ ಇರುವ 27 ತಿಂಗಳ ವೇತನವನ್ನು ತಕ್ಷಣವೇ ಅವರ ಕುಟುಂಬಕ್ಕೆ ಪಾವತಿಸಬೇಕು' ಎಂದು ಆಗ್ರಹಿಸಿದ್ದಾರೆ.

## ರೋಬೋಟಿಕ್ಸ್ ಒಲಿಂಪಿಕ್ಸ್‌ಗೆ ಐವರು ವಿದ್ಯಾರ್ಥಿಗಳು

**ಬೆಂಗಳೂರು:** ಮಲ್ಲೇಶ್ವರದ ಸರ್ಕಾರಿ ಪ್ರೌಢಶಾಲೆ ಸೇರಿದಂತೆ ಬೆಂಗಳೂರಿನ ಐವರು ಪ್ರತಿಭಾವಂತ ವಿದ್ಯಾರ್ಥಿಗಳು ಪನಾಮಾದಲ್ಲಿ ನಡೆಯಲಿರುವ ರೋಬೋಟಿಕ್ಸ್ ಒಲಿಂಪಿಕ್ಸ್‌ನಲ್ಲಿ ಭಾರತವನ್ನು ಪ್ರತಿನಿಧಿಸಲಿದ್ದಾರೆ.

ನಿಂಗರಾಜ್, ಎಂ.ಪರಶುರಾಮ್, ಅರ್ಜುನ ಕೆ. ರಾಜ್, ಕೆ. ಗೌರೇಶ ಮಲ್ಲೇಶ್ವರ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿಗಳು. ಜಿ.ಎನ್. ಚಂದನ್‌ರಾಜ್ ಎವಿಡಿ ಪ್ರೌಢಶಾಲೆ ವಿದ್ಯಾರ್ಥಿ.

180ಕ್ಕೂ ಹೆಚ್ಚು ರಾಷ್ಟ್ರಗಳು ಭಾಗವಹಿಸುವ ವೇದಿಕೆಯಲ್ಲಿ ಭಾರತವನ್ನು ಬೆಂಗಳೂರಿನ ವಿದ್ಯಾರ್ಥಿಗಳು ಪ್ರತಿನಿಧಿಸುತ್ತಿದ್ದು, ಇವರೆಲ್ಲರೂ ಮಲ್ಲೇಶ್ವರದ ಅಟಲ್ ಟಿಂಕರಿಂಗ್ ಲ್ಯಾಬ್‌ನಿಂದ ಆಯ್ಕೆಯಾಗಿ, ಅಮೆಜಾನ್ ಫ್ಯೂಚರ್ ಎಂಜಿನಿಯರ್ ಮೇಕರ್ಸ್‌ಪೇಸ್‌ನಲ್ಲಿ ತರಬೇತಿ ಪಡೆದಿದ್ದಾರೆ.

ಮಲ್ಲೇಶ್ವರಂ ಶಾಸಕ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರು ಶನಿವಾರ ಬೆಂಗಳೂರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಧ್ವಜಾರೋಹಣದ ಮೂಲಕ ತಂಡದ ಪ್ರಯಾಣಕ್ಕೆ ಹಸಿರು ನಿಶಾನೆ ತೋರಿದರು.

## ಸಮೀಕ್ಷೆ: ಇಂದು ಕೊನೆ

ಒಂದನೇ ಪುಟದಿಂದ...

ಜಿಬಿಎ ವ್ಯಾಪ್ತಿ ಬಿಟ್ಟು ರಾಜ್ಯದಾದ್ಯಂತ ಸೆ. 22ರಂದು ಈ ಸಮೀಕ್ಷೆ ಆರಂಭಗೊಂಡಿತ್ತು. ಅ.7ಕ್ಕೇ ಮುಗಿಯಬೇಕಿತ್ತು. ಸಮೀಕ್ಷೆಯ ಒಟ್ಟು ಸ್ಥಿತಿಗತಿ ಕುರಿತಂತೆ ಅಧಿಕಾರಿಗಳ ಜೊತೆ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಅವರು ಅ. 7ರಂದು ಸಭೆ ನಡೆಸಿದ್ದರು. ಸಮೀಕ್ಷಕರಾಗಿರುವ ಶಿಕ್ಷಕರಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಸರ್ಕಾರಿ, ಅನುದಾನಿತ ಶಾಲೆಗಳಿಗೆ ನೀಡಲಾಗಿದ್ದ ದಸರಾ ರಜೆಯನ್ನು ಅ. 18ರವರೆಗೆ ವಿಸ್ತರಿಸಲಾಗಿತ್ತು.

| ಜಿಬಿಎ ವ್ಯಾಪ್ತಿಯಲ್ಲಿ ಸಮೀಕ್ಷೆಯ ಪ್ರಗತಿ | |
| --- | --- |
| ಒಟ್ಟು ಮನೆಗಳ ಗುರಿ | 39,82,335 |
| ಮನೆಗಳ ಸಮೀಕ್ಷೆ ಅ. 18ರ ಪ್ರಗತಿ | 58,672 |
| ಒಟ್ಟು ಮನೆಗಳ ಸಮೀಕ್ಷೆ (ಈವರೆಗೆ) | 17,84,312 |
| ಸಮೀಕ್ಷೆಗೆ ಒಳಗಾದ ಒಟ್ಟು ಜನಸಂಖ್ಯೆ | 55,17,989 |
| ಶೇಕಡಾವಾರು ಪ್ರಗತಿ | 39.76 |

### 'ಅವೈಜ್ಞಾನಿಕ ವಿಧಾನದ ಸಮೀಕ್ಷೆ'

**ಕಾರವಾರ:** 'ಸಾಮಾಜಿಕ ಮತ್ತು ಆರ್ಥಿಕ ಸಮೀಕ್ಷೆ ಮಾಡುವ ಪ್ರಕ್ರಿಯೆ ಅವೈಜ್ಞಾನಿಕವಾಗಿದ್ದು, ಅದರ ನಿರ್ವಹಣೆ ಸಿಬ್ಬಂದಿಗೆ ಕಷ್ಟಕರವಾಗಿದೆ. ಇಬ್ಬರು ಅಥವಾ ಮೂವರು ಅಧಿಕಾರಿಗಳು ಮಾಡಿದ ಎಡವಟ್ಟಿನಿಂದ ಈ ಸಮಸ್ಯೆ ಉಂಟಾಗಿದೆ' ಎಂದು ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯ ಘಟಕದ ಅಧ್ಯಕ್ಷ ಸಿ.ಎಸ್.ಷಡಕ್ಷರಿ ಹೇಳಿದರು.

'ಸಮೀಕ್ಷೆಗೆ 60 ಪ್ರಶ್ನೆಗಳು ಅಗತ್ಯವಿದ್ದವೆ? ಪ್ರತಿ ಮನೆಯಲ್ಲಿ ಇಬ್ಬರು–ಮೂವರು ಸದಸ್ಯರಿಂದ ಒಟಿಪಿ ಪಡೆಯುವುದು, ಸಮೀಕ್ಷೆಗೆ ಮೂರು ಬಾರಿ ಮನೆ ಮನೆಗಳಿಗೆ ಭೇಟಿ ನೀಡುವಂತಹ ಸಮೀಕ್ಷೆಗೆ ಯೋಜನೆ ರೂಪಿಸಿದ್ದು ಸರಿಯಲ್ಲ' ಎಂದು ಅವರು ಶನಿವಾರ ಸುದ್ದಿಗಾರರಿಗೆ ತಿಳಿಸಿದರು. 'ಕಳೆದ 20 ದಿನಗಳಿಂದ ಆಡಳಿತ ಸ್ತಬ್ಧಗೊಂಡಿದೆ. ಸಿಬ್ಬಂದಿಗೆ ಸಮೀಕ್ಷೆ ಮಾಹಿತಿ ಕ್ರೋಢೀಕರಿಸುವುದೇ ಕೆಲಸವಾಗಿದೆ. ತಜ್ಞರನ್ನು ನೇಮಿಸಿಕೊಂಡು ಅವರ ಸಲಹೆ ಆಧರಿಸಿ ಸಮೀಕ್ಷೆ ನಡೆಸಿದ್ದರೆ ಇಂತಹ ಸಮಸ್ಯೆ ಬರುತ್ತಿರಲಿಲ್ಲ' ಎಂದರು.





ಬಿಎಂಎಸ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ನಡೆದ ರಾಷ್ಟ್ರೀಯ ಕಾರ್ಯಾಗಾರದಲ್ಲಿ ಭಾಗವಹಿಸಿದ್ದ ಅತಿಥಿಗಳು

## ಬಿಎಂಎಸ್‌ನಲ್ಲಿ ರಾಷ್ಟ್ರೀಯ ಕಾರ್ಯಾಗಾರ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬಿಎಂಎಸ್ ಎಂಜಿನಿಯರಿಂಗ್ ಕಾಲೇಜಿನ ನಿರ್ವಹಣಾ ಅಧ್ಯಯನ ವಿಭಾಗ ವತಿಯಿಂದ 'ಸಿದ್ಧಾಂತದಿಂದ ಆಚರಣೆ: ಪ್ರವೇಶಿಸಬಹುದಾದ ಎಐ ಮತ್ತು ಡೇಟಾ ಸೈನ್ಸ್ ಅಪ್ಲಿಕೇಶನ್‌ಗಳು' ಕುರಿತು ಮೂರು ದಿನಗಳ ರಾಷ್ಟ್ರೀಯ ಕಾರ್ಯಾಗಾರ ಹಮ್ಮಿಕೊಳ್ಳಲಾಯಿತು.

ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿಯ (ಎಐಸಿಟಿಇ) ಭಾರತೀಯ ಭಾಷೆಗಳ ಪ್ರಗತಿ ಮತ್ತು ಪೋಷಣೆಗಾಗಿ ರೋಮಾಂಚಕ ವಕಾಲತ್ತು (ವಿಎಎನ್‌ಐ) ಉಪಕ್ರಮದಡಿ ಈ ಕಾರ್ಯಾಗಾರ ಹಮ್ಮಿಕೊಳ್ಳಲಾಯಿತು.

ಕೃತಕ ಬುದ್ಧಿಮತ್ತೆ ಮತ್ತು ದತ್ತಾಂಶ ವಿಜ್ಞಾನ ಕ್ಷೇತ್ರಗಳ ತತ್ವಗಳನ್ನು ಸುಲಭವಾಗಿ ಅರ್ಥಮಾಡಿಕೊಳ್ಳುವಂತೆ ಮಾಡುವುದು. ನೈಜ ಜೀವನದ ಸಮಸ್ಯೆಗಳಿಗೆ ಎಐ ತಂತ್ರಜ್ಞಾನವನ್ನು ಅನ್ವಯಿಸುವ ಪ್ರಾಯೋಗಿಕ ಅನುಭವ ನೀಡುವುದು ಈ ಕಾರ್ಯಾಗಾರದ ಉದ್ದೇಶವಾಗಿತ್ತು.

ಪ್ರಾಂಶುಪಾಲ ಭೀಮಶಾ ಆರ್ಯ ಮಾತನಾಡಿ, 'ನವೀನ ತಂತ್ರಜ್ಞಾನ ಮತ್ತು ಸಂಶೋಧನಾ ಅಭಿರುಚಿಗಳನ್ನು ಬೆಳೆಸುವಲ್ಲಿ ಇಂತಹ ಕಾರ್ಯಾಗಾರಗಳು ಪ್ರಮುಖ ಪಾತ್ರ ವಹಿಸುತ್ತವೆ' ಎಂದು ತಿಳಿಸಿದರು.

ಆಯೋಜಕರಾದ ಮಿನು ಜಕಾರಿಯಾ, ಪ್ರಾಧ್ಯಾಪಕಿ ಪ್ರತಿಮಾ ಭಟ್, ಎ. ಸತ್ಯ ನಂದಿನಿ, ಉಪ ಪ್ರಾಂಶುಪಾಲ ಎಲ್. ರವಿಕುಮಾರ್, ಆಡಳಿತ ಉಪಪ್ರಾಂಶುಪಾಲ ಶೇಷಚಲಂ ಡಿ. ಕಾರ್ಯಕ್ರಮ ನಡೆಸಿಕೊಟ್ಟರು.

ಮುಖ್ಯ ಸಂಪನ್ಮೂಲ ವ್ಯಕ್ತಿಗಳಾಗಿ ನಾಗೇಂದ್ರ ಎಸ್., ಸಿ.ಎನ್.ಬಿ. ರಾಜೇಶ್, ಮನಮೋಹನ್, ವಿಂಧ್ಯಾಶ್ರೀ, ಧನುಷ್ ಶಿವದಾಸ್, ಪಿಯೂಷ್ ಭಾಗವಹಿಸಿದ್ದರು.



## ನಗರದಲ್ಲಿ ಇಂದು

**ಮಕ್ಕಳ ವಚನ ಮೇಳ:** ವಚನ ಗಾಯನ: ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಳಿಗ್ಗೆ 9.30

**ಚೀನಾ ಜನತಾ ಗಣರಾಜ್ಯದ 76ನೇ ವಾರ್ಷಿಕೋತ್ಸವ, ಭಾರತ ಮತ್ತು ಚೀನಾ ನಡುವಿನ ರಾಜತಾಂತ್ರಿಕ ಸಂಬಂಧಗಳ ಸ್ಥಾಪನೆಯ 75ನೇ ವಾರ್ಷಿಕೋತ್ಸವ, ಚೀನಾದ ಛಾಯಾಚಿತ್ರಗಳ ಪ್ರದರ್ಶನದ ಉದ್ಘಾಟನೆ:** ರಾಮಲಿಂಗಾರೆಡ್ಡಿ, ಅತಿಥಿಗಳು: ಕಿನ್ ಜೆಯಿ, ಪಿ.ಜಿ.ಆರ್. ಸಿಂಧ್ಯ, ಅಧ್ಯಕ್ಷತೆ: ಕೆ. ಶ್ರೀನಿವಾಸಗೌಡ, ಆಯೋಜನೆ: ಭಾರತ–ಚೀನಾ ಸ್ನೇಹ ಸಂಘ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10

**ಸಂಸ್ಥಾಪಕರ ದಿನ, ಮೂರನೇ ಬಯೋ ಕಂಟ್ರೋಲ್ ಎಕ್ಸ್‌ಪೊ–2025:** ಅತಿಥಿಗಳು: ಎಚ್.ಡಿ. ಕುಮಾರಸ್ವಾಮಿ, ಶೋಭಾ ಕರಂದ್ಲಾಜೆ, ಡಾ.ಸಿ.ಎನ್. ಮಂಜುನಾಥ್, ಆಯೋಜನೆ: ಐಸಿಎಆರ್–ನ್ಯಾಷನಲ್ ಬ್ಯೂರ್ ಆಫ್ ಅಗ್ರಿಕಲ್ಚರ್ ಇನ್‌ಸೆಕ್ಟ್ ರಿಸೋರ್ಸ್, ಸ್ಥಳ: ಐಸಿಎಆರ್–ಎನ್‌ಬಿಎಐಆರ್. ಯಲಹಂಕ ಆವರಣ, ಬೆಳಿಗ್ಗೆ 11


**ಉಚಿತ ಸಾಮೂಹಿಕ ವಿವಾಹ:** ಉದ್ಘಾಟನೆ: ಡಿ.ಕೆ. ಸುರೇಶ್, ಮಾಂಗಲ್ಯ ವಿತರಣೆ: ಹನುಮಂತರಾಯಪ್ಪ, ಅಧ್ಯಕ್ಷತೆ: ಕುಸುಮಾ ಎಚ್., ಕನ್ಯಾದಾನ: ಬಿ.ಆರ್. ನಂಜುಂಡಪ್ಪ, ಆಯೋಜನೆ: ಅರ್ಪಿತಾ ಸೇವಾ ಟ್ರಸ್ಟ್, ಸ್ಥಳ: ಮಂಜುಶ್ರೀ ಕಲ್ಯಾಣ ಮಂಟಪ, ಲಗ್ಗೆರೆ–ಕುರುಬರಹಳ್ಳಿ ರಸ್ತೆ, ಕೆಂಪೇಗೌಡ ಲೇಔಟ್, ಲಗ್ಗೆರೆ ಬ್ರಿಡ್ಜ್, ಬೆಳಿಗ್ಗೆ 11.30

**ಮಕ್ಕಳಿಗೆ ಬಹುಮಾನ ವಿತರಣೆ, ಬಾಲ ಪ್ರತಿಭಾವಳಿ:** ಅತಿಥಿಗಳು: ಎನ್. ದೇವರಾಜ, ಎಂ. ಮುನಿರಾಜು, ಲೋಕೇಶ್ ಕಾಯರ್ಗ, ನಂದಿ ಸುಬ್ರಮಣಿ, ಎಸ್.ಕೆ. ಅನಂತ, ಈ. ರಾಜಪ್ಪ, ಆಯೋಜನೆ: ಪರಂಪರಾ, ಸ್ಥಳ: ಅಕ್ಕ ಮಹಾದೇವಿ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಮಧ್ಯಾಹ್ನ 2ರಿಂದ

**ಕಲೋತ್ಸವ:** ಯಕ್ಷಗಾನ ಮುಖವರ್ಣಿಕೆ ಕಾರ್ಯಾಗಾರ: ತೆಂಕು ತಿಟ್ಟು ಸಂಪನ್ಮೂಲ ವ್ಯಕ್ತಿಗಳು: ಮೆಟ್ಟಿ ರಾಮಚಂದ್ರರಾವ್, ಗೋಪಾಲಕೃಷ್ಣ ಭಟ್, ನಿಡುವಾಜೆ, ಅಶ್ವತ್ ಕುಲಾಲ್ ಮಂಜನಾಡಿ, ಬಡಗು ತಿಟ್ಟು: ಶ್ರೀಧರ ಕಾಂಚನ್, ಸುರೇಶ ತಂತ್ರಾಡಿ, ಯಕ್ಷಗಾನ ಪೂರ್ವರಂಗ ಪ್ರದರ್ಶನ, ಯಕ್ಷಗಾನ ಸಮುದ್ರ ಮಥನ, ಸಭಾ ಕಾರ್ಯಕ್ರಮ: ತಲ್ಲೂರು ಶಿವರಾಮ ಶೆಟ್ಟಿ, ಡಿ.ವಿ. ವೆಂಕಟಾಚಲಪತಿ, ಕಂಟಪ್ಪ, ಆರ್. ಶ್ರೀಧರ್, ಆನಂದರಾಮ ಉಪಾಧ್ಯ, ಆಯೋಜನೆ: ಕರ್ನಾಟಕ ಕಲಾ ದರ್ಶಿನಿ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 11ರಿಂದ



**'ಮಕ್ಕಳ ಜಾತ್ರೆ' ಚಿಣ್ಣರ ಜಾಗೃತಿ ಮತ್ತು ಪ್ರಶಸ್ತಿ ಸಂಭ್ರಮದ:** ಉದ್ಘಾಟನೆ: ಮಧು ಬಂಗಾರಪ್ಪ, ಲಕ್ಷ್ಮಿ ಹೆಬ್ಬಾಳಕರ, ಎನ್.ಎ. ಹ್ಯಾರಿಸ್, ಅತಿಥಿಗಳು: ದಿನೇಶ್ ಗುಂಡೂರಾವ್, ಕೆ.ವಿ. ಪ್ರಭಾಕರ್, ಬಿ.ಆರ್, ನಾಯ್ಡು, ಆಯೋಜನೆ: ಪ್ರೆಸ್‌ಕ್ಲಬ್ ಆಫ್ ಬೆಂಗಳೂರು, ಬಾಲಭವನ, ಸ್ಥಳ: ಪ್ರೆಸ್‌ಕ್ಲಬ್ ಆಫ್ ಬೆಂಗಳೂರು, ಕಬ್ಬನ್ ಉದ್ಯಾನ, ಸಂಜೆ 4.30



**ಸಂಗೀತ ಕಛೇರಿ:** ಗಾಯನ: ವಿನಯ್ ಶರ್ವ, ಪಿಟೀಲು: ವೆಂಕಟೇಶ್ ಜಿ., ಮೃದಂಗ: ವಿನೋದ್ ಶ್ಯಾಮ್ ಆನೂರು, ಖಂಜೀರಾ: ಕಾರ್ತಿಕ್ ಆರ್., ಆಯೋಜನೆ: ಶ್ರೀ ತ್ಯಾಗರಾಜ ಗಾನ ಸಭಾ ಟ್ರಸ್ಟ್, ಸ್ಥಳ: ಬಾಲಮೋಹನ್ ವಿದ್ಯಾ ಮಂದಿರ, ರಾಜಾಜಿನಗರ, ಸಂಜೆ 5

**ಕೊರಟಿ ಶ್ರೀನಿವಾಸರಾವ್ ಅವರ ಜನ್ಮದಿನ:** ಭಾಗವಹಿಸುವವರು: ಜಿ. ಅಶ್ವಥನಾರಾಯಣ, ಅರಳುಮಲ್ಲಿಗೆ ಪಾರ್ಥಸಾರಥಿ, ಆನಂದರಾವ್ ಕೊರಟಿ, ಎಲ್. ವೆಂಕಟಪ್ಪ, ಶ್ರೀರಾಮೇಗೌಡ, ಆಯೋಜನೆ ಮತ್ತು ಸ್ಥಳ: ಉದಯಭಾನು ಕಲಾಸಂಘ, ಕೆಂಪೇಗೌಡನಗರ, ಸಂಜೆ 6

**'ಬೆರಳ್‌ಗೆ ಕೊರಳ್' ನಾಟಕ ಪ್ರದರ್ಶನ:** ನಿರ್ದೇಶನ: ರಾಘವೇಂದ್ರ ಎಸ್., ಆಯೋಜನೆ: ನವರಸಂ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

## ಬರ್ಲಿ ಸ್ಟ್ರೀಟ್‌ಗೆ ತಮ್ಮ ಹೆಸರು ಕ್ರಿಕೆಟಿಗ ಕಿರ್ಮಾನಿ ಮನವಿ

**ಬೆಂಗಳೂರು:** ಬರ್ಲಿ ಸ್ಟ್ರೀಟ್‌ಗೆ ತನ್ನ ಹೆಸರು ಇಡುವಂತೆ ಮಾಜಿ ಕ್ರಿಕೆಟಿಗ ಸೈಯದ್ ಕಿರ್ಮಾನಿ ಅವರು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್‌ಗೆ ಮನವಿ ಸಲ್ಲಿಸಿದ್ದಾರೆ.

'1971ರಿಂದ 1986ರವರೆಗೆ ಭಾರತೀಯ ಕ್ರಿಕೆಟಿಗನಾಗಿ ರಾಜ್ಯ ಮತ್ತು ದೇಶವನ್ನು ಪ್ರತಿನಿಧಿಸಿದ್ದೆ. ವಿಕೆಟ್ ಕೀಪರ್ ಆಗಿ ಒಂದೇ ಪಂದ್ಯದಲ್ಲಿ 6 ಆಟಗಾರರನ್ನು ಔಟ್ ಮಾಡಿದ ದಾಖಲೆ ನನ್ನ ಹೆಸರಲ್ಲಿದೆ. ಅದೇ ರೀತಿ ವಿಶ್ವಕಪ್‌ನಲ್ಲಿ ಐದು ಆಟಗಾರರನ್ನು ಔಟ್ ಮಾಡಿದ ದಾಖಲೆಯೂ ನನ್ನದಾಗಿದೆ. 1983ರ ವಿಶ್ವಕಪ್ ಗೆದ್ದ ತಂಡದ ಸದಸ್ಯನಾಗಿ ಅತ್ಯುತ್ತಮ ವಿಕೆಟ್ ಕೀಪರ್ ಪ್ರಶಸ್ತಿ ಪಡೆದಿದ್ದೆ. ಪದ್ಮಶ್ರೀ, ಅರ್ಜುನ ಪ್ರಶಸ್ತಿ, ಏಕಲವ್ಯ ಪ್ರಶಸ್ತಿ ಸಹಿತ ಅನೇಕ ಪ್ರಶಸ್ತಿಗಳು ಸಂದಿವೆ' ಎಂದು ಅವರು ಮನವಿಯಲ್ಲಿ ತಿಳಿಸಿದ್ದಾರೆ.

'ಕರ್ನಾಟಕದ ಹೆಮ್ಮೆಯ ಆಟಗಾರರಾದ ಜಿ.ಆರ್. ವಿಶ್ವನಾಥ್, ಇ.ಎ.ಎಸ್. ಪ್ರಸನ್ನ, ಅನಿಲ್ ಕುಂಬ್ಳೆ ಹೆಸರುಗಳನ್ನು ನಗರದ ವೃತ್ತಗಳಿಗೆ, ಬೀದಿಗಳಿಗೆ ಇಡುವ ಮೂಲಕ ಅವರ ಸಾಧನೆಗಳು ಶಾಶ್ವತವಾಗಿರುವಂತೆ ಮಾಡಲಾಗಿದೆ. ಅದೇ ರೀತಿ ನನ್ನ ಹೆಸರನ್ನು ಕೂಡಾ ಬರ್ಲಿ ಸ್ಟ್ರೀಟ್‌ಗೆ ಇಡಬೇಕು' ಎಂದು ಕೇಳಿಕೊಂಡಿದ್ದಾರೆ.

ಕಿರ್ಮಾನಿಯವರ ಹೆಸರನ್ನು ಸ್ಟ್ರೀಟ್‌ಗೆ ಇಡಲು 2018ರಲ್ಲಿಯೇ ಬಿಬಿಎಂಪಿ ನಿರ್ಣಯ ಕೈಗೊಂಡಿತ್ತು. ಆದರೆ, ಅನುಷ್ಠಾನಕ್ಕೆ ಬಂದಿರಲಿಲ್ಲ.

# 'ಆರೋಪಿಗೆ ಶಿಕ್ಷೆ ಕೊಡಿಸಿ, ಇಲ್ಲವೇ ನಮಗೆ ಒಪ್ಪಿಸಿ'

## ವಿದ್ಯಾರ್ಥಿನಿ ಯಾಮಿನಿ ಪ್ರಿಯಾ ಕೊಲೆ ಪ್ರಕರಣ: ಶ್ರೀರಾಂಪುರ ಠಾಣೆಯ ಎದುರು ಕುಟುಂಬಸ್ಥರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಪ್ರೀತಿಸಲು ನಿರಾಕರಿಸಿದ ಕಾರಣಕ್ಕೆ ವಿದ್ಯಾರ್ಥಿನಿ ಯಾಮಿನಿ ಪ್ರಿಯಾ ಅವರ ಮುಖಕ್ಕೆ ಖಾರದ ಪುಡಿ ಎರಚಿ ಚಾಕುವಿನಿಂದ ಕತ್ತು ಕೊಯ್ದು ಕೊಲೆ ಮಾಡಿದ್ದ ಆರೋಪಿ ವಿಘ್ನೇಶ್ (28) ಹಾಗೂ ಆತನಿಗೆ ನೆರವು ನೀಡಿದ್ದ ಹರೀಶ್‌ಗೆ(36) ಕಠಿಣ ಶಿಕ್ಷೆ ವಿಧಿಸಬೇಕು' ಎಂದು ಆಗ್ರಹಿಸಿ, ಯಾಮಿನಿ ಪ್ರಿಯಾ ಅವರ ಸಂಬಂಧಿಕರು, ಕುಟುಂಬಸ್ಥರು ಹಾಗೂ ಸ್ಥಳೀಯರು ಶ್ರೀರಾಂಪುರ ಪೊಲೀಸ್ ಠಾಣೆಯ ಎದುರು ಶನಿವಾರ ಪ್ರತಿಭಟನೆ ನಡೆಸಿದರು.

'ಕಾನೂನು ಪ್ರಕಾರ ಆರೋಪಿಗಳಿಗೆ ಕಠಿಣ ಶಿಕ್ಷೆ ಆಗಬೇಕು. ಇಲ್ಲವೇ ತಮಗೆ ಒಪ್ಪಿಸಿ, ನಾವೇ ಆರೋಪಿಗಳಿಗೆ ಶಿಕ್ಷೆ ನೀಡುತ್ತೇವೆ' ಎಂದು ಪ್ರತಿಭಟನಾಕಾರರು ಹೇಳಿದರು.

'ನಗರದ ಅತ್ಯಂತ ಜನದಟ್ಟಣೆಯ ಪ್ರದೇಶದಲ್ಲೇ ಆರೋಪಿ ಚಾಕು ಹಿಡಿದು ಬಂದು ಕೊಲೆ ಮಾಡಿ ಪರಾರಿಯಾಗಿದ್ದ, ಪೊಲೀಸರೆಂದರೆ ಭಯವೇ ಇಲ್ಲದಾಗಿದೆ' ಎಂದು ಸ್ಥಳೀಯರು ಆಕ್ರೋಶ ಹೊರಹಾಕಿದರು.

**ಪೊಲೀಸರ ನಿರ್ಲಕ್ಷ್ಯದಿಂದಲೇ ಕೊಲೆ:** 'ಯಾಮಿನಿ ಪ್ರಿಯಾ ಅವರನ್ನು ಆರೋಪಿ ಪದೇ ಪದೇ ಅಡ್ಡಗಟ್ಟಿ ಪ್ರೀತಿಸುವಂತೆ ಪೀಡಿಸುತ್ತಿದ್ದ. ಈ ಹಿಂದೆ ಬಲವಂತದಿಂದ ತಾಳಿ ಕಟ್ಟಿದ್ದ. ಘಟನೆಯ ಬಳಿಕ, ಆರೋಪಿ ವಿಘ್ನೇಶ್ ವಿರುದ್ಧ ಯಾಮಿನಿ ಅವರು ಪೊಲೀಸರಿಗೆ ದೂರು ನೀಡಿದ್ದರು. ಆದರೆ, ಪೊಲೀಸರು ಆರೋಪಿಯನ್ನು ಠಾಣೆಗೆ ಕರೆಸಿ ಮುಚ್ಚಳಿಕೆ ಬರೆಸಿಕೊಂಡು ಎಚ್ಚರಿಕೆಯನ್ನಷ್ಟೇ ನೀಡಿ ಕಳುಹಿಸಿದ್ದರು. ದೂರು ನೀಡಿದ ದಿನವೇ ಆರೋಪಿಯನ್ನು ಬಂಧಿಸಿ ಜೈಲಿಗೆ ಕಳುಹಿಸಬೇಕಿತ್ತು. ಪೊಲೀಸರ ನಿರ್ಲಕ್ಷ್ಯ ವಹಿಸಿದ ಕಾರಣದಿಂದಲೇ ಕೊಲೆ ನಡೆದಿದೆ' ಎಂದು ಸ್ಥಳೀಯರು ದೂರಿದರು. ಪ್ರಿಯಾ ಅವರ ಪೋಷಕರು ಮಗಳನ್ನು ನೆನಪು ಮಾಡಿಕೊಂಡು ಕಣ್ಣೀರು ಹಾಕಿದರು.

ಶ್ರೀರಾಂಪುರ ಬಳಿಯ ಸ್ವತಂತ್ರಪಾಳ್ಯದ ವಿಘ್ನೇಶ್, ತನ್ನ ಪರಿಚಯವಿದ್ದ ಯಾಮಿನಿ ಪ್ರಿಯಾ ಅವರನ್ನು ಪ್ರೀತಿಸುವಂತೆ ಒತ್ತಾಯಿಸುತ್ತಿದ್ದ. ವಿದ್ಯಾರ್ಥಿನಿ ನಿರಾಕರಿಸಿದ್ದರು. ಗುರುವಾರ ಸಂಜೆ ಕಾಲೇಜು ಮುಗಿಸಿಕೊಂಡು ಮನೆಗೆ ಬರುತ್ತಿದ್ದ ವೇಳೆ ಅಡ್ಡಗಟ್ಟಿ ಕೊಲೆ ಮಾಡಿ ಪರಾರಿಯಾಗಿದ್ದ. ಸೋಲದೇವನಹಳ್ಳಿ ಬಳಿ ಆರೋಪಿಗಳನ್ನು ಶ್ರೀರಾಂಪುರ ಠಾಣೆಯ ಪೊಲೀಸರು ಬಂಧಿಸಿದ್ದರು.

### ಮುಖ್ಯಾಂಶಗಳು

- ಪೊಲೀಸರ ನಿರ್ಲಕ್ಷ್ಯದಿಂದ ಯಾಮಿನಿ ಕೊಲೆ: ಸ್ಥಳೀಯರ ಆರೋಪ
- ಪೊಲೀಸರ ವಿರುದ್ಧ ಆಕ್ರೋಶ
- ಮಗಳನ್ನು ನೆನಪು ಮಾಡಿಕೊಂಡು ಕಣ್ಣೀರಿಟ್ಟ ಪೋಷಕರು

## ಕೊಲೆ, ಅತ್ಯಾಚಾರ ಖಂಡಿಸಿ ಪ್ರತಿಭಟನೆ

**ಬೆಂಗಳೂರು:** ನಗರದ ಮಂತ್ರಿ ಮಾಲ್ ಬಳಿ ವಿದ್ಯಾರ್ಥಿನಿಯ ಕೊಲೆ ಹಾಗೂ ಎಂಜಿನಿಯರಿಂಗ್ ಕಾಲೇಜಿನಲ್ಲಿ ವಿದ್ಯಾರ್ಥಿನಿಯ ಮೇಲೆ ನಡೆದ ಅತ್ಯಾಚಾರ ಖಂಡಿಸಿ ಆಲ್ ಇಂಡಿಯಾ ಮಹಿಳಾ ಸಾಂಸ್ಕೃತಿಕ ಸಂಘಟನೆ, ಆಲ್ ಇಂಡಿಯಾ ಡೆಮಾಕ್ರಟಿಕ್ ಯೂತ್ ಆರ್ಗನೈಸೇಷನ್ (ಎಐಡಿವೈಒ) ಹಾಗೂ ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ ಆರ್ಗನೈಸೇಷನ್ (ಎಐಡಿಎಸ್‌ಒ) ನೇತೃತ್ವದಲ್ಲಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಶನಿವಾರ ಪ್ರತಿಭಟನೆ ನಡೆಯಿತು.

ನಗರದಲ್ಲಿ ನಡೆದಿರುವ ಈ ಎರಡು ಘಟನೆಗಳು ನಾಗರಿಕ ಸಮಾಜ ತಲೆತಗ್ಗಿಸುವಂತಹ ಘಟನೆಗಳಾಗಿವೆ. ಇಂತಹ ವಿಕೃತ ಘಟನೆಗಳು ಪ್ರಜ್ಞಾವಂತ ಜನರನ್ನು ದಿಗ್ಭ್ರಮೆಗೊಳಿಸಿವೆ ಎಂದು ಪ್ರತಿಭಟನಾಕಾರರು ಆತಂಕ ವ್ಯಕ್ತಪಡಿಸಿದರು.

ಎಐಎಂಎಸ್‌ಎಸ್ ಜಿಲ್ಲಾ ಅಧ್ಯಕ್ಷೆ ಹೇಮಾವತಿ ಮಾತನಾಡಿ, 'ಮಹಿಳೆಯರನ್ನು ನೋಡುವ ದೃಷ್ಟಿಕೋನ ಬದಲಾಗಬೇಕು. ಎಲ್ಲೇ ಆಗಲಿ, ಇಂತಹ ಘಟನೆಗಳಾದಾಗ ಜನರು ಬೃಹತ್ ಮಟ್ಟದಲ್ಲಿ ಒಂದಾಗಿ ಧ್ವನಿ ಎತ್ತಿದಾಗ ಶಿಕ್ಷೆ ಆಗಿರುವುದನ್ನು ನಾವು ಗಮನಿಸಿದ್ದೇವೆ. ಎಲ್ಲಾ ಕಡೆಯೂ ಇಂತಹ ಹೋರಾಟದ ವಾತಾವರಣ ನಿರ್ಮಾಣ ಆಗಬೇಕು. ಆಗ ಮಾತ್ರ ಇಂತಹ ದುಷ್ಕೃತ್ಯಗಳಿಗೆ ಕಡಿವಾಣ ಹಾಕಲು ಸಾಧ್ಯ' ಎಂದು ಹೇಳಿದರು.

ಎಐಡಿಎಸ್‌ಒ ಜಿಲ್ಲಾ ಕಾರ್ಯದರ್ಶಿ ಮಂಡಳಿಯ ಸದಸ್ಯೆ ತುಳಸಿ ಮಾತನಾಡಿ, 'ಸರ್ಕಾರಗಳು, ಮೌಲ್ಯಾಧಾರಿತ ಶಿಕ್ಷಣಕ್ಕೆ ಒತ್ತು ಕೊಡಬೇಕು. ಇಂತಹ ಘಟನೆಗಳು ಮರುಕಳಿಸದಂತೆ ಜನಸಾಮಾನ್ಯರು ಒಗ್ಗೂಡಿ ಧ್ವನಿ ಎತ್ತಬೇಕು' ಎಂದು ಎಚ್ಚರಿಸಿದರು.

ಎಐಡಿವೈಒ ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಜಯಣ್ಣ, ಎ.ಶಾಂತ, ಎಚ್. ಎಲ್.ನಿರ್ಮಲ, ನವಾಜ್, ಕಿರಣ್, ಕೃಷ್ಣ, ವಿನಯ್ ಸಾರಥಿ ಹಾಜರಿದ್ದರು.



ಸ್ವಾತಂತ್ರ್ಯ ಉದ್ಯಾನದಲ್ಲಿ ವಿವಿಧ ಸಂಘಟನೆಗಳ ನೇತೃತ್ವದಲ್ಲಿ ಶನಿವಾರ ಪ್ರತಿಭಟನೆ ನಡೆಯಿತು

## ಬಿಬಿಎ ವಿದ್ಯಾರ್ಥಿನಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬಿಬಿಎ ಎರಡನೇ ವರ್ಷದ ವಿದ್ಯಾರ್ಥಿನಿಯೊಬ್ಬರು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡ ಘಟನೆ ಕಾಡುಸೊಣ್ಣಪ್ಪನಹಳ್ಳಿಯ ಗ್ರೀನ್ ಗಾರ್ಡನ್ ಲೇಔಟ್‌ನಲ್ಲಿ ನಡೆದಿದೆ.

ಸನಾ ಪರ್ವಿನ್ ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿನಿ. 'ಪುತ್ರಿಯ ಸಾವಿಗೆ ಕೇರಳದ ರಿಹಾನ್ ಎಂಬಾತ ಕಾರಣನಾಗಿದ್ದು, ಈತನ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ತಂದೆ ಅಬ್ದುಲ್ ನಜೀರ್ ಅವರು ದೂರು ನೀಡಿದ್ದಾರೆ. ಅದನ್ನು ಆಧರಿಸಿ ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಆರೋಪದಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ' ಎಂದು ಬಾಗಲೂರು ಠಾಣೆಯ ಪೊಲೀಸರು ತಿಳಿಸಿದರು.

ಖಾಸಗಿ ಕಾಲೇಜಿನಲ್ಲಿ ದ್ವಿತೀಯ ವರ್ಷದ ಬಿಬಿಎ ವ್ಯಾಸಂಗ ಮಾಡುತ್ತಿದ್ದ ಸನಾ ಪರ್ವಿನ್, ಕಾಡುಸೊಣ್ಣಪ್ಪನಹಳ್ಳಿಯ ಗ್ರೀನ್ ಗಾರ್ಡನ್ ಬಡಾವಣೆಯ ಪಿಜಿಯೊಂದರಲ್ಲಿ ಗೆಳತಿಯರೊಂದಿಗೆ ವಾಸವಾಗಿದ್ದರು.

'ಅ.17ರಂದು ಬೆಳಿಗ್ಗೆ ವಿದ್ಯಾರ್ಥಿನಿ ವ್ಯಾಸಂಗ ಮಾಡುತ್ತಿದ್ದ ಕಾಲೇಜಿನ ಉಪನ್ಯಾಸಕಿ ಕರೆ ಮಾಡಿ ನಿಮ್ಮ ಮಗಳಿಗೆ ಸೀರಿಯಸ್ ಆಗಿದೆ. ಕೂಡಲೇ ಬನ್ನಿ ಎಂದು ತಿಳಿಸಿದ್ದರು. ಕೂಡಲೇ ಸ್ಥಳಕ್ಕೆ ತೆರಳಿ ಪರಿಶೀಲಿಸಿದಾಗ ಪಿಜಿಯಲ್ಲಿ ನೇಣುಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವುದು ಗೊತ್ತಾಗಿದೆ' ಎಂದು ದೂರಿನಲ್ಲಿ ಅಬ್ದುಲ್ ತಿಳಿಸಿದ್ದಾರೆ.

ರಿಹಾನ್ ಎಂಬಾತ ಬ್ಲ್ಯಾಕ್‌ಮೇಲ್ ಮಾಡಿ ಕಿರುಕುಳ ನೀಡುತ್ತಿದ್ದ ಎಂಬುದಾಗಿ ಹೇಳಿಕೊಂಡಿದ್ದಳು. ಕಾರಣ ತಿಳಿದರೆ, ರಿಹಾನ್ ಹಿಂಸೆ ತಾಳಲಾರದೆ ಪರ್ವಿನ್ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ.

## ಸ್ಫೋಟ: ನಿವೃತ್ತ ಯೋಧನಿಗೆ ಗಾಯ

**ಬೆಂಗಳೂರು:** ಪೀಣ್ಯದ ಅಂದ್ರಹಳ್ಳಿಯ ಮನೆಯೊಂದರಲ್ಲಿ ಅಡುಗೆ ಅನಿಲ ಸೋರಿಕೆಯಾಗಿ ಸಂಭವಿಸಿದ ಸ್ಫೋಟದಿಂದ ನಿವೃತ್ತ ಯೋಧ ಜನಾರ್ದನ್ (60) ಗಂಭೀರವಾಗಿ ಗಾಯಗೊಂಡಿದ್ದಾರೆ.

ಅವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ಕೊಡಗು ಜಿಲ್ಲೆ ಮಡಿಕೇರಿ ನಗರದ ಜನಾರ್ದನ್ ಅವರು ಸೇನೆಯಲ್ಲಿ ಕೆಲಸ ಮಾಡಿ ನಿವೃತ್ತರಾದ ಬಳಿಕ ಅಂದ್ರಹಳ್ಳಿಯ ವಿದ್ಯಾಮಾನ್ಯ ಬಡಾವಣೆಯ ರುದ್ರೇಗೌಡ ಅವರ ಬಾಡಿಗೆ ಮನೆಯಲ್ಲಿ ನೆಲಸಿದ್ದರು. ಸಿಲಿಂಡರ್‌ನಿಂದ ಅನಿಲ ಸೋರಿಕೆ ಆಗಿರುವುದು ಜನಾರ್ದನ್ ಅವರ ಗಮನಕ್ಕೆ ಬಂದಿರಲಿಲ್ಲ. ಶುಕ್ರವಾರ ರಾತ್ರಿ 8.30ರ ಸುಮಾರಿಗೆ ಅಡುಗೆ ಮಾಡಲು ಸ್ಟೌ ಹಚ್ಚಲು ಮುಂದಾಗಿದ್ದರು. ಆಗ ಬೆಂಕಿ ಹೊತ್ತಿಕೊಂಡಿದ್ದು, ಗಂಭೀರವಾಗಿ ಗಾಯಗೊಂಡಿದ್ದಾರೆ. ಅನಿಲ ಸೋರಿಕೆಯಿಂದ ಸಂಭವಿಸಿದ ಸ್ಫೋಟದ ರಭಸಕ್ಕೆ ಗೋಡೆಗಳು ಬಿರುಕು ಬಿಟ್ಟಿವೆ. ಸ್ಫೋಟದ ಮಾಹಿತಿ ತಿಳಿದ ಕೂಡಲೇ ಸ್ಥಳಕ್ಕೆ ಆಗಮಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಿ ಪರಿಸ್ಥಿತಿ ನಿಯಂತ್ರಣಕ್ಕೆ ತಂದರು.

ಬ್ಯಾಡರಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಪತ್ನಿಯ ಕುತ್ತಿಗೆ ಹಿಸುಕಿ ಕೊಲೆ ಮಾಡಿ ಕಥೆ ಕಟ್ಟಿದ್ದ ಪತಿಯ ಬಂಧನ

**ಬೆಂಗಳೂರು:** ಪತ್ನಿಯ ಕುತ್ತಿಗೆ ಹಿಸುಕಿ ಕೊಲೆ ಮಾಡಿ, ಎಲೆಕ್ಟ್ರಿಕ್ ವಾಟರ್ ಹೀಟರ್ ಹಾಕುವ ವೇಳೆ ವಿದ್ಯುತ್ ಸ್ಪರ್ಶಿಸಿ ಮೃತಪಟ್ಟಿದ್ದಾಳೆ ಎಂಬುದಾಗಿ ಕಥೆ ಕಟ್ಟಿದ್ದ ಪತಿಯನ್ನು ಹೆಬ್ಬಗೋಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮರಗೊಂಡನಹಳ್ಳಿ ನಿವಾಸಿ ರೇಷ್ಮಾ (32) ಕೊಲೆಯಾದ ಮಹಿಳೆ.

ಕೃತ್ಯ ಎಸಗಿದ ಆರೋಪದಡಿ ರೇಷ್ಮಾ ಅವರ 2ನೇ ಪತಿ ಪ್ರಶಾಂತ್ ಕುಮಾರ್ (25) ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ. ರೇಷ್ಮಾ ಸಹೋದರಿ ರೇಣುಕಾ ಅವರು ದೂರು ನೀಡಿದ್ದರು.

'ರೇಷ್ಮಾ 15 ವರ್ಷಗಳ ಹಿಂದೆ ಸುರೇಂದರ್ ಅವರನ್ನು ಮದುವೆ ಆಗಿದ್ದರು. ದಂಪತಿಗೆ 15 ವರ್ಷದ ಪುತ್ರಿ ಇದ್ದಾಳೆ. ಅನಾರೋಗ್ಯದಿಂದ ಪತಿ ಮೃತಪಟ್ಟಿದ್ದರು. ಈ ಮಧ್ಯೆ ಇನ್‌ಸ್ಟಾಗ್ರಾಂನಲ್ಲಿ ಬಳ್ಳಾರಿಯ ಹೂವಿನಹಡಗಲಿ ಮೂಲದ ಪ್ರಶಾಂತ್ ಪರಿಚಯವಾಗಿದ್ದ. ಬಳಿಕ ಇಬ್ಬರೂ ಮದುವೆ ಆಗಿದ್ದರು. ಕೆಲವು ದಿನಗಳ ಬಳಿಕ ರೇಷ್ಮಾ ಅವರು ಬೇರೊಬ್ಬ ವ್ಯಕ್ತಿಯ ಜತೆಗೆ ಹೆಚ್ಚು ಮಾತುಕತೆ ನಡೆಸುತ್ತಿದ್ದರು. ಈ ವಿಚಾರಕ್ಕೆ ಮನೆಯಲ್ಲಿ ನಿತ್ಯ ಗಲಾಟೆ ನಡೆಯುತ್ತಿತ್ತು. ಮಗಳು ಶಾಲೆಗೆ ಹೋದಾಗ, ಆರೋಪಿ ತನ್ನ ಪತ್ನಿ ಮೇಲೆ ಹಲ್ಲೆ ನಡೆಸಿ, ಕತ್ತು ಹಿಸುಕಿ ಹತ್ಯೆ ಮಾಡಿದ್ದಾನೆ' ಎಂದು ಪೊಲೀಸರು ಮಾಹಿತಿ ನೀಡಿದರು.

'ಕೃತ್ಯ ಎಸಗಿದ ಬಳಿಕ ಪತ್ನಿಯ ಮೃತದೇಹವನ್ನು ಶೌಚಾಲಯಕ್ಕೆ ಎಳೆದೊಯ್ದು ಇಟ್ಟಿದ್ದ. ಬಳಿಕ, ಎಲೆಕ್ಟ್ರಿಕ್‌ನ ವಾಟರ್ ಹೀಟರ್ ಹಾಕುವ ವೇಳೆ ವಿದ್ಯುತ್ ಸ್ಪರ್ಶಿಸಿ ಮೃತಪಟ್ಟಿದ್ದಾಳೆ ಎಂದು ಬಿಂಬಿಸಿ ಪರಾರಿಯಾಗಿದ್ದ. ಸಂಜೆ ಮನೆಗೆ ಬಂದ ಮಗಳು ಅಮ್ಮನಿಗಾಗಿ ಹುಡುಕಾಟ ನಡೆಸಿದ್ದಳು. ಬಳಿಕ ಹೊರಗಿನಿಂದ ಚಿಲಕ ಹಾಕಿದ್ದ ಶೌಚಾಲಯದ ಬಾಗಿಲು ತೆರೆದಾಗ ಅಮ್ಮ ಬಿದ್ದಿರುವುದು ಗೊತ್ತಾಗಿತ್ತು. ಆತಂಕಗೊಂಡು ದೊಡ್ಡಮ್ಮ ರೇಣುಕಾ ಅವರಿಗೆ ಕರೆ ಮಾಡಿ ವಿಷಯ ತಿಳಿಸಿದ್ದಳು' ಎಂದು ಪೊಲೀಸರು ಹೇಳಿದರು.

### ಅಸಲಿ ಹಣಕ್ಕೆ ಮೂರು ಪಟ್ಟು ನಕಲಿ ನೋಟು ನೀಡುತ್ತಿದ್ದ ಆರೋಪ

## ವಂಚನೆ ಪ್ರಕರಣ: ಮೂವರ ಬಂಧನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಅಸಲಿ ಹಣಕ್ಕೆ ಪ್ರತಿಯಾಗಿ ಮೂರು ಪಟ್ಟು ನಕಲಿ ನೋಟು ಕೊಡುವುದಾಗಿ ನಂಬಿಸಿ ವಂಚಿಸುತ್ತಿದ್ದ ತಮಿಳುನಾಡಿನ ಮೂವರು ಆರೋಪಿಗಳನ್ನು ಜಯನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ತಮಿಳುನಾಡಿನ ರಾಜೇಶ್ವರನ್ (43), ಶೇಕ್ ಮೊಹಮ್ಮದ್ (40) ಹಾಗೂ ಮಿರಾನ್ ಮೊಹಿದ್ದೀನ್ (40) ಬಂಧಿತರು.

ದಾಳಿ ವೇಳೆ ಸೂಟ್‌ಕೇಸ್‌ನಲ್ಲಿ ಪತ್ತೆಯಾದ ವಿವಿಧ ಮೌಲ್ಯದ 31 ಅಸಲಿ ನೋಟುಗಳು ಹಾಗೂ ಬಿಳಿ ಹಾಳೆಗಳನ್ನು ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ದಕ್ಷಿಣ ವಿಭಾಗದ ಡಿಸಿಪಿ ಲೋಕೇಶ್ ಬಿ. ಜಗಲಾಸರ್ ತಿಳಿಸಿದರು.

'ಅಸಲಿ ಹಣ ನೀಡಿದರೆ ಅದಕ್ಕೆ ಪ್ರತಿಯಾಗಿ ನಕಲಿ ನೋಟುಗಳನ್ನು ಮೂರು ಪಟ್ಟು ನೀಡುವುದಾಗಿ ವ್ಯಾಪಾರಸ್ಥರು, ಉದ್ಯಮಿಗಳಿಗೆ ಆರೋಪಿಗಳು ನಂಬಿಸುತ್ತಿದ್ದರು. ಆರಂಭದಲ್ಲಿ ವ್ಯಾಪಾರಸ್ಥರಿಗೆ ನಂಬಿಕೆ ಬರುವಂತೆ ಅಸಲಿಯಂತೆಯೇ ಇರುವ ನೋಟುಗಳನ್ನು ನೀಡುತ್ತಿದ್ದರು. ನಂಬಿದವರು ಹಣ ಕೊಟ್ಟ ಬಳಿಕ ಅಲ್ಪ ಪ್ರಮಾಣದಲ್ಲಿ ಅಸಲಿ ನೋಟುಗಳ ನಡುವೆಯೇ ಬಿಳಿ ಹಾಳೆಗಳ ಬಂಡಲ್ ಇಟ್ಟು ವಂಚಿಸುತ್ತಿದ್ದರು' ಎಂದು ಮಾಹಿತಿ ನೀಡಿದರು.


ಆರೋಪಿಗಳಿಂದ ಜಪ್ತಿ ಮಾಡಿಕೊಂಡ ನೋಟುಗಳು


ರಾಜೇಶ್ವರನ್


ಮಿರಾನ್ ಮೊಹಿದ್ದೀನ್


ಶೇಕ್ ಮೊಹಮ್ಮದ್

ಅಪರಾಧ ಸುದ್ದಿ

'₹3 ಲಕ್ಷ ಹಣಕ್ಕೆ ಪ್ರತಿಯಾಗಿ ₹500 ಮುಖಬೆಲೆಯ ₹10 ಲಕ್ಷ ನಕಲಿ ನೋಟುಗಳನ್ನು ವರ್ಗಾವಣೆ ಮಾಡಲು ಬಂದಿದ್ದ ಆರೋಪಿಗಳ ಕುರಿತು ಬಾತ್ಮೀದಾರರಿಂದ ಮಾಹಿತಿ ಬಂದಿತ್ತು. ಮಾಹಿತಿ ಆಧರಿಸಿ, ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಯಿತು' ಎಂದು ಮಾಹಿತಿ ನೀಡಿದರು.

> ಈ ಕೃತ್ಯದಲ್ಲಿ ಇನ್ನೂ ಕೆಲವರು ಭಾಗಿಯಾಗಿರುವ ಸಾಧ್ಯತೆಯಿದ್ದು, ಅವರ ಬಂಧನಕ್ಕೆ ಕಾರ್ಯಾಚರಣೆ ನಡೆಸಲಾಗುತ್ತಿದೆ
>
> **ಲೋಕೇಶ್ ಬಿ. ಜಗಲಾಸರ್,** ಡಿಸಿಪಿ, ದಕ್ಷಿಣ ವಿಭಾಗ

'ದಾಳಿ ವೇಳೆ ಪರಿಶೀಲಿಸಿದಾಗ ಸೂಟ್‌ಕೇಸ್‌ನಲ್ಲಿ ಪತ್ತೆಯಾದ ಹಣದಲ್ಲಿ 31 ಅಸಲಿ ನೋಟುಗಳು ಹಾಗೂ ಬಿಳಿ ಹಾಳೆಗಳು ಪತ್ತೆಯಾಗಿವೆ. ಇವರೊಂದಿಗೆ ವ್ಯವಹಾರ ಮಾಡಿದ್ದವರ ಕುರಿತು ಸದ್ಯ ಆರೋಪಿಗಳನ್ನು ವಿಚಾರಣೆ ನಡೆಸಲಾಗುತ್ತಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಆರೋಪಿಗಳ ಬಳಿಯಿದ್ದ ಸೂಟ್‌ಕೇಸ್‌ನಲ್ಲಿ ಖೋಟಾ ನೋಟುಗಳು ಇರಲಿಲ್ಲ. ಬದಲಿಗೆ ನಿಜವಾದ ನೋಟುಗಳ ಮಧ್ಯೆ ಬಿಳಿ ಹಾಳೆಗಳನ್ನು ಇಟ್ಟು ವಂಚನೆ ಮಾಡಲು ಪ್ರಯತ್ನಿಸುತ್ತಿದ್ದರು ಎಂದು ಡಿಸಿಪಿ ಹೇಳಿದರು.

## ಕರ್ನಾಟಕ ಕೇಡರ್ ಐಪಿಎಸ್ ಅಧಿಕಾರಿ ವಿರುದ್ಧ ಎಫ್‌ಐಆರ್

**ನೊಯಿಡಾ (ಪಿಟಿಐ):** ಕರ್ನಾಟಕ ಕೇಡರ್‌ನ ಐಪಿಎಸ್ ಅಧಿಕಾರಿ ಹಾಗೂ ಇತರ ಆರು ಮಂದಿ ವಿರುದ್ಧ ವರದಕ್ಷಿಣೆ ಕಿರುಕುಳ, ಕೌಟುಂಬಿಕ ಹಿಂಸೆ ಸೇರಿದಂತೆ ಇತರ ಆರೋಪಗಳ ಮೇಲೆ ಎಫ್‌ಐಆರ್ ದಾಖಲಾಗಿದೆ.

2019ರ ಬ್ಯಾಚ್‌ನ ಐಪಿಎಸ್ ಅಧಿಕಾರಿ ಶಿವಾಂಶು ರಜಪೂತ್ ಅವರ ಪತ್ನಿ ಕೃತಿ ಸಿಂಗ್ ದೂರು ನೀಡಿದ್ದಾರೆ. ವೈದ್ಯೆಯಾಗಿರುವ ಇವರು, ಉತ್ತರ ಪ್ರದೇಶದ ನೊಯಿಡಾದವರು. ಶಿವಾಂಶು ಅವರು ಬೇರೊಬ್ಬ ಮಹಿಳೆಯೊಂದಿಗೆ ಅಕ್ರಮ ಸಂಬಂಧ ಹೊಂದಿದ್ದಾರೆ ಎಂದು ದೂರಿನಲ್ಲಿ ಕೃತಿ ತಿಳಿಸಿದ್ದಾರೆ.

ಶಿವಾಂಶು, ಅವರ ತಂದೆ, ತಾಯಿ, ಸಹೋದರ, ಅತ್ತಿಗೆ ಹಾಗೂ ಶಿವಾಂಶು ಅವರ ಇಬ್ಬರು ಸ್ನೇಹಿತರ ವಿರುದ್ಧ ದೂರು ದಾಖಲಾಗಿದೆ.

41 ಪುಟಗಳ ದೂರು ನೀಡಿರುವ ಕೃತಿ ಅವರು, '2021ರಲ್ಲಿ ಮದುವೆ ಆದಾಗಿನಿಂದ ವರದಕ್ಷಿಣೆಗಾಗಿ ನನ್ನನ್ನು ಪೀಡಿಸಲಾಗುತ್ತಿದೆ. ಮಾನಸಿಕ ಹಾಗೂ ದೈಹಿಕವಾಗಿ ಕಿರುಕುಳ ನೀಡಿದ್ದಾರೆ' ಎಂದು ಆರೋಪಿಸಿದ್ದಾರೆ.

ಶಿವಾಂಶು ಹಾಗೂ ಕೃತಿ ದಂಪತಿಗೆ ಒಂದೂವರೆ ವರ್ಷದ ಗಂಡು ಮಗುವಿದೆ.

## ಲಾಡ್ಜ್‌ನಲ್ಲಿ ತಂಗಿದ್ದ ಯುವಕ ಅನುಮಾನಾಸ್ಪದ ಸಾವು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೆಲಸ ಹುಡುಕಲೆಂದು ನಗರಕ್ಕೆ ಬಂದು ಲಾಡ್ಜ್‌ನಲ್ಲಿ ತಂಗಿದ್ದ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನ ಯುವಕ ತಕ್ಷಿತ್ (20) ಅನುಮಾನಾಸ್ಪದವಾಗಿ ಮೃತಪಟ್ಟಿದ್ದು, ಈ ಸಂಬಂಧ ಮಡಿವಾಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಎಂಟು ದಿನಗಳ ಹಿಂದೆ ತಕ್ಷಿತ್ ಅವರು ಕೊಡಗು ಜಿಲ್ಲೆಯ ವಿರಾಜಪೇಟೆಯ ಸ್ನೇಹಿತೆಯೊಂದಿಗೆ ನಗರಕ್ಕೆ ಬಂದಿದ್ದರು. ವಿವಿಧೆಡೆ ಕೆಲಸ ಹುಡುಕುತ್ತಿದ್ದರು. ಮಡಿವಾಳದ ಗ್ರ್ಯಾಂಡ್ ಚಾಯ್ಸ್ ಹೋಟೆಲ್‌ನಲ್ಲಿ ತಂಗಿದ್ದರು. ಎರಡು ದಿನಗಳ ಹಿಂದೆ ಯುವತಿ ತಮ್ಮೂರಿಗೆ ವಾಪಸ್ ತೆರಳಿದ್ದರು. ಹೀಗಾಗಿ, ತಕ್ಷಿತ್ ಒಬ್ಬರೇ ಕೊಠಡಿಯಲ್ಲಿ ಇದ್ದರು. ಕೊಠಡಿಗೆ ಊಟ, ತಿಂಡಿ ತರಿಸಿಕೊಳ್ಳುತ್ತಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಕೊಠಡಿಯಿಂದ ಯಾರೂ ಹೊರಗೆ ಬಾರದ ಕಾರಣಕ್ಕೆ ಅನುಮಾನಗೊಂಡ ಹೋಟೆಲ್ ಸಿಬ್ಬಂದಿ ಶುಕ್ರವಾರ ಸಂಜೆ ಕೊಠಡಿಯ ಬಾಗಿಲು ಒಡೆದು ಪರಿಶೀಲಿಸಿದಾಗ ಯುವಕ ಮೃತಪಟ್ಟಿರುವುದು ಪತ್ತೆಯಾಗಿತ್ತು. ತಕ್ಷಣವೇ ಹೋಟೆಲ್ ಸಿಬ್ಬಂದಿ ಪೊಲೀಸರಿಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಬಂದ ಪೊಲೀಸರು, ಮೃತದೇಹವನ್ನು ಆಸ್ಪತ್ರೆಗೆ ಸ್ಥಳಾಂತರಿಸಿದ್ದಾರೆ. ಯುವಕನ ಪೋಷಕರಿಗೂ ಮಾಹಿತಿ ನೀಡಿದ್ದಾರೆ' ಎಂದು ಗೊತ್ತಾಗಿದೆ.

'ಮೃತ ಯುವಕ ಅನಾರೋಗ್ಯದಿಂದ ಬಳಲುತ್ತಿದ್ದರು ಎಂದು ಹೇಳಲಾಗಿದೆ. ಜತೆಗೆ, ಹೆಚ್ಚು ಸಿಗರೇಟು ಸೇದುತ್ತಿದ್ದರು. ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ಸಾವಿಗೆ ನಿಖರ ಗೊತ್ತಾಗಲಿದೆ' ಎಂದು ಮೂಲಗಳು ಹೇಳಿವೆ.

## ಎನ್‌ಎಸ್‌ಯುಐ ಅಧ್ಯಕ್ಷ ಸೇರಿ 20 ಮಂದಿ ವಿರುದ್ಧ ಎಫ್‌ಐಆರ್

**ಬೆಂಗಳೂರು:** ಆರ್‌ಎಸ್‌ಎಸ್ ರಾಜ್ಯ ಪ್ರಧಾನ ಕಚೇರಿಗೆ ನುಗ್ಗಿ ಸಿಬ್ಬಂದಿ ಮೇಲೆ ಹಲ್ಲೆಗೆ ಯತ್ನಿಸಿ, ಪ್ರಾಣ ಬೆದರಿಕೆ ಹಾಕಿದ್ದ ಆರೋಪದಡಿ ಎನ್‌ಎಸ್‌ಯುಐನ ರಾಜ್ಯ ಘಟಕದ ಅಧ್ಯಕ್ಷರೂ ಸೇರಿ 20 ಮಂದಿ ವಿರುದ್ಧ ಶಂಕರಪುರ ಠಾಣೆಯಲ್ಲಿ ಶನಿವಾರ ಪ್ರಕರಣ ದಾಖಲಾಗಿದೆ.

ಕೇಶವಕೃಪಾದ ಕಾರ್ಯದರ್ಶಿ ಶ್ರೀನಿಧಿ ಅವರು ನೀಡಿದ ದೂರಿನ ಮೇರೆಗೆ ಎನ್‌ಎಸ್‌ಐಯು ರಾಜ್ಯ ಘಟಕದ ಅಧ್ಯಕ್ಷ ಕಾರ್ತಿಕ್ ಹಾಗೂ ಇತರೆ 19 ಮಂದಿ ವಿರುದ್ಧ ಅಕ್ರಮ ಪ್ರವೇಶ, ಹಲ್ಲೆ ಮತ್ತು ಪ್ರಾಣ ಬೆದರಿಕೆ ಆರೋಪದ ಅಡಿ ಪ್ರಕರಣ ದಾಖಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಶಂಕರಪುರದಲ್ಲಿ ಇರುವ ಆರ್‌ಎಸ್‌ಎಸ್‌ನ ರಾಜ್ಯ ಪ್ರಧಾನ ಕಚೇರಿ ಕೇಶವಕೃಪಾಗೆ ಶುಕ್ರವಾರ ಗುಂಪೊಂದು ನುಗ್ಗಿ, ಅಲ್ಲಿನ ಸಿಬ್ಬಂದಿ ಮೇಲೆ ಹಲ್ಲೆಗೆ ಯತ್ನಿಸಿ ಜತೆಗೆ ಪ್ರಾಣ ಬೆದರಿಕೆ ಹಾಕಿದೆ ಎಂದು ದೂರು ನೀಡಲಾಗಿತ್ತು. ಆ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

## 'ಮತ ಕಳವು: ಪ್ರಜಾತಂತ್ರದ ಕೊಲೆ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಅಧಿಕಾರ ದುರುಪಯೋಗ ಮಾಡುತ್ತಿದ್ದು, ಈ ಬಗ್ಗೆ ಮನೆ ಮನೆಗೆ ತೆರಳಿ ಜನರಿಗೆ ಮನವರಿಕೆ ಮಾಡಿಕೊಡಲಾಗುವುದು' ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ಹೇಳಿದರು.

ಸರ್ವಜ್ಞನಗರ ಕ್ಷೇತ್ರದ ಬಾಣಸವಾಡಿಯಲ್ಲಿ ಕೆಪಿಸಿಸಿ ವತಿಯಿಂದ ಶನಿವಾರ ಹಮ್ಮಿಕೊಂಡಿದ್ದ 'ಮತ ಕಳವು' ವಿರುದ್ಧದ ಸಹಿ ಸಂಗ್ರಹ ಅಭಿಯಾನದಲ್ಲಿ ಮಾತನಾಡಿದರು.

'ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಮತ ಕಳವು ಬಗ್ಗೆ ಸಾಕ್ಷ್ಯ ಸಮೇತ ಬಹಿರಂಗಗೊಳಿಸಿದ್ದಾರೆ. ಅವರು ನೀಡಿರುವ ದಾಖಲೆಗಳಿಗೆ ಇದುವರೆಗೂ ಚುನಾವಣಾ ಆಯೋಗ ಸಮರ್ಪಕ ಉತ್ತರ ನೀಡಿಲ್ಲ' ಎಂದು ದೂರಿದರು.

'ಕಳೆದ ಲೋಕಸಭೆ ಚುನಾವಣೆ ವೇಳೆ ಮಹದೇವಪುರ ಕ್ಷೇತ್ರದಲ್ಲಿ ನಡೆದಿರುವ ಮತ ಕಳವು ಕಾಂಗ್ರೆಸ್ ಪಕ್ಷಕ್ಕೆ ಮಾತ್ರವಲ್ಲ, ಪ್ರಜಾಪ್ರಭುತ್ವಕ್ಕೇ ಮಾರಕ. ಹಿಂಬಾಗಿಲ ಮೂಲಕ ಅಧಿಕಾರ ಹಿಡಿಯುವ ಬಿಜೆಪಿಗೆ, ಕರ್ನಾಟಕದಲ್ಲಿ ಎಂದೂ ಜನಾದೇಶ ಸಿಕ್ಕಿಲ್ಲ. ಮತ ಕಳವು ಮೂಲಕವೇ ಅಧಿಕಾರಕ್ಕೆ ಬಂದಿದೆ. ಚುನಾವಣಾ ಆಯೋಗ ಮತ್ತು ಬಿಜೆಪಿಯ ಈ ಮತ ಕಳವು ವಿರುದ್ಧ ನಾವು ನಿರಂತರವಾಗಿ ಹೋರಾಟ ಹಮ್ಮಿಕೊಳ್ಳುತ್ತೇವೆ' ಎಂದು ಹೇಳಿದರು.

ಕಾಂಗ್ರೆಸ್ ಮುಖಂಡ ಅಬ್ದುಲ್ ವಾಜೀದ್ ಮಾತನಾಡಿ, 'ಜಾರ್ಜ್ ಅವರ ಸೂಚನೆಯಂತೆ ಕ್ಷೇತ್ರ ವ್ಯಾಪ್ತಿಯ 10 ವಾರ್ಡ್‌ಗಳಲ್ಲಿ ಬೂತ್ ಮಟ್ಟದ ಸಮಿತಿಗಳು ಹಾಗೂ ಕಾಂಗ್ರೆಸ್ ಕಾರ್ಯಕರ್ತರು ಮನೆ ಮನೆಗೆ ಹೋಗಿ 35 ಸಾವಿರ ಜನರ ಸಹಿ ಸಂಗ್ರಹಿಸಿದ್ದಾರೆ. ಈ ಅಭಿಯಾನ ಮುಂದುವರಿಯಲಿದ್ದು, ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯ ನಗರ ಪಾಲಿಕೆಗಳ ಚುನಾವಣೆಯಲ್ಲೂ ನಾವು ಪ್ರತಿ ಮತವನ್ನೂ ಗ್ಯಾರಂಟಿಗೊಳಿಸುತ್ತೇವೆ' ಎಂದರು.

ಸಹಿ ಅಭಿಯಾನದಲ್ಲಿ ವಾರ್ಡ್‌ಗಳ ಅಧ್ಯಕ್ಷರಾದ ರಘು ದೇವರಾಜ್, ಪುಲಕೇಶಿ, ಸುಮಿತ್ರ, ಮುಖಂಡರಾದ ಮೋಹನ್ ಮೆನನ್ ಇದ್ದರು.



ಕೆಪಿಸಿಸಿ ವತಿಯಿಂದ ಬಾಣಸವಾಡಿಯಲ್ಲಿ ಶನಿವಾರ ಹಮ್ಮಿಕೊಂಡಿದ್ದ ಸಹಿ ಸಂಗ್ರಹ ಅಭಿಯಾನದಲ್ಲಿ ಸಚಿವ ಕೆ.ಜೆ. ಜಾರ್ಜ್ ಭಾಗವಹಿಸಿದರು

## ನಿಧನ ವಾರ್ತೆ

### ಇಂದುಮತಿ



**ಬೆಂಗಳೂರು:** ವಿಜಯನಗರ ನಿವಾಸಿ ಇಂದುಮತಿ ರಾಜಾರಾವ್ (94) ಶನಿವಾರ ನಿಧನರಾದರು. ಅವರಿಗೆ ಪುತ್ರ, ಇಬ್ಬರು ಪುತ್ರಿಯರು ಇದ್ದಾರೆ.

ಶನಿವಾರ ಸಂಜೆ ಸುಮನಹಳ್ಳಿ ಚಿತಾಗಾರದಲ್ಲಿ ಅಂತ್ಯ ಸಂಸ್ಕಾರ ನಡೆಯಿತು ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

### ಮುಚ್ಚಿದ ಲಕೋಟೆಯಲ್ಲಿ ನ್ಯಾಯಾಲಯಕ್ಕೆ ಪರಿಶೀಲನಾ ವರದಿ ಸಲ್ಲಿಕೆ

## 'ಜೈಲಿನ ಕೈಪಿಡಿ ಅನುಸಾರವೇ ದರ್ಶನ್‌ಗೆ ಸೌಲಭ್ಯ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಕೊಲೆ ಪ್ರಕರಣದ ಆರೋಪಿ ದರ್ಶನ್ ಅವರಿಗೆ ಬಿಸಿಲಿನಲ್ಲಿ ವಾಕ್ ಮಾಡಲು ಅವಕಾಶ ಹೊರತುಪಡಿಸಿ, ಜೈಲಿನ ಕೈಪಿಡಿ ಅನುಸಾರವೇ ಸೌಲಭ್ಯ ಕಲ್ಪಿಸಲಾಗುತ್ತಿದೆ' ಎಂದು ಕಾನೂನು ಸೇವಾ ಪ್ರಾಧಿಕಾರದ ಬೆಂಗಳೂರು ಜಿಲ್ಲಾ ವಿಭಾಗದ ಸದಸ್ಯ ಕಾರ್ಯದರ್ಶಿ ಬಿ.ವರದರಾಜು ನೇತೃತ್ವದ ತಂಡವು ನ್ಯಾಯಾಲಯಕ್ಕೆ ವರದಿ ಸಲ್ಲಿಸಿದೆ.

ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ದರ್ಶನ್ ಅವರಿಗೆ ಕನಿಷ್ಠ ಸೌಲಭ್ಯ ನೀಡದ ಆರೋಪಕ್ಕೆ ಸಂಬಂಧಿಸಿದಂತೆ ಕಾರಾಗೃಹದಲ್ಲಿ ಪರಿಶೀಲನೆ ನಡೆಸಿದ್ದ ತಂಡವು, ನ್ಯಾಯಾಲಯಕ್ಕೆ ಮುಚ್ಚಿದ ಲಕೋಟೆಯಲ್ಲಿ ಶುಕ್ರವಾರ ಪರಿಶೀಲನಾ ವರದಿ ಸಲ್ಲಿಸಿತು.

ನ್ಯಾಯಾಲಯದ ಸೂಚನೆ ಮೇರೆಗೆ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಬಿ.ವರದರಾಜು ಮತ್ತು ತಂಡ ಅ.14ರಂದು ಭೇಟಿ ನೀಡಿ, ದರ್ಶನ್ ಅವರನ್ನು ಇರಿಸಲಾಗಿರುವ ಕ್ವಾರಂಟೈನ್ ಸೆಲ್‌ಗೆ ತೆರಳಿ, ನೀಡಿರುವ ಸೌಲಭ್ಯಗಳ ಬಗ್ಗೆ ತಪಾಸಣೆ ನಡೆಸಿತ್ತು.

ಕೈಪಿಡಿ ಅನುಸಾರ ಕನಿಷ್ಠ ಸೌಲಭ್ಯ ಕಲ್ಪಿಸಲಾಗಿದೆಯೇ ಎಂದು ಜೈಲು ಅಧಿಕಾರಿಗಳನ್ನು ಪ್ರಶ್ನಿಸಿ ಮಾಹಿತಿ ಪಡೆದುಕೊಂಡಿತ್ತು. ಈ ವೇಳೆ ದರ್ಶನ್ ತಾವು ಅನುಭವಿಸುತ್ತಿರುವ ಆರೋಗ್ಯ ಸಮಸ್ಯೆ ಬಗ್ಗೆ ವರದರಾಜು ಅವರ ಬಳಿ ಹೇಳಿಕೊಂಡಿದ್ದರು ಎಂದು ಮೂಲಗಳು ಹೇಳಿವೆ.

ಈ ವೇಳೆ ಕ್ವಾರಂಟೈನ್ ಸೆಲ್‌ನಿಂದ ಸಾಮಾನ್ಯ ಬ್ಯಾರಕ್‌ಗೆ ಸ್ಥಳಾಂತರ ಮಾಡುವಂತೆ ಪ್ರಾಧಿಕಾರದ ಅಧಿಕಾರಿಗಳಿಗೆ ದರ್ಶನ್ ಮನವಿ ಮಾಡಿದ್ದರು. ಬಂಧನವಾಗಿ ಎರಡು ತಿಂಗಳು ಕಳೆದರೂ ಕ್ವಾರಂಟೈನ್ ಸೆಲ್‌ನಲ್ಲಿ ಉಳಿಸಿಕೊಂಡಿರುವ ಬಗ್ಗೆ ಮಾಹಿತಿ ಸಂಗ್ರಹಿಸಿದ್ದ ವರದರಾಜು ಅವರು, ಜೈಲಿನ ಮುಖ್ಯ ಅಧೀಕ್ಷಕ ಸುರೇಶ್ ಅವರೊಂದಿಗೆ ಸುಮಾರು ಎರಡು ತಾಸು ಸಮಾಲೋಚನೆ ನಡೆಸಿದ್ದರು.

**ವರದಿಯಲ್ಲಿರುವ ಇತರೆ ಅಂಶಗಳು?:** ದರ್ಶನ್ ಅವರನ್ನು ಇರಿಸಲಾಗಿರುವ ಬ್ಯಾರಕ್‌ನಲ್ಲಿ ಭಾರತೀಯ ಹಾಗೂ ಪಾಶ್ಚಿಮಾತ್ಯ ಶೈಲಿಯ ಎರಡು ಶೌಚಾಲಯಗಳಿವೆ. ವಿಚಾರಣಾಧೀನ ಕೈದಿಗೆ ಹಾಸಿಗೆ, ದಿಂಬಿಗೆ ಅವಕಾಶ ಇಲ್ಲ. ನಿಯಮದಂತೆ ದರ್ಶನ್ ಅವರಿಗೆ ಒಂದು ತಾಸು ವಾಕಿಂಗ್ ಹಾಗೂ ಆಟವಾಡಲು ಅವಕಾಶ ನೀಡಬಹುದು. ಆದರೆ, ದರ್ಶನ್ ಸೆಲೆಬ್ರಿಟಿ ಆಗಿರುವುದರಿಂದ ಓಡಾಡಿದರೆ ಇತರ ಬ್ಯಾರಕ್‌ನವರು ಕಿರುಚುತ್ತಾರೆ. ಅಕ್ಕಪಕ್ಕದ ಅಪಾರ್ಟ್‌ಮೆಂಟ್‌ಗಳಿಂದ ಫೋಟೊ ತೆಗೆಯುತ್ತಾರೆಂದು ಜೈಲಾಧಿಕಾರಿ ಆಕ್ಷೇಪಿಸಿದ್ದಾರೆ. ಜೈಲಿನ ಶಿಸ್ತುಪಾಲನೆ ಹಾಗೂ ನಿರ್ವಹಣೆ ಹೊರತುಪಡಿಸಿ, ವಾಕಿಂಗ್ ಮಾಡಲು ಹಾಗೂ ಆಟಕ್ಕೆ ಅವಕಾಶ ನೀಡಬೇಕು ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಕೈದಿಗಳಿಗೆ ಟಿ.ವಿ ನೋಡಲು ಅವಕಾಶ ನೀಡಬಹುದು. ಆದರೆ, ಪ್ರತಿ ಬ್ಯಾರಕ್‌ಗೆ ಟಿ.ವಿ ನೀಡಬೇಕು ಎಂಬ ನಿಯಮ ಇಲ್ಲ. ಫೋನ್‌ನಲ್ಲಿ ಮಾತನಾಡುವಾಗ ಸ್ಪೀಕರ್ ಆನ್ ಮಾಡಿಸುತ್ತಾರೆ ಎಂಬ ದರ್ಶನ್ ಆಪಾದನೆಗೆ ಆರೋಪಿಗಳ ಮೇಲೆ ನಿಗಾ ಇಡುವ ಉದ್ದೇಶದಿಂದ ಕಾನೂನಿನಲ್ಲಿ ಅವಕಾಶ ಇದೆ. ಆರೋಪಿಗಳಿಗೆ ತಿಳಿಸಿ ಫೋನ್ ಕಾಲ್ ರೆಕಾರ್ಡ್‌ಗೆ ನಿಯಮದಲ್ಲಿ ಅವಕಾಶವಿದೆ. ಈ ಬಗ್ಗೆ ಜೈಲಧಿಕಾರಿಗಳು ನಿಯಮ ರೂಪಿಸಿದ್ದಾರೆ ಎಂಬುದಾಗಿ ವರದರಾಜು ಅವರು ತಮ್ಮ ವರದಿಯಲ್ಲಿ ಉಲ್ಲೇಖಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

### ವಿಚಾರಣೆ ಮುಂದೂಡಿಕೆ

ರೇಣುಕಸ್ವಾಮಿ ಕೊಲೆ ಪ್ರಕರಣ ಸಂಬಂಧ ನ್ಯಾಯಾಲಯದಲ್ಲಿ ಶನಿವಾರ ವಿಚಾರಣೆ ನಡೆಯಿತು.

ವಿಡಿಯೊ ಕಾನ್ಫರೆನ್ಸ್ ಮೂಲಕ ದರ್ಶನ್, ಪವಿತ್ರಾ ಗೌಡ ಸೇರಿ 7 ಆರೋಪಿಗಳು ಹಾಜರಾದರೆ, ದೀಪಕ್, ನಿಖಿಲ್ ನಾಯ್ಕ್ ಗೈರು ಹಾಜರಾದರು. ಉಳಿದ ಆರೋಪಿಗಳು ಖುದ್ದು ಹಾಜರಾದರು.

ದರ್ಶನ್‌ಗೆ ಜೈಲಿನಲ್ಲಿ ಕನಿಷ್ಠ ಸೌಲಭ್ಯವನ್ನು ನೀಡದಿರುವ ಆರೋಪಕ್ಕೆ ಸಂಬಂಧಿಸಿದಂತೆ ವಿಚಾರಣೆ ನಡೆಯಿತು. ಪ್ರಾಧಿಕಾರ ಸಲ್ಲಿಸಿರುವ ವರದಿಯ ಪ್ರತಿಯನ್ನು ತಮಗೂ ನೀಡುವಂತೆ ಆರೋಪಿಗಳ ಪರ ವಕೀಲರು ಕೋರಿದರು. ಅರ್ಜಿ ಸಲ್ಲಿಸಿ ವರದಿ ಪಡೆದುಕೊಳ್ಳುವಂತೆ ನ್ಯಾಯಾಧೀಶರು ವಕೀಲರಿಗೆ ಸೂಚಿಸಿದರು.

ವರದಿಯನ್ನು ಅಧ್ಯಯನ ಮಾಡಿ ವಾದಿಸಲು ಕಾಲಾವಕಾಶ ಬೇಕೆಂದು ಆರೋಪಿಗಳ ಪರ ವಕೀಲರು ಮನವಿ ಮಾಡಿದ್ದರಿಂದ ವಿಚಾರಣೆಯನ್ನು ಅಕ್ಟೋಬರ್ 24ಕ್ಕೆ ಮುಂದೂಡಲಾಯಿತು.


ದರ್ಶನ್

### 'ಕಾಲಿನ ಹಿಮ್ಮಡಿಯಲ್ಲಿ ಬಿರುಕು'

ಸೂರ್ಯನ ಬೆಳಕಿಲ್ಲದೇ ಕಾಲಿಗೆ ಫಂಗಸ್ (ಚರ್ಮ ರೋಗ) ಬಂದಿದೆ ಎಂದು ದರ್ಶನ್, ಹಿಂದಿನ ವಿಚಾರಣೆ ವೇಳೆ ನ್ಯಾಯಾಧೀಶರ ಎದುರು ಅಳಲು ತೋಡಿಕೊಂಡಿದ್ದರು.

ಪರಿಶೀಲನೆ ವೇಳೆ, 'ಕಾಲಿನಲ್ಲಿ ಫಂಗಸ್ ಬಂದಿಲ್ಲ, ಹಿಮ್ಮಡಿಯಲ್ಲಿ ಬಿರುಕಿದೆ. ಈ ಬಗ್ಗೆ ಚರ್ಮರೋಗ ತಜ್ಞೆ ಜ್ಯೋತಿ ಬಾಯಿ ಪರಿಶೀಲಿಸಿದ್ದಾರೆ. ಜೈಲಿನ ವೈದ್ಯಾಧಿಕಾರಿಗಳು ಎರಡು ದಿನಕ್ಕೊಮ್ಮೆ ಬ್ಯಾರಕ್‌ಗೆ ಭೇಟಿ ನೀಡುತ್ತಿದ್ದಾರೆ. ದರ್ಶನ್‌ಗೆ ಫಿಸಿಯೋಥೆರಪಿ ವ್ಯವಸ್ಥೆ ಕಲ್ಪಿಸಲಾಗಿದೆ' ಎಂದು ವರದಿಯಲ್ಲಿ ವಿವರಿಸಲಾಗಿದೆ.

## 'ಪ್ರಿಯಾಂಕ್ ಪತ್ರ ಸಂವಿಧಾನಬದ್ಧ'

**ಬೆಂಗಳೂರು:** 'ಸರ್ಕಾರಿ, ಅನುದಾನಿತ ಶಾಲಾ–ಕಾಲೇಜುಗಳ ಮೈದಾನದಲ್ಲಿ ಆರ್‌ಎಸ್‌ಎಸ್ ಚಟುವಟಿಕೆ ನಿರ್ಬಂಧಿಸುವಂತೆ ಸಚಿವ ಪ್ರಿಯಾಂಕ್ ಖರ್ಗೆ ಅವರು ಸಿ.ಎಂ ಸಿದ್ದರಾಮಯ್ಯ ಅವರಿಗೆ ಬರೆದ ಪತ್ರ ಸಂವಿಧಾನ ಬದ್ಧವಾಗಿದೆ' ಎಂದು ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಇಲಾಖೆಯ ಎಸ್‌ಸಿ, ಎಸ್‌ಟಿ ಅಧಿಕಾರಿಗಳ ಮತ್ತು ನೌಕರರ ಕಲ್ಯಾಣ ಸಂಘದ ರಾಜ್ಯ ಘಟಕದ ಅಧ್ಯಕ್ಷ ಎಂ.ಸುರೇಶ್ ಕುಮಾರ್ ತಿಳಿಸಿದರು.

'ಪ್ರಿಯಾಂಕ್ ಅವರು ಆರ್‌ಎಸ್‌ಎಸ್ ನಿರ್ಬಂಧಿಸುವಂತೆ ಎಲ್ಲೂ ಹೇಳಿಲ್ಲ. ಆದರೆ, ಕೆಲ ಮನುವಾದಿ ಮನಸ್ಥಿತಿಯ ಮುಖಂಡರು ಈ ಬಗ್ಗೆ ತಪ್ಪು ಸಂದೇಶ ನೀಡುತ್ತಿರುವುದು ಸರಿಯಲ್ಲ' ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಎಸ್‌ಸಿ, ಎಸ್‌ಟಿ ನೌಕರರ ಸಮನ್ವಯ ಸಮಿತಿ ಅಧ್ಯಕ್ಷ ಡಿ. ಶಿವಶಂಕರ್ ಇದ್ದರು.

ಚಿಟಿಕೆ ಸುದ್ದಿ

## 6 ಕ್ಷೇತ್ರಗಳಲ್ಲಿ ಜೆಎಂಎಂ ಅಭ್ಯರ್ಥಿಗಳು ಕಣಕ್ಕೆ

ರಾಂಚಿ (ಪಿಟಿಐ): 'ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಜಾರ್ಖಂಡ್ ಮುಕ್ತಿ ಮೋರ್ಚಾ (ಜೆಎಂಎಂ) ಪಕ್ಷವು ಸ್ವತಂತ್ರವಾಗಿ ಸ್ಪರ್ಧಿಸಲಿದ್ದು, ಆರು ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಘೋಷಿಸಲಾಗಿದೆ' ಎಂದು ತಿಳಿಸಿದೆ.

ಬಿಹಾರ ವಿಧಾನಸಭೆಯ 243 ಕ್ಷೇತ್ರಗಳಿಗೆ ನವೆಂಬರ್ 6 ಹಾಗೂ 11ರಂದು ಮತದಾನ ನಡೆಯಲಿದೆ. ನವೆಂಬರ್ 14ರಂದು ಮತ ಎಣಿಕೆ ನಡೆಯಲಿದೆ.

'ಜೆಎಂಎಂ ಪಕ್ಷವು ಛಕಯಿ, ಧಮ್‌ದಾಹ, ಕಟೋರಿಯಾ, ಮಣಿಹರಿ (ಎಸ್‌.ಟಿ ಮೀಸಲು ಕ್ಷೇತ್ರ) ಜಮುಯಿ ಹಾಗೂ ಪೀರ್‌ಪೈಂತಿ ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಿದೆ' ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಹಾಗೂ ವಕ್ತಾರ ಸುಪ್ರಿಯೊ ಭಟ್ಟಾಚಾರ್ಯ ತಿಳಿಸಿದ್ದಾರೆ.

## ಕಾನ್‌ಸ್ಟೆಬಲ್‌ಗೆ ಚಾಕುವಿನಿಂದ ಇರಿದು ಕೊಲೆ



ಹೈದರಾಬಾದ್ (ಪಿಟಿಐ): ಪ್ರಕರಣವೊಂದರಲ್ಲಿ ಬಂಧಿತನಾಗಿರುವ ಶೇಖ್ ರಿಯಾಜ್ (24) ಎಂಬಾತ ನಿಜಾಮಾಬಾದ್ ಠಾಣೆಗೆ ದ್ವಿಚಕ್ರ ವಾಹನದಲ್ಲಿ ಕರೆದೊಯ್ಯುತ್ತಿದ್ದ ಕಾನ್‌ಸ್ಟೆಬಲ್ ಇ.ಪ್ರಮೋದ್ (42) ಅವರ ಎದೆಗೆ ಚಾಕುವಿನಿಂದ ಇರಿದು ಕೊಲೆ ಮಾಡಿದ್ದಾನೆ.

ಶುಕ್ರವಾರ ರಾತ್ರಿ 8.30ರಿಂದ 9ರ ಅವಧಿಯಲ್ಲಿ ಈ ಘಟನೆ ನಡೆದಿದೆ.

ಆರೋಪಿಯು ಚಾಕುವನ್ನು ಶೂ ಒಳಗೆ ಇರಿಸಿಕೊಂಡಿದ್ದ. ತೀವ್ರವಾಗಿ ಗಾಯಗೊಂಡಿದ್ದ ಪ್ರಮೋದ್ ಅಸುನೀಗಿದ್ದಾರೆ. ಕಾನ್‌ಸ್ಟೆಬಲ್ ಬೈಕ್ ಹಿಂಬಾಲಿಸುತ್ತಿದ್ದ ಸಬ್ ಇನ್‌ಸ್ಪೆಕ್ಟರ್ ಮೇಲೆಯೂ ಆರೋಪಿಯು ದಾಳಿ ನಡೆಸಿದ್ದು, ಅವರ ಬೆರಳುಗಳಿಗೆ ಗಾಯಗಳಾಗಿವೆ. ಆರೋಪಿಯು ಪರಾರಿಯಾಗಿದ್ದು, ಆತನ ಪತ್ತೆಗೆ ಕ್ರಮ ವಹಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

## ಸಿಂಗಪುರಕ್ಕೆ ತೆರಳಲು ಅಸ್ಸಾಂ ಪೊಲೀಸರ ತಂಡ ಸಜ್ಜು

ಗುವಾಹಟಿ (ಪಿಟಿಐ): ಗಾಯಕ ಜುಬಿನ್ ಗರ್ಗ್ ಸಾವಿನ ಪ್ರಕರಣದ ತನಿಖೆಯ ಭಾಗವಾಗಿ ಅಸ್ಸಾಂನ ಅಪರಾಧ ತನಿಖಾ ವಿಭಾಗದ (ಸಿಐಡಿ) ಅಧಿಕಾರಿಗಳು ಸೋಮವಾರ ಸಿಂಗಪುರಕ್ಕೆ ತೆರಳಲಿದ್ದಾರೆ. ಇದಕ್ಕೆ ಸಂಬಂಧಿಸಿದ ಸಿದ್ಧತೆಗಳನ್ನೆಲ್ಲಾ ಪೂರ್ಣಗೊಳಿಸಿರುವುದಾಗಿ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

# 'ಇಂಡಿಯಾ' ಮೈತ್ರಿ ಪರಸ್ಪರ ಪೈಪೋಟಿ

## ಬಿಹಾರ ಚುನಾವಣೆ: 5 ಕ್ಷೇತ್ರಗಳಲ್ಲಿ ಆರ್‌ಜೆಡಿ, ಕಾಂಗ್ರೆಸ್ ನಡುವೆಯೇ ಸ್ಪರ್ಧೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಎನ್‌ಡಿಎ ಮೈತ್ರಿಕೂಟವನ್ನು ಸೋಲಿಸುವ ಉಮೇದಿನಿಂದ ಬಿಹಾರದಲ್ಲಿ ಅಖಾಡಕ್ಕೆ ಇಳಿದಿರುವ ಇಂಡಿಯಾ ಮೈತ್ರಿಕೂಟದಲ್ಲಿ ಭಾರಿ ಒಡಕು ಕಾಣಿಸಿಕೊಂಡಿದೆ. ಮೊದಲ ಹಂತದಲ್ಲಿ ಮತದಾನ ನಡೆಯಲಿರುವ ಕನಿಷ್ಠ 10 ಕ್ಷೇತ್ರಗಳಲ್ಲಿ ಪರಸ್ಪರ ಪೈಪೋಟಿಗೆ ಇಳಿದಿವೆ.

ಮೊದಲ ಹಂತದ ನಾಮಪತ್ರ ಸಲ್ಲಿಕೆ ಅವಧಿ ಮುಗಿದ ನಂತರವೂ ಮಹಾಮೈತ್ರಿಕೂಟದೊಳಗಿನ ಸೀಟುಗಳ ಕಿತ್ತಾಟ ಮುಂದುವರಿದಿದೆ. ಕಾಂಗ್ರೆಸ್ 48 ಅಭ್ಯರ್ಥಿಗಳ ಹೆಸರನ್ನು ಪ್ರಕಟಿಸಿದರೆ, ಸಿಪಿಐಎಂಎಲ್ 20 ಅಭ್ಯರ್ಥಿಗಳ ಹೆಸರನ್ನು ಪ್ರಕಟಿಸಿತು. ಆರ್‌ಜೆಡಿ ಅಭ್ಯರ್ಥಿಗಳ ಪಟ್ಟಿಯನ್ನೇ ಬಿಡುಗಡೆ ಮಾಡಿಲ್ಲ. ಅಭ್ಯರ್ಥಿಗಳಿಗೆ ನೇರವಾಗಿ ಬಿ–ಫಾರಂ ಹಂಚಿದೆ. ಆರ್‌ಜೆಡಿ ಹಾಗೂ ಕಾಂಗ್ರೆಸ್‌ನ ಉನ್ನತ ನಾಯಕರು ಸರಣಿ ಸಮಾಲೋಚನೆಗಳನ್ನು ನಡೆಸಿದ ಬಳಿಕವೂ ಕಗ್ಗಂಟು ಬಗೆಹರಿದಿಲ್ಲ.

ಐದು ಕ್ಷೇತ್ರಗಳಲ್ಲಿ ಆರ್‌ಜೆಡಿ ಹಾಗೂ ಕಾಂಗ್ರೆಸ್ ಪರಸ್ಪರ ಅಭ್ಯರ್ಥಿಗಳನ್ನು ಇಳಿಸಿವೆ. ಮೂರು ಕ್ಷೇತ್ರಗಳಲ್ಲಿ ಕಾಂಗ್ರೆಸ್–ಸಿಪಿಎಂ ಹೋರಾಟಕ್ಕೆ ಅಣಿಯಾಗಿವೆ. ಆರ್‌ಜೆಡಿ ಹಾಗೂ ವಿಐಪಿ ಒಂದು ಕ್ಷೇತ್ರಗಳಲ್ಲಿ ಪರಸ್ಪರ ಹೋರಾಡುತ್ತಿವೆ. ಮಿತ್ರ ಪಕ್ಷಗಳ ನಡೆಯಿಂದ ಬೇಸರಗೊಂಡಿರುವ ವಿಐಪಿ ಮುಖ್ಯಸ್ಥ ಮುಕೇಶ್ ಸಹಾನಿ ಅವರು ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ ಎಂದು ಘೋಷಿಸಿದ್ದಾರೆ.

> **ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಬಿಜೆಪಿಯ ಸ್ಟಾರ್ ಪ್ರಚಾರಕರಾಗಿ ಬಿಹಾರಕ್ಕೆ ತೆರಳುತ್ತಿಲ್ಲ, 'ಸ್ಟಾರ್ ವಿಭಜಕ'ರಾಗಿ ಹೋಗುತ್ತಿದ್ದಾರೆ. ಕೋಮುವಾದಿಗಳನ್ನು ಜನರು ಸ್ವೀಕರಿಸುವುದಿಲ್ಲ**
> **ಅಖಿಲೇಶ್ ಯಾದವ್**, ಎಸ್‌ಪಿ ಮುಖ್ಯಸ್ಥ

ಲೋಕಸಭಾ ಚುನಾವಣೆಯಲ್ಲಿ ಮೈತ್ರಿಕೂಟದಲ್ಲಿ ಕಾಣಿಸಿಕೊಂಡಿದ್ದ ಒಗ್ಗಟ್ಟು ಈಗ ಮರೆಯಾಗಿದೆ. ಇಂಡಿಯಾ ಬಣದ ಬಿಹಾರ ಅವತಾರವಾದ 'ಮಹಾ ಘಟಬಂಧನ್' ಛಿದ್ರಗೊಂಡಂತೆ ಕಾಣುತ್ತಿದೆ. ಎನ್‌ಡಿಎ ಪ್ರತಿಸ್ಪರ್ಧಿಗಳೊಂದಿಗೆ ಹೋರಾಡುವುದಕ್ಕಿಂತ ಹೆಚ್ಚಾಗಿ, ಇಂಡಿಯಾ ಬಣದ ಅಭ್ಯರ್ಥಿಗಳು ತಮ್ಮದೇ ಆದ ಮಿತ್ರಪಕ್ಷಗಳ ವಿರುದ್ಧ ಹೋರಾಡುತ್ತಿರುವಂತೆ ಕಾಣುತ್ತಿದೆ. 'ಇಂಡಿಯಾ' ಭಿನ್ನಮತವನ್ನು ಎನ್‌ಡಿಎ ನಾಯಕರು ಲೇವಡಿ ಮಾಡಿದ್ದಾರೆ.

**ಎಲ್ಲೆಲ್ಲಿ ಮೈತ್ರಿ ಬಿಕ್ಕಟ್ಟು?:** ವೈಶಾಲಿ ಜಿಲ್ಲೆಯ ಲಾಲ್‌ಗಂಜ್‌ನಲ್ಲಿ ಆರ್‌ಜೆಡಿ ವಿರುದ್ಧ ಕಾಂಗ್ರೆಸ್ ಸ್ಪರ್ಧೆಗೆ ಇಳಿದಿದೆ. ಮಹಾಘಟಬಂಧನ್‌ನ ಅಘೋಷಿತ ಮುಖ್ಯಮಂತ್ರಿ ಅಭ್ಯರ್ಥಿ ತೇಜಸ್ವಿ ಯಾದವ್ ಅವರು ಲಾಲ್‌ಗಂಜ್‌ನ ಮಾಜಿ ಶಾಸಕ ಮುನ್ನಾ ಶುಕ್ಲಾ ಅವರ ಪುತ್ರಿ ಶಿವಾನಿ ಶುಕ್ಲಾ ಅವರನ್ನು ಕಣಕ್ಕಿಳಿಸಿದ್ದಾರೆ. ಒಂದು ಕಾಲದಲ್ಲಿ ಕಾಂಗ್ರೆಸ್ ಕೋಟೆಯಾಗಿದ್ದ ಕ್ಷೇತ್ರದಿಂದ ಕೈ ಪಾಳಯವು ಆದಿತ್ಯ ಕುಮಾರ್ ಅವರನ್ನು ಹುರಿಯಾಳುವನ್ನಾಗಿ ಮಾಡಿದೆ.

ರಾಜಪಕರ್ ಕ್ಷೇತ್ರದಲ್ಲಿ 2020ರ ಚುನಾವಣೆಯಲ್ಲಿ ಕಾಂಗ್ರೆಸ್ ಜಯ ಗಳಿಸಿತ್ತು. ಈ ಮೀಸಲು ಕ್ಷೇತ್ರದಲ್ಲಿ ಪಕ್ಷವು ಹಾಲಿ ಶಾಸಕಿ ಪ್ರತಿಭಾ ದಾಸ್ ಟಿಕೆಟ್ ಕೊಟ್ಟಿದೆ. ಇಲ್ಲಿ ಸಿಪಿಐ ಮೈತ್ರಿ ಧರ್ಮವನ್ನು ಗಾಳಿಗೆ ತೂರಿದೆ. ಮೋಹಿತ್ ಪಾಸ್ವಾನ್ ಅವರನ್ನು ಎಡ ಪಕ್ಷ ಅಭ್ಯರ್ಥಿಯನ್ನಾಗಿ ಮಾಡಿದೆ.

ಏಟಿಗೆ ಇದಿರೇಟು ನೀಡಿರುವ ಕೈ ಪಾಳಯವು ಬಚ್ವಾರಾದಲ್ಲಿ ಪ್ರಕಾಶ್ ದಾಸ್ ಅವರನ್ನು ಉಮೇದುದಾರರನ್ನಾಗಿ ಮಾಡಿದೆ. ಈ ಕ್ಷೇತ್ರದಲ್ಲಿ ಮಾಜಿ ಶಾಸಕ ಅವಧೇಶ್ ರೈ ಅವರನ್ನು ಸಿಪಿಐ ಈ ಹಿಂದೆಯೇ ನಾಮನಿರ್ದೇಶನ ಮಾಡಿತ್ತು. 2020ರ ಚುನಾವಣೆಯಲ್ಲಿ ರೈ ಅವರು ಬಿಜೆಪಿಯ ಸುರೇಂದ್ರ ಮೆಹ್ತಾ ವಿರುದ್ಧ 484 ಮತಗಳಿಂದ ಸೋತಿದ್ದರು. ಬಚ್ವಾರಾ ಸಾಂಪ್ರದಾಯಿಕವಾಗಿ ಎಡಪಕ್ಷಗಳ ಭದ್ರಕೋಟೆ. ಕಾಂಗ್ರೆಸ್‌ನ ವಾದವೆಂದರೆ, 2015ರ ಚುನಾವಣೆಯಲ್ಲಿ ಪ್ರಕಾಶ್ ದಾಸ್ ತಂದೆ ರಾಮ್‌ದೇವ್ ರೈ ಜಯಿಸಿದ್ದರು. ಹೀಗಾಗಿ, ಈ ಸಲ ಮಗನಿಗೆ ಟಿಕೆಟ್ ಕೊಡಲಾಗಿದೆ. ರೊಸೆರಾ ಮೀಸಲು ಕ್ಷೇತ್ರದಲ್ಲೂ ಪರಿಸ್ಥಿತಿ ಇದಕ್ಕಿಂತ ಭಿನ್ನವಾಗಿಲ್ಲ. ಅಲ್ಲಿ ಕಾಂಗ್ರೆಸ್ ಪಕ್ಷವು ಮಾಜಿ ಐಪಿಎಸ್ ಅಧಿಕಾರಿ ಬಿ.ಕೆ. ರವಿ ಅವರನ್ನು ಕಣಕ್ಕಿಳಿಸಿದೆ. ಆದರೆ, ಲಕ್ಷ್ಮಣ್ ಪಾಸ್ವಾನ್ ಅವರನ್ನು ಸಿಪಿಐ ನಾಮನಿರ್ದೇಶನ ಮಾಡಿದೆ.

ನಳಂದ ಜಿಲ್ಲೆಯ ಬಿಹಾರ್ ಶರೀಫ್‌ನಲ್ಲಿಯೂ ಸಿಪಿಐ ವಿರುದ್ಧ ಕಾಂಗ್ರೆಸ್ ಪೈಪೋಟಿ ನಡೆಸುತ್ತಿದೆ. ಅಲ್ಲಿ ಎಡಪಕ್ಷದ ಅಭ್ಯರ್ಥಿ ಶಿವಪ್ರಸಾದ್ ಯಾದವ್ ವಿರುದ್ಧ ಉಮೈರ್ ಖಾನ್ ಅವರನ್ನು ಅಭ್ಯರ್ಥಿಯನ್ನಾಗಿಸಿದೆ.

ವೈಶಾಲಿ ಕ್ಷೇತ್ರದಲ್ಲಿ ಆರ್‌ಜೆಡಿ–ಕಾಂಗ್ರೆಸ್ ನಡುವೆ ಒಳಜಗಳ ಉಂಟಾಗಿದೆ. ಕಳೆದ ವಾರವಷ್ಟೇ ಪಕ್ಷಕ್ಕೆ ಸೇರಿದ್ದ ಅಜಯ್ ಕುಶ್ವಾಹ ಅವರಿಗೆ ಲಾಲು ಪಕ್ಷವು ಟಿಕೆಟ್ ಕೊಟ್ಟಿದೆ. ಆದಾಗ್ಯೂ, ಕಾಂಗ್ರೆಸ್ ಪಕ್ಷವು ಸಂಜೀವ್ ಸಿಂಗ್ ಅವರನ್ನು ಸ್ಪರ್ಧಿಯನ್ನಾಗಿ ಮಾಡಿದೆ. ಉಪಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ಸ್ಪರ್ಧಿಸುತ್ತಿರುವ ತಾರಾಪುರ ಕ್ಷೇತ್ರದಲ್ಲೂ ಇದೇ ರೀತಿ ಆಗಿದೆ. ಅರುಣ್ ಶಾ ಅವರನ್ನು ಆರ್‌ಜೆಡಿ ಕಣಕ್ಕಿಳಿಸಿದರೆ, ಅದರ ಮಿತ್ರ ವಿಐಪಿ ಅದೇ ಕ್ಷೇತ್ರದಿಂದ ಸಕಲ್ದಿಯೊ ಬಿಂದ್ ಅವರನ್ನು ನಾಮನಿರ್ದೇಶನ ಮಾಡಿದೆ.

### 20 ಕ್ಷೇತ್ರಗಳಲ್ಲಿ ಸಿಪಿಐ(ಎಂಎಲ್) ಸ್ಪರ್ಧೆ

ಇಂಡಿಯಾ ಮೈತ್ರಿಕೂಟದ ಸಿಪಿಐ(ಎಂಎಲ್)ಎಲ್, 20 ಅಭ್ಯರ್ಥಿಗಳ ಪಟ್ಟಿಯನ್ನು ಶನಿವಾರ ಬಿಡುಗಡೆ ಮಾಡಿದೆ. ಎಲ್ಲ 12 ಹಾಲಿ ಶಾಸಕರಿಗೆ ಟಿಕೆಟ್ ಕೊಡಲಾಗಿದೆ. 2020ರ ವಿಧಾನಸಭಾ ಚುನಾವಣೆಯಲ್ಲಿ ಗೆಲ್ಲಲು ಸಾಧ್ಯವಾಗದ ಸ್ಥಾನಗಳಲ್ಲಿ ಪಕ್ಷವು ಹೊಸ ಮುಖಗಳನ್ನು ಕಣಕ್ಕಿಳಿಸಿದೆ. ಎಡಪಕ್ಷವು ಕಳೆದ ವಿಧಾನಸಭಾ ಚುನಾವಣೆಯಲ್ಲಿ 19 ಸ್ಥಾನಗಳಲ್ಲಿ ಸ್ಪರ್ಧಿಸಿ 12 ಸ್ಥಾನಗಳನ್ನು ಗೆದ್ದಿತ್ತು.

### ವೇತನ ಸಹಿತ ರಜೆ ಕಡ್ಡಾಯ: ಆಯೋಗ

ನವದೆಹಲಿ (ಪಿಟಿಐ): ಬಿಹಾರ ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ಮತದಾನದ ದಿನ ವೇತನ ಸಹಿತ ರಜೆ ಪಡೆಯಲು ಮತದಾರರು ಅರ್ಹರಾಗಿರುತ್ತಾರೆ. ಈ ನಿಯಮ ಉಲ್ಲಂಘಿಸುವ ಉದ್ಯೋಗದಾತ ಸಂಸ್ಥೆಗಳು ಕಾನೂನು ಕ್ರಮ ಎದುರಿಸಬೇಕಾಗುತ್ತದೆ ಎಂದು ಚುನಾವಣಾ ಆಯೋಗ ಶನಿವಾರ ತಿಳಿಸಿದೆ. ನವೆಂಬರ್ 11ರಂದು ನಡೆಯುವ ವಿವಿಧ ರಾಜ್ಯಗಳ ಎಂಟು ವಿಧಾನಸಭೆಗಳ ಉಪ ಚುನಾವಣೆಗೂ ಈ ನಿಯಮ ಅನ್ವಯವಾಗಲಿದೆ ಎಂದು ತಿಳಿಸಿದೆ.

ಪ್ರಜಾಪ್ರತಿನಿಧಿ ಕಾಯ್ದೆ 1951ರ ಸೆಕ್ಷನ್ 135ಬಿ ಪ್ರಕಾರ ಯಾವುದೇ ವ್ಯಾಪಾರ, ವ್ಯವಹಾರ ಅಥವಾ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುವ ಉದ್ಯೋಗಿಯು ವಿಧಾನಸಭೆ ಅಥವಾ ಲೋಕಸಭೆ ಚುನಾವಣೆಯಲ್ಲಿ ಮತ ಚಲಾಯಿಸಲು ವೇತನ ಸಹಿತ ರಜೆ ನೀಡಬೇಕು ಎಂದು ತಿಳಿಸಿದೆ.

ದಿನಗೂಲಿ ಮತ್ತು ಸಾಮಾನ್ಯ ಕಾರ್ಮಿಕರಿಗೂ ಚುನಾವಣೆ ದಿನ ವೇತನ ಸಹಿತ ರಜೆ ನೀಡಬೇಕು ಎಂದು ಅದು ಹೇಳಿದೆ.


## ಸುದ್ದಿ 2 ನಿಮಿಷ

### ಪಿ.ಜಿ ರಾಷ್ಟ್ರೀಯ ಪ್ರಶಸ್ತಿಗೆ ಗಾಯಕ ಟಿ.ಎಂ. ಕೃಷ್ಣ ಆಯ್ಕೆ

ತಿರುವನಂತಪುರ (ಪಿಟಿಐ): ಸಿದ್ಧಾಂತವಾದಿ ಹಾಗೂ ಬರಹಗಾರರಾದ ಪಿ. ಗೋವಿಂದ ಪಿಳ್ಳೈ ಅವರ ಸ್ಮರಣಾರ್ಥ ಸ್ಥಾಪಿಸಿರುವ ಪಿ.ಜಿ. ರಾಷ್ಟ್ರೀಯ ಪ್ರಶಸ್ತಿಗೆ ಗಾಯಕ ಟಿ.ಎಂ. ಕೃಷ್ಣ ಆಯ್ಕೆಯಾಗಿದ್ದಾರೆ.

₹3 ಲಕ್ಷ ನಗದು, ಪ್ರಶಸ್ತಿ ಪತ್ರ ಮತ್ತು ಮೂರ್ತಿಯನ್ನು ಹೊಂದಿರುವ ಈ ಪ್ರಶಸ್ತಿಯನ್ನು ಪಿ.ಜಿ. ಸಂಸ್ಕೃತಿ ಕೇಂದ್ರವು ಪ್ರದಾನ ಮಾಡಲಿದೆ.

ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಎಂ.ಎ. ಬೇಬಿ, ಸಂಗೀತಗಾರ ಶ್ರೀವಲ್ಸನ್ ಜೆ. ಮೆನನ್, ನರ್ತಕಿ ರಾಜಶ್ರೀ ವಾರಿಯರ್, ಪಿ.ಜಿ. ಸಂಸ್ಕೃತಿ ಕೇಂದ್ರದ ಕಾರ್ಯದರ್ಶಿ ಆರ್. ಪಾರ್ವತಿ ದೇವಿ ಅವರನ್ನೊಳಗೊಂಡ ಸಮಿತಿಯು ಐದನೇ ವರ್ಷದ ಪ್ರಶಸ್ತಿಗೆ ಟಿ.ಎಂ. ಕೃಷ್ಣ ಅವರನ್ನು ಆಯ್ಕೆ ಮಾಡಿದೆ ಎಂದು ಪ್ರಕಟಣೆ ತಿಳಿಸಿದೆ.



ತಿರುವನಂತಪುರದ ಎಕೆಜಿ ಆಡಿಟೋರಿಯಂನಲ್ಲಿ ನ.22ರಂದು ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ.

ವಕೀಲ, ಸಾಮಾಜಿಕ ಕಾರ್ಯಕರ್ತ ಪ್ರಶಾಂತ್ ಭೂಷಣ್, ಪತ್ರಕರ್ತ ಎನ್.ರಾಮ್, ಸಾಹಿತಿ ಅರುಂಧತಿ ರಾಯ್, ಇತಿಹಾಸಕಾರರಾದ ರೊಮಿಲಾ ಥಾಪರ್ ಈ ಹಿಂದಿನ ವರ್ಷಗಳಲ್ಲಿ ಪ್ರಶಸ್ತಿಗೆ ಭಾಜನರಾದವರು.

### ಮೊಬೈಲ್ ಟವರ್‌ಗೆ ಬೆಂಕಿ ಹಚ್ಚಿದ್ದ ಇಬ್ಬರು ನಕ್ಸಲರ ಸೆರೆ

ಚಾಯಿಬಾಸಾ/ಜಾರ್ಖಂಡ್ (ಪಿಟಿಐ): ಇಲ್ಲಿನ ಜರೈಕೆಲಾ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮೊಬೈಲ್ ಫೋನ್ ಟವರ್‌ಗಳಿಗೆ ಬೆಂಕಿ ಹಚ್ಚಿದ್ದ, ಛೋಟಾನಗರ ಪೊಲೀಸ್ ಠಾಣಾ ವ್ಯಾಪ್ತಿಯ ರಖಾಮತಿಯಲ್ಲಿ ಕಾಲುವೆಗಳನ್ನು ಸ್ಫೋಟಿಸಿದ್ದ ಇಬ್ಬರು ನಕ್ಸಲರನ್ನು ಜಾರ್ಖಂಡ್ ಪೊಲೀಸರು ಬಂಧಿಸಿದ್ದಾರೆ.

ಆಲ್ಬರ್ಟ್ ಲೊಮ್ಗಾ ಅಲಿಯಾಸ್ ರೆಂಗಾ ಲೊಮ್ಗಾ (19) ಹಾಗೂ ವಿಕಾಸ್ ಲೊಮ್ಗಾ ಅಲಿಯಾಸ್ ರಾಪಾ ಲೊಮ್ಗಾ (20) ಅವರನ್ನು ಶುಕ್ರವಾರ ಇಲ್ಲಿನ ಸಿಂಗ್‌ಭೂಮ್ ಜಿಲ್ಲೆಯಲ್ಲಿ ಬಂಧಿಸಲಾಗಿದೆ.

ಬಂಧಿತರಿಂದ 9 ವಾಲ್ಟ್ ಸಾಮರ್ಥ್ಯದ 22 ಬ್ಯಾಟರಿ ಹಾಗೂ 200 ಮೀಟರ್ ವೈರ್‌ಗಳನ್ನು ವಶಕ್ಕೆ ಪಡೆಯಲಾಗಿದೆ.

ಇದೇ ಜಿಲ್ಲೆಯ ಜೆತಿಯಾ ಪೊಲೀಸ್ ಠಾಣಾ ವ್ಯಾಪ್ತಿಯ ಅರಣ್ಯದಲ್ಲಿ ಮತ್ತೊಂದು ಕಾರ್ಯಾಚರಣೆಯಲ್ಲಿ ಅಪಾರ ಪ್ರಮಾಣದ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ.

'ಮಾವೋವಾದಿಗಳು ಅಪಾರ ಪ್ರಮಾಣದ ಶಸ್ತ್ರಾಸ್ತ್ರಗಳನ್ನು ಕಾಡಿನಲ್ಲಿ ಅಡಗಿಸಿರಿಸಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.

'ಬಂಧಿತರಿಂದ 10 ಇನ್ಸಾಸ್ ರೈಫಲ್, 198 ಜೀವಂತ ಗುಂಡುಗಳು, 112 ಕ್ಯಾಟ್ರಿಡ್ಜ್‌ಗಳನ್ನು ವಶಕ್ಕೆ ಪಡೆಯಲಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಮಿತ್ ರೇಣು ತಿಳಿಸಿದ್ದಾರೆ.

ಸಿಆರ್‌ಪಿಎಫ್, ಕೋಬ್ರಾ, ಜಾರ್ಖಂಡ್ ಜಾಗ್ವಾರ್ ಹಾಗೂ ಜಿಲ್ಲಾ ಪೊಲೀಸರ ಜಂಟಿ ಕಾರ್ಯಾಚರಣೆ ಮೂಲಕ ನಕ್ಸಲರನ್ನು ಬಂಧಿಸಲಾಗಿದೆ.

## ಜಮ್ಮು–ಕಾಶ್ಮೀರಕ್ಕೆ ರಾಜ್ಯ ಸ್ಥಾನಮಾನ: ಕೇಂದ್ರ ಗೃಹ ಸಚಿವ ಭರವಸೆ

# ಸೂಕ್ತ ಸಮಯದಲ್ಲಿ ತೀರ್ಮಾನ: ಶಾ

ಪಟ್ನಾ (ಪಿಟಿಐ): ಜಮ್ಮು ಮತ್ತು ಕಾಶ್ಮೀರಕ್ಕೆ ಸೂಕ್ತ ಸಮಯದಲ್ಲಿ ರಾಜ್ಯ ಸ್ಥಾನಮಾನವನ್ನು ಮತ್ತೆ ನೀಡಲಾಗುವುದು ಮತ್ತು ಕೇಂದ್ರಾಡಳಿತ ಪ್ರದೇಶವಾದ ಲಡಾಖ್‌ನ ಜನರ ಬೇಡಿಕೆಗಳಿಗೆ ಉತ್ತಮ ಪರಿಹಾರ ದೊರೆಯಲಿದೆ ಎಂದು ಗೃಹ ಸಚಿವ ಅಮಿತ್ ಶಾ ಶನಿವಾರ ಭರವಸೆ ನೀಡಿದರು.

'ಬಿಹಾರ ಸಮಾಗಮ' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಜಮ್ಮು ಮತ್ತು ಕಾಶ್ಮೀರಕ್ಕೆ ಸಂವಿಧಾನದ 370ನೇ ವಿಧಿಯಡಿ ನೀಡಲಾಗಿದ್ದ ವಿಶೇಷ ಸ್ಥಾನಮಾನವನ್ನು ಹಿಂಪಡೆದ ಬಳಿಕ, ಸಾಕಷ್ಟು ಪ್ರಗತಿ ಸಾಧ್ಯವಾಗಿದೆ. ಭಯೋತ್ಪಾದನೆಗೆ ಸ್ಥಳೀಯರ ನೇಮಕಾತಿ ಒಂಬತ್ತು ತಿಂಗಳಿಂದ ನಡೆದಿಲ್ಲ ಎಂಬುದು ಗೊತ್ತಾಗಿದೆ' ಎಂದು ಅವರು ಹೇಳಿದರು.

**ಲಡಾಖ್ ಕುರಿತು ಮಾತುಕತೆ:** 'ಲೇಹ್ ಮತ್ತು ಕಾರ್ಗಿಲ್‌ನ ಸಮಿತಿಗಳ ಜತೆಗೆ ಕೇಂದ್ರ ಸರ್ಕಾರ ಮಾತುಕತೆ ನಡೆಸಲಿದ್ದು, ಲಡಾಖ್‌ನ ಜನರ ಬೇಡಿಕೆಗಳಿಗೆ ಉತ್ತಮ ಸ್ಪಂದನ ದೊರೆಯಲಿದೆ. ಇದಕ್ಕಾಗಿ ಜನರು ತಾಳ್ಮೆ ಹೊಂದಿರಬೇಕು' ಎಂದು ಅಮಿತ್ ಶಾ ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

> **ಜಮ್ಮು ಮತ್ತು ಕಾಶ್ಮೀರಕ್ಕೆ ರಾಜ್ಯದ ಸ್ಥಾನಮಾನ ಪುನಃ ಸ್ಥಾಪನೆಯಾದರೆ, ಅದರ ಬೆನ್ನಲ್ಲೇ ಸಾರ್ವಜನಿಕ ಸುರಕ್ಷಾ ಕಾಯ್ದೆಯನ್ನು (ಪಿಎಸ್‌ಎ) ಸುಗ್ರೀವಾಜ್ಞೆ ಮೂಲಕ ರದ್ದುಗೊಳಿಸಲಾಗುವುದು –**
> **ಒಮರ್ ಅಬ್ದುಲ್ಲಾ**
> ಮುಖ್ಯಮಂತ್ರಿ, ಜಮ್ಮು ಮತ್ತು ಕಾಶ್ಮೀರ

ಬಂಧಿತರಾಗಿರುವ ಲಡಾಖ್ ಹೋರಾಟಗಾರ, ಪರಿಸರ ಕಾರ್ಯಕರ್ತರ ಸೋನಮ್ ವಾಂಗ್ಚುಕ್ ಅವರ ಬಿಡುಗಡೆ ಕುರಿತು ಕೇಳಿದ ಪ್ರಶ್ನೆಗೆ, 'ನಾನು ಜನರ ಬೇಡಿಕೆಗಳ ಬಗ್ಗೆ ಮಾತನಾಡಬಲ್ಲೆನೇ ಹೊರತು ವ್ಯಕ್ತಿಗತ ಬೇಡಿಕೆಗಳ ಬಗ್ಗೆಯಲ್ಲ. ಅದಾಗ್ಯೂ, ಅವರ (ವಾಂಗ್ಚುಕ್) ಪ್ರಕರಣ ನ್ಯಾಯಾಲಯದಲ್ಲಿದ್ದು, ಅದು ಪುರಾವೆಗಳನ್ನು ಆಧರಿಸಿ ನಿರ್ಧಾರ ತೆಗೆದುಕೊಳ್ಳಲಿದೆ' ಎಂದು ಉತ್ತರಿಸಿದರು.

### 'ಆರ್‌ಜೆಡಿಯನ್ನು ನಂಬಬೇಡಿ'

ಬಿಹಾರದಲ್ಲಿ ಎನ್‌ಡಿಎ ಪುನಃ ಅಧಿಕಾರಕ್ಕೆ ಬರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ ಕೇಂದ್ರ ಗೃಹ ಸಚಿವ ಅಮಿತ್ ಶಾ, 'ಇಂಡಿಯಾ' ಕೂಟದಲ್ಲಿರುವ ಆರ್‌ಜೆಡಿಯನ್ನು 'ಹೊಸ ಮುಖವಾಡ ಧರಿಸಿರುವ ಜಂಗಲ್ ರಾಜ್' ಎಂದು ಬಣ್ಣಿಸಿದರು.

'ರಾಜ್ಯದಲ್ಲಿ ಮತ್ತೆ ಜಂಗಲ್ ರಾಜ್ ತರುವ ಪಕ್ಷವನ್ನು ನಂಬಬೇಡಿ' ಎಂದು ಜನರಲ್ಲಿ ಮನವಿ ಮಾಡಿದರು. 'ಪ್ರಧಾನಿ ನರೇಂದ್ರ ಮೋದಿ ಮತ್ತು ಮುಖ್ಯಮಂತ್ರಿ ನಿತೀಶ್ ಕುಮಾರ್ ಸಾರಥ್ಯದಲ್ಲಿ ಬಿಹಾರ ಮತ್ತಷ್ಟು ಪ್ರಗತಿಗೆ ಸಾಕ್ಷಿಯಾಗಲಿದೆ' ಎಂದು ಹೇಳಿದರು.

### ಶಾಂತಿಯುತ ಮೆರವಣಿಗೆ

ಶ್ರೀನಗರ: ಕೇಂದ್ರಾಡಳಿತ ಪ್ರದೇಶವಾದ ಲಡಾಖ್‌ಗೆ ರಾಜ್ಯದ ಸ್ಥಾನಮಾನ ಒದಗಿಸುವಂತೆ ಆಗ್ರಹಿಸಿ ಲೇಹ್ ಅಪೆಕ್ಸ್ ಬಾಡಿ (ಎಲ್‌ಎಬಿ) ಮತ್ತು ಕಾರ್ಗಿಲ್ ಪ್ರಜಾಸತ್ತಾತ್ಮಕ ಒಕ್ಕೂಟ (ಕೆಡಿಎ) ಜಂಟಿಯಾಗಿ ಆಯೋಜಿಸಿದ್ದ ಮೌನ ಮೆರವಣಿಗೆ ಶನಿವಾರ ಲೇಹ್‌ನಲ್ಲಿ ನಡೆಸಲು ಸಾಧ್ಯವಾಗಲಿಲ್ಲ. ಆದರೆ ಕಾರ್ಗಿಲ್‌ನಲ್ಲಿ ಸುಗಮವಾಗಿ ನಡೆಯಿತು.

ಮೊಬೈಲ್ ಇಂಟರ್‌ನೆಟ್ ಸಂಪರ್ಕ ಕಡಿತ ಸೇರಿದಂತೆ ಕಠಿಣ ನಿರ್ಬಂಧಗಳನ್ನು ಅಧಿಕಾರಿಗಳು ಜಾರಿಗೊಳಿಸಿದ್ದರಿಂದ ಲೇಹ್‌ನಲ್ಲಿ ಮೆರವಣಿಗೆ ನಡೆಯಲಿಲ್ಲ. ಆದರೆ ಪಕ್ಕದ ಕಾರ್ಗಿಲ್‌ನಲ್ಲಿ ನಡೆದ ಮೌನ ಮೆರವಣಿಗೆಯಲ್ಲಿ ನೂರಾರು ಜನರು ಭಾಗವಹಿಸಿ, ಕೇಂದ್ರ ಸರ್ಕಾರದ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು. ಲೇಹ್‌ನಲ್ಲಿ ವಿಧಿಸಿದ್ದ ನಿರ್ಬಂಧಗಳನ್ನು ಖಂಡಿಸಿದರು.

### ಎನ್‌ಡಿಎ ಅಭ್ಯರ್ಥಿ ನಾಮಪತ್ರ ತಿರಸ್ಕೃತ

ಪಟ್ನಾ (ಪಿಟಿಐ): ಎನ್‌ಡಿಎ ಮೈತ್ರಿಕೂಟದ ಭಾಗವಾಗಿರುವ ಕೇಂದ್ರ ಸಚಿವ ಚಿರಾಗ್ ಪಾಸ್ವಾನ್ ಅವರ ಪಕ್ಷದ ಅಭ್ಯರ್ಥಿಯೊಬ್ಬರ ನಾಮಪತ್ರ ಶನಿವಾರ ತಿರಸ್ಕೃತಗೊಂಡಿದೆ.

ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಲೋಕ ಜನಶಕ್ತಿ ಪಕ್ಷದ ಅಭ್ಯರ್ಥಿಯಾಗಿ(ರಾಮ್ ವಿಲಾಸ್) ಮರ್‌ಹೌರಾ ಕ್ಷೇತ್ರದಿಂದ ಸ್ಪರ್ಧಿಸಲು ಮಾಜಿ ನಟಿ ಸೀಮಾ ಸಿಂಗ್ ಅವರು ನಾಮಪತ್ರ ಸಲ್ಲಿಸಿದ್ದರು. ತಾಂತ್ರಿಕ ಕಾರಣದ ಆಧಾರದಲ್ಲಿ ಅವರ ನಾಮಪತ್ರವನ್ನು ಚುನಾವಣಾ ಅಧಿಕಾರಿಗಳು ತಿರಸ್ಕರಿಸಿದ್ದಾರೆ.

## ಮಹಾಲಕ್ಷ್ಮಿ ರಥೋತ್ಸವ

ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್



ಕಲಬುರಗಿ ಜಿಲ್ಲೆಯ ಜೇವರ್ಗಿಯಲ್ಲಿ ಶನಿವಾರ ನಡೆದ ಕಲ್ಕತ್ತದೇವಿ (ಮಹಾಲಕ್ಷ್ಮಿ) ರಥೋತ್ಸವದಲ್ಲಿ ಅಪಾರ ಭಕ್ತ ಸಮೂಹ ಪಾಲ್ಗೊಂಡಿತ್ತು

# ಚಿತ್ತಾಪುರ: ಪಥಸಂಚಲನ ಜಟಾಪಟಿ

ಒಂದನೇ ಪುಟದಿಂದ...

ಪಥಸಂಚಲನಕ್ಕೆ ಅನುಮತಿ ನೀಡುವಂತೆ ಆರ್‌ಎಸ್‌ಎಸ್ ಮುಖಂಡರು ತಾಲ್ಲೂಕು ಆಡಳಿತಕ್ಕೆ ಮನವಿ ಮಾಡಿದ್ದರು. ತಹಶೀಲ್ದಾರ್ ನಾಗಯ್ಯ ಹಿರೇಮಠ, ಪಥಸಂಚಲನದಲ್ಲಿ ಭಾಗವಹಿಸುವವರ ಸಂಖ್ಯೆ, ಕಾರ್ಯಕ್ರಮ ನಡೆಯಲಿರುವ ಕಲ್ಯಾಣ ಮಂಟಪದ ಮಾಲೀಕರ ಅನುಮತಿ ಪತ್ರ, ಶಾಂತಿ ಮತ್ತು ಸುವ್ಯವಸ್ಥೆಗೆ ಧಕ್ಕೆ ಉಂಟಾಗದಂತೆ ಕೈಗೊಂಡಿರುವ ಕ್ರಮಗಳ ಕುರಿತು ವಿಸ್ತೃತ ಮಾಹಿತಿ ನೀಡುವಂತೆ ಸೂಚಿಸಿದ್ದರು. ಅದರಂತೆ ಶನಿವಾರ ಸಂಜೆ ಆರ್‌ಎಸ್‌ಎಸ್ ಮುಖಂಡರು ತಹಶೀಲ್ದಾರ್ ಕೇಳಿದ್ದ ವಿವರಣೆಗಳಿಗೆ ಪೂರಕ ಮಾಹಿತಿಯನ್ನು ಸಲ್ಲಿಸಿದರು. ಬಳಿಕ ಅನುಮತಿ ನೀಡುವ ಕುರಿತು ಅಭಿಪ್ರಾಯ ನೀಡುವಂತೆ ತಹಶೀಲ್ದಾರ್ ಅವರು ಪೊಲೀಸರಿಂದ ವರದಿಯನ್ನು ಕೇಳಿದರು. ಶನಿವಾರ ರಾತ್ರಿಯವರೆಗೂ ಪೊಲೀಸರಿಂದ ತಾಲ್ಲೂಕು ಆಡಳಿತಕ್ಕೆ ವರದಿ ಬಾರದೇ ಇರುವುದರಿಂದ ಪಥಸಂಚಲನಕ್ಕೆ ಅನುಮತಿ ಸಿಕ್ಕಿಲ್ಲ ಎಂದು ಮೂಲಗಳು ತಿಳಿಸಿವೆ.

ಏತನ್ಮಧ್ಯೆ ಭೀಮ್ ಆರ್ಮಿಯವರೂ ಚಿತ್ತಾಪುರ ಪಟ್ಟಣದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಸ್ಮರಣೆಯಲ್ಲಿ ಭೀಮ ಪಥಸಂಚಲನ ನಡೆಸಲು ಅನುಮತಿ ಕೋರಿ ಶನಿವಾರ ಸಂಜೆ ಅರ್ಜಿ ಸಲ್ಲಿಸಿದ್ದಾರೆ. ಅದಕ್ಕೂ ತಾಲ್ಲೂಕು ಆಡಳಿತ ರಾತ್ರಿಯವರೆಗೂ ಅನುಮತಿ ನೀಡಿರಲಿಲ್ಲ.

### ಪ್ರವೀಣ್ ಪರ ವಕಾಲತ್ತು: ತೇಜಸ್ವಿ ಸೂರ್ಯ

ಒಂದನೇ ಪುಟದಿಂದ...

'ಆರ್‌ಎಸ್‌ಎಸ್‌ನ ಕಾರ್ಯಕ್ರಮಗಳಲ್ಲಿ ಸರ್ಕಾರಿ ನೌಕರರು ಭಾಗಿಯಾಗುವ ಹಕ್ಕುಗಳನ್ನು ಹೈಕೋರ್ಟ್‌ಗಳು ಎತ್ತಿಹಿಡಿದ ಹಲವು ಉದಾಹರಣೆಗಳಿವೆ. ಕಾಂಗ್ರೆಸ್ ಸರ್ಕಾರದ ಈ ಅಮಾನತು ಆದೇಶ ರದ್ದಾಗುವುದರಲ್ಲಿ ಯಾವುದೇ ಅನುಮಾನವಿಲ್ಲ. ಸಿದ್ದರಾಮಯ್ಯ ಅವರ ಸರ್ಕಾರವು ಕಾನೂನು ಹೋರಾಟವನ್ನೇ ಬಯಸಿದರೆ, ನಾವೂ ಅದಕ್ಕೆ ಸಿದ್ಧರಿದ್ದೇವೆ' ಎಂದು ಹೇಳಿದ್ದಾರೆ.

### ನಮಾಜ್: ಅನುಮತಿ ಪಡೆಯುವರೆ?

ಒಂದನೇ ಪುಟದಿಂದ...

ಸಾರ್ವಜನಿಕ ಸ್ಥಳಗಳಲ್ಲಿ ಕಾರ್ಯಕ್ರಮ ಆಯೋಜಿಸಲು ಅನುಮತಿ ಪಡೆದುಕೊಳ್ಳುವುದು ಕಡ್ಡಾಯ ಮಾಡಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಜಾರಿ ಮಾಡಲು ಸಾಧ್ಯವಾಗುವ ಕಾನೂನು ಮಾಡಬೇಕು. ಜಾರಿ ಮಾಡಲಾಗದ ಕಾನೂನು ತಂದರೆ ಅದು ಪುಸ್ತಕದಲ್ಲಿ ಇರುತ್ತದೆ. ಹೊಸ ನಿಯಮ ಎಷ್ಟರ ಮಟ್ಟಿಗೆ ಜಾರಿಗೆ ಬರುತ್ತದೆ ಎಂಬುದನ್ನು ಕಾದು ನೋಡಬೇಕಿದೆ' ಎಂದರು.

### ಮೆರವಣಿಗೆಗೆ ಪೂರ್ವಾನುಮತಿ ಕಡ್ಡಾಯ

ಒಂದನೇ ಪುಟದಿಂದ...

ಸರ್ಕಾರಿ–ಅನುದಾನಿತ ಶಾಲಾ–ಕಾಲೇಜುಗಳು, ಸರ್ಕಾರಿ ವಿಶ್ವವಿದ್ಯಾಲಯಗಳು, ಸರ್ಕಾರಿ ಕಚೇರಿ ಮತ್ತು ನಿಗಮ ಮಂಡಳಿಗಳ ಆವರಣಗಳು, ಮೈದಾನ, ಉದ್ಯಾನಗಳು ಮತ್ತು ಸಾರ್ವಜನಿಕ ರಸ್ತೆಗಳಲ್ಲಿ ಆಯೋಜಿಸಲು ಇಚ್ಛಿಸುವ ಕಾರ್ಯಕ್ರಮಗಳು ಹಾಗೂ ಮೆರವಣಿಗೆಗಳಿಗೆ ಇದು ಅನ್ವಯವಾಗುತ್ತದೆ. ಈ ಆದೇಶವನ್ನು ಉಲ್ಲಂಘಿಸಿ ಸರ್ಕಾರಿ ಜಾಗಗಳಲ್ಲಿ ಕಾರ್ಯಕ್ರಮ ಆಯೋಜಿಸಿರುವವರ ವಿರುದ್ಧ ಅಪರಾಧ ಪ್ರಕರಣ ದಾಖಲಿಸಬೇಕು ಎಂದು ಸೂಚಿಸಿದೆ.

### ಪೋಟಿ ನಿವಾಸದಲ್ಲಿ ಶೋಧ

ತಿರುವನಂತಪುರ (ಪಿಟಿಐ): ಶಬರಿಮಲೆ ದೇವಸ್ಥಾನದ ಚಿನ್ನ ಕಳವು ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡದ (ಎಸ್‌ಐಟಿ) ಅಧಿಕಾರಿಗಳು ಪ್ರಮುಖ ಆರೋಪಿ ಉನ್ನಿಕೃಷ್ಣನ್ ಪೋಟಿ ಅವರ ನಿವಾಸದಲ್ಲಿ ಶನಿವಾರ ಶೋಧ ಕಾರ್ಯ ನಡೆಸಿದರು. ತನಿಖಾಧಿಕಾರಿ ಎಸ್.ಶಶಿಧರನ್ ನೇತೃತ್ವದ ಅಧಿಕಾರಿಗಳ ತಂಡವು ಪುಲಿಮಠದಲ್ಲಿರುವ ಪೋಟಿ ಅವರ ನಿವಾಸಕ್ಕೆ ಮಧ್ಯಾಹ್ನ 3ರ ಸುಮಾರಿಗೆ ತೆರಳಿ ಶೋಧ ನಡೆಸಿತು. ಕೆಲ ದಾಖಲೆಗಳು ಹಾಗೂ ಡಿಜಿಟಲ್ ಉಪಕರಣಗಳಿಗಾಗಿ ಹುಡುಕಾಟ ನಡೆಸಿತು.

# ಮೀಸಲು: ತೆಲಂಗಾಣ ಬಂದ್ ಯಶಸ್ವಿ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಹಿಂದುಳಿದ ವರ್ಗಗಳಿಗೆ ಶೇ 42ರಷ್ಟು ಮೀಸಲಾತಿ ನೀಡಬೇಕು ಎಂದು ಆಗ್ರಹಿಸಿ ಹಿಂದುಳಿದ ವರ್ಗಗಳ ವಿವಿಧ ಸಂಘಟನೆಗಳು ಶನಿವಾರ ತೆಲಂಗಾಣ ಬಂದ್‌ಗೆ ಕರೆ ನೀಡಿದ್ದವು. ಕಾಂಗ್ರೆಸ್, ಬಿಆರ್‌ಎಸ್ ಮತ್ತು ಬಿಜೆಪಿ ಸೇರಿ ಎಲ್ಲ ಪಕ್ಷಗಳು ಬಂದ್‌ಗೆ ಬೆಂಬಲ ನೀಡಿದ್ದವು.

ಮೀಸಲಾತಿ ಹೆಚ್ಚಿಸುವ ಸರ್ಕಾರದ ಆದೇಶಕ್ಕೆ ಹೈಕೋರ್ಟ್ ಇತ್ತೀಚೆಗೆ ತಡೆ ನೀಡಿತ್ತು. ಇದನ್ನು ಪ್ರಶ್ನಿಸಿ ಸರ್ಕಾರವು ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು. 'ಹೈಕೋರ್ಟ್‌ನ ಆದೇಶದಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ' ಎಂದು ಸುಪ್ರೀಂ ಕೋರ್ಟ್ ಹೇಳಿತ್ತು. ಬಂದ್‌ಗೆ ಕರೆ ನೀಡಲು ಇದೇ ಕಾರಣವಾಯಿತು.

ರಾಜ್ಯದಾದ್ಯಂತ ಬಂದ್‌ಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿತ್ತು. ಬಂದ್ ಬಹುತೇಕ ಶಾಂತಿಯುತವಾಗಿತ್ತು. ಶಾಲೆ–ಕಾಲೇಜುಗಳು, ಅಂಗಡಿಗಳು ಸ್ವಯಂಪ್ರೇರಿತವಾಗಿ ಮುಚ್ಚಿದ್ದವು. ಬಸ್ ಸಂಚಾರ ಸ್ಥಗಿತವಾಗಿತ್ತು. ಮೀಸಲಾತಿ ಪ್ರಮಾಣ ಏರಿಸುವ ಆದೇಶ ಜಾರಿಗೆ ಬಿಜೆಪಿ ಮತ್ತು ಬಿಆರ್‌ಎಸ್ ತಡೆಯೊಡ್ಡಿವೆ ಎಂದು ಕಾಂಗ್ರೆಸ್ ದೂರಿದರೆ, ಕೋರ್ಟ್‌ನಲ್ಲಿ ಹಿನ್ನಡೆಯಾಗಿದ್ದಕ್ಕೆ ವಿರೋಧ ಪಕ್ಷಗಳು ಕಾಂಗ್ರೆಸ್ ಅನ್ನು ದೂರಿದವು. 'ಜಾತಿ ಸಮೀಕ್ಷೆ ನಡೆಸಿಯೇ ಮೀಸಲಾತಿ ಪ್ರಮಾಣ ಹೆಚ್ಚಿಸುವ ನಿರ್ಧಾರ ಕೈಗೊಳ್ಳಲಾಗಿತ್ತು. ನಮ್ಮ ಮಸೂದೆಗೆ ರಾಜ್ಯಪಾಲರು ಒಪ್ಪಿಗೆ ನೀಡಿದರು. ಆದರೆ, ಮಾರ್ಚ್ 30ರಿಂದ ಇದು ರಾಷ್ಟ್ರಪತಿಯವರ ಒಪ್ಪಿಗಾಗಿ, ಅವರ ಬಳಿ ಇದೆ' ಎಂದು ಸಾರಿಗೆ ಸಚಿವ ಪೊನ್ನಂ ಪ್ರಭಾಕರ ಹೇಳಿದರು.

'ಎರಡು ವರ್ಷಗಳಿಂದ ಪಂಚಾಯಿತಿ ಚುನಾವಣೆ ನಡೆಯದೇ ಇರುವುದು, ಕೇಂದ್ರವು ತಾನು ರಾಜ್ಯಗಳಿಗೆ ನೀಡುವ ಅನುದಾನವನ್ನು ತಡೆಹಿಡಿದಿರುವುದು ನಮಗೆ ಸವಾಲಾಗಿ ಪರಿಣಮಿಸಿದೆ. ಎಲ್ಲ ಪಕ್ಷಗಳು ಈ ಮಸೂದೆಗೆ ಒಪ್ಪಿಗೆ ನೀಡಿದರೂ ಕೇಂದ್ರ ಸರ್ಕಾರ ಮೌನ ವಹಿಸಿದೆ' ಎಂದರು.

### 'ನಮಗೆ ಮಾತ್ರವೇ ಶೇ 50ರಷ್ಟು ಮಿತಿ ತೊಡಕೆ?'

ಪ್ರಬಲ ಜಾತಿಗಳಲ್ಲಿ ಬಡವರಿದ್ದಾರೆ ಎಂಬ ನೆಪ ಒಡ್ಡಿ ಆ ಜಾತಿಗಳಿಗೆ ಶೇ 10ರಷ್ಟು ಇಡಬ್ಲ್ಯುಎಸ್ ಮೀಸಲಾತಿ ನೀಡಲಾಯಿತು. ಮೀಸಲಾತಿ ಮಿತಿ ಶೇ 50ರಷ್ಟೇ ಇರಬೇಕು ಎಂಬ ಸುಪ್ರೀಂ ಕೋರ್ಟ್ ಆದೇಶವನ್ನು ಶೇ 10ರ ಇಡಬ್ಲ್ಯುಎಸ್ ಮೀಸಲಾತಿಯು ಮೀರುತ್ತದೆ. ಯಾರೂ ಇದನ್ನು ಪ್ರಶ್ನಿಸುವುದಿಲ್ಲ. ಆದರೆ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಹೆಚ್ಚಿಸುವಾಗ ಮಾತ್ರ ಶೇ 50ರ ಮಿತಿ ತೊಡಕು ಎದುರಾಗುತ್ತದೆ. ಪ್ರಬಲ ಜಾತಿಗಳಿಗೆ ಇಲ್ಲದ ಮಿತಿ, ಹಿಂದುಳಿದ ಜಾತಿಗಳಿಗೆ ಮಾತ್ರ ಏಕೆ ಅನ್ವಯವಾಗಬೇಕು?

**ಮಂದಾಕೃಷ್ಣನ್ ಮಾದಿಗ**
ಮಾದಿಗ ಮೀಸಲಾತಿ ಹೋರಾಟ ಸಮಿತಿ ಸದಸ್ಯ

## ಜೀವಬೆದರಿಕೆ ದೂರು– ಪ್ರಿಯಾಂಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚಿತ್ತಾಪುರ ಬಿಜೆಪಿ ಅಭ್ಯರ್ಥಿಯಿಂದ ನನಗೆ ಜೀವ ಬೆದರಿಕೆ ಬಂದಿದೆ. ಕಾನೂನು ಪಾಲಿಸುವಂತೆ ಹೇಳಿದ್ದಕ್ಕೆ ಮನೆಗೆ ನುಗ್ಗಿ ಹೊಡೆಯುವುದಾಗಿ ಬೆದರಿಸಿದ್ದಾರೆ. ಈ ಬಗ್ಗೆ ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ (ಡಿಜಿಪಿ) ದೂರು ನೀಡುತ್ತೇನೆ' ಎಂದು ಕಲಬುರಗಿ ಜಿಲ್ಲಾ ಉಸ್ತುವಾರಿಯೂ ಆಗಿರುವ ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, 'ಚಿತ್ತಾಪುರದ ಬಿಜೆಪಿ ಅಭ್ಯರ್ಥಿ ನನಗೆ ಕರೆ ಮಾಡಿ ನೇರವಾಗಿ ಬೆದರಿಕೆ ಹಾಕಿದ್ದಾರೆ. 'ಆರ್‌ಎಸ್‌ಎಸ್‌ನವರು ದೇಶಭಕ್ತರು, ಮನೆಗೆ ನುಗ್ಗಿ ಹೊಡೆಯುತ್ತೇವೆ' ಎಂದಿದ್ದಾರೆ. ಇದನ್ನು ನಾವು ಸಹಿಸಬೇಕೇ? ಈ ಬೆದರಿಕೆ ವಿರುದ್ಧ ನಾನು ಡಿಜಿಪಿ ಮತ್ತು ಪೊಲೀಸ್ ಆಯುಕ್ತರಿಗೆ ದೂರು ನೀಡುತ್ತೇನೆ' ಎಂದು ಹೇಳಿದರು.

'ನಾನು ಜನರಿಂದ ಆಯ್ಕೆಯಾದ ಪ್ರತಿನಿಧಿ. ಅವರು ಸವಾಲು ಹಾಕುತ್ತಿರುವುದು ನನಗಲ್ಲ, ರಾಜ್ಯದ ಕಾನೂನಿಗೆ. ಹೀಗೆ ಎಲ್ಲರೂ ಕಾನೂನು ಪಾಲಿಸುವುದಿಲ್ಲ ಎಂದರೆ ದೇಶದ ಗತಿ ಏನಾಗಬೇಕು? ಅನುಮತಿ ಇಲ್ಲದ ಕಾರಣವೇ ನಾವು ಎಲ್ಲವನ್ನೂ ತೆರವು ಮಾಡಿದ್ದೇವೆ' ಎಂದರು.

'ನನ್ನ ಬ್ಯಾನರ್ ಅನಧಿಕೃತವಾಗಿ ಹಾಕಿದ್ದಾಗ ನಗರಪಾಲಿಕೆ ಆಯುಕ್ತರು ನನಗೇ ದಂಡ ವಿಧಿಸಿದ್ದರು. ಅವರೂ ಕೂಡ ನಿಯಮಾನುಸಾರ ಅನುಮತಿ ತೆಗೆದುಕೊಳ್ಳಲಿ, ನಿಗದಿತ ಶುಲ್ಕ ಕಟ್ಟಲಿ. ಆರ್‌ಎಸ್‌ಎಸ್ ಬ್ಯಾನರ್, ಧ್ವಜ ಅಥವಾ ಪಥಸಂಚಲನ ಯಾವುದೇ ಇರಲಿ, ಅದಕ್ಕೆ ಬಿಜೆಪಿಯವರು ಸಂಬಂಧಪಟ್ಟ ಪ್ರಾಧಿಕಾರದಿಂದ ಅನುಮತಿ ಪಡೆದು ಶುಲ್ಕ ಕಟ್ಟಲಿ' ಎಂದರು.

## ದಮನಕ್ಕೆ ಅಧಿಕಾರಿಗಳ ಬಳಕೆ: ವಿಜಯೇಂದ್ರ

ಬೆಂಗಳೂರು: ಚಿತ್ತಾಪುರದಲ್ಲಿ ಪಾಳೇಗಾರಿಕೆ ರಾಜಕಾರಣ ಅಟ್ಟಹಾಸ ಮೆರೆಯುತ್ತಿದೆ. ಅಭಿವ್ಯಕ್ತಿ ಹಾಗೂ ವಾಕ್ ಸ್ವಾತಂತ್ರ್ಯವನ್ನು ದಮನ ಮಾಡಲು, ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಕಾರ್ಯಕ್ರಮಕ್ಕೆ ಅಡ್ಡಿಪಡಿಸಲು ಸರ್ಕಾರಿ ಅಧಿಕಾರಿಗಳನ್ನು ಬಳಸಿಕೊಳ್ಳಲಾಗುತ್ತಿದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ದೂರಿದ್ದಾರೆ.

ಈ ಕುರಿತು 'ಎಕ್ಸ್' ಮಾಡಿರುವ ಅವರು, ಆರ್‌ಎಸ್‌ಎಸ್ ಸಂಘಟನೆಯ ಶತಮಾನ ಸಂಭ್ರಮ ಆಚರಣೆಗಾಗಿ ಆಯೋಜಿಸಿದ್ದ ಪಥಸಂಚಲನ ಕಾರ್ಯಕ್ರಮದ ಮೇಲೆ ಕೆಂಗಣ್ಣು ಬೀರಿರುವ ಪ್ರಿಯಾಂಕ್ ಖರ್ಗೆ ದ್ವೇಷ ರಾಜಕಾರಣ ಮುಂದುವರಿಸಿದ್ದಾರೆ ಎಂದು ಟೀಕಿಸಿದ್ದಾರೆ.

'ಶತಮಾನೋತ್ಸವದ ಆಚರಣೆಯನ್ನು ದುರುದ್ದೇಶ ಪೂರ್ವಕವಾಗಿ ತಡೆಯಲು ಯತ್ನಿಸಿರುವ ಘಟನೆ ಖಂಡನೀಯ. ಚಿತ್ತಾಪುರದಿಂದ ನಿಯಂತ್ರಿಸುತ್ತಿರುವ 'ರಿಪಬ್ಲಿಕ್ ಆಫ್ ಕಲಬುರಗಿ'ಯನ್ನು ಧಿಕ್ಕರಿಸಿ ಪ್ರಜಾಪ್ರಭುತ್ವ ಹಾಗೂ ಸಂವಿಧಾನದ ಘನತೆಯನ್ನು ಎತ್ತಿ ಹಿಡಿಯಲು ಜನರ ದನಿಯಾಗಿ ಬಿಜೆಪಿ ಹೋರಾಡಲಿದೆ' ಎಂದಿದ್ದಾರೆ.

## ಬಿಜೆಪಿಯಿಂದ ರಾಜ್ಯದಲ್ಲಿ ಶಾಂತಿ ಭಂಗ ಮಾಡಲು ಸಾಧ್ಯವಿಲ್ಲ: ಮುಖ್ಯಮಂತ್ರಿ

# ಆರ್‌ಎಸ್‌ಎಸ್ ಗುರಿಯಾಗಿಸಿಲ್ಲ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಮೈಸೂರು: 'ನಾವು ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು ಗುರಿ ಮಾಡುತ್ತಿಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಪಾದಿಸಿದರು.

ಇಲ್ಲಿ ಶನಿವಾರ ಪತ್ರಕರ್ತರೊಂದಿಗೆ ಮಾತನಾಡಿ, 'ಯಾವುದೇ ಸಂಘ–ಸಂಸ್ಥೆ ಸರ್ಕಾರಿ ಜಾಗಗಳಲ್ಲಿ ಕಾರ್ಯಕ್ರಮ ಮಾಡುವ ಮುನ್ನ ಅನುಮತಿ ಪಡೆಯಬೇಕೆಂಬ ನಿಟ್ಟಿನಲ್ಲಿ ಕ್ರಮ ಕೈಗೊಂಡಿದ್ದೇವೆ. ಜಗದೀಶ ಶೆಟ್ಟರ್ ಅವರು ಮುಖ್ಯಮಂತ್ರಿಯಾಗಿದ್ದಾಗಲೇ ಹೊರಡಿಸಿದ್ದ ಸುತ್ತೋಲೆಯನ್ನು ಈಗ ಅನುಷ್ಠಾನಗೊಳಿಸಿದ್ದೇವಷ್ಟೆ. ಆಗ ಆರ್‌ಎಸ್‌ಎಸ್‌ನವರು ಏಕೆ ವಿರೋಧಿಸಲಿಲ್ಲ' ಎಂದು ಕೇಳಿದರು.

'ಈ ವಿಷಯದಲ್ಲೂ ಬಿಜೆಪಿ ರಾಜಕಾರಣ ಮಾಡುತ್ತಿದೆ' ಎಂದು ದೂರಿದರು. 'ಕಲಬುರಗಿ ಜಿಲ್ಲೆ ಚಿತ್ತಾಪುರದಲ್ಲಿ ಆರ್‌ಎಸ್‌ಎಸ್‌ನವರು ಹಾಕಿದ್ದ ಬ್ಯಾನರ್, ಭಗವಾಧ್ವಜ ತೆರವುಗೊಳಿಸಿರುವುದು ನನಗೆ ಗೊತ್ತಿಲ್ಲ. ಮಾಹಿತಿ ಪಡೆದು ಪ್ರತಿಕ್ರಿಯಿಸುತ್ತೇನೆ. ಬಿಜೆಪಿಯಿಂದ ಕರ್ನಾಟಕದಲ್ಲಿ ಶಾಂತಿ ಭಂಗ ಮಾಡಲು ಸಾಧ್ಯವಿಲ್ಲ. ಪೊಲೀಸರು ಎಲ್ಲವನ್ನೂ ನೋಡಿಕೊಳ್ಳುತ್ತಾರೆ' ಎಂದು ಹೇಳಿದರು.

### ನಿಷೇಧಿಸುವ ಪ್ರಸ್ತಾವ ಇಲ್ಲ: ಪಾಟೀಲ

ಬೆಳಗಾವಿ: 'ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ಸೇರಿ ರಾಜ್ಯದಲ್ಲಿ ಯಾವುದೇ ಸಂಘಟನೆ ನಿಷೇಧಿಸುವ ಬಗ್ಗೆ ಸರ್ಕಾರ ಚಿಂತನೆ ನಡೆಸಿಲ್ಲ' ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ ಹೇಳಿದ್ದಾರೆ.

### ಪರೇಡ್‌ನಲ್ಲಿ ಅವಕಾಶ ನೀಡಿ'

ಬಾಗಲಕೋಟೆ: 'ನವದೆಹಲಿಯಲ್ಲಿ ಜನವರಿಯಲ್ಲಿ ನಡೆಯುವ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಪಾಲ್ಗೊಳ್ಳಲು ರಾಷ್ಟ್ರೀಯ ಸ್ವಯಂಸೇವಕ ಸಂಘಕ್ಕೆ ಅವಕಾಶ ನೀಡಬೇಕು' ಎಂದು ರಾಜ್ಯಸಭಾ ಸದಸ್ಯ ನಾರಾಯಣ ಭಾಂಡಗೆ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದ್ದಾರೆ.

### 'ಸ್ವಯಂಸೇವಕರೇ ರಾಜ್ಯ ಆಳಲಿದ್ದಾರೆ'

ಹಾಸನ: 'ಯಾವ ಸರ್ಕಾರವೂ ಆರ್‌ಎಸ್‌ಎಸ್ ಹತ್ತಿಕ್ಕಲು ಸಾಧ್ಯವಿಲ್ಲ. ಅಂತಹ ಪ್ರಯತ್ನ ಮೂರ್ಖತನದ ಪರಮಾವಧಿ. ನಾವು ಇನ್ನಷ್ಟು ದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತೇವೆ. ಆರ್‌ಎಸ್‌ಎಸ್‌ನ ಸ್ವಯಂಸೇವಕರೇ ರಾಜ್ಯದಲ್ಲಿ ಮುಂದಿನ ಆಡಳಿತ ನಡೆಸುತ್ತಾರೆ' ಎಂದು ಶಾಸಕ ವಿ.ಸುನಿಲ್‌ಕುಮಾರ್ ಹೇಳಿದ್ದಾರೆ.

### 'ದೇಶ ಇಷ್ಟಪಡದವರಿಂದ ವಿರೋಧ'

ಹಾಸನ: 'ಧರ್ಮ, ಶಿಸ್ತು ಹಾಗೂ ದೇಶವನ್ನು ಇಷ್ಟಪಡದವರು ಮಾತ್ರ ಆರ್‌ಎಸ್‌ಎಸ್ ವಿರೋಧಿಸುತ್ತಾರೆ' ಎಂದು ವಿಧಾನ ಪರಿಷತ್ ಸದಸ್ಯ ಎನ್. ರವಿಕುಮಾರ್ ಪ್ರತಿಪಾದಿಸಿದರು.

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಆರ್‌ಎಸ್‌ಎಸ್‌ನಿಂದ ದೇಶಕ್ಕಾದ ಒಂದೇ ಒಂದು ಕೆಡಕನ್ನು ಹೇಳಿ. ದೇಶಕ್ಕೆ ನಿಷ್ಠರಾಗಿರಿ. ಕೈಲಾದಷ್ಟು ಸಹಾಯ ಮಾಡಿ ಎಂದು ಸಂಘಟನೆ ಹೇಳುತ್ತದೆ. ಇದು ತಪ್ಪಾ? ತನಿಖಾ ವರದಿಗಳು ನೆಹರು ಕಾಲದಲ್ಲಿಯೇ ಬಂದಿವೆ. ಆ ಬಗ್ಗೆ ಹರಿಪ್ರಸಾದ್, ಸಂತೋಷ್‌ಲಾಡ್, ಪ್ರಿಯಾಂಕ್ ಏಕೆ ಮಾತನಾಡುತ್ತಿಲ್ಲ' ಎಂದು ಪ್ರಶ್ನಿಸಿದರು.

## 'ಗಂಧ ಮಹೋತ್ಸವ'ದಲ್ಲಿ ನೋಟು ಎರಚಿ ಸನ್ಮಾನ

# ಪೊಲೀಸರಿಗೆ ಷೋಕಾಸ್ ನೋಟಿಸ್

ಪ್ರಜಾವಾಣಿ ವಾರ್ತೆ

**ಚನ್ನಪಟ್ಟಣ:** ಇಲ್ಲಿನ ಬಡಾಮಕಾನ್ ದರ್ಗಾದಲ್ಲಿ ಹಜರತ್ ಸೈಯದ್ ಮಹಮ್ಮದ್ ಅಖಿಲ್ ಷಾ ಖಾದ್ರಿ ಅವರ ಗಂಧ ಮಹೋತ್ಸವ ಕೊನೆ ದಿನವಾದ ಶುಕ್ರವಾರ ರಾತ್ರಿ ನಡೆದ ಕವ್ವಾಲಿ ಕಾರ್ಯಕ್ರಮದಲ್ಲಿ ಆಯೋಜಕರು ಪಟ್ಟಣದ ಮೂವರು ಪೊಲೀಸರಿಗೆ ಸನ್ಮಾನಿಸಿ ಅವರ ಮೇಲೆ ನೋಟುಗಳನ್ನು ಎರಚಿದ್ದಾರೆ.

ಚನ್ನಪಟ್ಟಣ ಟೌನ್ ಠಾಣೆ ಪಿಎಸ್ಐ ಹರೀಶ್ ಸಿ.ಎಂ, ಎಎಸ್ಐ ಫೈರೋಜ್ ಹಾಗೂ ಪೂರ್ವ ಠಾಣೆಯ ದುರ್ಗಪ್ಪ ನೋಟಿನ ಸನ್ಮಾನ ಸ್ವೀಕರಿಸಿದವರು.

ಘಟನೆಯ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದ್ದಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್. ಶ್ರೀನಿವಾಸ ಗೌಡ ಅವರು ಮೂವರಿಗೂ ಷೋಕಾಸ್ ನೋಟಿಸ್ ನೀಡಿದ್ದಾರೆ.

ನಾಲ್ಕು ದಿನಗಳ ಗಂಧ ಮಹೋತ್ಸವ ಕಡೆ ದಿನ ರಾತ್ರಿ ಕವ್ವಾಲಿ ಕಾರ್ಯಕ್ರಮವಿತ್ತು. ಅದು ಮುಗಿದ ಬಳಿಕ ಮಹೋತ್ಸವಕ್ಕೆ ಶ್ರಮಿಸಿದವರಿಗೆ ಆಯೋಜಕರು ವೇದಿಕೆಗೆ ಕರೆದು ಸನ್ಮಾನಿಸುತ್ತಿದ್ದರು. ಅದರಂತೆ, ಮಹೋತ್ಸವಕ್ಕೆ ಪೊಲೀಸ್ ಬಂದೋಬಸ್ತ್ ಒದಗಿಸಿದ ಕಾರಣಕ್ಕೆ ಮೂವರೂ ಅಧಿಕಾರಿಗಳನ್ನು ವೇದಿಕೆಗೆ ಕರೆದರು. ಪೊಲೀಸ್ ಸಮವಸ್ತ್ರದಲ್ಲಿದ್ದ ಮೂವರಿಗೂ ದೊಡ್ಡ ಹೂವಿನ ಹಾರ, ಟ್ರೋಫಿ ನೀಡಿ ಸನ್ಮಾನಿಸಿದರು. ಬಳಿಕ, ₹20ರ ನೋಟುಗಳನ್ನು ಮೂವರ ಮೇಲೂ ಎರಚಿದರು. ಪೊಲೀಸರ ಮೈ ಮೇಲೆ ಎರಚುತ್ತಿದ್ದ ನೋಟುಗಳು ಕೆಳಕ್ಕೆ ಬೀಳುತ್ತಿದ್ದಾಗ ವೇದಿಕೆ ಮುಂಭಾಗದಲ್ಲಿ ಕುಳಿತಿದ್ದವರು ನಾ ಮುಂದು ತಾ ಮುಂದೆ ಎಂದು ಎತ್ತಿಕೊಂಡರು.

**ಷೋಕಾಸ್ ನೋಟಿಸ್ ಜಾರಿ:** 'ಎಸ್‌ಪಿ ಗಂಧ ಮಹೋತ್ಸವದ ಕಡೆ ದಿನ ಸನ್ಮಾನಿಸಿ ಹಣ ಎರಚಿರುವುದು ತಪ್ಪು. ಷೋಕಾಸ್ ನೋಟಿಸ್ ನೀಡಲಾಗಿದ್ದು, ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗುವುದು' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಶ್ರೀನಿವಾಸ ಗೌಡ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

## ಕನೇರಿಗೆ ಮರಳಿದ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿ

**ಬಾಗಲಕೋಟೆ:** ಜಿಲ್ಲೆಯ ಬೀಳಗಿ ತಾಲ್ಲೂಕಿನ ಚಿಕ್ಕಾಲಗುಂಡಿ ಗ್ರಾಮದಲ್ಲಿರುವ ಶಾಖಾ ಮಠದಲ್ಲಿದ್ದ ಮಹಾರಾಷ್ಟ್ರದ ಕೊಲ್ಹಾಪುರದ ಕನೇರಿ ಮಠದ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿ ಶನಿವಾರ ಬೆಳಿಗ್ಗೆ ಕನೇರಿಗೆ ಮರಳಿದರು.

ಶುಕ್ರವಾರ ಮಠಕ್ಕೆ ಬಂದಿದ್ದ ಸ್ವಾಮೀಜಿಯವರಿಗೆ ಜಿಲ್ಲೆಯಿಂದ ಹೊರಹೋಗಲು ಆದೇಶಿಸಿದ್ದ ಜಿಲ್ಲಾಧಿಕಾರಿ ಸಂಗಪ್ಪ, 'ಒಂದು ಗಂಟೆಯಲ್ಲಿ ಇಲ್ಲಿಂದ ಹೊರಡಬೇಕು' ಎಂದು ಹೇಳಿದ್ದರು.

## 'ಮಹಿ' ಕಾದಂಬರಿಗೆ ಜಿ.ಬಿ.ಹೊಂಬಳ ಮಕ್ಕಳ ಪ್ರಶಸ್ತಿ

**ಧಾರವಾಡ:** ಜಿ.ಬಿ.ಹೊಂಬಳ ಮಕ್ಕಳ ಸಾಹಿತ್ಯ ರಾಜ್ಯ ಪ್ರಶಸ್ತಿಗೆ ಬೆಂಗಳೂರಿನ ವಸು ವತ್ಸಲೆ ಅವರ 'ಮಹಿ' ಕಾದಂಬರಿ ಆಯ್ಕೆ ಯಾಗಿದೆ.



ವಸು ವತ್ಸಲೆ

ಪುರಸ್ಕಾರವು ₹15 ಸಾವಿರ ನಗದು ಮತ್ತು ಸ್ಮರಣಿಕೆ ಒಳಗೊಂಡಿದೆ.

ನವೆಂಬರ್ 10ರಂದು ನಿವೃತ್ತ ಹಿರಿಯ ಗ್ರಂಥಪಾಲಕ ಅಧಿಕಾರಿ ಜಿ.ಬಿ.ಹೊಂಬಳ ಅವರ ಜನ್ಮದಿನ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಜಿ.ಬಿ.ಹೊಂಬಳ ಪ್ರಶಸ್ತಿ ಸಮಿತಿ ಕಾರ್ಯದರ್ಶಿ ಆನಂದ ಪಾಟೀಲ ಅವರು ತಿಳಿಸಿದ್ದಾರೆ.

## ಎರಡು ದಿನಗಳಲ್ಲಿ ಗ್ರಾಮ ಪಂಚಾಯಿತಿ ಸಿಬ್ಬಂದಿ ಬಾಕಿ ವೇತನ ಪಾವತಿಗೆ ಸೂಚನೆ

ಪ್ರಜಾವಾಣಿ ವಾರ್ತೆ

**ಕಲಬುರಗಿ:** ಜಿಲ್ಲೆಯ ಮಳಖೇಡ ಗ್ರಾಮ ಪಂಚಾಯಿತಿಯ ಗ್ರಂಥಪಾಲ ಮಲ್ಲಿಕಾರ್ಜುನ ಆತ್ಮಹತ್ಯೆ ಮಾಡಿಕೊಂಡ ಬೆನ್ನಲ್ಲೇ ಎಚ್ಚೆತ್ತಿರುವ ಕರ್ನಾಟಕ ಪಂಚಾಯತ್‌ರಾಜ್ ಆಯುಕ್ತಾಲಯವು ಎರಡು ದಿನಗಳಲ್ಲಿ ಪಂಚಾಯಿತಿ ಸಿಬ್ಬಂದಿಯ ಬಾಕಿ ವೇತನ ಪಾವತಿಸುವಂತೆ ಎಲ್ಲ ಜಿಲ್ಲಾ ಪಂಚಾಯಿತಿ ಸಿಇಒಗಳಿಗೆ ತಾಕೀತು ಮಾಡಿದೆ.

ಈ ಕುರಿತು ಶನಿವಾರ ಸಿಇಒಗಳಿಗೆ ಪತ್ರ ಬರೆದಿರುವ ಪಂಚಾಯತ್‌ರಾಜ್ ಆಯುಕ್ತಾಲಯದ ಆಯುಕ್ತೆ ಅರುಂಧತಿ ಅವರು ಇದುವರೆಗೆ ಬಾಕಿ ಇರುವ ಎಲ್ಲ ವೇತನವನ್ನೂ ಪಾವತಿ ಮಾಡಬೇಕು. ವೇತನ ಪಾವತಿಯಾದ ಬಗ್ಗೆ ಆಯುಕ್ತಾಲಯಕ್ಕೆ ದೃಢೀಕರಣ ಸಲ್ಲಿಸಬೇಕು ಎಂದೂ ಪತ್ರದಲ್ಲಿ ತಿಳಿಸಿದ್ದಾರೆ.

ರಾಜ್ಯದ ಗ್ರಾಮ ಪಂಚಾಯಿತಿಗಳಲ್ಲಿ ಸಿ ಮತ್ತು ಡಿ ವರ್ಗದ ಹುದ್ದೆಗಳ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗೆ 2018ರ ಮಾರ್ಚ್ 1ರಿಂದ ಜಾರಿಗೆ ಬರುವಂತೆ ಸರ್ಕಾರದ ನಿಧಿಯಿಂದಲೇ ವೇತನ ಪಾವತಿಸಲು ಕ್ರಮ ವಹಿಸಲಾಗುತ್ತಿದೆ. ಆದರೂ ನಿಯಮಿತವಾಗಿ ವೇತನ ಪಾವತಿಯಾಗದಿರುವ ಬಗ್ಗೆ ದೂರುಗಳು ಬರುತ್ತಿದ್ದು, ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಿದೆ. ಪತ್ರ ತಲುಪಿದ ಎರಡು ದಿನಗಳಲ್ಲಿ ಬಾಕಿಯನ್ನು ಪಾವತಿ ಮಾಡಬೇಕು. ಇನ್ನು ಮುಂದೆ ಪ್ರತಿ ತಿಂಗಳು 5ನೇ ತಾರೀಖಿನ ಒಳಗಾಗಿ ಸಿಬ್ಬಂದಿ ಖಾತೆಗೆ ವೇತನ ಪಾವತಿಸಲು ಸಂಬಂಧಿಸಿದವರಿಗೆ ನಿರ್ದೇಶನ ನೀಡಬೇಕು. ಇದರಲ್ಲಿ ನಿರ್ಲಕ್ಷ್ಯ ವಹಿಸಿದವರನ್ನು ಹೊಣೆಗಾರರನ್ನಾಗಿ ಮಾಡಿ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

## ಟೆಕಿ ಆತ್ಮಹತ್ಯೆ: ಲೈಂಗಿಕ ಕಿರುಕುಳ ಪ್ರಕರಣ ದಾಖಲು

**ತಿರುವನಂತಪುರ (ಪಿಟಿಐ):** ಆರ್‌ಎಸ್‌ಎಸ್ ಕಾರ್ಯಕರ್ತ, ಎಂಜಿನಿಯರ್ ಆನಂದು ಅಜಿ (26) ಆತ್ಮಹತ್ಯೆಗೆ ಸಂಬಂಧಿಸಿದಂತೆ ಕಂಜಿರಪ್ಪಳ್ಳಿ ನಿಧೀಶ್ ಮುರಳೀಧರನ್ ವಿರುದ್ಧ ಅಸ್ವಾಭಾವಿಕ ಲೈಂಗಿಕ ಅಪರಾಧದಡಿ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಪ್ರಜಾವಾಣಿ ಭಾನುವಾರ • ಅಕ್ಟೋಬರ್ 19, 2025





ಬದುಕು ಬೆಳಗುವ ಹಣತೆಗಳು
ಕಲಬುರಗಿ ಜಿಲ್ಲೆಯ ಮೇಳಕುಂದಾ ಕೆ. ಗ್ರಾಮದಲ್ಲಿ ತಯಾರಾಗುವ ವೈವಿಧ್ಯಮಯ ವಿನ್ಯಾಸದ ಹಣತೆಗಳ ಹಿಂದಿನ ಕಥೆ ಹೇಳುವ ಚಿತ್ರಗಳು 11





# ಅಸಹಾಯಕರ ಬಂಧು ಹಡಪದ ಶಿವಪ್ಪ

• ಸೋಮಲಿಂಗಪ್ಪ ಬೆಣ್ಣಿ

ಕೊಪ್ಪಳದ ಹಡಪದ ಶಿವಪ್ಪ ಅವರ ಕೈಯಲ್ಲೊಂದು 'ಕಾಯಕದ ಚೀಲ'. ಕಾಲಲ್ಲಿ ಸಾದಾ ಹವಾಯಿ ಚಪ್ಪಲಿ. ಸೈಕಲ್ ಏರಿ ಓಣಿ ಓಣಿ ತಿರುಗಿ ಅಸಹಾಯಕರು, ರೋಗಿಗಳು, ವೃದ್ಧರ ಮನೆ ಮನೆಗೆ ತೆರಳಿ ಯಾವುದೇ ಮುಜುಗರವಿಲ್ಲದೇ ಕ್ಷೌರ ಮಾಡುವುದು ಇವರ ನಿತ್ಯದ ಕಾಯಕ. ಕ್ಷೌರ ಮಾಡಿದ ಬಳಿಕ ದೇಹಕ್ಕೆ ಮಸಾಜ್ ಮಾಡುತ್ತಾರೆ. ಪ್ರೀತಿಯಿಂದ ನಾಲ್ಕು ಮಾತಾಡಿ ಆತ್ಮಸ್ಥೈರ್ಯ ತುಂಬಿ ಅವರು ಮುಖದ ಮೇಲೆ ನಗುವಿನ ಗೆರೆ ಮೂಡುವಂತೆ ಮಾಡುತ್ತಾರೆ. ಅವರು ಕೊಟ್ಟಷ್ಟು ಹಣವನ್ನು ಖುಷಿಯಿಂದಲೇ ತೆಗೆದುಕೊಂಡು ಮತ್ತೊಂದು ಕಡೆಗೆ ತೆರಳುತ್ತಾರೆ.

ಅಂದಾಜು ಅರವತ್ತು ದಾಟಿರಬಹುದಾದ ಇವರು, ಯಾವುದೇ ಜಾತಿಭೇದವಿಲ್ಲದೆ ಶುಚಿತ್ವ ಕಾಯಕವನ್ನು ಸಂತೋಷದಿಂದಲೇ ಮಾಡುತ್ತಿದ್ದಾರೆ.

ಇತ್ತೀಚಿನ ವರ್ಷಗಳಲ್ಲಿ ಕ್ಷೌರಿಕ ವೃತ್ತಿ ಎಂದರೆ ಸಲೂನ್ ತೆರೆದು ಅಲ್ಲಿಗೆ ಬರುವ ಗ್ರಾಹಕರಿಗೆ ಸೇವೆ ಒದಗಿಸುವುದು ಮಾತ್ರವೇ ಆಗಿದೆ. ಆದರೆ, ಶಿವಪ್ಪ ಅವರಿಗೆ ಇಂತಹ ಯಾವುದೇ ಸಲೂನ್ ಇಲ್ಲ. ಸಾಮಾನ್ಯರಿಗಿಂತ ಹೆಚ್ಚಾಗಿ ರೋಗಿಗಳ ಸೇವೆಗೆ ಆದ್ಯತೆ ನೀಡುತ್ತಾರೆ. ಸಲೂನ್ ತೆರೆದರೆ ಪ್ರತಿದಿನ ಸಾವಿರಾರು ರೂಪಾಯಿ ದುಡಿಯಬಹುದು. ಆದರೆ ರೋಗಿಗಳು ಮತ್ತು ಅಸಹಾಯಕರು ಸಲೂನ್‌ಗೆ ಬಂದು ಕ್ಷೌರ ಮಾಡಿಸಿಕೊಳ್ಳಲು ಸಾಧ್ಯವಾಗುವುದಿಲ್ಲ ಎನ್ನುವುದು ಶಿವಪ್ಪ ಅವರ ಕಾಳಜಿ.



ಕ್ಷೌರ ಸೇವೆಯಲ್ಲಿ ಶಿವಪ್ಪ ಚಿತ್ರಗಳು: ಭರತ್ ಕಂದಕೂರ

ಜೇಬಲ್ಲಿರುವ ಕೀಪ್ಯಾಡ್ ಮೊಬೈಲ್ ರಿಂಗಣಿಸಿದರೆ ಸಾಕು, ಜಾಡು ಹಿಡಿದು ರೋಗಿಗಳ ಮನೆ ಹುಡುಕಿಕೊಂಡು ಹೋಗುತ್ತಾರೆ. ರೋಗಿ ಎಂಥದ್ದೇ ಮಲಿನ ಸ್ಥಿತಿಯಲ್ಲಿದ್ದರೂ ಒಂಚೂರು ಅಸಹ್ಯಪಟ್ಟುಕೊಳ್ಳದೆ ಶುಚಿಗೊಳಿಸುತ್ತಾರೆ.

ಸಾಮಾನ್ಯವಾಗಿ ಎಚ್‌ಐವಿ ಪೀಡಿತರು ಮತ್ತು ಕುಷ್ಠರೋಗಿಗಳು ಎಂದರೆ ಬಹುತೇಕರು ಮಾರುದ್ದ ಜಿಗಿದು ನಿಲ್ಲುತ್ತಾರೆ. ಕನಿಷ್ಠ ಮುಟ್ಟಲೂ ಹಿಂಜರಿಯುತ್ತಾರೆ. ಆದರೆ ಅಂತಹ ರೋಗಿಗಳ ಸೇವೆ ಮಾಡಲು ಶಿವಪ್ಪ ಮುಂದಾಗುತ್ತಾರೆ. ಇಷ್ಟೇ ಅಲ್ಲದೆ, ಅಪಘಾತದಲ್ಲಿ ತಲೆಗೆ ಪೆಟ್ಟಾಗಿ ಕೋಮಾ ಸ್ಥಿತಿಯಲ್ಲಿದ್ದವರಿಗೆ, ಕ್ಯಾನ್ಸರ್ ಮತ್ತಿತರ ದೀರ್ಘಕಾಲಿಕ ಕಾಯಿಲೆಗಳಿಂದ ಬಳಲುತ್ತಿರುವವರಿಗೆ, ವಯಸ್ಸಾಗಿ ನಡೆದಾಡಲು ಸಾಧ್ಯವಾಗದೇ ಹಾಸಿಗೆ ಹಿಡಿದವರಿಗೆ ಸೇವೆ ಮಾಡಲು ಒಂದು ಕರೆ ಮಾಡಿದರೆ ಸಾಕು, ಆಸ್ಪತ್ರೆಗೆ ಅಥವಾ ರೋಗಿ ಇರುವ ಮನೆಗೇ ಹೋಗಿ ಅವರ ಸೇವೆ ಮಾಡುವ ಮೂಲಕ ಕಾಯಕ ಸುಖವನ್ನು ಅನುಭವಿಸುತ್ತಾರೆ.

'ಕರೆ ಬಂದಾಗಲೆಲ್ಲ ದೂರದ ಸ್ಥಳಗಳಿಗೆ ಹೋಗಿ ಕೆಲಸ ಮಾಡುವುದು ನಿಮಗೆ ಕಷ್ಟವಾಗುವುದಿಲ್ಲವೇ?' ಎಂದು ಕೇಳಿದರೆ, 'ಹನ್ನೆರಡನೆಯ ಶತಮಾನದಾಗ ಬಸವಣ್ಣ ಕಾಯಕವೇ ಕೈಲಾಸ ಅಂತ ಹೇಳಿದ್ದಾನಲ್ಲ, ದೀನ ದಲಿತರ ಸೇವೆಯೇ ದೇವರ ಸೇವೆ ಅಂತ ಗಾಂಧಿ ಹೇಳ್ಯಾರ. ಅದರಂತೆ ನಮ್ಮ ಕಾಯಕದಾಗ ಏನೇ ಕಷ್ಟಗಳಿದ್ರೂ ಪ್ರೀತಿಯಿಂದ ಮಾಡಬೇಕು. ಅದೇ ನಮಗ ಆನಂದ ನೀಡುತ್ತೆ' ಎನ್ನುತ್ತ ಮುಗ್ಧನಗೆ ಬೀರುತ್ತಾರೆ.

ಶಿವಪ್ಪ ಬಾಲ್ಯದಲ್ಲಿ ಕೊಪ್ಪಳದ ಗವಿಸಿದ್ಧೇಶ್ವರ ಶಾಲೆಯಲ್ಲಿ ಓದಿದರು. ಅಲ್ಲಿ ಅಕ್ಷರ ಕಲಿಸಿದ ಶಿಕ್ಷಕರೊಬ್ಬರ ಮಗ ಇತ್ತೀಚೆಗೆ ಮನೆಯ ಮೆಟ್ಟಿಲಿನಿಂದ ಬಿದ್ದು ತಲೆಗೆ ತೀವ್ರ ಪೆಟ್ಟಾಗಿ ಹಾಸಿಗೆ ಹಿಡಿದರು. ಅವರಿಗೆ ಪ್ರತಿದಿನ ತಲೆಗೆ ಮತ್ತು ದೇಹಕ್ಕೆ ಮಸಾಜ್ ಮಾಡಿ ಸೇವೆ ಮಾಡಿದರು. ಗುರುಗಳ ಋಣವನ್ನು ತುಸು ತೀರಿಸಿದ ಸಾರ್ಥಕ ಕ್ಷಣವದು ಎಂದು ಅವರು ಹೇಳಿಕೊಳ್ಳುತ್ತಾರೆ.

## ದಲಿತ ಕೇರಿಯಲ್ಲಿ...

ಕೆಲವು ವರ್ಷಗಳ ಹಿಂದೆ ಕೊಪ್ಪಳ ತಾಲ್ಲೂಕಿನ ಹಳ್ಳಿಗಳಲ್ಲಿ ದಲಿತ ಮತ್ತು ಬಲಾಢ್ಯರ ನಡುವೆ ಕಲಹಗಳು ನಡೆದು ಆ ಊರುಗಳ ದಲಿತರಿಗೆ ಕ್ಷೌರ ಮಾಡದಿರುವ ಸ್ಥಿತಿ ನಿರ್ಮಾಣವಾಯಿತು. ಆ ಸಂದರ್ಭದಲ್ಲಿ ಆ ಊರುಗಳಿಗೆ ಕಾಯಕ ಚೀಲದೊಂದಿಗೆ ಸೈಕಲ್ ಏರಿ ಹೋಗಿ ದಲಿತರಿಗೆ ಕ್ಷೌರ ಮಾಡಿದರು. ಇದರಿಂದ ಆ ಊರುಗಳ ದಲಿತರಿಗೆ ಯಾವುದೇ ಸೇವೆ ಸಿಗದಂತೆ ಮಾಡುವ ಬಲಾಢ್ಯರ ಪ್ರಯತ್ನಕ್ಕೆ ಬಲವಾದ ಪೆಟ್ಟುಕೊಟ್ಟರು.

10ನೇ ಪುಟಕ್ಕೆ...

### ಹೋರಾಟಕ್ಕೂ ಸದಾ ಜೈ

ಕ್ಷೌರ ಸೇವೆಯೊಂದಿಗೆ ಹೊಟ್ಟೆ ತುಂಬಿಸಿ-ಕೊಳ್ಳುತ್ತ ಬದುಕು ಸಾಗಿಸುತ್ತಿರುವ ಶಿವಪ್ಪ ಅವರಿಗೂ ಹೋರಾಟಕ್ಕೂ ಎತ್ತಣದಿಂದೆತ್ತ ಸಂಬಂಧ? ಕಡುಬಡತನದ ಕ್ಷೌರಿಕರೊಬ್ಬರು ಹೋರಾಟಗಾರರಾಗಿ ಬದಲಾದುದರ ಹಿಂದೆ ಸ್ವಾರಸ್ಯಕರ ಕಥೆಯೇ ಇದೆ. ಸುಮಾರು ಮೂರು ದಶಕದ ಹಿಂದೆ (ಆಗಿನ್ನೂ ಕೊಪ್ಪಳ ಜಿಲ್ಲೆಯಾ-ಗಿರಲಿಲ್ಲ) ಕೊಪ್ಪಳ ಜಿಲ್ಲಾ ಹೋರಾಟದ ಚರ್ಚೆ ಅಲ್ಲಲ್ಲಿ ನಡೆದಿತ್ತು. ಶಿವಪ್ಪ ತಮ್ಮ ಗೆಳೆಯರ ಬಳಗದೊಂದಿಗೆ ನಗರದ ಪ್ರಮುಖ ಬೀದಿಗಳಲ್ಲಿ ಊಟದ ತಟ್ಟೆ ಬಾರಿಸುತ್ತ ಜಿಲ್ಲಾ ಹೋರಾಟದ ಕೂಗಿಗೆ ದನಿಗೂಡಿಸುತ್ತಿದ್ದರು. ಇದನ್ನು ನೋಡಿ ಕೆಲವರು ನಕ್ಕರು, ಅಪಹಾಸ್ಯ ಮಾಡಿದರು. ಕ್ರಮೇಣ ಜಿಲ್ಲಾ ಪ್ರಮುಖ ಹೋರಾಟಗಾರರು ಈ ತಂಡವನ್ನು ಗುರುತಿಸಿ ಸಮಿತಿಗೆ ಸೇರಿಸಿಕೊಂಡು ಹೋರಾಟಕ್ಕೆ ಅಣಿಗೊಳಿಸಿದರು. ಇದು ಶಿವಪ್ಪ ಅವರು ಹೋರಾಟಕ್ಕೆ ಕಾಲಿಡಲು ಕಾರಣವಾದ ಸಂದರ್ಭ.

ನಂತರದ ದಿನಗಳಲ್ಲಿ ಮಹಿಳೆಯರು, ಮಕ್ಕಳು, ವಿದ್ಯಾರ್ಥಿಗಳು ಸೇರಿದಂತೆ ಯಾವುದೇ ಜನಸಮುದಾಯಕ್ಕೆ ಉಂಟಾಗುವ ಅನ್ಯಾಯವನ್ನು ಖಂಡಿಸಲು ಶಿವಪ್ಪ ಹೋರಾಟಕ್ಕೆ ಧುಮುಕಿದರು. ಕಾರ್ಖಾನೆ ವಿರೋಧಿ ಹೋರಾಟ, ರಕ್ತನಿಧಿ ಸ್ಥಾಪನೆಗಾಗಿ ಹೋರಾಟ, ದೂಳು ನಿಯಂತ್ರಣಕ್ಕಾಗಿ ಹೋರಾಟ– ಹೀಗೆ ನಾನಾ ಕಾರಣಗಳಿಗಾಗಿ ನಡೆಯುವ ಹೋರಾಟಗಳಲ್ಲಿ ಭಾಗಿಯಾಗಿ ವ್ಯವಸ್ಥೆಯ ವಿರುದ್ಧ ಧ್ವನಿ ಎತ್ತುತ್ತಿದ್ದಾರೆ.

# ದೀವಳಿಗೆಯಿಂದ ತುಳಸಿ ಮದುವೆಯವರೆಗೂ...



ಲಕ್ಷ್ಮೀ ಪೂಜೆಯ ಸಂಭ್ರಮದಲ್ಲಿ ಮಹಿಳೆಯರು

• ರಶ್ಮಿ ಎಸ್

**'ಧೀಳಗಿಗಿ ಲಕ್ಷಿಮ್** ಪೂಜಾಕ್ಕ ಬರ್ರಿ, ಕಡಿ ಪಂಚಮಿಗಿ ದುಕಾನ್ ಪೂಜಾ ಅದ, ಎಲ್ಲೋರು ಬರ್ರಿ'
'ಪಾಡ್ಯಕ್ಕ ತೋಲ್(ಬಹಳ) ಪೂಜಾ ಅವ, ನಾವು ಚೌತಿಗೆ ಇಟ್ಕೊತೀವಿ'
'ರಾತ್ರಿ ಮುಹೂರ್ತ ಬಂದದ..?'

ಇಂಥ ಮಾತುಗಳು ಹಬ್ಬದ ಶುಭಾಶಯಗಳೊಂದಿಗೆ ವಿನಿಮಯವಾಗುತ್ತವೆ. ನಿಮ್ಮ ಊಹೆ ಸರಿಯಾಗಿದೆ. ಬೀದರಿನಿಂದ ದಾವಣಗೆರೆಯವರೆಗೂ ದೀಪಾವಳಿ ಎಂದರೆ ಲಕುಮಿಯ ಪೂಜೆ.

ವ್ಯಾಪಾರಸ್ಥರು ಹೆಚ್ಚಿರುವ ಈ ಊರುಗಳಲ್ಲಿ ಸಣ್ಣಪುಟ್ಟ ಅಂಗಡಿಗಳಲ್ಲಿಯೂ ಅಂದು ಧನಲಕ್ಷ್ಮಿ ವಿರಾಜಮಾನಳಾಗುತ್ತಾಳೆ. ಷೋಡಷೋಪಚಾರಗಳಿಂದ ಬರಮಾಡಿಕೊಂಡು ಅಂಗಡಿಯಲ್ಲಿ ಕೂರಿಸಿ, ಬರ ಮಾಡಿಕೊ-ಳ್ಳುತ್ತಾರೆ.

ನರಕ ಚತುರ್ದಶಿಯಿಂದಲೇ ಲಕ್ಷ್ಮೀ ಪೂಜೆಯ ಸಡಗರ ಆರಂಭವಾಗುತ್ತದೆ. ದಸರಾ ಸಂಭ್ರಮ ಮುಗಿಯು-ತ್ತಿದ್ದಂತೆಯೇ ಅಂಗಡಿ ಮುಂಗಟ್ಟುಗಳನ್ನು ಸ್ವಚ್ಛ ಮಾಡುವುದು, ಬಣ್ಣ ಬಳಿಯುವುದು, ಹಳೆಯ ಲೆಕ್ಕಾಚಾರದ ಪುಸ್ತಕಗಳಲ್ಲಿ ಕೊಡುಕೊಳ್ಳುವಿಕೆಯ ವಿವರಗಳನ್ನೆಲ್ಲ ಬರೆದಿಡುವುದು ಆರಂಭವಾಗುತ್ತದೆ.

ಗೋಡೆಯ ಮೇಲಿನ ದಿನವಹಿಯನ್ನು ಬದಲಿಸುವುದೂ ಮುಖ್ಯ ಕೆಲಸ. ಇಲ್ಲೆಲ್ಲ ದೀಪಾವಳಿಯಿಂದ ದೀಪಾವಳಿಗೆಂದೇ ಲೆಕ್ಕಾಚಾರದ ಕ್ಯಾಲೆಂಡರ್‌ಗಳನ್ನು ತಯಾರಿಸಲಾಗುತ್ತದೆ. ಕಲಬುರಗಿಯಿಂದ ಮೇಲ್ಭಾಗದಲ್ಲಿ ಹಿಂದಿಯಲ್ಲಿಯೂ, ಕಲಬುರಗಿಯಿಂದೀಚೆಗೆ ಕನ್ನಡದಲ್ಲಿಯೂ ಈ ದಿನವಹಿಗಳು ಮುದ್ರಿಸಲಾಗಿರುತ್ತದೆ.

ಮುನ್ನೂರೈವತ್ತು ಪುಟಗಳ ಲೆಕ್ಕದ ಪುಸ್ತಕವನ್ನು ತಂದಿಡುತ್ತಾರೆ. ಆನಂತರ ತಮಗನುಕೂಲವಾಗುವ ದಿನ, ಮುಹೂರ್ತವನ್ನು ನಿರ್ಧರಿಸುತ್ತಾರೆ. ಕೆಲವು ಊರುಗಳಲ್ಲಿ ಒಂದೊಂದು ಸಾಲಿನ ಮಳಿಗೆಗಳು ಒಂದೊಂದು ದಿನ ಆಯ್ಕೆ ಮಾಡಿಕೊಂಡಿರುತ್ತವೆ. ಅತಿಥಿಗಳು ಒಂದು ಸಲ ಪೇಟೆಗೆ ಬಂದರೆ ಎಲ್ಲ ಮಳಿಗೆಗಳ ಪೂಜೆಗಳನ್ನೂ ಮುಗಿಸಿಕೊಂಡು ಹೋಗುವಂತಾಗಲಿ ಎಂಬ ಅನುಕೂಲ ನೋಡಿರುತ್ತಾರೆ.

ಮನೆಯ ಬಂಧು ಬಾಂಧವರೆಲ್ಲ ಬಂದು, ಅಂಗಡಿಯ ಮುಂದೆ ಥಳಿ ಹೊಡೆದು (ಗೋಮ ಮಾಡಿ), ರಂಗೋಲಿ ಹಾಕಿ, ದೀವಳಿಗೆಯ ದೀಪದ ಸಾಲುಗಳಿಗೆ ಕುಡಿದೀಪ ಮುಡಿಸುತ್ತಾರೆ. ಷೋಡಷೋಪಚಾರದಲ್ಲಿ ಒಂದು ಹರಿವಾಣದ ತುಂಬ ಇತ್ತರ್, ಕಾಡಿಗೆ, ಕರವಸ್ತ್ರ, ಕುಬಸದ ಖಣ, ಬಾಚಣಿಕೆ, ಬಳೆ, ಕನ್ನಡಿ, ಅರಿಸಿನ, ಕುಂಕುಮ, ಗಂಧ, ಮುತ್ತಿನಾರುತಿ, ಹೂಮಾಲೆ, ಹೂವಿನ ದಂಡೆ ಮುಂತಾದವುಗಳನ್ನೆಲ್ಲ ಜೋಡಿಸಿಡುತ್ತಾರೆ.

ಪ್ರಸಾದ ಮುರುಮುರಾ ಎಂದೇ ಕರೆಯಲಾಗುತ್ತದೆ. ಇದೊಂದು ಬಗೆಯ ಚುರುಮುರಿ. ಕಂದು ಬಣ್ಣದ ಗೆರೆ ಇರುವ, ಮುದುರಿದಂತಿರುವ ಚುರುಮುರಿಯಲ್ಲಿ ಕೊಬ್ಬರಿ, ಬೆಂಡು, ಬತ್ತಾಸು ಮುಂತಾದವುಗಳನ್ನೆಲ್ಲ ಬೆರೆಸಿ ಪ್ರಸಾದ ಮಾಡಲಾಗುತ್ತದೆ.

ಪೂಜೆಗಿಲ್ಲಿ ಯಾರೂ ಯಾವ ಅರ್ಚಕರನ್ನೂ ಕರೆಯುವುದಿಲ್ಲ. ತಮ್ಮ ಅಂಗಡಿಗೆ ತಾವೇ ಪೂಜೆ ಸಲ್ಲಿಸುತ್ತಾರೆ. ಲಕ್ಷ್ಮಿಯ ಫೋಟೊ ಇರಿಸಿ, ತಮ್ಮ ಉಂಗುರ ಬೆರಳಿನಿಂದ ಅಂಗಡಿಯ ಗೋಡೆಯ ಮೇಲೆ ಸ್ವಸ್ತಿಕದ ಚಿತ್ರ ಬರೆಯುತ್ತಾರೆ. ಒಂದೆಡೆ ಶುಭ ಇನ್ನೊಂದೆಡೆ ಲಾಭ ಎಂದು ಬರೆಯುತ್ತಾರೆ. ಪಂಚಫಲವೆಂದು ಕರೆಯಲಾಗುವ ಐದು ಬಗೆಯ ಫಲವನ್ನು ಪೂಜೆಗಿಡುತ್ತಾರೆ. ಅಡಕೆಬೆಟ್ಟನ್ನೇ ಗಣೇಶನನ್ನಾಗಿ ಪೂಜಿಸುತ್ತಾರೆ. ದೊಡ್ಡವೆರಡು ಸಮಯಗಳನ್ನಿರಿಸಿ, ರಾತ್ರಿಯಿಡೀ ದೀಪದ ಕುಡಿ ಶಾಂತವಾಗದಂತೆ ಕಾಯುತ್ತಾರೆ. ಪೂಜೆಯೂ ಸರಳ. ಮನೆಮಂದಿಯೆಲ್ಲ ಕೂಡಿ ಆರತಿ ಬೆಳಗಿ, ಪ್ರಸಾದ ಸ್ವೀಕರಿಸುತ್ತಾರೆ. ಪೂಜೆಯ ನಂತರ, ಮರುದಿನ ಈ ಪೂಜಾ ಎತ್ತುವವರೆಗೂ ಮನೆ ಮಂದಿ ಹಣ ಖರ್ಚು ಮಾಡುವಂತಿಲ್ಲ. ಅನಿವಾರ್ಯವಿದ್ದರೆ ಬಂಧು ಬಳಗದವರು ಹಣ ಕೊಟ್ಟು, ಋಣ ಉಳಿಸಿಕೊಳ್ಳುತ್ತಾರೆ. ಪೂಜೆ ಎತ್ತಿದ ನಂತರವೇ ಎಲ್ಲರಿಗೂ ಬಾಕಿ ಚುಕ್ತಾ ಮಾಡಬೇಕು.

## ಪೋತರಾಜರು ಬಂದರು ದಾರಿಬಿಡಿ

ಪೋತರಾಜರು ಎಂದು ಕರೆಯಲಾಗುವ ಅಲೆಮಾರಿ ಜನಾಂಗದ ಪುರುಷರು ಸಕುಟುಂಬ ಇಂಥ ಪೂಜೆ ಇದ್ದಲ್ಲಿ ಬರುತ್ತಾರೆ. ಇವರ ಹೆಂಡತಿಯರು ಪುಟ್ಟ ಡೊಳ್ಳನ್ನು ಹೋಲುವ ವಾದ್ಯವನ್ನು ಕೊರಳಿಗೆ ಹಾಕಿಕೊಂಡು, ಬಗಲಿಗೆ ಮಕ್ಕಳನ್ನು ಜೋಳಿಗೆಯಲ್ಲಿ ಕಟ್ಟಿಕೊಂಡು ಬುರಬುರಬುರಬುರ ಬಾರಿಸುತ್ತ ಬರುತ್ತಾರೆ. ಜೇನುಹುಳಗಳ ದಂಡೊಂದು ಬೆನ್ನಟ್ಟಿದ್ದಂತೆ ಜೇಂಗುಡುವ ಈ ಸದ್ದು ಮಕ್ಕಳಲ್ಲಿ ಹೆದರಿಕೆ ಮೂಡಿಸುತ್ತದೆ. ಇವರ ಜೊತೆಗೆ ಬರುವ ಪುರುಷರು ಬಾರುಕೋಲಿನಿಂದ ತಮ್ಮ ಬೆನ್ನಿಗೆ ರಕ್ತ ಬರುವಂತೆ ಛಟೀರ್.. ಛಟೀರ್ ಎಂದು ಹೊಡೆದುಕೊಳ್ಳುತ್ತಾರೆ.

10ನೇ ಪುಟಕ್ಕೆ...



ತುಳಸಿ ಹಬ್ಬಕ್ಕಾಗಿ ಖರೀದಿಯ ಭರಾಟೆ

# ಸಮುದಾಯಮುಖಿ ಗ್ರಾಮ ಗ್ರಂಥಾಲಯಗಳು

ರಾಜ್ಯದ ಆರು ಸಾವಿರ ಗ್ರಾಮ ಗ್ರಂಥಾಲಯಗಳು ಹಲವು ಚಟುವಟಿಕೆಗಳ ಮೆಚ್ಚಿನ ತಾಣಗಳಾಗಿವೆ. ಚಿಣ್ಣರು, ವಿದ್ಯಾರ್ಥಿಗಳು, ಯುವಕ–ಯುವತಿಯರು, ಮಹಿಳೆಯರು, ರೈತರು, ವೃದ್ಧರು–ಹೀಗೆ ಎಲ್ಲ ವಯೋಮಾನದವರನ್ನು ಆಕರ್ಷಿಸುತ್ತಿವೆ. ಕೋವಿಡ್ ನಂತರ ಕಂಡುಬಂದ ಇಂಥ ಅದ್ಭುತ ಬದಲಾವಣೆ ಕುರಿತಾದ ಲೇಖನ ನಿಮ್ಮ ಓದಿಗಾಗಿ.



ಉಮ್ಮಡಹಳ್ಳಿ, ಗ್ರಾಮ ಗ್ರಂಥಾಲಯದ ಒಳನೋಟ

• ಚಂದ್ರಹಾಸ ಹಿರೇಮಳಲಿ

**ಶಿವಮೊಗ್ಗ ಜಿಲ್ಲೆಯ** ಮೇಲಿನ ಹನಸವಾಡಿ ಗ್ರಾಮ ಗ್ರಂಥಾಲಯದ ಗೋಡೆಗಳ ಮೇಲೆ ಸುಂದರವಾದ ಚಿತ್ತಾರಗಳು ಗಮನ ಸೆಳೆಯುತ್ತಿದ್ದವು. ಒಳಗೆ ಒಂದಷ್ಟು ಮಕ್ಕಳು ಕೇರಂ ಆಡುತ್ತಿದ್ದರು. ಅಲ್ಲಿ ಕೇರಂ ಪಾನ್‌ಗಳ ಸದ್ದಷ್ಟೇ ಕಿವಿಗಳಿಗೆ ತಾಕುತ್ತಿತ್ತು. ಪಕ್ಕದ ಕೊಠಡಿಯಲ್ಲಿ ಕೆಲವು ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗೆ ಸಿದ್ಧರಾಗುತ್ತಿದ್ದರು. ಇತ್ತ ಜಗುಲಿಯ ಮೇಲೆ ಊರಿನ ಹಿರಿಯರು, ಕಿರಿಯರು ಕುಳಿತು ದಿನಪತ್ರಿಕೆ ತಿರುವಿ ಹಾಕುತ್ತಾ, ಹಲವು ವಿಷಯಗಳ ಕುರಿತು ಬಿಸಿಬಿಸಿ ಚರ್ಚೆಯಲ್ಲಿ ತೊಡಗಿದ್ದರು.

ಅಂದು ಭಾನುವಾರ. ಆದರೂ ಗ್ರಂಥಾಲಯ ತೆರೆದಿತ್ತು. ಹೊಲಕ್ಕೆ ಹೊರಟ್ಟಿದ್ದ ರೈತರೊಬ್ಬರು ಗ್ರಂಥಾಲಯದ ಮೇಲ್ವಿಚಾರಕಿಯನ್ನು ಹೊರಗಿನಿಂದಲೇ ಕೂಗಿ 'ಇವತ್ತು ಮಳೆ ಬರೋ ಸಾಧ್ಯತೆ ಇದೆಯಾ' ಎಂದು ಕೇಳಿದರು. 'ಮಧ್ಯಾಹ್ನದ ನಂತರ ಸ್ವಲ್ಪ ಬೀಳಬಹುದು' ಎಂದು ಅವರು ಮಾಹಿತಿ ನೀಡಿದರು.

ಹೌದು; ಈಗ ಗ್ರಾಮೀಣ ಗ್ರಂಥಾಲಯಗಳು ಪುಸ್ತಕಗಳನ್ನು ಜೋಡಿಸಿಟ್ಟ ಕೇಂದ್ರಗಳಾಗಿ ಉಳಿದಿಲ್ಲ. ಅವು ಗ್ರಾಮದ ಮಕ್ಕಳು, ವಿದ್ಯಾರ್ಥಿಗಳು, ರೈತರು, ಹಿರಿಯರು, ಮಹಿಳೆಯರು ಸೇರಿದಂತೆ ಇಡೀ ಸಮುದಾಯವನ್ನು ಒಳಗೊಳ್ಳುವ ಮಾಹಿತಿ ಕಣಜಗಳಾಗಿ ಪರಿವರ್ತನೆಗೊಂಡಿವೆ. ಮಕ್ಕಳ ಬೌದ್ಧಿಕ ಬೆಳವಣಿಗೆ-ಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ. ಇದು ಸಾಧ್ಯವಾಗಿದ್ದು ಸರ್ಕಾರದ ದೂರದೃಷ್ಟಿಯಿಂದ. ಅದನ್ನು ಈ ಮಟ್ಟಕ್ಕೆ ಸಾಕಾರಗೊಳಿಸಿದ್ದು ಗ್ರಾಮೀಣಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯಕಾರ್ಯದರ್ಶಿ-ಯಾಗಿದ್ದ ಉಮಾ ಮಹಾದೇವನ್ ದಾಸ್‌ಗುಪ್ತ ಅವರ ಇಚ್ಛಾಶಕ್ತಿ.

'ಕರ್ನಾಟಕದ ಹಳ್ಳಿಗಳು ಜೀವಸೆಲೆಯ ತಾಣಗಳು. ಹಳ್ಳಿಯ ಮಕ್ಕಳಿಗೆ ಅನುಕೂಲ ಮತ್ತು ಅವಕಾ-ಶಗಳನ್ನು ಕಲ್ಪಿಸಿದರೆ ಜ್ಞಾನದ ಜತೆಗೆ, ದೇಶಕ್ಕೆ ನಾಯಕತ್ವವನ್ನೂ ನೀಡಬಲ್ಲರು. ಅದರಲ್ಲೂ ಅಡುಗೆಮನೆಗೆ ಸೀಮಿತ ಎನ್ನುವ ಭಾವನೆ ಇರುವ ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣು ಮಕ್ಕಳು ಮನೆಯಿಂದ ಹೊರ ಬಂದು ತಮಗಾಗಿಯೇ ಸ್ವಲ್ಪ ಸಮಯ ಬಳಸಿಕೊಳ್ಳುವಂತಾಗಬೇಕು. ನಿವೃತ್ತರಿಗೆ, ಹಿರಿಯರಿಗೆ ಜೀವನೋತ್ಸವ ಪಡೆಯುವ ತಾಣಗಳಾಗಬೇಕು. ಊರಿನ ಯುವಕರು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ಸುಗಳಿಸಬೇಕು ಎಂಬ ಆಶಯಗಳನ್ನು ಸಾಕಾರಗೊಳಿಸುವ ಬೆಳಕಿನ ಕಿರಣಗಳಾಗಿ ಗೋಚರಿಸಿವೆ ಗ್ರಾಮೀಣ ಗ್ರಂಥಾಲಗಳು' ಎನ್ನುತ್ತಾರೆ ಉಮಾ ಮಹಾದೇವನ್.

ಕೊಡಗು ಜಿಲ್ಲೆಯ ತಿತಿಮತಿ ಗ್ರಾಮ ಗ್ರಂಥಾಲಯಕ್ಕೆ ಭೇಟಿ ನೀಡಿದಾಗ ಅಲ್ಲಿನ ಬುಡಕಟ್ಟು ಸಮುದಾಯದ ಮಕ್ಕಳು, ಅನುಕೂಲಸ್ಥ ಕೊಡವರ ಮಕ್ಕಳು ಒಟ್ಟಿಗೆ ಚೆಸ್ ಆಡುತ್ತಿದ್ದರು. ಆ ಸನ್ನಿವೇಶವನ್ನು ನೋಡಿದಾಗ ಸಮಾಜದ ಜಾತಿ ವ್ಯವಸ್ಥೆ, ಅಸಮಾನತೆಯ ಗೋಡೆ ಕಳಚುತ್ತಿರುವಂತೆ ಭಾಸವಾಯಿತು. ಗ್ರಂಥಾಲಯಗಳ ಪುನರುಜ್ಜೀವನದ ಆಶಯಗಳು ಸಾಕಾರಗೊಂಡ ತೃಪ್ತಿ ಸಿಕ್ಕಿತು' ಎಂದು ಉಮಾ ಸಂತಸ ವ್ಯಕ್ತಪಡಿಸಿದರು.

ಗ್ರಂಥಾಲಯಗಳ ವಿಶಾಲವಾದ ಗೋಡೆಗಳು ಮಕ್ಕಳ ಕಲಿಕೆಯನ್ನು ಪ್ರೇರೇಪಿಸುವ ಫಲಕಗಳಾಗಿವೆ. ಕನ್ನಡದ ಲೇಖಕರು, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಮೇರು ಸಾಹಿತಿಗಳು, ಬ್ರಿಟಿಷರ ವಿರುದ್ಧ ಹೋರಾಡಿದ ವೀರಯೋಧರು, ವನ್ಯಸಂಪತ್ತು, ಪರಿಸರ ಮಾಹಿತಿ, ಸ್ಥಳೀಯ ಕಲೆ, ಸಾಹಿತ್ಯ, ಸಂಸ್ಕೃತಿ ಒಳಗೊಂಡ ಚಿತ್ರಗಳು, ಪೂರಕ ಮಾಹಿತಿ ಒಳಗೊಂಡ ಬರಹಗಳು ಕಂಗೊಳಿಸುತ್ತವೆ. ವಿಭಿನ್ನ ಸಸ್ಯ, ಹೂವುಗಳನ್ನು ಒಳಗೊಂಡ ಕೈತೋಟ, ಪರ್ಗೋಲಾ, ಆರಾಮಾಗಿ ಕುಳಿತು ಹರಟೆ ಹೊಡೆಯುವ ಟೆರೇಸ್ ಇದೆ. ಒಳಭಾಗದಲ್ಲಿ ಬಣ್ಣದ ಪರದೆಗಳು, ಸಾಕಷ್ಟು ಗಾಳಿ ಮತ್ತು ಬೆಳಕು, ಶೌಚಾಲಯ, ಕುಡಿಯುವ ನೀರು ಸೇರಿದಂತೆ ಅಗತ್ಯ ಮೂಲ-ಸೌಕರ್ಯಗಳಿವೆ. ಓದುಗರಿಗೆ ಆರಾಮದಾಯಕವಾದ ಪೀಠೋ-ಪಕರಣಗಳು, ಆಯಾ ವಯೋ-ಮಾನದವರಿಗೆ ತಕ್ಕಂತೆ ಮೇಜು, ಕುರ್ಚಿಗಳು ಓದುಗರನ್ನು, ಆಸಕ್ತರನ್ನು ಸಾಕಷ್ಟು ಸಮಯ ಹಿಡಿ-ದಿಟ್ಟುಕೊಳ್ಳುತ್ತವೆ.



ಉಮಾ ಮಹಾದೇವನ್

ದಿನಪತ್ರಿಕೆ, ನಿಯತಕಾ-ಲಿಕಗಳ ಸ್ಟ್ಯಾಂಡ್, ಸೂಚನಾ ಫಲಕ, ಕಂಪ್ಯೂಟರ್ ಟೇಬಲ್, ಮಕ್ಕಳಿಗಾಗಿ ಚಿತ್ರಕಥೆಗಳ ಪುಸ್ತಕ ವಿಭಾಗ, ಸಂವಿಧಾನದ ಪ್ರತಿಗಳು, ನಿಘಂಟು, ಗ್ಲೋಬ್, ವಾಟರ್ ಫಿಲ್ಟರ್, ಕಂಪ್ಯೂಟರ್, ಅಲೆಕ್ಸಾ, ಚೆಸ್, ಕೇರಂ ಬೋರ್ಡ್‌ಗಳು ಜ್ಞಾನದ ವಿಸ್ತಾರದ ಜತೆಗೆ ಸಮಯದ ಪರಿವೇ ಇಲ್ಲದಂತೆ ಮಾಡುತ್ತವೆ. ರಾಜ್ಯದ ಆರು ಸಾವಿರ ಗ್ರಂಥಾಲಯಗಳು ಹೀಗೆ ತಮ್ಮ ಸ್ವರೂಪವನ್ನೇ ಬದಲಾಯಿಸಿಕೊಂಡಿವೆ ಎನ್ನುವುದು ಸಾಮಾನ್ಯ ಮಾತಂತೂ ಅಲ್ಲ.

### ರೈತರು, ಮಹಿಳೆಯರಿಗೂ ನೆಚ್ಚಿನ ತಾಣ

ಬೆಳೆಗಳು, ಅಧಿಕ ಇಳುವರಿ, ರೋಗಬಾಧೆ, ಕೀಟನಾಶಕ, ಗೊಬ್ಬರದ ಮಾಹಿತಿ ಪಡೆಯಲು ರೈತರು, ಕಸೂತಿ, ಆಹಾರ ವೈವಿಧ್ಯ ಸೇರಿದಂತೆ ವಿವಿಧ ಮಾಹಿತಿ ಪಡೆಯಲು ಮಹಿಳೆಯರು ಗ್ರಂಥಾಲಯಗಳಿಗೆ ಭೇಟಿ ನೀಡಲು ಆರಂಭಿಸಿದ್ದಾರೆ. ಗ್ರಂಥಾಲಯಗಳಲ್ಲಿ ಎಲ್ಲರಿಗೂ ಉಚಿತ ಸದಸ್ಯತ್ವ ನೀಡಲಾಗುತ್ತಿದೆ. ವಾರಾಂತ್ಯ ಸೇರಿ ದಿನ ಸಾಯಂಕಾಲ 4 ರಿಂದ 8 ಗಂಟೆಗಳವರೆಗೆ ತೆರೆಯಲಾಗುತ್ತದೆ. ಪುಸ್ತಕ ಸಂಗ್ರಹಣಾ ಅಭಿಯಾನದಲ್ಲಿ 10 ಲಕ್ಷ ಪುಸ್ತಕಗಳನ್ನು ಸಂಗ್ರಹಿಸಲಾಗಿದೆ. ಹಿರಿಯರಿಗೆ ಬೆಳಿಗ್ಗೆ ಸೇರಿಕೊಳ್ಳುವ ಸ್ಥಳವಾದರೆ, ಸ್ವಸಹಾಯ ಗುಂಪುಗಳಿಗೆ ಸಭಾಂಗಣವಾಗಿವೆ, ಅಂಗನವಾಡಿ-ಆಶಾ ಕಾರ್ಯಕರ್ತರ ದಾಖಲೆಗಳ ಕಣಜ, ಮಕ್ಕಳಿಗೆ ಜ್ಞಾನಾರ್ಜನೆಯ ತಾಣಗಳಾಗಿವೆ. ಹುಡುಗಿಯರಿಗೆ ಮನೆ ಕೆಲಸದ ಒತ್ತಡದಿಂದ ಮುಕ್ತಿ ಪಡೆದು ಹೊಸ ಪ್ರಪಂಚದತ್ತ ಚಿತ್ತ ಹರಿಸಲು ಅವಕಾಶದ ಬಾಗಿಲು ತೆರೆದಿವೆ.

## ಫಲಿತಾಂಶ ಸುಧಾರಣೆ

ಶಿಕ್ಷಣದ ಗುಣಮಟ್ಟ ಹೆಚ್ಚಳ, ಎಸ್‌ಎಸ್‌ಎಲ್‌ಸಿ ಫಲಿತಾಂಶ ಸುಧಾರಣೆಗೆ ಶಾಲಾ ಶಿಕ್ಷಣ ಇಲಾಖೆಯು ಹಲವು ಕ್ರಮಗಳನ್ನು ಕೈಗೊಂಡಿದೆ. ಎಲ್ಲೆಲ್ಲಿ ಗ್ರಾಮೀಣ ಗ್ರಂ-ಥಾಲಯಗಳನ್ನು ವಿದ್ಯಾರ್ಥಿ ಸ್ನೇಹಿಯಾಗಿ ರೂಪಿಸಲಾಗಿದೆಯೋ, ಆ ಪ್ರದೇಶಗಳ ಪ್ರೌಢಶಾಲೆಗಳಲ್ಲಿ ಎಸ್‌ಎಸ್‌ಎಲ್‌ಸಿ ಫಲಿತಾಂಶ ಗಣನೀಯವಾಗಿ ಹೆಚ್ಚಾಗಿದೆ. ವಿದ್ಯಾರ್ಥಿಗಳ ಹಾಜರಾತಿಯಲ್ಲೂ ಏರಿಕೆಯಾಗಿದೆ.

ಇದಕ್ಕೊಂದು ನಿದರ್ಶನ ಇಲ್ಲಿದೆ. ಮಂಡ್ಯ ಜಿಲ್ಲೆಯ ಉಮ್ಮಡಹಳ್ಳಿ ಗ್ರಂಥಾಲಯ ರಾಜ್ಯದಲ್ಲೇ ಮಾದರಿಯಾಗಿ ರೂಪುಗೊಂಡಿದೆ. ಸಮೀಪದ ಶಾಲೆಗಳ ವಿದ್ಯಾರ್ಥಿಗಳನ್ನು ಸೂಜಿಗಲ್ಲಿನಂತೆ ಸೆಳೆದಿದೆ. ಅದರ ಫಲವಾಗಿ ಅಲ್ಲಿನ ಸರ್ಕಾರಿ ಪ್ರೌಢಶಾಲೆಯ ಎಸ್‌ಎಸ್‌ಎಲ್‌ಸಿ ಫಲಿತಾಂಶ ಕಳೆದ ಮೂರು ವರ್ಷಗಳಲ್ಲಿ ಸಾಕಷ್ಟು ಚೇತರಿಕೆ ಕಂಡಿದ್ದು, 2024 ಮತ್ತು 2025 ರಲ್ಲಿ ನೂರರಷ್ಟು ಫಲಿತಾಂಶ ಬಂದಿದೆ. ಒಟ್ಟಾರೆ ಫಲಿತಾಂಶದಲ್ಲಿ ಶೇಕಡ 12 ರಷ್ಟು ಹೆಚ್ಚಳವಾಗಿದೆ. ಶಾಲಾ ಅವಧಿ ಮುಗಿದ ನಂತರ ರಾತ್ರಿ 8.30 ರ ವರೆಗೂ ಗ್ರಂಥಾಲಯದಲ್ಲಿ ಕುಳಿತು ಓದಿದ ಫಲವಾಗಿ ಹತ್ತು ವಿದ್ಯಾರ್ಥಿಗಳು ಶೇಕಡ 90ಕ್ಕಿಂತ ಹೆಚ್ಚು ಅಂಕಗಳಿಸಿದ್ದಾರೆ. 'ಶಾಲೆಯಲ್ಲೂ ಉತ್ತಮವಾಗಿ ಪಾಠ ಮಾಡುತ್ತಾರೆ. ಶಾಲಾ ಅವಧಿಯ ನಂತರ ನೇರವಾಗಿ ಮನೆಗೆ ತೆರಳಿದ್ದರೆ ಇಷ್ಟು ಅಂಕ ಪಡೆಯಲು ಸಾಧ್ಯವಾಗುತ್ತಿರಲಿಲ್ಲ. ಸಾಧನೆಯಲ್ಲಿ ಗ್ರಂಥಾಲಯದ ಕೊಡುಗೆಯನ್ನು ಮರೆಯುವಂತಿಲ್ಲ' ಎನ್ನುವ ವಿದ್ಯಾರ್ಥಿನಿ ರಶ್ಮಿ, ಶೇಕಡ 95 ಅಂಕಗಳನ್ನುಗಳಿಸಿದ್ದಾರೆ.

### ಮಹಿಳಾ ಸ್ವಾವಲಂಬನೆ

ರಾಮನಗರ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನ ನೀಲಸಂದ್ರ ಗ್ರಂಥಾಲಯದ ಬಯಲಿನಲ್ಲಿ ಹೆಣ್ಣುಮಕ್ಕಳು ಸೇರಿದ್ದರು. ಅವರಲ್ಲಿ ಬಹುತೇಕರು ಚನ್ನಪಟ್ಟಣ ಬೊಂಬೆಗಳನ್ನು ತಯಾರಿಸುವ ಕಲೆ ಕರಗತ ಮಾಡಿಕೊಳ್ಳುತ್ತಿದ್ದರು. ಗ್ರಂಥಾಲಯದಲ್ಲಿದ್ದ ಕಂಪ್ಯೂಟರ್‌ನಲ್ಲಿ ಮಹಿಳೆಯೊಬ್ಬರು ರವಿಕೆಯ ಹೊಸ ಡಿಸೈನ್ ಹುಡುಕುತ್ತಿದ್ದರು. ಮತ್ತೊಬ್ಬರು ಹೊಸದಾಗಿ ಮಾರುಕಟ್ಟೆಗೆ ಬಂದ ಸೀರೆಗಳ ವಿವರ ಕಲೆ ಹಾಕುತ್ತಿದ್ದರು. ಹೀಗೆ ಹುಡುಕುತ್ತಿದ್ದ ಅವರಿಗೆ ಅದು ಹವ್ಯಾ-ಸವಾಗಿರಲಿಲ್ಲ, ಬದುಕಾಗಿತ್ತು. ಹೊಸ ಮಾದರಿಯ ಸೀರೆಗಳನ್ನು ಆನ್‌ಲೈನ್‌ನಲ್ಲಿ ತರಿಸಿಕೊಂಡು ಒಂದಿಷ್ಟು ಹೆಚ್ಚಿದ ಬೆಲೆಗೆ ಹಳ್ಳಿಗಳಲ್ಲಿ ಮಾರಾಟ ಮಾಡುವ ಮೂಲಕ ಹಣ ಗಳಿಸಿ ಮಕ್ಕಳ ಓದು, ಕುಟುಂಬ ನಿರ್ವಹಣೆಯ ದಾರಿ ಮಾಡಿಕೊಂಡಿದ್ದಾರೆ.



ಬೆಳಗಾವಿ ಜಿಲ್ಲೆ ಖಾನಾಪುರದ ಬೀಡಿ ಗ್ರಾಮ ಪಂಚಾಯಿತಿಯ ಬಯಲು ಗ್ರಂಥಾಲಯ ಹಾಗೂ ಡಿಜಿಟಲ್ ಗ್ರಂಥಾಲಯ

ಉಮ್ಮಡಹಳ್ಳಿಯಲ್ಲಿ ಎ.ಎಸ್.ಆರ್.ರಂಗನಾಥ್ ಬಯಲು ಗ್ರಂಥಾಲಯ, ನಾಲ್ವಡಿ ಕೃಷ್ಣರಾಜ ಒಡೆಯರ್ ಆಡಿಟೋರಿಯಂ, ಅಬ್ದುಲ್ ಕಲಾಂ ಮಕ್ಕಳ ವಿಭಾಗ ಗಮನ ಸೆಳೆಯುತ್ತವೆ. ಮಕ್ಕಳ ವಿಭಾಗದಲ್ಲಿ ಕನ್ನಡ, ಇಂಗ್ಲಿಷ್ ಸೇರಿದಂತೆ ವಿವಿಧ ಭಾಷೆಗಳ ಕಥೆ ಪುಸ್ತಕಗಳು, ಮೊಬೈಲ್ ಆ್ಯಪ್ ಆಧಾರಿತ ಶಿಕ್ಷಣ, ಪಠ್ಯಪುಸ್ತಕಗಳ ವಿಷಯ ಕುರಿತ ಆಡಿಯೊ–ವಿಡಿಯೊ ಪಾಠಗಳು ಇದ್ದು, ಕಂಪ್ಯೂಟರ್ ಕಲಿಕೆಗೂ ವ್ಯವಸ್ಥೆ ಮಾಡಲಾಗಿದೆ. 40 ಆಸನಗಳ ಈ ಆಡಿಟೋ-ರಿಯಂನಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳ ಸಿದ್ಧತೆಗೆ ಅಗತ್ಯವಾದ ವಿಷಯಗಳನ್ನು ಪ್ರೊಜೆಕ್ಟರ್ ಮೂಲಕ ಪ್ರಸ್ತುತಪಡಿಸಲಾಗುತ್ತದೆ.

'ಗ್ರಂಥಾಲಯದ ಅಭಿವೃದ್ಧಿಗೆ ಸರ್ಕಾರದ ಜತೆಗೆ ಶಿಕ್ಷಣ ಫೌಂಡೇಷನ್, ಅಜೀಂ ಪ್ರೇಮ್‌ಜಿ ಫೌಂಡೇಷನ್ ನೆರವಾಗಿವೆ. ಮಕ್ಕಳ ಡಿಜಿಟಲ್ ಕಲಿಕೆಗಾಗಿ ಮೊಬೈಲ್ ಫೋನ್‌ಗಳು, ಟಿ.ವಿ ಹಾಗೂ ಕಂಪ್ಯೂಟರ್‌ಗಳನ್ನು ಶಿಕ್ಷಣ ಫೌಂಡೇಷನ್ ದೇಣಿಗೆ ನೀಡಿದೆ. ಆರಾಮದಾಯಕ ಕುರ್ಚಿಗಳು ಸೇರಿದಂತೆ ₹20 ಲಕ್ಷ ದೇಣಿಗೆ ನೀಡಿದೆ. ಗ್ರಂಥಾಲಯದ ಪ್ರಗತಿ ಅಧ್ಯಯನಕ್ಕೆ ದೆಹಲಿ ಸೇರಿದಂತೆ ವಿವಿಧ ರಾಜ್ಯಗಳ ಪ್ರತಿನಿಧಿಗಳು ಭೇಟಿ ನೀಡುತ್ತಿದ್ದಾರೆ' ಎನ್ನುತ್ತಾರೆ ಉಮ್ಮಡಹಳ್ಳಿಯ ಗ್ರಂಥಪಾಲಕ ಪಿ.ಯೋಗೇಶ್.

## ಕೋವಿಡ್ ತಂದ ಬದಲಾವಣೆ!

ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಗ್ರಂಥಾಲಯಗಳು ಹಿಂದಿನಿಂದಲೂ ಕಾರ್ಯನಿರ್ವಹಿಸುತ್ತಿದ್ದರೂ ಕೋವಿಡ್ ಸಂದರ್ಭದಲ್ಲಿ ಗ್ರಾಮೀಣ ಪ್ರದೇಶದ ಮಕ್ಕಳು ಹೆಚ್ಚಿನ ಪ್ರಮಾಣದಲ್ಲಿ ಗ್ರಂಥಾಲಯಕ್ಕೆ ಬರಲು ಆರಂಭಿಸಿದರು. ಲಾಕ್‌ಡೌನ್ ಮಾಡಿ ಶಾಲಾ ಕಾಲೇಜುಗಳಿಗೆ ರಜೆ ನೀಡಿದ್ದರಿಂದ ಪ್ರಾಥಮಿಕ ಹಂತದಿಂದ ಕಾಲೇಜುವರೆಗಿನ ವಿದ್ಯಾರ್ಥಿಗಳು ತಮ್ಮೂರಿನ ಗ್ರಂಥಾಲಯವನ್ನು ಅವಲಂಬಿಸಿದರು. ನಾಲ್ಕು ಗೋಡೆಗಳ ನಡುವೆ ಇದ್ದ ಶಿಕ್ಷಣದ ಸ್ವರೂಪವನ್ನು ಕೋವಿಡ್–19 ಬದಲಾಯಿಸಿಬಿಟ್ಟಿತು. ಉತ್ಸಾಹದ ಚಿಲುಮೆಗಳಾದ, ಕುತೂಹಲದ ಆಗರವಾಗಿರುವ ಮಕ್ಕಳನ್ನು ಮನೆಯಲ್ಲಿಟ್ಟುಕೊಂಡು ಪೋಷಿಸುವುದು, ಮಕ್ಕಳ ಜ್ಞಾನದಾಹವನ್ನು ತಣಿಸುವುದು ಪೋಷಕರಿಗೆ ಸವಾಲಾಗಿ ಪರಿಣಮಿಸಿತು.

9ನೇ ಪುಟಕ್ಕೆ...



ಹೀಗಿದೆ ನೋಡು ಗೂಬಕ್ಕನ ಕಥೆ...

# ಸಾಮರಸ್ಯ ಸಾರುವ ರಾವಿ ನದಿ ದಂಡೆಯಲ್ಲಿ




ನಾಟಕದ ದೃಶ್ಯ

• ಗೌರಿ ಚಂದ್ರಕೇಸರಿ, ಶಿವಮೊಗ್ಗ

"ಈ ಪಾಕಿಸ್ತಾನ, ಹಿಂದೂಸ್ಥಾನ ಅಂತ ಯಾಕ ಆತು ಅಮ್ಮೀ ಜಾನ್? ನಾವೆಲ್ಲಾರೂ ಒಟ್ಟಿಗೇ ಕೂಡಿ ಇರಾಕ ಬರೂದಿಲ್ಲ ಏನು?" ಇದು 'ರಾವಿ ನದಿ ದಂಡೆಯಲ್ಲಿ' ನಾಟಕದಲ್ಲಿ ಬರುವ ಸಂಭಾಷಣೆ. ಶತ ಶತಮಾನಗಳಿಂದ ಸಹೋದರರಂತೆ ಬಾಳಿ ಬದುಕುತ್ತಿದ್ದ ಹಿಂದೂ–ಮುಸ್ಲಿಮರು ಕೆಲವೇ ಕೆಲವು ಮತಾಂಧರ ಸ್ವಾರ್ಥ ಮನೋಭಾವದಿಂದ ಹರಿದು ಹಂಚಿ ಹೋಗಬೇಕಾಯಿತು. ದೇಶ ಇಬ್ಭಾಗದ ಪರಿಣಾಮಗಳನ್ನು ನಾಟಕಕಾರ ಅಸಗರ್ ವಜಾಹತ್ ಅತ್ಯಂತ ಮನೋಜ್ಞವಾಗಿ ಕಟ್ಟಿಕೊಟ್ಟಿದ್ದಾರೆ. ಈ ನಾಟಕವನ್ನು ಇಟಗಿ ಈರಣ್ಣ ಕನ್ನಡಕ್ಕೆ ಸಮರ್ಥವಾಗಿ ತಂದಿದ್ದಾರೆ.

ಭಾರತದ ಲಕ್ನೋದಲ್ಲಿ ನೆಲೆಸಿದ್ದ ಮುಸ್ಲಿಂ ಕುಟುಂಬವೊಂದು ದೇಶ ಇಬ್ಭಾಗವಾದ ನಂತರ ಲಾಹೋರಿಗೆ ವಲಸೆ ಹೋಗುತ್ತದೆ. ಅಲ್ಲಿ ಅವರಿಗಾಗಿ ಹಂಚಿಕೆಯಾದ ಬಂಗಲೆ ಒಬ್ಬ ಹಿಂದೂ ವ್ಯಾಪಾರಿಯದ್ದು. ಗಲಭೆಯಲ್ಲಿ ಆ ಕುಟುಂಬದ ಹಿರಿಯ ಜೀವವೊಂದನ್ನು ಬಿಟ್ಟು ಉಳಿದವರೆಲ್ಲರ ಹತ್ಯೆಯಾಗಿರುತ್ತದೆ. ಆ ಮನೆಯಲ್ಲಿ ಆ ಹಿರಿಯ ಜೀವ ಮಾತ್ರ ಉಳಿದುಕೊಂಡಿರುತ್ತದೆ. ಬಂಗಲೆಯು ತನಗೆ ಸೇರಿದ್ದೆಂದು ಮುದುಕಿಯೂ, ತಮಗೆ ಹಂಚಿಯಾಗಿದ್ದೆಂದು ಮುಸ್ಲಿಂ ಕುಟುಂಬದ ವಾದ. ಇವರಿಬ್ಬರ ಸಂಘರ್ಷದೊಂದಿಗೆ ಆರಂಭವಾಗುವ ನಾಟಕ ಮಧ್ಯಂತರದ ಹೊತ್ತಿಗೆ ಬೇರೆಯದ್ದೇ ತಿರುವನ್ನು ಪಡೆದುಕೊಳ್ಳುತ್ತದೆ. ಮೊಗ್ಗೊಂದು ಹೂವಾಗಿ ಅರಳುವಂತೆ ಮುದುಕಿ ಹಾಗೂ ಮುಸ್ಲಿಂ ಕುಟುಂಬದ ಸದಸ್ಯರ ಮಧ್ಯದಲ್ಲಿ ಗಾಢ ಸಂಬಂಧ ಬೆಳೆದು ಬಿಡುತ್ತದೆ. ಆದರೆ ಧರ್ಮ–ಧರ್ಮಗಳ ಮಧ್ಯದ ಸಾಮರಸ್ಯವನ್ನು ಅರಗಿಸಿಕೊಳ್ಳಲಾರದ ಕೆಲ ಧರ್ಮಾಂಧರು ಇನ್ನಿಲ್ಲದಂತೆ ಈ ಕುಟುಂಬಕ್ಕೆ ಕಿರುಕುಳವನ್ನು ನೀಡುತ್ತಾರೆ. ಯಾವುದೇ



ಬೆದರಿಕೆಗಳಿಗೆ ಜಗ್ಗದ ಮುಸ್ಲಿಂ ಕುಟುಂಬ ಹಿಂದೂ ಮುದುಕಿಗೆ ತಾಯಿಯ ಸ್ಥಾನವನ್ನು ಕೊಟ್ಟು ತಮ್ಮ ಮನೆಯಲ್ಲಿಯೇ ಆಶ್ರಯ ನೀಡುತ್ತಾರೆ.

ಇಹಲೋಕವನ್ನು ತ್ಯಜಿಸಿದ ಹಿಂದೂ ವೃದ್ಧೆಯ ಶವಯಾತ್ರೆಯ ಸನ್ನಿವೇಶವೇ ಕೊನೆಯ ದೃಶ್ಯ. ಲಾಹೋರಿನ ಮುಸ್ಲಿಂ ಕುಟುಂಬಗಳೇ ಒಂದಾಗಿ ವೃದ್ಧೆಯ ಶವವನ್ನು ಹೊತ್ತು 'ರಾಮ್ ನಾಮ್ ಸತ್ಯ ಹೇ' ಎಂಬ ಘೋಷಣೆಯೊಂದಿಗೆ ಭಾರವಾದ ಮನಸಿನೊಂದಿಗೆ ಅಂತ್ಯಸಂಸ್ಕಾರಕ್ಕೆ ತೆರಳುತ್ತಾರೆ. ಈ ಸಂದರ್ಭದಲ್ಲಿ ನಾಟಕ ವೀಕ್ಷಿಸುತ್ತಿದ್ದ ಪ್ರೇಕ್ಷಕ ವರ್ಗದಲ್ಲಿದ್ದ ನಾಲ್ಕಾರು ಮುಸ್ಲಿಮರು ವೇದಿಕೆಯ ಮೇಲೆ ಧಾವಿಸಿ ಬಂದು ಶವಕ್ಕೆ ಹೆಗಲು ಕೊಟ್ಟದ್ದು ಕಲಾವಿದರಿಗಷ್ಟೇ ಅಲ್ಲ, ಅಲ್ಲಿ ನೆರೆದವರಿಗೆಲ್ಲ ಅನಿರ್ವಚನೀಯ ಅನುಭವವನ್ನು ಕೊಟ್ಟಿತ್ತು. ನಂತರ ಆ ಮುಸ್ಲಿಮರು ನಾಟಕ ಕುರಿತು ಮೆಚ್ಚುಗೆ ಸೂಚಿಸಿದ್ದಲ್ಲದೇ, 'ಇಂದಿನ ದಿನಗಳಲ್ಲಿ ಎಲ್ಲ ಧರ್ಮಗಳನ್ನು ಪರಸ್ಪರ ಗೌರವಿಸುತ್ತ ಸಾಮರಸ್ಯದಿಂದ ಬದುಕುವ ಮನೋಭಾವ ಎಲ್ಲರಲ್ಲೂ ಬರಬೇಕಿದೆ' ಎಂದು ಹೇಳಿದ್ದು ರೋಮಾಂಚನವನ್ನುಂಟು ಮಾಡಿತು. ಈ ಮೂಲಕ ನಾಟಕ ಶಾಂತಿಯ ಸಂದೇಶವನ್ನು ನೀಡುವಲ್ಲಿ ಯಶಸ್ವಿಯಾಗಿತ್ತು.

ಯಾವುದೇ ಕಲೆಯಾಗಲಿ, ಮನರಂಜನೆಯನ್ನು ನೀಡುವುದರ ಜೊತೆಗೆ ಸಮಾಜಕ್ಕೊಂದು ಸಂದೇಶವನ್ನು ನೀಡುವ ಅಂಶಗಳಿಂದ ಕೂಡಿರಬೇಕು. ಅಂದಾಗ ಆ ಕಲೆ ಸಾರ್ಥಕತೆಯನ್ನು ಹೊಂದುತ್ತದೆ. 'ರಾವಿ ನದಿ ದಂಡೆಯಲ್ಲಿ' ನಾಟಕ ಮಾನವತ್ವದ ಸಂದೇಶವನ್ನು ನೀಡುವಂತಹ ನಾಟಕ. ಕೊನೆಯಲ್ಲಿ ಮನ ಮಿಡಿಯುವಂತಹ ತಾರ್ಕಿಕತೆಯ ಸಂದೇಶವನ್ನು ನೀಡಿ ಪ್ರೇಕ್ಷಕ ತನ್ನನ್ನೇ ತಾನು ಪ್ರಶ್ನಿಸಿಕೊಳ್ಳುವಂತೆ ಮಾಡುತ್ತದೆ.

ಇತ್ತೀಚೆಗೆ ಶಿವಮೊಗ್ಗದಲ್ಲಿ ಈ ನಾಟಕ ಪ್ರದರ್ಶನಗೊಂಡಿತು. 'ಸಹ್ಯಾದ್ರಿ ರಂಗ ತರಂಗ- ಶಿವಮೊಗ್ಗ' ಈ ತಂಡದ ಎಲ್ಲ ಕಲಾವಿದರು ತಮ್ಮ ಪಾತ್ರಗಳಿಗೆ ಜೀವ ತುಂಬಿದರು. ರಂಗಕರ್ಮಿ ಕಾಂತೇಶ ಕದರಮಂಡಲಗಿ ನಾಟಕವನ್ನು ನಿರ್ದೇಶಿಸಿದ್ದಾರೆ.

## ...ಗ್ರಾಮ ಗ್ರಂಥಾಲಯಗಳು

8ನೇ ಪುಟದಿಂದ...

ಶಾಲೆಯಿಂದ ದೂರವಾದ ಮಕ್ಕಳು ಕಲಿಕೆಯಿಂದಲೂ ದೂರವಾಗುವ ಅಪಾಯ ಎದುರಾಯಿತು. ಇಂಥ ಸಮಯದಲ್ಲಿ ಅವರನ್ನು ಪಾರು ಮಾಡಿದ್ದು ಇದೇ ಗ್ರಂಥಾಲಯಗಳು.

ಆದರೆ, ಅಲ್ಲಿಗೆ ತೆರಳುವ ಮಕ್ಕಳಿಗೆ ಅಗತ್ಯ ಸೌಕರ್ಯ ಇರಲಿಲ್ಲ. ಅವರನ್ನು ಹೆಚ್ಚು ಸಮಯ ಕೂರಿಸುವ ಪರಿಕರಗಳ, ಸಾಮಗ್ರಿಗಳ ಕೊರತೆ ಇತ್ತು. ಇಂತಹ ಸಮಯದಲ್ಲೇ ರೂಪುಗೊಂಡದ್ದು 'ಓದುವ ಬೆಳಕು' ಅಭಿಯಾನ.

ಅಭಿಯಾನ ಆರಂಭವಾಗಿ ಐದು ವರ್ಷಗಳಲ್ಲೇ 50 ಲಕ್ಷ ಮಕ್ಕಳನ್ನು ಗ್ರಂಥಾಲಯಗಳು ಸೆಳೆದಿವೆ. ಅಷ್ಟೂ ಮಕ್ಕಳು ತಮ್ಮ ವ್ಯಾಪ್ತಿಯ ಗ್ರಾಮ ಗ್ರಂಥಾಲಯಗಳ ಸದಸ್ಯರಾಗಿ ನೋಂದಣಿ ಮಾಡಿಕೊಂಡಿರುವುದು ಭವಿಷ್ಯದ ಪರಿವರ್ತನೆಯ ಸಂಕೇತದಂತಿದೆ. ಉಮಾ ಮಹಾದೇವನ್ ಅವರ ಮಾತಿನಲ್ಲೇ ಹೇಳುವುದಾದರೆ 'ಗ್ರಂಥಾಲಯ ಕಾರ್ಡ್ ಎನ್ನುವುದು ಮತ್ತೊಂದು ಪ್ರಪಂಚದ ಬಾಗಿಲು'.

ನೋಂದಾಯಿತರಾದ ಮಕ್ಕಳಿಗೆ ಪುಸ್ತಕ ಪರಿಚಯ, ಗಟ್ಟಿ ಓದು, ಪತ್ರ ಬರವಣಿಗೆ, ಕಥೆ ಹೇಳುವುದು ಮುಂತಾದ ಚಟುವಟಿಕೆಗಳನ್ನು ಸ್ಥಳೀಯವಾಗಿ ಮೇಲ್ವಿಚಾರಕರು ಹಮ್ಮಿಕೊಳ್ಳುತ್ತಿದ್ದಾರೆ. ಇದರಿಂದಾಗಿಯೇ ಗ್ರಂಥಾಲಯಗಳು ಗ್ರಾಮೀಣ ಭಾಗದ ಶಿಕ್ಷಣದಲ್ಲೂ ಮಹತ್ವದ ಪಾತ್ರ ವಹಿಸುವಂತಾಗಿದೆ. 'ಗ್ರಾಮೀಣ ಗ್ರಂಥಾಲಯಗಳ ಪುನರುಜ್ಜೀವನ ಮಕ್ಕಳ ಕಲಿಕೆಯ ಆಸಕ್ತಿಯನ್ನು ದ್ವಿಗುಣಗೊಳಿಸಿದೆ. ಇದು ಕಲಿಕಾ ಮಟ್ಟದ ಹೆಚ್ಚಳಕ್ಕೂ ನಾಂದಿ ಹಾಡಿದೆ' ಎಂದು ಧಾರವಾಡದ ಸರ್ಕಾರಿ ಶಾಲೆಯ ಶಿಕ್ಷಕಿ ಸುಧಾ ಹೇಳುತ್ತಾರೆ.

ಉಮ್ಮಡಹಳ್ಳಿ ಗ್ರಂಥಾಲಯದಲ್ಲಿ ಅಲೆಕ್ಸಾ ಎಲೆಕ್ಟ್ರಾನಿಕ್ ಸಾಧನ ಅಳವಡಿಸಲಾಗಿದೆ. ಅಂಧ ಮಕ್ಕಳು ಅಲೆಕ್ಸಾ ಎಂದು ಸಂಬೋಧಿಸಿ ತಮ್ಮ ಪ್ರಶ್ನೆ ಕೇಳುತ್ತಾರೆ. ಅಲೆಕ್ಸಾ ಸಮರ್ಪಕ ಉತ್ತರ ನೀಡುತ್ತದೆ. ಬ್ರೈಲ್ ಲಿಪಿ ಮತ್ತು ಉಬ್ಬು ಚಿತ್ರವುಳ್ಳ ಪುಸ್ತಕಗಳಿಗೂ ಆದ್ಯತೆ ನೀಡಲಾಗಿದೆ. ದಾವಣಗೆರೆ ಜಿಲ್ಲೆ ತಣಿಗೆರೆ ಗ್ರಾಮ ಗ್ರಂಥಾಲಯದ ಮೇಲ್ವಿಚಾರಕ ಮಲ್ಲೇಶಪ್ಪ ಹೇಳುವಂತೆ 'ಹೊಸರೂಪ ಪಡೆಯುತ್ತಿರುವ ಗ್ರಂಥಾಲಯಗಳು ಲಿಂಗಭೇದ, ವಯಸ್ಸಿನ ಅಂತರ, ಜಾತಿ, ಧರ್ಮಗಳ ಗಡಿಗಳನ್ನು ಅಳಿಸುತ್ತಿವೆ'.

**ಇ-ಗ್ರಂಥಾಲಯ:** ಹಲವು ಗ್ರಂಥಾಲಯಗಳು ಡಿಜಿಟಲೀಕರಣಗೊಂಡಿವೆ. ಪುಸ್ತಕ, ದಿನಪತ್ರಿಕೆ, ನಿಯತಕಾಲಿಕ, ಸದಸ್ಯತ್ವ ನೋಂದಣಿ ಇತ್ಯಾದಿಗಳನ್ನು ಲೈಬ್ರರಿ ಅಟೊಮೇಶನ್‌ನಲ್ಲಿ ಅಳವಡಿಸಲಾಗಿದೆ. ಪುಸ್ತಕ ಎರವಲು, ದಾಸ್ತಾನು ಪರಿಶೀಲನೆ, ಅವಶ್ಯ ಇರುವ ಅಂಕಿಅಂಶ ಪಡೆಯಲು ಈ ಯೋಜನೆ ಅನುಕೂಲವಾಗಿದೆ.



ಗ್ರಂಥಾಲಯದಲ್ಲಿ ಬುದ್ಧಿ ಚುರುಕುಗೊಳಿಸುವ ಆಟವಾಡುತ್ತಿರುವ ಮಕ್ಕಳು

ಬೆಳಗಾವಿ ಜಿಲ್ಲೆ ಕಿತ್ತೂರು ಸಮೀಪದ ಬೈಲೂರು ಗ್ರಂಥಾಲಯದ ಮಕ್ಕಳಿಗೆ ಬ್ರಿಟಿಷ್ ಕೌನ್ಸಿಲ್ ಇಂಗ್ಲಿಷ್ ಭಾಷಾ ಕೌಶಲ ಕಲಿಸುತ್ತಿದೆ. ಕೆಲ ಗ್ರಂಥಾಲಯಗಳಲ್ಲಿ ರೋಟರಿ ಕ್ಲಬ್ ಯೂಟ್ಯೂಬ್ ಕಾರ್ಯಕ್ರಮ, ವಿಜ್ಞಾನ ಗ್ಯಾಲರಿ, ರಾಷ್ಟ್ರೀಯ ಆಧುನಿಕ ಕಲೆಗಳ ಸಂಗ್ರಹಾಲಯ, ಡೆಲ್ ಟೆಕ್ನಾಲಜೀಸ್, ಭಾರತೀಯ ಖಗೋಳ ಭೌತವಿಜ್ಞಾನ ಸಂಸ್ಥೆ, ವಿಜ್ಞಾನ ಸಂಗ್ರಹಾಲಯ, ಕಲೆ, ಪರಿಸರ ಕುರಿತು ವಿವಿಧ ಸಂಸ್ಥೆಗಳು ಕಾರ್ಯಾಗಾರಗಳನ್ನು ನಡೆಸುತ್ತಿವೆ.

ಓದುವ ಹವ್ಯಾಸವನ್ನು ಮಕ್ಕಳಲ್ಲಿ ಬೆಳೆಸಲು ಓದುಗರ ಕೂಟವನ್ನು ರಚಿಸಿರುವುದು ಭವಿಷ್ಯದಲ್ಲೂ ಓದುವ ಹವ್ಯಾಸವನ್ನು ಜೀವಂತವಾಗಿಡುವ ಒಂದು ಪ್ರಯತ್ನ ಇದಾಗಿದೆ.

'ಗ್ರಾಮ ಪಂಚಾಯಿತಿ ನಿಧಿ, ಗ್ರಂಥಾಲಯ ಅನುದಾನ, ಸರ್ಕಾರ, ಜನಪ್ರತಿನಿಧಿಗಳ ನಿಧಿಯಿಂದ ಒಂದಷ್ಟು ಆರ್ಥಿಕ ನೆರವಿನ ಜತೆಗೆ ಕೆಲ ಕಂಪನಿಗಳು, ಸಾರ್ವಜನಿಕ ದೇಣಿಗೆಯಿಂದ ಗ್ರಂಥಾಲಯ ಯಜ್ಞ ಸಾಧ್ಯವಾಗಿದೆ' ಎನ್ನುತ್ತಾರೆ ಉಮಾ ಮಹಾದೇವನ್.

ಈಗ ಇರುವ ಇಂತಹ ಉತ್ತಮ ವ್ಯವಸ್ಥೆ ಮುಂದುವರಿಯಬೇಕು, ಸಾಧ್ಯವಾದರೆ ಇನ್ನಷ್ಟು ಉತ್ತಮಗೊಳ್ಳಬೇಕು. ಈ ದಿಕ್ಕಿನಲ್ಲಿ ಎಲ್ಲರೂ ಒಟ್ಟಾಗಿ ಕೆಲಸ ಮಾಡಬೇಕು.



# ಗೋಲ್ಕೊಂಡ ಕೋಟೆಯೊಳಗೆ ರತ್ನಗಿರಿಯ ರಹಸ್ಯ

• ಸುಮಾರಾಣಿ ಶಂಭು

**ಕೋಟೆ** ಎಂದರೆ ನನಗೆ ಎಲ್ಲಿಲ್ಲದ ಪ್ರೀತಿ. ಯಾವ ಊರಿಗಾದರೂ ಹೋಗಲಿ ಅಥವಾ ರಾಜ್ಯಕ್ಕಾದರೂ ಹೋಗಲಿ ಮೊದಲು ಕೋಟೆ ಇದೆಯೇ ಎಂದು ಖಾತ್ರಿಪಡಿಸಿಕೊಂಡು ಭೇಟಿ ಕೊಡುತ್ತೇನೆ. ಅದೇನೋ ಗೊತ್ತಿಲ್ಲ. ಯಾವ ಕೋಟೆಗಳಿಗೆ ಹೋದರೂ ಕುದುರೆಗಳು ಓಡುವ ಸದ್ದು, ಸೈನಿಕರು ಸಾಲಾಗಿ ನಡೆದುಕೊಂಡು ಬರುವ ಸದ್ದು, ಮಾರುಕಟ್ಟೆಯಲ್ಲಿನ ಸದ್ದು- ಹೀಗೆ ಎಲ್ಲವೂ ಕ್ಷಣದಲ್ಲಿ ಕಿವಿಯಲ್ಲಿ ಹಾದು ಹೋಗುತ್ತವೆ!

ಕೋಟೆಯು ರಕ್ಷಣೆಯ ಆವರಣವಿರುವ ಪ್ರದೇಶ. ದಿಬ್ಬ, ಗುಡ್ಡಗಳ ಎತ್ತರದ ಭಾಗಗಳಲ್ಲಿ ಕಟ್ಟುವುದು ವಾಡಿಕೆ. ಯುದ್ಧ ಸನ್ನಿವೇಶಗಳಲ್ಲಿ ಇಂತಹ ಆಯಕಟ್ಟಿನ ಕೋಟೆಗಳ ಸೌಕರ್ಯಗಳೆಂದರೆ ಎತ್ತರ ಸ್ಥಳದಲ್ಲಿ ಇರುವುದರಿಂದ ಶತ್ರುವಿನ ವಿರುದ್ಧ ಸಹಜವಾಗಿ ಒದಗುವ ರಕ್ಷಣೆ, ಸುತ್ತಲೂ ವ್ಯಾಪಿಸಿರುವ ವಿಸ್ತಾರ ತಗ್ಗುಪ್ರದೇಶದ ಮೇಲೆ ಲಭಿಸುವ ಪ್ರಭುತ್ವ. ನೆಲದ ಕಾದಾಟದಲ್ಲಿ ಸಹ ಕೋಟೆಯ ಮಹತ್ವ ಕಡಿಮೆ ಆಗಿಲ್ಲ. ಮುಖ್ಯವಾಗಿ ಕೋಟೆ ಯುದ್ಧಗತಿಯ ನಿಯಂತ್ರಣ ಕೇಂದ್ರವಾಗಿ ಯುದ್ಧ ವ್ಯವಸ್ಥೆಯ ಕೇಂದ್ರವಾಗಿ ಪ್ರಾಮುಖ್ಯ ಪಡೆದಿದೆ.

ಈ ಬಾರಿ ನಾನು ಭೇಟಿ ಕೊಟ್ಟಿದ್ದು ಹೈದರಾಬಾದ್ ಸಮೀಪವಿರುವ ಗೋಲ್ಕೊಂಡ ಕೋಟೆಗೆ. ಗೋಲ್ಕೊಂಡ ಹೆಸರೇ ಹೇಳುವ ಹಾಗೆ 'ಗೊಲ್ಲರ ಕೊಂಡ'. ಕೊಂಡ ಎಂದರೆ ಎತ್ತರವಾದ ಪ್ರದೇಶ. ಪಶುಗಳನ್ನು ಮೇಯಿಸುವವರು ಎತ್ತರವಾದ ಈ ಪ್ರದೇಶಕ್ಕೆ ಬರುತ್ತಿದ್ದರಿಂದ ಇದಕ್ಕೆ ಗೋಲ್ಕೊಂಡ ಎಂದು ಹೆಸರು ಬಂದಿತೆಂದು ಹೇಳಲಾಗುತ್ತದೆ.

ಹೈದರಾಬಾದ್ ನಗರದ ಪಶ್ಚಿಮಕ್ಕೆ ಹನ್ನೊಂದು ಕಿಲೋಮೀಟರ್ ದೂರದಲ್ಲಿರುವ ಐತಿಹಾಸಿಕ ಸ್ಥಳವೇ ಗೋಲ್ಕೊಂಡ. 1518-1687ರವರೆಗೆ ಇದು ಕುತುಬ್‌ಶಾಹಿ ಸುಲ್ತಾನರು ಕಟ್ಟಿ ಆಳಿದ 'ಗೋಲ್ಕೊಂಡ' ರಾಜ್ಯದ ರಾಜಧಾನಿಯಾಗಿತ್ತು. ಗೋದಾವರಿ ನದಿಯ ಕೆಳದಂಡೆಯ ಪ್ರದೇಶದಿಂದ ಬಂಗಾಳ ಕೊಲ್ಲಿಯವರೆಗೆ ವ್ಯಾಪಿಸಿದ್ದ ರಾಜ್ಯಕ್ಕೆ ಗೋಲ್ಕೊಂಡವೆಂಬ ಹೆಸರಿತ್ತು. ಕಾಕತೀಯರ ರಾಜ್ಯದ ಭಾಗವಾಗಿದ್ದ ಈ ಪ್ರದೇಶವನ್ನು ಅಲ್ಲಾವುದ್ದೀನ್ ಖಿಲ್ಜಿ 1310ರಲ್ಲಿ ಆಕ್ರಮಿಸಿಕೊಂಡ. ಇದು 1424-25ರವರೆಗೆ ಸ್ವತಂತ್ರ ಅಸ್ತಿತ್ವ ಹೊಂದಿದ್ದಾಗ ಬಹಮನಿಗಳ ವಶವಾಯಿತು. ಬಹಮನಿ ರಾಜ್ಯದ ಪೂರ್ವ ಪ್ರಾಂತ್ಯಕ್ಕೆ ವಾರಂಗಲ್ ರಾಜಧಾನಿಯಾಗಿತ್ತು. ಈ ಪ್ರಾಂತ್ಯದ ಅಧಿಕಾರಿಯಾಗಿದ್ದ ಕುಲಿ ಕುತುಬ್ ಷಾ 1512ರಲ್ಲಿ ಸ್ವತಂತ್ರ ಸುಲ್ತಾನನಾದ. ಗೋಲ್ಕೊಂಡ ಅವನ ರಾಜಧಾನಿಯಾಯಿತು. 1687ರಲ್ಲಿ ಈ ರಾಜ್ಯವನ್ನು ಔರಂಗಜೇಬ್ ಗೆದ್ದುಕೊಂಡ. ಗೋಲ್ಕೊಂಡ ಮೊಘಲ್ ಚಕ್ರಾಧಿಪತ್ಯದ ಭಾಗವಾಯಿತು. ಗೋಲ್ಕೊಂಡದ ಬಳಿ ದೊರಕುತ್ತಿದ್ದ ವಜ್ರಗಳಿಂದಾಗಿ ಅದು ಇತಿಹಾಸದಲ್ಲಿ ಪ್ರಸಿದ್ಧವಾಗಿದೆ.

ಗೋಲ್ಕೊಂಡ ಕೋಟೆ ದಕ್ಷಿಣ ಭಾರತದ ಪ್ರಸಿದ್ಧವಾದ ಹಾಗೂ ಬೃಹತ್ತಾದ ಕೋಟೆಗಳಲ್ಲೊಂದು. 400 ಅಡಿ ಎತ್ತರದ ಗ್ರಾನೈಟ್ ಗುಡ್ಡದ ಮೇಲೆ ಕಟ್ಟಲಾದ, ಸುಮಾರು ಏಳು ಕಿಲೋಮೀಟರ್ ಸುತ್ತಳತೆಯುಳ್ಳ ಮೂರು ಸುತ್ತಿನ ಈ ಅಭೇದ್ಯ ಕೋಟೆ 8 ದ್ವಾರಗಳಿಂದಲೂ 87 ಕೊತ್ತಲುಗಳಿಂದಲೂ ಕೂಡಿದ ಅದ್ಭುತ ನಿರ್ಮಿತಿಯಾಗಿದೆ. ಹೊರಸುತ್ತಿನ ಕೋಟೆಗೋಡೆಯು ಪಟ್ಟಣವನ್ನು ಆವರಿಸಿದ್ದು, ಈ ಗೋಡೆಯ ಸುತ್ತಲೂ ಕಂದಕವಿದೆ. ಆಳವಾದ ಕಂದಕದಂಚಿನಲ್ಲಿರುವ ವೃತ್ತ-ಅರೆವೃತ್ತಾಕಾರದ ಎಲ್ಲ ಕೊತ್ತಲುಗಳ ಮೇಲೆ ಪಿರಂಗಿಗಳನ್ನು ನೆಲೆಗೊಳಿಸಿದ್ದು, ಅದು ಶತ್ರು ದಾಳಿಗೆ ಕಂಟಕಪ್ರಾಯವಾಗಿತ್ತು. ಮಧ್ಯದ ಸುತ್ತಿನಲ್ಲಿ ಅವಳಿ ಗೋಡೆಗಳಿದ್ದು ಇವು ಗುಡ್ಡದ ಬುಡಭಾಗವನ್ನು ಸುತ್ತುವರೆದಿವೆ. ಒಳಗಿರುವ ರಾಜ ನಿವಾಸಕ್ಕೆ ಈ ಗೋಡೆಗಳು ಪ್ರಬಲ ರಕ್ಷಣೆಯನ್ನು ಒದಗಿಸಿದ್ದವು.

ಒಳಸುತ್ತಿನ ಕೋಟೆಯನ್ನು ಗುಡ್ಡದ ಮೇಲ್ಭಾಗದಲ್ಲಿ, ನೈಸರ್ಗಿಕ ಬಂಡೆಗಳನ್ನು ಬಳಸಿಕೊಂಡು ಅವುಗಳ ರಚನಾಕಾರಗಳಿಗೆ ಅನುಗುಣವಾಗಿ, ಅಲ್ಲಲ್ಲಿ ಕಲ್ಗೋಡೆಗಳ ಆಸರೆಯೊಂದಿಗೆ ಕಟ್ಟಲಾಗಿದೆ. 1724ರಲ್ಲಿ ಪಟ್ಟಣದ ವಾಯವ್ಯ ಭಾಗದಲ್ಲಿ ಹೊರಗೋಡೆಯನ್ನು ವಿಸ್ತರಿಸಿ ನಯಾಕಿಲಾವನ್ನು ರಚಿಸಲಾಯಿತು. ಗುಡ್ಡದ ಮಧ್ಯಭಾಗದಲ್ಲಿ ಕೆರೆಗಳು, ಮದ್ದಿನ ಮನೆಗಳು, ರಾಜಗೃಹ, ಸಭಾಮಂದಿರ, ಲಾಯ, ಮಸೀದಿ, ಉದ್ಯಾನವನ ಹಾಗೂ ಉಗ್ರಾಣಗಳಿವೆ. ಬುಡಭಾಗದಲ್ಲಿ ರಾಣಿ ನಿವಾಸಗಳು, ಸೇವಕರ ವಾಸಗೃಹಗಳೂ ಇವೆ. ಕೋಟೆಗೆ ಸ್ವಲ್ಪ ದೂರದಲ್ಲಿ ಕುತುಬ್ ಶಾಹಿ ದೊರೆಗಳ ಗೋರಿಗಳಿವೆ. ಫತೇಹ್, ಬಹಮನಿ, ಮೆಕ್ಕ, ಪಟನ್ಚೆರು, ಬಂಜಾರ, ಜಮಾಲಿ, ನಯಾಕಿಲಾ ಮತ್ತು ಮೋತಿ ಇವು ಎಂಟು ದ್ವಾರಗಳು. ಈ ದ್ವಾರಗಳನ್ನು ಆಯಕಟ್ಟಿನ ಸ್ಥಳಗಳಲ್ಲಿ ಇಡಲಾಗಿದ್ದು ಒಂದು ದ್ವಾರದಲ್ಲಿ ನಿಂತು ಚಪ್ಪಾಳೆ ತಟ್ಟಿದರೆ ಅದರ ಶಬ್ದ ಪ್ರತಿಧ್ವನಿಸಿ ಮತ್ತೊಂದು ದ್ವಾರದವರೆಗೆ ತಲುಪುವುದು. ಹೀಗೆ ಸೂಚನೆಗಳನ್ನು ಹೊರದ್ವಾರದಿಂದ ಗುಡ್ಡದ ತುತ್ತತುದಿಯವರೆಗೆ ಇತರರಿಗೆ ಕೇಳದ ರೀತಿಯಲ್ಲಿ ವರ್ಗಾಯಿಸುವಂತೆ ಈ ಕೋಟೆಯನ್ನು ನಿರ್ಮಿಸಿರುವುದು ಆ ಕಾಲದ ತಂತ್ರಜ್ಞರ ವಾಸ್ತುಕೌಶಲಕ್ಕೆ ಅನುಪಮ ಉದಾಹರಣೆ.

ಗೋಲ್ಕೊಂಡ ಕೋಟೆಯಲ್ಲಿ 'ರತ್ನ'ಗಳನ್ನು ವ್ಯಾಪಾರ ಮಾಡುತ್ತಿದ್ದರಂತೆ. ಹಾಗಾಗಿ ಇದು ಸಮೃದ್ಧತೆಯನ್ನು ಹೊಂದಿತ್ತೆಂಬುದರಲ್ಲಿ ಸಂಶಯವೇ ಇಲ್ಲ. ಬ್ರಿಟಿಷ್ ಅಧಿಕಾರಿ ಸರ್ ಥಾಮಸ್ ಮನ್ರೋ ಈ ಕೋಟೆಯನ್ನು ವಜ್ರದ ಗಣಿ, ರತ್ನಗರ್ಭವೆಂದು ಕರೆದಿದ್ದಾನೆ. ಈ ಕೋಟೆಯಲ್ಲಿ ಅಡಗಿರಬಹುದಾದ ಅಭೇದ್ಯ ಸತ್ಯಗಳು ಏನಿವೆಯೋ ತಿಳಿಯದು. ಆದರೆ ಶತಶತಮಾನಗಳಿಂದ ಅನೇಕ ಐತಿಹ್ಯಗಳಿಗೆ ಮೌನವಾಗಿ ಸಾಕ್ಷಿಯಾಗಿ ನಿಂತಿರುವ ಈ ಕೋಟೆಯನ್ನು ಇತಿಹಾಸ ಪ್ರಿಯರು ನೋಡಲೇಬೇಕು.



## ಮುನ್ನೋಟ 19-10-2025 ರಿಂದ 25-10-2025

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

### ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

**ಮೇಷ** — ಅಶ್ವಿನಿ, ಭರಣಿ, ಕೃತ್ತಿಕಾ 1

ನಿಮ್ಮ ವರ್ಚಸ್ಸನ್ನು ವೃದ್ಧಿಮಾಡಿಕೊಳ್ಳುವಿರಿ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ವಿದೇಶಿ ವ್ಯವಹಾರಗಳನ್ನು ಮಾಡುವವರಿಗೆ ಲಾಭವಿರುತ್ತದೆ. ಮನೆಪಾಠ ಮಾಡುವವರ ಆದಾಯ ಹೆಚ್ಚುತ್ತದೆ. ಮನಸ್ಸಿನ ಚಂಚಲತೆ ಹೆಚ್ಚಿರುತ್ತದೆ. ಸಿಹಿ ಪದಾರ್ಥಗಳನ್ನು ತಯಾರಿಸಿ ಮಾರಾಟ ಮಾಡುವವರಿಗೆ ಲಾಭ ಹೆಚ್ಚುತ್ತದೆ.

**ವೃಷಭ** — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ಆರ್ಥಿಕ ಸಂಪನ್ಮೂಲಗಳು ಅಗತ್ಯವನ್ನು ಪೂರೈಸುವಷ್ಟು ಇರುತ್ತವೆ. ಮಾತಿನಲ್ಲಿ ಬಹಳ ತಂತ್ರಗಾರಿಕೆ ಉಪಯೋಗಿಸಿ ಮಾತನಾಡುವಿರಿ. ಹಿರಿಯರ ಬೆಂಬಲ ನಿಮಗೆ ಸಾಕಷ್ಟು ಸಿಗುತ್ತದೆ. ಉದ್ಯೋಗದಲ್ಲಿ ಸ್ವಲ್ಪ ಏರಿಳಿತಗಳನ್ನು ಕಾಣಬಹುದು. ಭೂಮಿ ವ್ಯವಹಾರ ಮಾಡುವವರಿಗೆ ಆದಾಯ ಹೆಚ್ಚುತ್ತದೆ. ಗೃಹಿಣಿ ಮಾತಿನ ಬಗ್ಗೆ ಅತ್ಯಂತ ಜಾಗರೂಕವಾಗಿರುವುದು ಬಹಳ ಒಳ್ಳೆಯದು.

**ಮಿಥುನ** — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ವಾರದ ಆರಂಭದಲ್ಲಿ ಬಹಳ ಸಂತೋಷವಿರುತ್ತದೆ. ಆದಾಯವು ನಿಮ್ಮ ನಿರೀಕ್ಷೆಯ ಮಟ್ಟವನ್ನು ತಲುಪುತ್ತದೆ. ಸ್ವಂತ ಉದ್ದಿಮೆಯನ್ನು ಸ್ಥಾಪಿಸುವ ಬಗ್ಗೆ ಈಗ ಆಲೋಚನೆಗಳು ಬರಬಹುದು. ವಿದ್ಯಾರ್ಥಿಗಳಿಗೆ ಅನುಕೂಲಕರವಾದ ವಾತಾವರಣವಿರುತ್ತದೆ. ನಿಮ್ಮ ಕೆಲವು ಸಮಸ್ಯೆಗಳನ್ನು ನೀವೇ ಕುಳಿತು ಬಗೆಹರಿಸಿಕೊಳ್ಳುವಿರಿ. ಕಟ್ಟಡ ನಿರ್ಮಾಣ ಕಾರ್ಯದಲ್ಲಿರುವ ಎಂಜಿನಿಯರ್‌ಗಳಿಗೆ ಈಗ ಬೇಡಿಕೆ ಹೆಚ್ಚುತ್ತದೆ.

**ಕಟಕ** — ಪುನರ್ವಸು 4 ಪುಷ್ಯ, ಆಶ್ಲೇಷ

ಗೌರವಾನ್ವಿತರ ಸಂಪರ್ಕಗಳು ದೊರೆಯುತ್ತವೆ. ಆದಾಯವು ಸ್ವಲ್ಪ ಕಡಿಮೆ ಇರುತ್ತದೆ. ಮಹಿಳೆಯರೊಂದಿಗೆ ವ್ಯವಹಾರ ಮಾಡುವಾಗ ಎಚ್ಚರವಿರಲಿ, ಮೋಸ ಹೋಗುವ ಸಾಧ್ಯತೆಗಳಿವೆ. ಕೆಲಸದಲ್ಲಿ ಹೆಚ್ಚಿನ ಒತ್ತಡ ಕಂಡು ಬಂದರೂ, ಅದನ್ನು ನಿಭಾಯಿಸುವ ಶಕ್ತಿ ಇರುತ್ತದೆ. ಮಿತವ್ಯಯವನ್ನು ಸಾಧಿಸುವುದು ನಿಮಗೆ ಉತ್ತಮ. ರಾಜಕೀಯ ನಾಯಕರುಗಳಿಗೆ ಅನಿರೀಕ್ಷಿತ ಹಿನ್ನಡೆಯಾಗುವ ಸಂದರ್ಭವಿದೆ.

**ಸಿಂಹ** — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ವಾರದ ಆರಂಭದಲ್ಲಿ ಅನಿಶ್ಚಿತತೆ ಇರುತ್ತದೆ. ಆದಾಯವು ಚೇತರಿಕೆಯ ಹಾದಿಯಲ್ಲಿರುತ್ತದೆ. ಉದ್ಯೋಗಿಗಳಿಗೆ ಹಿತಶತ್ರುಗಳ ಕಾಟ ಇರುತ್ತದೆ. ಕುಟುಂಬದಲ್ಲಿ ಹೆಚ್ಚಿನ ಸಂತೋಷವನ್ನು ಕಾಣುವಿರಿ. ಕಟ್ಟಡ ನಿರ್ಮಾಣ ಸಾಮಗ್ರಿಗಳನ್ನು ಮಾರಾಟ ಮಾಡುವವರಿಗೆ ಹೆಚ್ಚಿನ ಲಾಭ ಇರುತ್ತದೆ. ಹೊಸ ಉದ್ಯೋಗದ ಬಗ್ಗೆ ಸಾಕಷ್ಟು ಮಾತುಕತೆ ನಡೆಯುತ್ತದೆ. ಅತಿಯಾಗಿ ಮಾತನಾಡಲು ಹೋಗಿ ತೊಂದರೆಗೆ ಸಿಲುಕಿಕೊಳ್ಳುವ ಸಾಧ್ಯತೆ ಇದೆ.

**ಕನ್ಯಾ** — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಉದ್ಯೋಗ ಕ್ಷೇತ್ರದಲ್ಲಿ ಸ್ವಲ್ಪಮಟ್ಟಿಗೆ ಹೊಂದಾಣಿಕೆಯನ್ನು ಮಾಡಿಕೊಳ್ಳುವುದು ಬಹಳ ಉತ್ತಮ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಈಗ ವಿದ್ಯಾರ್ಥಿಗಳು ಉತ್ತಮ ಫಲಿತಾಂಶಕ್ಕಾಗಿ ಹೆಚ್ಚು ಶ್ರಮ ವಹಿಸಬೇಕು. ರಾಜಕೀಯ ವ್ಯಕ್ತಿಗಳಿಗೆ ಅವರ ಹಿಂಬಾಲಕರಿಂದ ಸ್ವಲ್ಪಮಟ್ಟಿನ ಹಿನ್ನಡೆಯಾಗಬಹುದು.

**ತುಲಾ** — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ಆತ್ಮಾಭಿಮಾನ ಬಹಳ ಹೆಚ್ಚು ಇರುತ್ತದೆ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ನಿಮ್ಮ ನಡವಳಿಕೆಯಿಂದ ಜನರ ನಡುವೆ ಮುಜುಗರಕ್ಕೆ ಒಳಗಾಗುವಿರಿ. ವಿದೇಶದಲ್ಲಿ ಓದುತ್ತಿರುವವರಿಗೆ ಅಭಿವೃದ್ಧಿ ಇರುತ್ತದೆ. ಪತ್ನಿಯಿಂದ ನಿಮ್ಮ ಕೆಲಸಗಳಿಗೆ ಹೆಚ್ಚಿನ ಪ್ರೋತ್ಸಾಹ ದೊರೆಯುತ್ತದೆ. ಕೆಲವು ರಾಜಕೀಯ ವ್ಯಕ್ತಿಗಳಿಂದ ಕಿರುಕುಳ ಬರಬಹುದು. ಆಪ್ತ ಸ್ನೇಹಿತನ ದ್ವಂದ್ವ ನಿಲುವಿನಿಂದಾಗಿ ವ್ಯವಹಾರದಲ್ಲಿ ಸಲ್ಪ ಹಿನ್ನಡೆಯಾಗಬಹುದು.

**ವೃಶ್ಚಿಕ** — ವಿಶಾಖಾ 4 ಅನೂರಾಧ, ಜ್ಯೇಷ್ಠ

ದೈನಂದಿನ ಕೆಲಸ ಕಾರ್ಯಗಳಲ್ಲಿ ಉತ್ಸಾಹ ಕಡಿಮೆಯಾದಂತೆ ಅನಿಸುತ್ತದೆ. ಆದಾಯವು ಸಾಮಾನ್ಯಗತಿಯಲ್ಲಿದ್ದು, ಖರ್ಚನ್ನು ಹಿಡಿತದಲ್ಲಿಡಿ. ನಿಮ್ಮ ನಡವಳಿಕೆಯ ಮೇಲೆ ಮಕ್ಕಳು ಪರಿಣಾಮ ಬೀರುತ್ತಾರೆ. ವಿದ್ಯುತ್ ಕ್ಷೇತ್ರದಲ್ಲಿ ಕೆಲಸ ಮಾಡುವವರು ಎಚ್ಚರವಹಿಸಿ. ಉದ್ಯಮಿಗಳಿಗೆ ಇದ್ದ ಕಾರ್ಮಿಕರ ಸಮಸ್ಯೆ ಬಗೆಹರಿಯುವುದು. ಮೇಲಿನ ಅಧಿಕಾರಿಗಳೊಡನೆ ವಿರೋಧ ಕಟ್ಟಿಕೊಳ್ಳುವುದು ಬೇಡ.

**ಧನುಸ್ಸು** — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ಮನಸ್ಸಿನಲ್ಲಿ ದ್ವಂದ್ವವಿರುತ್ತದೆ. ಆದಾಯವು ಕಡಿಮೆ ಇದ್ದರೂ ನಿಭಾಯಿಸುವ ಶಕ್ತಿ ಇರುತ್ತದೆ. ಬಂಧುಗಳು ನಿಮ್ಮನ್ನು ನೋಡಿ ಅಸೂಯೆ ಪಡುವರು. ಕೃಷಿಭೂಮಿಯನ್ನು ಖರೀದಿ ಮಾಡುವ ಯೋಗವಿದೆ. ಕೃಷಿ ವಿದ್ಯಾರ್ಥಿಗಳಿಗೆ ಅಭಿವೃದ್ಧಿ ಇರುತ್ತದೆ. ವೃತ್ತಿಯಲ್ಲಿ ಸ್ವಲ್ಪ ಗೊಂದಲಗಳನ್ನು ಕಾಣಬಹುದು. ಕೋರ್ಟ್, ಕಚೇರಿ ಸಂಬಂಧದ ಕೆಲಸಗಳಲ್ಲಿ ಮುನ್ನಡೆ ಇರುತ್ತದೆ. ರಂಗ ಕಲಾವಿದರುಗಳಿಗೆ ಕೆಲವು ಸಂಸ್ಥೆಗಳಿಂದ ಗೌರವ ದೊರೆಯುತ್ತದೆ.

**ಮಕರ** — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ನಿಮ್ಮ ಬಗ್ಗೆ ಆಲೋಚಿಸಿ ಮೇಲೆ ಏರುವ ಯತ್ನ ಮಾಡುವಿರಿ. ಆದಾಯವು ಸ್ವಲ್ಪ ಅನಿಶ್ಚಿತತೆಯಿಂದ ಕೂಡಿರುತ್ತದೆ. ವಿದೇಶಿ ವ್ಯವಹಾರ ಮಾಡುವವರಿಗೆ ಆದಾಯ ಹೆಚ್ಚುತ್ತದೆ. ಪುರಾತನ ವಸ್ತುಗಳನ್ನು ಮಾರಾಟ ಮಾಡುವವರ ಆದಾಯ ಹೆಚ್ಚುತ್ತದೆ. ವಾಹನಗಳ ಬಿಡಿಭಾಗಗಳನ್ನು ಮಾರಾಟ ಮಾಡುವವರ ವ್ಯವಹಾರದಲ್ಲಿ ವಿಸ್ತರಣೆಯಾಗುತ್ತದೆ. ಷೇರು ಮಾರುಕಟ್ಟೆಯ ಮಧ್ಯವರ್ತಿಗಳಿಗೆ ಆದಾಯ ಹೆಚ್ಚುತ್ತದೆ.

**ಕುಂಭ** — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಕೆಲವು ಕಲಾವಿದರುಗಳಿಗೆ ವಿದೇಶಿ ಮಾಧ್ಯಮಗಳಲ್ಲಿ ಉತ್ತಮ ಪ್ರೋತ್ಸಾಹ ದೊರೆಯುತ್ತದೆ. ಆರ್ಥಿಕವಾಗಿ ನಿಧಾನಗತಿಯ ಚೇತರಿಕೆ ಕಾಣಬಹುದು. ಬಂಧುಗಳಿಗೆ ಸಾಕಷ್ಟು ಸಲಹೆಗಳನ್ನು ಕೊಡುವಿರಿ. ಸ್ಥಿರಾಸ್ತಿ ಕೊಳ್ಳುವ ಬಗ್ಗೆ ಸಾಕಷ್ಟು ಆಲೋಚನೆಯನ್ನು ಮಾಡುವಿರಿ. ಉಪನ್ಯಾಸಕರಿಗೆ ಉತ್ತಮ ಸ್ಥಾನ ದೊರಕುತ್ತದೆ. ಕುಟುಂಬದಲ್ಲಿ ಮುಸುಕಿನ ಗುದ್ದಾಟ ನಡೆಯಬಹುದು. ಕೃಷಿ ಕ್ಷೇತ್ರದಲ್ಲಿರುವವರಿಗೆ ಹೆಚ್ಚಿನ ಪ್ರಗತಿ ಇರುತ್ತದೆ.

**ಮೀನ** — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಅತಿ ಶ್ರಮಪಟ್ಟು ಕೆಲಸ ಮಾಡಬೇಕಾದೀತು. ಆದಾಯವು ಕಡಿಮೆ ಇರುತ್ತದೆ. ನಿಮ್ಮೆಲ್ಲ ಕಾರ್ಯಗಳಿಗೆ ಸಂಗಾತಿಯ ಸಹಕಾರ ದೊರೆಯುತ್ತದೆ. ಗಣಿಗಾರಿಕೆ ಮಾಡುವವರಿಗೆ ಈಗ ಆದಾಯ ಹೆಚ್ಚುತ್ತದೆ. ವಿದ್ಯಾರ್ಥಿಗಳಿಗೆ ಅತಿ ಹೆಚ್ಚು ಯಶಸ್ಸು ಇರುತ್ತದೆ. ಸಿದ್ಧ ಉಡುಪುಗಳನ್ನು ಮಾರಾಟ ಮಾಡುವವರಿಗೆ ಆದಾಯ ಹೆಚ್ಚುತ್ತದೆ.


## ಪದಬಂಧ 2914

**ಮೇಲಿನಿಂದ ಕೆಳಕ್ಕೆ**

1. ಹೆದರಿಕೆ ಬೇಡವೆಂದು ನೀಡುವ ಭರವಸೆ 3
2. ನಾಡಿನಲ್ಲಿ ಅಸ್ತಿತ್ವಕ್ಕೆ ಬಂದ ಮೂರು ಸಿದ್ಧಾಂತ 3
3. ಉತ್ತರದಲ್ಲಿ ನುಣ್ಣಗೆ ತಪ್ಪಿಸಿಕೊಳ್ಳುವ ಪರಿ 3
4. ಮೂರು ಮಾಲೆಗಳ ಗ್ರಾಮದಲ್ಲಿರುವ ದಿಲ್ಲಿಯ ಸೆರೆಮನೆ 3
7. ಕುಲದಲ್ಲಿ ಹುಟ್ಟಿದವನನ್ನು ಹೇಗೆನ್ನಬಹುದು 3
9. ಗುರಿಯಲ್ಲೇ ತೊಡಗಿಸಿಕೊಂಡವ ಇವ 5
10. ಝುಂ ಎಂದಾಗ ದೇಹಕ್ಕಾಗುವ ಅನುಭವ 3
11. ನಡೆನುಡಿಯಲ್ಲಿರುವ ಮೃದು ಮಾರ್ದವತೆ 5
12. ಪ್ರಾಣಕ್ಕೆ ಆಧಾರವಾದ ಆಹಾರ 2
13. ನೋವಿನಿಂದ ಒದ್ದಾಡು 3
15. ಉಗುರಿನ ಗೀರು ಗಾಯ 2
18. ಸುಸಂಸ್ಕೃತ ಹಿಂದಿನ ಕಾಲದಲ್ಲಿ ಅಳುತ್ತಿದ್ದ 3
19. ಕೂಡಿಸಿಟ್ಟು ಧರಿಸಿಕೊಳ್ಳುವ ಆಭರಣದವ, ಶಿವ ಚಂದ್ರನನ್ನು ಧರಿಸಿದಂತೆ 3
20. ವನದಲ್ಲಿ ಬೆಳೆದ ಸುವಾಸಿತ ಸೊಪ್ಪು ತಲೆಕೆಳಗು 3
21. ಕೊನೆಯಲ್ಲಿ ತಿಮ್ಮ ಒತ್ತುಕಳೆದುಕೊಂಡಿದ್ದಾನೆ 3
22. ರಾಮ ಭರತಾನುಜ, ಊರ್ಮಿಳೆಯ ಪತಿ 3

**ಎಡದಿಂದ ಬಲಕ್ಕೆ**

1. ಸಮಭಾಗದ ಇಡೀ ಹಗಲು ಇರುಳು 4
3. ಮತಲಾಭಕ್ಕಾಗಿ ವಿವಿಧ ಪಂಗಡ ವರ್ಗೀಕರಣ ವ್ಯವಸ್ಥೆ 5
5. ಅಂತರಂಗವನ್ನು ಅಪಹರಿಸಿರುವವಳು 4
6. ಜಯಕೀರ್ತಿಯನ್ನು ಹೊಂದಿದವ 4
8. ಮಾಡಬೇಕಾದ ಕಾರ್ಯವನ್ನು ಮಾಡುವವ 5
10. ರಾಮಾಯಣ ಮಹಾಭಾರತ ಕಾಲದ ಪಟ್ಟಣ ವಾಸಿಗಳು 4
12. ಕುವೆಂಪು ಆದರ್ಶದ ಚೇತನ ಪಡೆಯಬಹುದಾದ ಅರೂಪ 5
14. ದೇವಮಾನವರ ನಡುವೆ ನಿಂತ ಮಾಯಾಲೋಕದ ಮಂದಿ 5
16. ಹನುಮನಂತಹ ಮಹಾ ವಾನರನಿಂದ ಸೇವೆ ಪಡೆದವ 5
17. ಹಾದಿಯ ಇಕ್ಕೆಲಗಳಲ್ಲಿ ಬೆಳಸಿದ ವೃಕ್ಷ ರಾಶಿ 4
19. ಉಳಿದಿರುವ ಹಾವಿನ ಹಾಸಿಗೆಯ ಮೇಲೆ ಪವಡಿಸಿದವ 5
21. ಒಳಗೊಳಗೆ ಒಂದಕ್ಕೊಂದು ಬೆಸೆದು ರಚಿಸಿದ ಅಗೋಚರ ವ್ಯವಸ್ಥೆ 4
23. ವಾಸ್ತವಿಕವಾಗಿ ಇರುವ ಹಾಗೆ ಇರುವುದು, ಕಲ್ಪನೆಯಲ್ಲ, ಉತ್ಪ್ರೇಕ್ಷೆಯಲ್ಲ 4
24. ಎಂಡಕುಡ್ಕ ರಚಿಸಿದ ಅಮೂಲ್ಯ ಹರಳಿನಂತಹ ಕವನಸಂಗ್ರಹ 5
25. ರಣದಲ್ಲಿ ಮಹಾನ್ ಎನಿಸಿಕೊಂಡ ಪ್ರತಾಪಸಿಂಹನ ಬಿರುದು 4





### ಪದಬಂಧ ಉತ್ತರ -2913

**ಮೇಲಿಂದ ಕೆಳಕ್ಕೆ**

1.ಸಹಾಯಕ 2.ಮಹಾಪೂರ 3.ನಾಯಿಭಯ 4.ಕಲ್ಲಾರತಿ 7.ರುದ್ರತಾಂಡವ 8.ಸಕಲಗುಣ 9.ಜಡೆನಾಗರಾ 10.ರಣಭೀಕರ 13.ನಡುಬಾವಿ 14.ರುಚಿಪಾಕ 16.ಮಹಾನದೀ 17.ಕರಾವಳಿ

**ಎಡದಿಂದ ಬಲಕ್ಕೆ**

1.ಸಮಕ್ಷಮ 3.ನಾಗರೀಕ 5.ಹಾಗಲಕಾಯಿ 6.ಕರುಣಾರಸ 9.ಜಯಭಾರತಿ 11.ಕವಡೆ 12.ಗುಳಿಗ 13.ನವತರುಣ 15.ರಾಮತಾರಕ 18.ಪಾಕಶಾಸನ 19.ವಿನಾಯಕ 20. ದೀಪಾವಳಿ



# ಈ ತರುಣರಿಗೆ ನೈಸರ್ಗಿಕ ಮಂಟಪದ್ದೇ ಧ್ಯಾನ



ಬಾಳೆ ಕಂಬಗಳು ಮತ್ತು ತೆಂಗಿನ ಗರಿಗಳಿಂದ ಅಲಂಕೃತ ಮಂಟಪ

• ಜಿ.ಎಂ.ಬೊಮ್ನಳ್ಳಿ

ಮದುವೆ, ಮುಂಜಿ, ಆರತಕ್ಷತೆ–ಹೀಗೆ ಅದು ನೆನಪಾಗಿ ಉಳಿಯುವಂತಹ ಮಹತ್ವದ ಕಾರ್ಯಕ್ರಮಗಳು ಎಂದಾದರೆ, ಅಲ್ಲಿನ ವೇದಿಕೆ ಅಲಂಕಾರದ ಸೊಬಗೂ ಕೂಡ ನೆನಪಿನಲ್ಲಿ ಉಳಿಯುವಂತಿರಬೇಕು ಎಂದು ಬಯಸುವುದು ಸಹಜ. ಆದರೆ, ಆಧುನಿಕತೆಯ ತಳುಕು–ಬಳುಕು ಬಣ್ಣ ಬ್ಯಾಗಡೆಯ ಅಲಂಕಾರಗಳು ಎಲ್ಲರಿಗೂ ಇಷ್ಟವಾಗುವುದಿಲ್ಲ. ಅದರಲ್ಲೂ ಹಳ್ಳಿಯಲ್ಲೇ ಹುಟ್ಟಿ ಬೆಳೆದವರಂತೂ ನೈಸರ್ಗಿಕ ವೇದಿಕೆಗಳನ್ನೇ ಅಪೇಕ್ಷೆ ಪಡುತ್ತಾರೆ. ಪ್ರಕೃತಿ ಸಹಜ ವಸ್ತುಗಳನ್ನೇ ಬಳಸಿಕೊಂಡು ಸಿದ್ಧಗೊಳ್ಳುವ ವೇದಿಕೆ, ಮಂಟಪಗಳು ಕಣ್ಣು ಮಾತ್ರವಲ್ಲ, ಹೃದಯವನ್ನೂ ಗೆಲ್ಲುತ್ತವೆ. ತೋಟದ ಬಾಳೆದಿಂಡು, ಮಾವಿನಎಲೆ, ಹಣ್ಣಾದ ಅಡಿಕೆಗಳಿಂದ ಅಲಂಕಾರವಾದರೆ ಅದೆಷ್ಟು ಸಹಜ, ಸುಂದರ. ಇಂತಹ ಮಂಟಪ, ವೇದಿಕೆಗಳು ಸಮಾರಂಭಕ್ಕೆ ವಿಶೇಷ ಆಕರ್ಷಣೆ ತಂದುಕೊಡುತ್ತವೆ.

ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕಿನ ಶಿರುಮನೆ, ಸಾಲೆಕೊಪ್ಪದ ಕೆಲವು ಉತ್ಸಾಹಿ ಯುವಕರು ಇಂಥದ್ದೊಂದು ಕಲಾ ಹವ್ಯಾಸ ರೂಢಿಸಿಕೊಂಡು ಮುಂದುವರೆದಿದ್ದಾರೆ. ಬಾಳೆದಿಂಡಿನಿಂದ ಮಂಟಪ ಹಾಗೂ ತೋಟದಎಲೆ, ಬಳ್ಳಿ ಇತ್ಯಾದಿ ಹಸಿರನ್ನೇ ಬಳಸಿಕೊಂಡು ಮದುವೆ ಮೊದಲಾದ ಸಮಾರಂಭಗಳಿಗೆ ಆಕರ್ಷಕ ಮಂಟಪ ಸಿದ್ಧಪಡಿಸುವುದರಲ್ಲಿ ಇವರು ಪ್ರಸಿದ್ಧರು. ಪಾರಂಪರಿಕ ಕೃಷಿ ಬದುಕಿನಲ್ಲಿ ತಮ್ಮನ್ನು ತೊಡಗಿಸಿಕೊಂಡ ಇವರೆಲ್ಲರ ಹವ್ಯಾಸ ನೈಸರ್ಗಿಕ ಮಂಟಪ ತಯಾರಿಕೆ. ವರ್ಷದ ಮದುವೆ-ಮುಂಜಿ ಸೀಸನ್‌ನಲ್ಲಿ ಕರಕುಶಲಿಗರಾದ ಇವರಿಗೆ ಭಾರೀ ಬೇಡಿಕೆ. ಕೈತುಂಬ ಕೆಲಸ. ಸಂಬಂಧಿಕರು, ಪರಿಚಯಸ್ಥರು ಇವರ ಕೌಶಲವನ್ನು ನ್ಯಾಯಯುತವಾಗಿ, ಗೌರವ ಪೂರ್ವಕವಾಗಿಯೇ ಬಳಸಿಕೊಳ್ಳುತ್ತಿದ್ದಾರೆ. ಹಾಗಾಗಿ ಇವರ ಶ್ರಮಕ್ಕೆ ತಕ್ಕ ಪ್ರತಿಫಲ ಲಭಿಸುತ್ತಿದೆ.

‘ನಾವೇನೂ ಇಂತಿಷ್ಟೇ ಕೊಡಿ ಎಂದು ಒತ್ತಾಯಿಸುವುದಿಲ್ಲ. ಮಂಟಪ ಮಾಡಿಸಿಕೊಂಡವರು ಈಗಿನ ಕಾಲಕ್ಕೆ ಸ್ಪಂದಿಸಿ ಸೂಕ್ತ ವೀಳ್ಯ ನೀಡುತ್ತಾರೆ’ ಎನ್ನುತ್ತಾರೆ ಶಿರುಮನೆಯ ಯುವಕ ಮಧು. ಮಂಟಪ ತಯಾರಿಸುವ ಆರೇಳು ಜನರ ತಂಡವು ಸಾಗರ ತಾಲ್ಲೂಕು ಮಾತ್ರವಲ್ಲದೇ, ಪಕ್ಕದ ಶಿವಮೊಗ್ಗ, ಸಿದ್ದಾಪುರದ ಹಲವಾರು ಕಡೆಗಳಲ್ಲಿ ಈಗಾಗಲೇ ನೂರಾರು ನಮೂನೆಯ ಮಂಟಪಗಳನ್ನು ತಯಾರಿಸಿಕೊಟ್ಟು ಭೇಷ್ ಎನಿಸಿಕೊಂಡಿದೆ. ‘ಕೇರಳದಲ್ಲೂ ಬಾಳೆಮಂಟಪ ಮಾಡಿದ್ದೇವೆ’ ಎನ್ನುತ್ತಾರೆ ಮಧು ಹಾಗೂ ಸಾಲೆಕೊಪ್ಪದ ಯುವಕ ಮಹಾಬಲೇಶ್ವರ. ಕೃಷಿ ಕಾರ್ಯದ ನಡುವಲ್ಲೇ ಒಂದು ಕಲಾ ಹವ್ಯಾಸವಾಗಿ ಬೆಳೆಸಿಕೊಂಡ ಇಂತಹ ಮಂಟಪ ತಯಾರಿಕೆ ಕಲೆ ಸಂಪಾದನೆಗೂ ನೆರವಾಗಿದೆ.

ಇದೇ ರೀತಿಯಲ್ಲಿ ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕಿನ ಅಗಸಾಲ ಬೊಮ್ಮನಳ್ಳಿಯ ಯುವಕ ಮಂಡಳದ ಸದಸ್ಯರು ಹಲವಾರು ವರ್ಷಗಳಿಂದ ನೈಸರ್ಗಿಕ ಮಂಟಪ ತಯಾರಿಸುವುದರಲ್ಲಿ ಸಕ್ರಿಯರಾಗಿದ್ದಾರೆ. ಬಾಳೆ ಮಂಟಪ ತಯಾರಿಕೆಯಲ್ಲಿ ಯುವಕ ಮಂಡಳದ ಹಿರಿಯ ಸದಸ್ಯರು ಕಿರಿಯರಿಗೂ ಮಾರ್ಗದರ್ಶನ ಮಾಡುತ್ತ ಬಂದಿದ್ದು, ಈ ‘ಮಂಟಪ ಕಲೆ’ಯನ್ನೂ ಮುಂದುವರೆಸಿದ್ದಾರೆ. ಇದೇ ರೀತಿ, ಶಿರಸಿ ತಾಲ್ಲೂಕಿನ ಜಡ್ಡೀಮನೆಯ ಶ್ರೀಧರ ಹೆಗಡೆ ಅವರು ವೃತ್ತಿಯಿಂದ ಕೃಷಿಕರು. ಆದರೆ, ಇವರ ಕಲಾಸಕ್ತಿ ಬಾಳೆ ಮಂಟಪ ಮತ್ತು ಅಡಿಕೆ ದಬ್ಬೆಯಿಂದ ವೈವಿಧ್ಯಮಯ ಮಂಟಪ, ವೇದಿಕೆಗಳನ್ನು ತಯಾರು ಮಾಡುವುದು. ಊರಿನ ಜನರು ಉದ್ಯೋಗಕ್ಕಾಗಿ ಹುಬ್ಬಳ್ಳಿ, ಬೆಂಗಳೂರು ಸೇರಿದಂತೆ ದೂರದ ನಗರದಲ್ಲಿ ಇದ್ದಾಗ್ಯೂ, ಅವರೆಲ್ಲ ತಮ್ಮ ಮಕ್ಕಳ ಮದುವೆ ಕಾರ್ಯವನ್ನೂ ಊರಲ್ಲೇ ಮಾಡುವ ಅವಕಾಶ ದೊರೆತಾಗ, ಮೊದಲು ಸಂಪರ್ಕಿಸುವುದು ಬಾಳೆಮಂಟಪ ಮಾಡಿಕೊಡುವ ತಮ್ಮದೇ ಊರಿನ ಉತ್ಸಾಹಿ ಯುವಕರನ್ನು.

ತೋಟದಲ್ಲಿ ಬೆಳೆದ ಬಾಳೆದಿಂಡು, ಮಾವಿನಎಲೆಗಳು, ತೆಂಗಿನಗರಿ, ಹಣ್ಣಡಿಕೆ ಇಂತಹ ನೈಸರ್ಗಿಕ ವಸ್ತುಗಳನ್ನು ಬಳಸಿ ಅಲಂಕಾರವಾದರೆ ಅದೆಷ್ಟು ಸಹಜ, ಸುಂದರ. ಅನೇಕ ಕಡೆ ಇಂದು ಊರಿನ ಕೆಲವು ಉತ್ಸಾಹಿ ಯುವಕರು ಇಂತಹ ಹಸಿರನ್ನೇ ಬಳಸಿಕೊಂಡು ಮದುವೆ ಮೊದಲಾದ ಸಮಾರಂಭಗಳಿಗೆ ಆಕರ್ಷಕ ಮಂಟಪ ಸಿದ್ಧಪಡಿಸುವುದರಲ್ಲಿ ಪಳಗಿರುತ್ತಾರೆ. ಪಾರಂಪರಿಕ ಕೃಷಿ ಬದುಕಿನಲ್ಲಿ ತಮ್ಮನ್ನು ತೊಡಗಿಸಿಕೊಂಡ ಯುವಕರ ಜೇಬುತುಂಬುತ್ತಿದೆ ನೈಸರ್ಗಿಕ ಮಂಟಪ ತಯಾರಿಕೆ ಹವ್ಯಾಸ. ❖



ಬಾಳೆಕಂಬಗಳ ಮಂಟಪ



ಹಣ್ಣು ಅಡಿಕೆಗಳಿಂದ ತಯಾರಾದ ಮಂಟಪ

# ದೀವಳಿಗೆಯಿಂದ ತುಳಸಿ ಮದುವೆಯವರೆಗೂ...

8ನೇ ಪುಟದಿಂದ...

ಅವರು ನಡೆಯುವಾಗ ಬರುವ ಗೆಜ್ಜೆ ನಾದಕ್ಕೂ, ಹೊಡೆದುಕೊಳ್ಳುವಾಗ ಬರುವ ಈ ಛಟೀರ್ ಸದ್ದಿಗೂ ಆತ್ಮನಡುಗಿಸುವ ಶಕ್ತಿ ಇದೆ. ಇವರ ಈ ದೇಹದಂಡನೆಯ ಹಿನ್ನೆಲೆ ಏನೆಂಬುದು ಸ್ಪಷ್ಟವಾಗಿ ಯಾರಿಗೂ ಗೊತ್ತಿಲ್ಲ. ಆದರೆ ಬಿಡಿಗಾಸಿಗಾಗಿ ಪ್ರತಿ ಮಳಿಗೆಯ ಮುಂದೆಯೂ ಈ ಸಂಪ್ರದಾಯ ಕಾಣಿಸಿಕೊಳ್ಳುತ್ತದೆ. ತುಳಸಿ ಲಗ್ನದ ನಂತರ ಇವರೆಲ್ಲ ಎಲ್ಲಿ ಹೋಗ್ತಾರೆ? ಏನು ಮಾಡ್ತಾರೆ? ಬೆನ್ನಟ್ಟಿದವರಾರು..?

ದೇಹದ ನರನಾಡಿಗಳಲ್ಲಿ ಅಲ್ಲೋಲ ಕಲ್ಲೋಲವೆನಿಸುವ ಈ ವಾದ್ಯ ಅವರಲ್ಲಿ ವೀರ ರಸವನ್ನು ಜಾಗೃತಗೊಳಿಸುತ್ತದೆ. ಇವರು ದೇಹದಂಡನೆ ಮಾಡಿಕೊಂಡಷ್ಟೂ, ವ್ಯಾಪಾರದಲ್ಲಿ ಬರುವ ಏಳುಬೀಳುಗಳು ಕಡಿಮೆಯಾಗುತ್ತವೆ ಎಂಬ ಪ್ರತೀತಿ ಇದೆ. ಸಮಾಧಾನವೆನಿಸುವಷ್ಟು ದಕ್ಷಿಣೆ ಕೊಟ್ಟು ಕಳಿಸಲಾಗುತ್ತದೆ.

**ಧೂಮಲೀಲೆ:** ಅಂಗಡಿಯ ತುಂಬೆಲ್ಲ ಹೊಗೆ ತುಂಬಿಕೊಳ್ಳಬೇಕು. ನುಸಿಯಂತಹ ಸಣ್ಣ ಕೀಟಾಣುಗಳೂ ಕೊನೆಯಾಗಬೇಕು ಎಂಬ ಕಾರಣಕ್ಕೆ ಸಾಕಷ್ಟು ಧೂಪ, ಸಾಂಬ್ರಾಣಿಗಳನ್ನೂ ಬಳಸಲಾಗುತ್ತದೆ. ಆದರೆ ಪಟಾಕಿಯ ಸದ್ದು ಮತ್ತು ಹೊಗೆ ಅಂಗಡಿ ತುಂಬಲಿ ಎಂಬುದೊಂದು ನಂಬಿಕೆ ಇದೆ. ಲೆಕ್ಕದ ಪುಟಗಳು, ದಾಸ್ತಾನು ಇವೆಲ್ಲ ಹಾಳಾಗದಿರಲಿ ಎಂಬ ನಂಬಿಕೆ ಇರಬಹುದು.

ಬರುವ ವರ್ಷ ಹೇಗಿರಬಹುದು ಎಂದು ಅಂದಾಜಿಸಲು ಅಥವಾ ಅಂಗಡಿಯ ಅಂಗಳದಲ್ಲಿ ಹಣದ ವಹಿವಾಟು ಹೆಚ್ಚಾಗಲಿ ಎಂಬ ಅಭಿಲಾಶೆಯಿಂದ ರಾತ್ರಿ ಇಡೀ ಕಾರ್ಡು ಆಡೋದು, ಪಗಡೆ ಆಡೋದು ನಡೆಯುತ್ತದೆ. ಹಣದ ಪಂದ್ಯವಿಟ್ಟು ಆಡುವುದೇ ವಿಶೇಷ. ಗಂಡು-



ದೀಪಗಳೊಂದಿಗೆ ದೀಪಾವಳಿ ಸಂಭ್ರಮ

ಮಕ್ಕಳೆಲ್ಲ ಇಸ್ಪೀಟಿನೆಲೆ ಆಡಲು ಕುಳಿತರೆ, ಮಧ್ಯರಾತ್ರಿ ಕಳೆಯುವವರೆಗೂ ಮಹಿಳೆಯರೂ ಪಗಡೆಯ ಹಾಸಿನ ಮುಂದೆ ಕೂರುತ್ತಾರೆ. ಗೆದ್ದರೆ, ಗೆದ್ದಿದ್ದೆಲ್ಲವೂ ದೇಗುಲಕ್ಕೋ, ಮುಂದೆ ಹೋಗುವ ಗುಡಿಗಳ ಪ್ರವಾಸಕ್ಕೋ ಬಳಸುತ್ತಾರೆ. ಸೋತರೆ, ಆ ವರ್ಷ ಪೂರ್ತಿ ಎಚ್ಚರದಿಂದಿರಬೇಕು ಎಂಬ ನಂಬಿಕೆಯಿಂದ ಜಾಗೃತೆ ವಹಿಸುತ್ತಾರೆ.

ಮಕ್ಕಳೆಲ್ಲ ಪಟಾಕಿ ಹಚ್ಚಿ, ಹೊಗೆಗೆ ಮೂಗೇರಿಸಿಕೊಳ್ಳುತ್ತ, ತಾವೂ ಆಡುವುದಾಗಿ, ಕಾಡುತ್ತ, ಬದಾಮಿ ಹಾಲು ಕುಡಿಯುತ್ತಲೇ ಇರುತ್ತಾರೆ.

ವೀರತಿಲಕವಿರಿಸಿಕೊಂಡ ಪುರುಷರು, ಗಾಂಧಿ ಟೋಪಿ ಧರಿಸಿ, ಹೆಗಲಿಗೆ ಒಂದು ಟವಲ್ ಹಾಕಿಕೊಂಡು ಓಡಾಡುತ್ತಲೇ ಕಡೀಪಂಚಮಿ ಎಂದು ಕರೆಯುವ ತುಳಸೀಲಗ್ನದವರೆಗೂ ಸಂಭ್ರಮಿಸುತ್ತಾರೆ. ಲಕ್ಷ್ಮಿ ಪೂಜೆಯೆಂಬುದು ಕೇವಲ ಶುಭ ಲಾಭವನ್ನು ಹಾರೈಸುವ ಹಬ್ಬವಾಗಿ ಉಳಿಯುವುದಿಲ್ಲ. ಬಂಧು ಬಾಂಧವರಿಂದ ಕೊಡು ಕೊಳ್ಳುವ, ಲಾಭ ನಷ್ಟದ ಜಾಗೃತಿ ಮೂಡಿಸುವ, ಲಾಭವಾದಾಗ ಅಹಂಕಾರ ಬರದಂತೆ ಎಚ್ಚರಿಕೆ ಮೂಡಿಸುವ ಆತ್ಮಜಾಗೃತಿಯ ದೀಪದ ಕುಡಿ ಮುಡಿಸುವ, ಅರಿವು ಮೂಡಿಸುವ ಹಬ್ಬವಾಗುತ್ತದೆ. ❖

# ಅಸಹಾಯಕರ ಬಂಧು ಹಡಪದ ಶಿವಪ್ಪ

8ನೇ ಪುಟದಿಂದ...

ಇದರಿಂದ ಶಿವಪ್ಪ ಕೆಲವೊಮ್ಮೆ ಆ ಗ್ರಾಮಗಳ ಬಲಾಢ್ಯ ವರ್ಗದವರಿಂದ ಹಾಗೂ ಸ್ವಜಾತಿಯವರಿಂದಲೇ ವಿರೋಧವನ್ನು ಎದುರಿಸಬೇಕಾಯಿತು. ಆ ಊರುಗಳ ಪ್ರಕ್ಷುಬ್ಧ ಪರಿಸ್ಥಿತಿ ಕಾಲಕ್ರಮೇಣ ತಿಳಿಗೊಂಡು ಸಹಜ ಸ್ಥಿತಿ ನಿರ್ಮಾಣವಾಗುತ್ತ ಬಂದಿತು ಎಂಬುದು ಬೇರೆ ಮಾತು.

ನಗರ ಹಾಗೂ ಸುತ್ತಮುತ್ತಲ ಗ್ರಾಮಗಳಲ್ಲಿರುವ ಹಿಂದುಳಿದ ವರ್ಗಗಳ ವಸತಿ ನಿಲಯಗಳ ವಿದ್ಯಾರ್ಥಿಗಳಿಗೆ ಶಿವಪ್ಪನವರ ಕ್ಷೌರವೇ ಇಷ್ಟ. ಕ್ಷೌರಕ್ಕೆ ಪ್ರತಿಯಾಗಿ ಕನಿಷ್ಠ ಗೌರವ ಸಂಭಾವನೆ ಇರುತ್ತದೆಯಾದರೂ ಹಾಸ್ಟೆಲ್ ಹುಡುಗರು ಮತ್ತು ಶಿವಪ್ಪಜ್ಜನ ನಡುವಿನ ಆತ್ಮೀಯ ಭಾವವೇ ಇಲ್ಲಿ ಗಣ್ಯ. ಶಿವಪ್ಪ ಅವರ ಅಜ್ಜ (ಅವರ ಹೆಸರೂ ಶಿವಪ್ಪ ಹಡಪದ) ಸ್ವಾತಂತ್ರ್ಯ ಪೂರ್ವದಲ್ಲಿ ಹೈದರಾಬಾದ್ ನಿಜಾಮನ ಸರ್ಕಾರದಲ್ಲಿ ಪೊಲೀಸ್ ಇಲಾಖೆ ಸೇರಿ ಕ್ಷೌರಿಕ ಕೆಲಸವನ್ನೂ ಮಾಡಿದ್ದರು.


ತಮ್ಮ ಪ್ರಾಮಾಣಿಕ ಸಮಾಜ ಸೇವೆಯನ್ನು ಎಲ್ಲಿಯೂ ಹೇಳಿಕೊಳ್ಳದ ಹಡಪದ ಶಿವಪ್ಪನವರ ಕ್ಷೌರ ಸೇವೆ ಕೊಪ್ಪಳದಲ್ಲಿ ಜನಜನಿತ.

ಶಿವಪ್ಪನವರ ಕಾಯಕದ ಕತೆಯನ್ನು ಕೇಳುತ್ತಿದ್ದಾಗಲೇ ಜೇಬಿನಲ್ಲಿದ್ದ ಮೊಬೈಲ್ ರಿಂಗಣಿಸಿತು. ಕರೆಯನ್ನು ಆಲಿಸಿ ‘ಮತ್ತೆ ಸಿಗೋಣ’ ಎಂದು ನಗೆಯೊಂದನ್ನು ಬೀರಿ ಸೈಕಲ್ ಏರಿ ಹೊರಟರು.



## ಮೊದಲ ಓದು

### ಅಂತರಂಗ, ಬಹಿರಂಗ ಶುದ್ಧಿಗೆ ಒತ್ತು ನೀಡುವ ಕೃತಿ



**ಸಮರ ಕಲೆಗಳಲ್ಲಿ ಝೆನ್**
ಲೇ: ಜೋ ಹಯಮ್ಸ್
ಅ: ಡಾ. ಸಂಜೀವ ಕುಲಕರ್ಣಿ
ಪ್ರ: ಸ್ವಯಂದೀಪ ಝೆನ್ ಕೇಂದ್ರ
ಸಂ: 9448143100

ವಿದ್ಯಾಭ್ಯಾಸ, ಮದುವೆಯಾದ ನಂತರ ಆಸ್ಥೆಯಿಂದ ಹೊಸ ವಿದ್ಯೆ, ಆಟ ಅಥವಾ ಶಾರೀರಿಕ ವ್ಯಾಯಾಮವನ್ನು ಕಲಿತು ಅದನ್ನು ಅಷ್ಟೇ ನಿಷ್ಠೆಯಿಂದ ಮುಂದುವರಿಸಿಕೊಂಡು ಹೋಗುವವರು ವಿರಳ. ಹೀಗಿರುವಾಗ 45ರ ನಂತರದಲ್ಲಿ ಹತ್ತಾರು ಸಮರ ಕಲೆಗಳನ್ನು ಕಲಿಯುತ್ತಾ ಅದರ ಆಧಾರದ ಮೇಲೆ ತಮ್ಮ ವೈಯಕ್ತಿಕ ಹಾಗೂ ವೃತ್ತಿ ಬದುಕು ಎರಡನ್ನೂ ಉತ್ತಮಗೊಳಿಸಿದ ಜೋ ಹಯಮ್ಸ್ ಅವರ ಸಮರ ಕಲೆಗಳೊಂದಿಗಿನ ಬದುಕಿನ ಕೃತಿಯೇ ‘ಸಮರ ಕಲೆಗಳಲ್ಲಿ ಝೆನ್’.


ಜೋ ಹಯಮ್ಸ್ ಅವರ ಈ ಕೃತಿಯನ್ನು ಕನ್ನಡಕ್ಕೆ ಸಂಜೀವ ಕುಲಕರ್ಣಿ ಕನ್ನಡಕ್ಕೆ ಅನುವಾದಿಸಿದ್ದಾರೆ. ಬ್ರೂಸ್ ಲೀ ಹಾಗೂ ಎಡ್ ಪಾರ್ಕರ್ ಅವರ ಬಳಿ ಸಮರಕಲೆ ಕಲಿಯುವ ಮೂಲಕ ದೈಹಿಕವಾಗಿ ಸದೃಢರಾದ ಹಯಮ್ಸ್ ಅವರು 2ನೇ ಮಹಾಯುದ್ಧದ ಸಂದರ್ಭದಲ್ಲಿ ಬರವಣಿಗೆ ಆರಂಭಿಸಿದರು. ಯುದ್ಧ ವರದಿಗಾರರಾಗಿದ್ದ ಅವರು, ನಂತರ ನ್ಯೂಯಾರ್ಕ್ ಟ್ರಿಬ್ಯೂನ್ ಪತ್ರಿಕೆಯ ಹಾಲಿವುಡ್ ವರದಿಗಾರರಾದರು. ಕೆಲವೇ ತಿಂಗಳುಗಳಲ್ಲಿ ಪ್ರಸಿದ್ಧ ಅಂಕಣಕಾರರಾಗಿ ಹೆಸರು ಮಾಡಿ ಮೂರು ಸಾವಿರಕ್ಕೂ ಅಧಿಕ ಲೇಖನಗಳನ್ನು ಬರೆದರು.

ಹೀಗೆ ಹಲವು ರೀತಿಯಲ್ಲಿ ತಮ್ಮನ್ನು ಪ್ರಯೋಗಗಳಿಗೆ ಒಡ್ಡಿಕೊಳ್ಳುತ್ತಾ, ಅದರಲ್ಲಿ ಯಶಸ್ಸು ಸಾಧಿಸಿದ ಹಯಮ್ಸ್ ಅವರು ಅಂತರಂಗವನ್ನು ಶೋಧಿಸಿಕೊಳ್ಳುತ್ತಲೇ, ಬಹಿರಂಗವನ್ನು ಹೇಗೆ ಸರಿಪಡಿಸಿಕೊಳ್ಳುತ್ತಾ ಸಾಗಿದರು ಎಂಬುದಕ್ಕೆ ಈ ಕೃತಿ ಉತ್ತರ ರೂಪವಾಗಿದೆ. ಒಂದು ಸಮರ ಕಲೆಯ ಮೂಲಕವೇ ನಮ್ಮನ್ನು ನಾವು ಹೇಗೆ ಅರಿಯಬಹುದು ಎಂಬುದು ಈ ಕೃತಿಯಲ್ಲಿದೆ.

ಗುರಿಯಲ್ಲ ಪಯಣ ಮುಖ್ಯ, ಅವಸರವನ್ನು ಗೆಲ್ಲಿರಿ, ನಿಮ್ಮ ಮಿತಿಗಳನ್ನು ಅರಿಯಿರಿ, ತೊಂದರೆ ಕೊಡಬೇಡಿ, ಪ್ರವಾಹದೊಂದಿಗೆ ಈಜಿ, ನಿಮ್ಮ ಮನಸ್ಸನ್ನು ಹರಿಯಲು ಬಿಡಿ, ಭಯದ ಗೆಳೆತನ ಬೆಳೆಸಿಕೊ ಎಂಬಿತ್ಯಾದಿ ಪ್ರಮುಖ ವಿಷಯಗಳನ್ನು ಲೇಖಕ ಜೋ ಹಯಮ್ಸ್ ಈ ಕೃತಿಯಲ್ಲಿ ಹೇಳಿದ್ದಾರೆ.

ಪುಟ: 88 ₹126

### ಕ್ಯಾನ್ಸರ್ ಆಸ್ಪತ್ರೆಯಲ್ಲಿನ ಅನುಭವ ಕಥನ



**ಕೀಮೋ**
ಲೇ: ಫಾತಿಮಾ ರಲಿಯಾ
ಪ್ರ: ಜೀರುಂಡೆ ಪುಸ್ತಕ
ಸಂ: 9742225779

**ಸ್ತನ ಕ್ಯಾನ್ಸರ್‌ಗೆ** ತುತ್ತಾದ ತಾಯಿಯ ಚಿಕಿತ್ಸೆಯ ವೇಳೆ, ಅವರೊಂದಿಗೆ ಆಸ್ಪತ್ರೆಯಲ್ಲಿದ್ದ 16 ವರ್ಷದ ಮಗಳೊಬ್ಬಳು ಕಂಡ ಜೀವನ ಚಿತ್ರಣವೇ ‘ಕೀಮೋ’

ಲೇಖಕಿ ಫಾತಿಮಾ ರಲಿಯಾ ಅವರು ಕೀಮೋ ಪುಸ್ತಕದಲ್ಲಿ ಕೇವಲ ತಮ್ಮ ತಾಯಿಯ ಕ್ಯಾನ್ಸರ್ ಚಿತ್ರಣವನ್ನಷ್ಟೇ ಕಟ್ಟಿಕೊಟ್ಟಿಲ್ಲ. ಬದಲಾಗಿ, ಚಿಕಿತ್ಸೆಯ ವೇಳೆ ತಾವು ಗಮನಿಸಿದ, ಅನುಭವಿಸಿದ ಎಲ್ಲಾ ರೀತಿಯ ಬದುಕಿನ ಅನುಭವಗಳನ್ನು, ಕಂಡ ವಿದ್ಯಮಾನಗಳನ್ನು ಕೂಡ ಇಲ್ಲಿ ಕಟ್ಟಿಕೊಟ್ಟಿದ್ದಾರೆ.

ಕ್ಯಾನ್ಸರ್ ಬಗೆಗಿನ ಸಾಮಾನ್ಯ ಜನರ ತಪ್ಪು ಕಲ್ಪನೆ, ಚಿಕಿತ್ಸೆಯ ರೀತಿಯ ಜತೆಗೆ ಮುಸ್ಲಿಂ ಕುಟುಂಬದ ಹೆಣ್ಣುಮಗಳೊಬ್ಬಳ ಶಿಕ್ಷಣದ ಕನಸು, ಅದಕ್ಕೆ ಒತ್ತಾಸೆಯಾಗಿ ನಿಲ್ಲುವ ತಾಯಿಯ ಕಥನ ಇಲ್ಲಿದೆ.

ತೆರೆದಗಣ್ಣಿಗೆ ಸಾವಿನ ಮನೆಯಲ್ಲೂ ಕಥೆಗಳು ಕಾಣುತ್ತವೆ ಎನ್ನುವಂತೆ, ಆಸ್ಪತ್ರೆಯಂತಹ ಗಂಭೀರ ಸ್ಥಳದಲ್ಲೂ, ಲೇಖಕಿಗೆ ಗೀತಕ್ಕ, ಅಮನ್ ದೀಪ್, ಚಾಂದಜ್ಜಿಯರಂತಹ ವಿಭಿನ್ನ ಬದುಕಿನ ದರ್ಶನವಾಗುತ್ತದೆ. ಅವರ ಬದುಕು, ಲೇಖಕಿಯ ಬದುಕಿನಲ್ಲೂ ಪ್ರಭಾವ ಬೀರುತ್ತದೆ.


ಆಸ್ಪತ್ರೆಯ ಯಮಯಾತನೆಯ ಬದುಕು ಕೂಡ, ಹೇಗೆ ಬದುಕಿನ ದಾರಿಯನ್ನು, ಆಲೋಚಿಸುವ ಕ್ರಮವನ್ನು, ಜೀವನ ಶೈಲಿಯನ್ನು ಬದಲಾಯಿಸಿತು ಎನ್ನುವ ಅಂಶಗಳು ಆಸಕ್ತಿ ಹುಟ್ಟಿಸುತ್ತವೆ.

ಪುಸ್ತಕದ ಬೆನ್ನುಡಿಯಲ್ಲಿ ರಹಮತ್ ತರೀಕೆರೆಯವರು ಹೇಳಿರುವಂತೆ, ಇಲ್ಲಿನ ವ್ಯಕ್ತಿ ಮತ್ತು ಸ್ಥಳಗಳ ಹೆಸರನ್ನು ಬದಲಿಸಿದರೆ, ಎಲ್ಲ ದೇಶದ, ಎಲ್ಲ ಕಾಲದ ಮನುಷ್ಯರ ಕಥನವೂ ಆಗುವಂತೆ ಅರಳಿಕೊಳ್ಳುತ್ತದೆ.

ಸ್ತನ ಕ್ಯಾನ್ಸರ್‌ನ ಗಂಭೀರತೆ, ನೋವು, ಚಿಕಿತ್ಸೆಯ ಕಠೋರತೆಗಳನ್ನು ಹೇಳುತ್ತಲೇ, ಅವೆಲ್ಲವನ್ನೂ ಗೆದ್ದು ಬದುಕಬಹುದು ಎನ್ನುವುದು ಕೃತಿಯ ಆಶಯ.

ಪುಟ: 120 ₹160

### ಸಮುದಾಯದ ಕಥೆ ನಿರೂಪಿಸುವ ಆತ್ಮಕಥನ



**ನನ್ನೊಳಗಿನ ಅಪ್ಪ**
ಲೇ: ಆತ್ಮಾನಂದ
ಪ್ರ: ಆತ್ಮ ಪುಸ್ತಕ
ಸಂ: 9740839068

‘ನನ್ನೊಳಗಿನ ಅಪ್ಪ’ ನಿವೃತ್ತ ಪ್ರಾಧ್ಯಾಪಕ ಆತ್ಮಾನಂದ ಅವರ ಆತ್ಮಕಥನ. ಲೇಖಕರು ತಂದೆಯನ್ನು ಕೇಂದ್ರೀಕರಿಸಿ ಸಮುದಾಯದ ಬದುಕನ್ನು ಕಲಾತ್ಮಕವಾಗಿ ತಂದಿದ್ದಾರೆ. ಕೃತಿಕಾರರ ತಂದೆ ಪ್ರಭಾವಕ್ಕೆ ಒಳಗಾದ ಚಿಂತನೆ, ಅವರಲ್ಲಿ ಉಂಟಾದ ಪರಿವರ್ತನೆ ಕೃತಿ ರೂಪುಗೊಳ್ಳಲು ಪ್ರೇರಣೆಯಾಗಿದೆ. ಮಂಡ್ಯದ ಶಾಲೆಯೊಂದರಲ್ಲಿ ವಾಚ್‌ಮನ್ ಆಗಿದ್ದ ‘ಅಪ್ಪ’ ದೇವರ ಪರಮ ಭಕ್ತ. ದಾಸ ಒಕ್ಲು ಪರಂಪರೆಯನ್ನು ಪಾಲಿಸುತ್ತಿದ್ದರು. ಬಂಧು ಬಳಗದವರ ಮನೆಯಲ್ಲಿ ಶುಭ ಕಾರ್ಯ ಇದ್ದರೆ ಅವರೇ ಶಂಕು, ಜಾಗಟೆ ತೆಗೆದುಕೊಂಡು ಹೋಗಿ ಪೂಜೆ ಮಾಡಿ ಬರುತ್ತಿದ್ದರು. ಹೀಗಿದ್ದ ಅವರ ಬದುಕಿನಲ್ಲಿ ‘ಬೂಸಾ ಸಾಹಿತ್ಯ’ ಹೇಳಿಕೆಯಿಂದ ಸುದ್ದಿಯಲ್ಲಿದ್ದ ಬಿ. ಬಸವಲಿಂಗಪ್ಪ ಪ್ರತಿರೋಧದ ಅಲೆಯನ್ನೇ ಎಬ್ಬಿಸುತ್ತಾರೆ. ಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಟ್ಟ ಮೇಲೆ ಬಸವಲಿಂಗಪ್ಪ ಅವರು ‘ದೇವರ ಪಟಗಳನ್ನು ಚರಂಡಿಗೆ ಎಸೆಯಿರಿ’ ಎಂಬ ಹೇಳಿಕೆ ನೀಡುತ್ತಾರೆ. ಅದರಿಂದ ಪ್ರಭಾವಿತರಾದ ‘ಅಪ್ಪ’ ಮನೆಯಲ್ಲಿದ್ದ ದೇವರ ಪಟಗಳನೆಲ್ಲ ಹರಿದು ಬಿಸಾಕುತ್ತಾರೆ. ನಂತರ ಬುದ್ಧ ಅನುಯಾಯಿಯಾಗಿ ಮನೆಯ ಗೋಡೆಯನ್ನು ಬುದ್ಧ–ಬಸವ–ಅಂಬೇಡ್ಕರ್ ಫೋಟೊಗಳಿಂದ ಅಲಂಕರಿಸುತ್ತಾರೆ. ಈ ವಿವರವನ್ನು ನೀಡುತ್ತಾ ಲೇಖಕರು ಸಾಂಸ್ಕೃತಿಕ ಸಂಘರ್ಷದ ಸ್ವರೂಪವನ್ನೂ ದಾಟಿಸಿದ್ದಾರೆ.

ಯುಗಾದಿಯ ಮುನ್ನ ದಿನ ‘ಅಪ್ಪ’ ತೀರಿಹೋಗುತ್ತಾರೆ. ಅವರು ಒಮ್ಮೆ ‘ಈ ಬಾಡ್ಕ ದೇಹನ ತುಳ್ದು ಮೂಟೆ ಕಟ್ಟಿ ಬಿಸಾಡು, ಊದ್ಕಡ್ಡಿನೂ ಹಚ್ಬೇಡ’ ಎಂದು ಹೇಳಿದ್ದನ್ನು ಲೇಖಕರು ನೆನಪಿಸಿಕೊಳ್ಳುತ್ತಾರೆ. ಅಪ್ಪ ಹಾಸಿಗೆ ಹಿಡಿದಿದ್ದರು. ತೀರುವ ಮುನ್ನ ದಿನದ ಮಧ್ಯರಾತ್ರಿ ಲೇಖಕರು ತಂದೆಯನ್ನು ನೋಡುವ ತವಕದಲ್ಲಿ ಏಳುತ್ತಾರೆ. ಗೋಡೆ ಕಡೆ ತಿರುಗಿ ಮಲಗಿದ್ದ ಅವರನ್ನು ನೋಡುತ್ತಾರೆ. ಸಣ್ಣದಾಗಿ ಹೊರಳಾಡಿದರೂ ಎಬ್ಬಿಸಲು ಮನಸಾಗದೆ ಕಣ್ಣುತುಂಬಿಕೊಳ್ಳುತ್ತಾರೆ.

ಅಂಬೇಡ್ಕರ್ ಪ್ರಭಾವ ಸಮುದಾಯದ ಆಳದಲ್ಲಿ ಹೇಗೆ ಬೇರೂರಿ ಹಸಿರಾಗಿ ಬೆಳೆದಿದೆ ಎನ್ನುವುದಕ್ಕೆ ಈ ಕೃತಿ ಸಾಕ್ಷಿ. ವ್ಯಕ್ತಿ ಸಂಬಂಧದ ಭಾವುಕತೆ ಮತ್ತು ವೈಚಾರಿಕ ವಿವೇಕವನ್ನು ‘ನನ್ನೊಳಗಿನ ಅಪ್ಪ’ ಅಭಿವ್ಯಕ್ತಿಸುತ್ತದೆ.

ಪುಟ: 162 ₹200



# ಬದುಕು ಬೆಳಗುವ ಹಣತೆಗಳು

ಕಲಬುರಗಿ ಜಿಲ್ಲೆಯ ಮೇಳಕುಂದಾ ಕೆ. ಗ್ರಾಮಕ್ಕೆ ಭೇಟಿ ಕೊಟ್ಟಾಗ ವೈವಿಧ್ಯಮಯ ವಿನ್ಯಾಸದ ಹಣತೆಗಳು ಸ್ವಾಗತ ಕೋರಿದಂತೆ ಭಾಸವಾಯಿತು. ಅಲ್ಲಿ ಒಂದಕ್ಕಿಂತ ಮತ್ತೊಂದು ಹಣತೆ ಆಕರ್ಷಕ, ಅತ್ಯಾಕರ್ಷಕ.

ಈ ಊರಲ್ಲಿ ಮೂವತ್ತಕ್ಕೂ ಅಧಿಕ ಕುಟುಂಬಗಳು ಕುಂಬಾರಿಕೆಯಲ್ಲಿ ತೊಡಗಿವೆ. ಇವರೆಲ್ಲರೂ ಮರಾಠ ಕುಂಬಾರರು. ವರ್ಷವಿಡೀ ಇದೇ ಕಾಯಕ. ಇದರಲ್ಲಿ ಕೈಗೆ ಸಿಗುವ ದುಡಿಮೆಯಲ್ಲೇ ಬದುಕಿನ ಬಂಡಿ ಸಾಗುತ್ತಿದೆ.

ಊರಿನ ಹೃದಯಭಾಗದಲ್ಲೇ ವಾಸವಿರುವ ಈ ಕುಟುಂಬಗಳು ಮಣ್ಣಿನಲ್ಲಿ ಹಣತೆಗಳು, ಮತ್ತಿತರ ಕಲಾಕೃತಿಗಳಿಗೆ ಜೀವ ಕೊಡುತ್ತ, ತಮ್ಮ ಜೀವನವನ್ನೂ ಕಟ್ಟಿಕೊಂಡಿವೆ. ಒಂದಲ್ಲ, ಎರಡಲ್ಲ, ಹತ್ತಾರು ಬಗೆಯ ಹಣತೆಗಳು ಇಲ್ಲಿ ರೂಪ ಪಡೆಯುತ್ತಿವೆ. ಹಣತೆಗಳು ಮಾತ್ರವಲ್ಲ; ಮಣ್ಣಿನ ತಟ್ಟೆಗಳು, ಮಣ್ಣಿನಮೂರ್ತಿಗಳನ್ನೂ ಮಾಡಲಾಗುತ್ತದೆ.

ಇದು ಫ್ಯಾಷನ್ ಯುಗ. ಈ ಕಾಲಘಟ್ಟದಲ್ಲಿ ಕುಂಬಾರಿಕೆ ನೇಪಥ್ಯಕ್ಕೆ ಸರಿಯುತ್ತಿದೆ ಎನ್ನುವುದು ಅಲ್ಲಗಳೆಯಲಾಗದ ಮಾತು. ಹೀಗಿದ್ದರೂ ಅನೇಕ ಸವಾಲುಗಳ ಮಧ್ಯೆಯೂ ಈ ಕುಟುಂಬಗಳು ತಮ್ಮ ಕುಲಕಸುಬು ಮುಂದುವರಿಸಿಕೊಂಡು ಹೊರಟಿವೆ. ಈ ವೃತ್ತಿ ಮಾಡುವವರಲ್ಲಿ ಪುರುಷರಷ್ಟೇ ಅಲ್ಲ; ಮಕ್ಕಳು, ಮಹಿಳೆಯರು ಮತ್ತು ಹಿರಿಯರೂ ಕಾಣಸಿಗುತ್ತಾರೆ.

ಇಲ್ಲಿ ಜೀವತಳೆದ ಮಣ್ಣಿನ ಹಣತೆಗಳು ಬೀದರ್, ಕಲಬುರಗಿ, ರಾಯಚೂರು ಜಿಲ್ಲೆಗಳು ಅಲ್ಲದೆ ಮಹಾರಾಷ್ಟ್ರದ ಸೊಲ್ಲಾಪುರ, ಆಂಧ್ರಪ್ರದೇಶದಲ್ಲೂ ಮಾರಾಟವಾಗುತ್ತವೆ. ಎಂದಿನಂತೆ ಈ ವರ್ಷವೂ ಲಕ್ಷಾಂತರ ಹಣತೆಗಳು ಇಲ್ಲಿ ಸಿದ್ಧವಾಗಿವೆ. ರಾಜ್ಯ ಮತ್ತು ಹೊರ ರಾಜ್ಯಗಳ ಮನೆ–ಮನಗಳನ್ನು ಬೆಳಗಲು ಸಜ್ಜಾಗಿವೆ.

ಚಿತ್ರಗಳು: ತಾಜುದ್ದೀನ್ ಆಜಾದ್



ಕುಂಬಾರನ ಕೈಯಲ್ಲಿ ಜೀವತಳೆದ ಹಣತೆ



ಮಣ್ಣಿನ ಹಣತೆಗಳು ಗಟ್ಟಿಯಾಗುವುದು ಹೀಗೆ...



ಸುಟ್ಟ ಹಣತೆಗಳನ್ನು ಮಾರಾಟಕ್ಕೆ ಸಜ್ಜುಗೊಳಿಸುತ್ತಿರುವುದು



ವಠಾರದ ಸದಸ್ಯರೊಂದಿಗೆ ಪುಂಡಿಕಟ್ಟು ಸುಡುತ್ತಾ ಸಂಭ್ರಮಾಚರಣೆ

# ಪುಂಡಿಕಟ್ಟು ವಿಶಿಷ್ಟ ಆಚರಣೆ

• ಸುರೇಂದ್ರ ಪೈ

ಇಲ್ಲಿ ದೀಪಾವಳಿಯ ಪಾಡ್ಯದಂದು ಸಾಯಂಕಾಲ 'ಪುಂಡಿಕಟ್ಟು' ಸುಡುವ ಮೂಲಕ ವಿಶಿಷ್ಟ ರೀತಿಯಲ್ಲಿ ಹಬ್ಬವನ್ನು ಆಚರಿಸುತ್ತಾ, ಮುಂಬರುವ ಚಳಿಗಾಲವನ್ನು ಸ್ವಾಗತಿಸುವ ಒಂದು ವಿಶಿಷ್ಟ ಸಂಪ್ರದಾಯವಿದೆ. ಈ ಆಚರಣೆ ಕಂಡುಬರುವುದು ಉತ್ತರ ಕನ್ನಡ ಜಿಲ್ಲೆಯ ಸಿದ್ಧಾಪುರ ತಾಲ್ಲೂಕಿನಲ್ಲಿ. ಈ ಪ್ರದೇಶದಲ್ಲಿ ಬಿಟ್ಟರೆ ರಾಜ್ಯದ ಬೇರೆಲ್ಲೂ ಇದು ಕಾಣಸಿಗುವುದಿಲ್ಲ.

'ಪುಂಡಿಕಟ್ಟು' ಎಂದರೆ ಎಳೆ ಸೆಣಬಿನ ಸಸ್ಯದಿಂದ ತಯಾರಾಗುವ ಒಂದು ತೆರನಾದ ಬಿದಿರು. ಇದು ನೋಡಲು ಥೇಟ್ ಬಿದಿರಿನ ಹಾಗೇ ಕಾಣುತ್ತದೆ. ಆದರೆ ಅದು ಬಿದಿರಲ್ಲ. ಸಿದ್ಧಾಪುರ ಭಾಗದ ಕೆಲ ರೈತರು ದೀಪಾವಳಿಗೂ ಕೆಲ ತಿಂಗಳ ಮುನ್ನ ಸೆಣಬನ್ನು ತಮ್ಮ ಗದ್ದೆಯಲ್ಲಿ ಬೆಳೆಯುತ್ತಾರೆ. ಅದು ಎತ್ತರಕ್ಕೆ ಬೆಳೆದು ಕಟಾವಿಗೆ ಬರುವಾಗ ಅದನ್ನು ಕತ್ತರಿಸಿ ನೀರಿನಲ್ಲಿ ನೆನೆ ಹಾಕುತ್ತಾರೆ. ಹದಿನೈದು ಇಪ್ಪತ್ತು ದಿನ ಸರಿಯಾಗಿ ನೆನೆದ ಬಳಿಕ ಅದನ್ನು ಸುಡು ಬಿಸಿಲಿನಲ್ಲಿ ಚೆನ್ನಾಗಿ ಒಣಗಲು ಬಿಡುತ್ತಾರೆ. ಆಗ ಅದು ಅತ್ಯಂತ ಹಗುರವಾಗಿ, ಒಳಗಡೆ ಟೊಳ್ಳಾಗಿ ಒಣ ಹುಲ್ಲಿನಂತಾಗಿ ಪುಂಡಿಕಟ್ಟು ಸಿದ್ಧವಾಗುತ್ತದೆ. ನಂತರ ಎಂಟು–ಹತ್ತು ಎಳೆಗಳನ್ನು ಸೇರಿಸಿ ಒಂದು ಕಟ್ಟು ಮಾಡುತ್ತಾರೆ. ಅದನ್ನೇ 'ಪುಂಡಿಕಟ್ಟು' ಎನ್ನುತ್ತಾರೆ.

ಇದನ್ನು ದೀಪಾವಳಿಯಂದು ರೈತರು ಮಾರುಕಟ್ಟೆಗೆ ತಂದು ಮಾರಾಟ ಮಾಡುತ್ತಾರೆ. ಊರಿನವರೆಲ್ಲಾ ತಮಗೆ ಬೇಕಾದಷ್ಟು ಕೊಂಡುಕೊಂಡು ಪಾಡ್ಯದ ಸಂಜೆ ಅದಕ್ಕೆ ಬೆಂಕಿ ಹಚ್ಚಿ 'ದೀಪ್ ದೀಪ್ ದೀಪಾವಳಿಯೋ, ಎಲ್ಲರ ಮನೆ ಹೋಳಿಗ್ಯೋ' ಹಾಗೂ 'ಅಳಿಯನಿಗೆ ದೀಪಾವಳಿ, ಮಾವನಿಗೆ ದೀವಾಳಿ' ಎಂದು ಕೂಗುತ್ತಾ ಕೆಲವರು ತಮ್ಮ ವಠಾರದ ಸದಸ್ಯರೊಂದಿಗೆ 'ಪುಂಡಿಕಟ್ಟು' ಸುಡುತ್ತಾ ಸಂಭ್ರಮಿಸಿದರೆ, ಇನ್ನೂ ಕೆಲವರು ಪಟ್ಟಣದ ಬೀದಿಗಳಲ್ಲಿ 'ಪುಂಡಿಕಟ್ಟು' ಸುಡುತ್ತಾ ಸಾಲಾಗಿ ಮೆರವಣಿಗೆ ಹೊರಟು ಸಂಭ್ರಮಿಸುತ್ತಾರೆ.

'ದೀಪಾವಳಿ ಸಮಯಕ್ಕೆ ಸರಿಯಾಗಿ ಚಳಿಗಾಲ ಪ್ರಾರಂಭವಾಗುವುದರಿಂದ ರಾತ್ರಿ ಹೊತ್ತಿನಲ್ಲಿ ಬೆಚ್ಚನೆಯ ಶಾಖವು ಮೈಮನಸ್ಸಿಗೆ ಮುದ ನೀಡುತ್ತದೆ. ಹಾಗೂ ಚಳಿಗಾಲಕ್ಕೆ ಸ್ವಾಗತವನ್ನು ಕೋರುವ ನಿಟ್ಟಿನಲ್ಲಿ ಪುಂಡಿಕಟ್ಟನ್ನು ಗ್ರಾಮೀಣ ಭಾಗದಲ್ಲಿ ಎಲ್ಲರೂ ಒಟ್ಟಾಗಿ ಸುಡುವುದರ ಮೂಲಕ ಹಿರಿಯರು ಹಬ್ಬವನ್ನು ಆನಂದಿಸುತ್ತಿದ್ದರು. ಅದನ್ನು ಇಂದಿಗೂ ಮುಂದುವರಿಸಿಕೊಂಡು ಬಂದಿದ್ದೇವೆ' ಎಂದು ಸ್ಥಳೀಯರಾದ ನರಸಿಂಹಮೂರ್ತಿ ಕಾಮತ್ ಹೇಳುತ್ತಾರೆ.



ಪುಂಡಿಕಟ್ಟು

ಏನೇ ಆಗಲಿ, ಇಂತಹ ಒಂದು ವಿಶಿಷ್ಟ ಆಚರಣೆ ಕರ್ನಾಟಕದ ಸಿದ್ಧಾಪುರದಲ್ಲಿ ಮಾತ್ರ ತಲೆತಲಾಂತರದಿಂದಲೂ ನಡೆದುಕೊಂಡು ಬರುತ್ತಿರುವುದು ವಿಶೇಷ. ನಿಮಗೇನಾದರೂ ಈ ವಿಶೇಷ ಸಂಪ್ರದಾಯವನ್ನು ಕಣ್ತುಂಬಿಕೊಳ್ಳುವ ಆಸೆ ಇದ್ದರೆ ದೀಪಾವಳಿ ಪಾಡ್ಯದಂದು ಸಿದ್ಧಾಪುರಕ್ಕೆ ಭೇಟಿ ನೀಡಿ, ಸಂಭ್ರಮಿಸಿ. ❖

# ಮಜ ಮಜ ಮಜಕೂರ

ಎಂ.ಎಸ್.ಪೂಜಾರ

majakoora@prajavani.co.in

## ಪದ ಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧ ಒಂದೇ ಪದ ಮಾಡಿರಿ.

| | | | | | | | |
|---|---|---|---|---|---|---|---|
| 1 | ಮಂಗ | + | ವಾರ | + | ಳ | = | |
| 2 | ಯಮ | + | ಆನೆ | + | ಶ್ರ | = | |
| 3 | ಭಾರ | + | ಮತ | + | ಹಾ | = | |
| 4 | ಮಾತೆ | + | ಭಾರ | + | ತ | = | |
| 5 | ಗಣಿ | + | ಲೋಕ | + | ತ | = | |

## ಕೊಂಚ ತಂತ್ರ

ಇಲ್ಲಿರುವ ವಾಕ್ಯಗಳನ್ನು ನೆನಪಿಟ್ಟುಕೊಂಡರೆ ಕಾಮನಬಿಲ್ಲಿನ ಬಣ್ಣಗಳನ್ನು ಕ್ರಮವಾಗಿ ನೆನಪಿಡಬಹುದು.

Richard Of Yark Gave Battle In Vain

R = Red
O = Orange
Y = Yellow
G = Green
B = Blue
I = Indigo
V = Violet

## ಹೊಂದಿಸು–ಆನಂದಿಸು

ಇಲ್ಲಿ A ಭಾಗದ ವಸ್ತುವಿಗೂ B ಭಾಗದ ಊರಿಗೂ ಹೊಂದಿಸಿ.


| | | | | |
|---|---|---|---|---|
| 1 | ಚಕ್ಕೋತ | | A | ತಿಪಟೂರು |
| 2 | ದಾಳಿಂಬೆ | | B | ಕೊಡಗು |
| 3 | ರಸಬಾಳೆ | | C | ಮಧುಗಿರಿ |
| 4 | ಕಿತ್ತಳೆ | | D | ನಂಜನಗೂಡು |
| 5 | ತೆಂಗು | | E | ದೇವನಹಳ್ಳಿ |


## ಅಕ್ಷರ ಪಟ್ಟಿ


| | | | | |
|---|---|---|---|---|
| ಚ | ಪಾ | ಣ | ಚಿ | ಕ |
| ರ | ತ | ತ | ಟ | ಯ |

## ಪೈಪ್ ನುಂಗಿದ ಹಾವು

ಕಲೆ–ಪರಿಕಲ್ಪನೆ: ಸಂತೋಷ್ ಸಸಿಹಿತ್ಲು




ಹಾವೊಂದು ಇಲಿಯನ್ನು ಓಡಿಸಿಕೊಂಡು ಹೋಗುತ್ತಿತ್ತು. ಇಲಿ ಸಿಕ್ಕಿದ ತಕ್ಷಣವೇ ನುಂಗಬೇಕು ಎಂದುಕೊಂಡಿದ್ದ ಆ ಹಾವು ಬಾಯಿ ತೆರೆದುಕೊಂಡೇ ಹಿಂಬಾಲಿಸಿತ್ತು. ಜೀವಭಯದಿಂದ ಓಡುತ್ತಿದ್ದ ಇಲಿ, ಕೊನೆಯಲ್ಲಿ ದಾರಿ ಕಾಣದೆ ಒಂದು ಪೈಪ್‌ನೊಳಗೆ ಸೇರಿಕೊಂಡಿತು. ಇಲಿಯ ಹಿಂದೆ ವೇಗದಲ್ಲೇ ಬಂದಿದ್ದ ಆ ಹಾವು ಇಲಿಯನ್ನು ನುಂಗಲೆಂದು ಹೋಗಿ ಇಡೀ ಪೈಪನ್ನೇ ಗುಳುಂ ಮಾಡಿತು.

## ಜಾಣಪದ ಆಟ

1. ಇಲ್ಲಿರುವ ಅಪೂರ್ಣವಾದ ವಾಕ್ಯಗಳನ್ನು ಒಂದೇ ಅಕ್ಷರ ಮೂರು ಬಾರಿ ಬರುವ ರೀತಿ ತುಂಬಿ ಪೂರ್ಣಗೊಳಿಸಿ. ಆ ಮೂರು ಅಕ್ಷರಗಳನ್ನು ಅಕ್ಷರಪಟ್ಟಿಯಿಂದ ಆಯ್ದುಕೊಳ್ಳಿರಿ.

| | |
|---|---|
| 1 | ಸತ್ತ ಆ____ದು ಕಣ್ಣೀರಿಟ್ಟನು. |
| 2 | ಸಹ____ ಕಲೆಗಳನ್ನು ಕಲಿತಿದ್ದಾಳೆ. |
| 3 | ಶಿರಡಿ____ಳಿನ ನಿಜ ಅರ್ಥ ತಿಳಿಸಿದವರು. |
| 4 | ಆ ಶೂ____ಕ್ತ ಆ ಮಣ್ಣಿನಲ್ಲಿದೆ. |
| 5 | ಸ____ಮ್ಮ ಪರಿಶ್ರಮದಿಂದ ಮೇಲೇರಿದರು. |
| 6 | ಮ____ರ್ಪ ಯಾರಿಗೂ ಶೋಭೆಯಲ್ಲ. |
| 7 | ಅವಳ ಜ____ಮ್ಮೂರಲ್ಲಿ ಆಯಿತು. |
| 8 | ಭೀ____ತೆಯಿಂದ ನೋಡಿದನು. |
| 9 | ಪಲ್ಲ____ಧ ಚಟುವಟಿಕೆಗಳಲ್ಲಿ ಭಾಗಿಯಾಗುತ್ತಾಳೆ. |
| 10 | ಶ____ರ ಋತುವಿನಲ್ಲಿ ಬೆಚ್ಚಗೆ ಇರಲು ಯತ್ನಿಸುತ್ತಾನೆ. |

### ಅಕ್ಷರ ಪಟ್ಟಿ

| | | | | |
|---|---|---|---|---|
| ಶಿಶಿಶಿ | ತತತ | ವಿವಿವಿ | ದದದ | ಬಾಬಾಬಾ |
| ರರರ | ಮಮಮ | ನನನ | ನಾನಾನಾ | ನೆನೆನೆ |

2. ಇಲ್ಲಿ ಕೊಟ್ಟಿರುವ 'ಪರಿ' ಎಂಬ ಪದಕ್ಕೆ ಅಕ್ಷರ ಪಟ್ಟಿಯಿಂದ ಇನ್ನೆರಡಕ್ಷರ ಸೇರಿಸಿ ನಾಲ್ಕಕ್ಷರದ ಪದ ರಚಿಸಿ.

| | | | | |
|---|---|---|---|---|
| 1 | ಪ | ರಿ | | |
| 2 | ಪ | ರಿ | | |
| 3 | ಪ | ರಿ | | |
| 4 | ಪ | ರಿ | | |
| 5 | ಪ | ರಿ | | |

## ಮೋಜಿನ ಇಂಗ್ಲಿಷ್

ಇಲ್ಲಿ ಕೊಟ್ಟಿರುವ 'ICE' ಪದದ ಹಿಂದೆ ಕೆಲವು ಅಕ್ಷರ ಸೇರಿಸಿ ಬೇರೆ ಬೇರೆ ಪದ ಮಾಡಿ.

| | | | | |
|---|---|---|---|---|
| 1 | | I | C | E |
| 2 | | I | C | E |
| 3 | | I | C | E |
| 4 | | I | C | E |
| 5 | | I | C | E |
| 6 | | I | C | E |
| 7 | | I | C | E |
| 8 | | I | C | E |
| 9 | | I | C | E |
| 10 | | I | C | E |

## ಶಬ್ದಾಟ

ಇವೇ ಅಕ್ಷರಗಳನ್ನು ಬಳಸಿ ಇನ್ನೊಂದು ಪದ ಮಾಡಿ.

1. ರಾಜರಿಗೆ ಮಾಟ + ಗು = ________

2. GANESH = ________

## ಕಳೆದ ಸಂಚಿಕೆಯ ಸರಿ ಉತ್ತರಗಳು

**ಪದಸಂಕಲನ:**
1.ರಗಳೆಕವಿ 2.ಕನ್ನಡಪದ
3.ರಾಜನಡಿಗೆ 4.ನಸುಹಳದಿ
5.ನಡುಗನ್ನಡ
ಶಬ್ದಾಟ: SOLVE

**ಜಾಣಪದ ಆಟ:**
1.ಸಂಘರ್ಷ 2.ಸಂತಸ 3.ಕರಡಿ
4.ಗರಿಷ್ಠ 5.ಭಾರತ 6.ಸಲಗ
7.ಕೂರಿಗೆ 8.ಮಂಗಳ 9.ಕದಳಿ
10.ಸಂಪುಟ

**ಊರಿನ ಹೆಸರು ರಚಿಸಿ:**
1.ಜಮಖಂಡಿ 2.ಮಡಿಕೇರಿ
3.ರಬಕವಿ 4.ವಿಜಾಪುರ
5.ಮೂಡಲಗಿ

**ಪದ ರಚಿಸಿ:**
1.ವರನಟ 2.ವರಕವಿ
3.ವರಮಾನ 4.ವರದಾನ
5.ವರಲಕ್ಷ್ಮಿ

## ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರವನ್ನು ಮೇಲಿರುವ ಇಮೇಲ್‌ಗೆ ಕಳುಹಿಸಿ...

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

## ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು



ಗಿರೀಶ ನಡಮನಿ
ಬಾದಾಮಿ



ಸಿಂಚನ ಆರ್.
ಬೆಂಗಳೂರು



ಮಹಾಂತ ಸಿದ್ದಪ್ಪ ನೇಸರಗಿ, ಬೆಳಗಾವಿ



ಮಣಿಕಂಠ ಡಿ.ಅಂಬಿಗೇರ, ಹುಬ್ಬಳ್ಳಿ



ಪ್ರಾಪ್ತಿ ಪಿ.ಕರ್ಕೇರ
ಮಲ್ಪೆ, ಉಡುಪಿ



ಸವಿನಯ ಕೆ.ಎಸ್.
ಚನ್ನಗಿರಿ

# 6 ಸಾವಿರ ಕೆ.ಜಿ ಚಿನ್ನ ಮಾರಾಟ

## ಧನತ್ರಯೋದಶಿ: ರಾಜ್ಯದಲ್ಲಿ ₹7 ಸಾವಿರ ಕೋಟಿ ವಹಿವಾಟು ಈ ಬಾರಿ ಚಿನ್ನದ ಮಾರಾಟದಲ್ಲಿ ಶೇ 30ರಷ್ಟು ಇಳಿಕೆ

ಪ್ರಜಾವಾಣಿ ವಾರ್ತೆ



ಮುಂಬೈನ ಮಳಿಗೆಯೊಂದರಲ್ಲಿ ಆಭರಣಗಳನ್ನು ಸಿಬ್ಬಂದಿ ಒಪ್ಪವಾಗಿ ಜೋಡಿಸಿದರು —ಪಿಟಿಐ ಚಿತ್ರ

**ಬೆಂಗಳೂರು:** ರಾಜ್ಯದಲ್ಲಿ ಧನತ್ರಯೋದಶಿ ಭಾಗವಾಗಿ ಶನಿವಾರ ನಡೆದ ಮಾರಾಟದ ಸಂದರ್ಭದಲ್ಲಿ ಅಂದಾಜು 6 ಸಾವಿರ ಕೆ.ಜಿ.ಯಷ್ಟು ಚಿನ್ನ ಮಾರಾಟವಾಗಿದೆ. ಮೌಲ್ಯದ ಲೆಕ್ಕದಲ್ಲಿ ಇದು ಸರಿಸುಮಾರು ₹7 ಸಾವಿರ ಕೋಟಿ ಆಗಿರಬಹುದು ಎಂದು ಬೆಂಗಳೂರು ಜ್ಯುವೆಲರ್ಸ್ ಅಸೋಸಿಯೇಷನ್ ಹೇಳಿದೆ.

ಕಳೆದ ವರ್ಷದ ಇದೇ ದಿನ ರಾಜ್ಯದಲ್ಲಿ 9 ಸಾವಿರ ಕೆ.ಜಿ.ವರೆಗೆ ಚಿನ್ನ ಮಾರಾಟವಾಗಿತ್ತು. ತೂಕಕ್ಕೆ ಹೋಲಿಸಿದರೆ ಈ ಬಾರಿ ಮಾರಾಟದಲ್ಲಿ ಶೇ 30ರಷ್ಟು ಇಳಿಕೆಯಾಗಿದೆ, ಹಣಕಾಸಿನ ಮೌಲ್ಯದ ಲೆಕ್ಕದಲ್ಲಿ ಕಳೆದ ವರ್ಷದಷ್ಟೇ ಮಾರಾಟ ಈ ವರ್ಷವೂ ಆಗಿದೆ ಎಂದು ಅಸೋಸಿಯೇಷನ್‌ನ ಕಾರ್ಯದರ್ಶಿ ಆರ್. ಶ್ರೀನಿವಾಸ್ ಅವರು 'ಪ್ರಜಾವಾಣಿ'ಗೆ ಶನಿವಾರ ತಿಳಿಸಿದರು.

ಬೆಳ್ಳಿಯು ಗರಿಷ್ಠ 15 ಸಾವಿರ ಕೆ.ಜಿ. ಯಷ್ಟು ಮಾರಾಟವಾಗಿದೆ. ಮೌಲ್ಯದ ಲೆಕ್ಕದಲ್ಲಿ ಇದು ಕನಿಷ್ಠ ₹300 ಕೋಟಿ ಆಗುತ್ತದೆ ಎಂದು ಹೇಳಿದರು.

ಬೆಂಗಳೂರಿನ ರಿಟೇಲ್ ಮಾರುಕಟ್ಟೆಯಲ್ಲಿ ಶನಿವಾರ ನಡೆದ ವಹಿವಾಟಿನಲ್ಲಿ 10 ಗ್ರಾಂ ಚಿನ್ನದ (24 ಕ್ಯಾರೆಟ್) ದರ ₹1,30,850 ಆಗಿತ್ತು. ಕೆ.ಜಿ ಬೆಳ್ಳಿ ಧಾರಣೆ ₹1.80 ಲಕ್ಷ ಆಗಿತ್ತು.

ಮಾರುಕಟ್ಟೆಯಲ್ಲಿ ಚಿನ್ನದ ಪೂರೈಕೆಯಲ್ಲಿ ವ್ಯತ್ಯಾಸವಾಗಿಲ್ಲ. ಬೆಳ್ಳಿಗೆ ಹೆಚ್ಚಿನ ಬೇಡಿಕೆ ಇದೆ, ಆದರೆ ಬೇಡಿಕೆಗೆ ತಕ್ಕಷ್ಟು ಪೂರೈಕೆ ಇಲ್ಲ ಎಂದರು.

ಈ ಬಾರಿಯ ಧನತ್ರಯೋದಶಿಯಂದು ಚಿನ್ನಾಭರಣ ಖರೀದಿ ಎಂದಿನಂತೆ ಇತ್ತು. ಬೆಳಿಗ್ಗೆಯಿಂದಲೇ ಮಳಿಗೆಗಳಿಗೆ ಭೇಟಿ ನೀಡಿ ಗ್ರಾಹಕರು ಚಿನ್ನಾಭರಣ ಖರೀದಿಸಿದರು. ನಾಣ್ಯಗಳು, ಚಿನ್ನ ಮತ್ತು ಬೆಳ್ಳಿ ಗಟ್ಟಿ ಖರೀದಿ ಹೆಚ್ಚಾಗಿತ್ತು ಎಂದರು.

### ಚಿನ್ನ ₹2,400, ಬೆಳ್ಳಿ ₹7 ಸಾವಿರ ಇಳಿಕೆ

ನವದೆಹಲಿಯ ಚಿನಿವಾರ ಪೇಟೆಯಲ್ಲಿ ಶನಿವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆ ಇಳಿಕೆ ಆಗಿದೆ.

10 ಗ್ರಾಂ ಚಿನ್ನದ (ಶೇ 99.9ರಷ್ಟು ಪರಿಶುದ್ಧತೆ) ದರವು ₹2,400 ಇಳಿಕೆಯಾಗಿ, ₹1,32,400ರಂತೆ ಮಾರಾಟವಾಗಿದೆ. ಆಭರಣ ಚಿನ್ನದ ದರವು (ಶೇ 99.5ರಷ್ಟು ಪರಿಶುದ್ಧತೆ) ಇಷ್ಟೇ ಪ್ರಮಾಣದಲ್ಲಿ ಇಳಿಕೆಯಾಗಿ, ₹1,31,800 ಆಗಿದೆ. ಬೆಳ್ಳಿ ಧಾರಣೆ ಕೆ.ಜಿಗೆ ₹7 ಸಾವಿರ ಇಳಿಕೆಯಾಗಿ, ₹1.70 ಲಕ್ಷದಂತೆ ಮಾರಾಟವಾಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಹೂಡಿಕೆದಾರರು ಲಾಭದ ಗಳಿಕೆಗಾಗಿ ಚಿನ್ನ ಮತ್ತು ಬೆಳ್ಳಿ ಮಾರಾಟಕ್ಕೆ ಮುಂದಾಗಿದ್ದರಿಂದ ದರ ಇಳಿಕೆಯಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

### ಚಿನ್ನ ಖರೀದಿಗೆ ದುಬಾರಿ ಬೆಲೆ ಅಡ್ಡಿ

**ಮುಂಬೈ/ನವದೆಹಲಿ (ಪಿಟಿಐ):** ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಧನತ್ರಯೋದಶಿಯ ವೇಳೆ ಚಿನ್ನ ಮತ್ತು ಬೆಳ್ಳಿ ಖರೀದಿಯು ತೂಕದ ಲೆಕ್ಕದಲ್ಲಿ ಶೇ 15ರಷ್ಟು ಇಳಿಕೆ ಆಗುವ ನಿರೀಕ್ಷೆ ಇದೆ ಎಂದು ವರ್ತಕರು ಅಂದಾಜಿಸಿದ್ದಾರೆ. ಬೆಲೆ ಏರಿಕೆಯೇ ಖರೀದಿ ಇಳಿಕೆಗೆ ಕಾರಣವಾಗಬಹುದು ಎಂದು ಹೇಳಿದ್ದಾರೆ.

ಧನತ್ರಯೋದಶಿಯು ಚಿನ್ನಾಭರಣಗಳ ಖರೀದಿಗೆ ಶುಭ ದಿನ ಎಂಬ ನಂಬಿಕೆ ಇದೆ. ಈ ಬಾರಿ ಧನತ್ರಯೋದಶಿ ಆಚರಣೆ ಶನಿವಾರದಿಂದ ಆರಂಭವಾಗಿದ್ದು, ಭಾನುವಾರ ಮಧ್ಯಾಹ್ನ 1.45ರವರೆಗೆ ಇರಲಿದೆ.

2024ರ ಅಕ್ಟೋಬರ್ 29ರಂದು ನಡೆದ ಧನತ್ರಯೋದಶಿಯಂದು ಚಿನ್ನದ (24 ಕ್ಯಾರೆಟ್) ದರ ನವದೆಹಲಿಯ ಮಾರುಕಟ್ಟೆಯಲ್ಲಿ 10 ಗ್ರಾಂಗೆ ₹81,400ರಷ್ಟಿತ್ತು. ಅದು ಈ ಬಾರಿ ₹1,34,800 ಆಗಿದೆ. ಬೆಳ್ಳಿ ದರ ₹1.77 ಲಕ್ಷವಿದೆ.

'ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಚಿನ್ನದ ಮಾರಾಟವು ರೂಪಾಯಿ ಲೆಕ್ಕದಲ್ಲಿ ಶೇ 40ರಿಂದ ಶೇ 45ರಷ್ಟು ಹೆಚ್ಚಾಗುವ ನಿರೀಕ್ಷೆ ಇದೆ' ಎಂದು ಅಖಿಲ ಭಾರತ ಹರಳು ಮತ್ತು ಆಭರಣ ಮಂಡಳಿಯ (ಜಿಜೆಸಿ) ಅಧ್ಯಕ್ಷ ರಾಜೇಶ್ ರೋಕ್ಡೆ ಹೇಳಿದ್ದಾರೆ.

'ಅಧಿಕ ಬೆಲೆಯಿಂದ ಈ ಬಾರಿಯ ಧನತ್ರಯೋದಶಿ ವೇಳೆ ಚಿನ್ನದ ಮಾರಾಟ ತೂಕದ ಲೆಕ್ಕದಲ್ಲಿ ಕಡಿಮೆ ಆಗಲಿದೆ. ಆದರೆ ಮೌಲ್ಯದ ಲೆಕ್ಕದಲ್ಲಿ ಶೇ 20ರಿಂದ ಶೇ 25ರಷ್ಟು ಹೆಚ್ಚಳವಾಗಲಿದೆ' ಎಂದು ಸೆನ್ಕೊ ಗೋಲ್ಡ್ ಆ್ಯಂಡ್ ಡೈಮಂಡ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಮತ್ತು ಮುಖ್ಯ ಕಾರ್ಯನಿರ್ವಾಹಕ ಸುವಾಂಕರ್ ಸೇನ್ ಹೇಳಿದ್ದಾರೆ.

ಆಭರಣಗಳ ಆಮದಿನ ಮೇಲಿನ ನಿಷೇಧದಿಂದಾಗಿ ಕಳೆದ ತಿಂಗಳಿನಿಂದ ಬೆಳ್ಳಿ ಕೊರತೆ ಉಂಟಾಗಿದೆ. ಇದರಿಂದ ಬೆಳ್ಳಿ ಬೆಲೆ ಏರಿಕೆಯಾಗಿದೆ ಜಿಜೆಸಿಯ ಮಾಜಿ ಅಧ್ಯಕ್ಷ ಸಯ್ಯಮ್ ಮೆಹ್ರಾ ಹೇಳಿದ್ದಾರೆ.

**ಮೊಟ್ಟೆ ಧಾರಣೆ** (ಎನ್‌ಇಸಿಸಿ)

| ಬೆಂಗಳೂರು | | |
|---|---|---|
| | 100 ಕ್ಕೆ | ₹580 |
| | 12 ಕ್ಕೆ | ₹80 |
| ಮೈಸೂರು: | 100 ಕ್ಕೆ | ₹583 |

**ರಾಮನಗರ ರೇಷ್ಮೆಗೂಡು**

| | |
|---|---|
| ಮಿಶ್ರತಳಿ (ಸಿ.ಬಿ) | ₹388-635 |
| ದ್ವಿತಳಿ (ಬಿ.ವಿ) | ₹511-800 |

**ಎನ್.ಆರ್.ಪುರ ರಬ್ಬರ್** (ಪ್ರತಿ ಕೆ.ಜಿಗೆ)

| | |
|---|---|
| ಆರ್‌ಎಸ್‌ಎಸ್-4 | ₹183 |
| ಆರ್‌ಎಸ್‌ಎಸ್-5 | ₹178 |
| ಗುಡ್ ಲಾಟ್ | ₹165 |

**ಕೊಬ್ಬರಿ ಧಾರಣೆ** (ಕ್ವಿಂಟಲ್‌ಗೆ)

| | |
|---|---|
| ಅರಸೀಕೆರೆ | ₹18000-21401 |
| ಮಂಗಳೂರು | ₹12000-20000 |
| ಪುತ್ತೂರು | ₹6000-24500 |

**ಮುಂಬೈ ಖಾದ್ಯ ತೈಲ** (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

| | |
|---|---|
| ಶೇಂಗಾ (ರಿಫೈನ್ಡ್) | ₹1405 (1405) |
| ಸೋಯಾ (ರಿಫೈನ್ಡ್) | ₹1290 (1285) |
| ಸೂರ್ಯಕಾಂತಿ (ರಿಫೈನ್ಡ್) | ₹1485 (1480) |
| ಪಾಮೋಲಿನ್ | ₹1295 (1290) |

**ಮುಂಬೈ ಧಾರಣೆ (ಶೇಂಗಾ)** 18-10-2025

| | |
|---|---|
| ಜಾವಾ 70/80(ಹೊಸ) | 10400-10500 |
| ಜಾವಾ 80/90(ಹೊಸ) | 9700-9800 |
| ದಪ್ಪ ಮಧ್ಯಪ್ರದೇಶ (ಹೊಸ) | 7600-7700 |
| ದಪ್ಪ ಗುಜರಾತ್ (ಹೊಸ) | 8500-8600 |
| **ಶೇಂಗಾ ಎಣ್ಣೆ (10 ಕೆಜಿಗೆ)** | |
| ಕಚ್ಚಾ (ತೆರಿಗೆ ಬಿಟ್ಟು) | 1415 (1415) |
| ಒಂದು ವಾರದ ಡೆಲಿವರಿ | 1410 (1410) |
| ಪಾಮ್ ವಾರದ ಡೆಲಿವರಿ | 1293 (1283) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 1425 (1410) |
| **ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)** | |
| ಅಪರಂಜಿ ಚಿನ್ನ 10 ಗ್ರಾಂ | 1,27,600 (1,28,300) |
| ಬೆಳ್ಳಿ ಕೆ.ಜಿಗೆ | 1,64,700 (1,71,300) |

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ



# 54 ಉತ್ಪನ್ನಗಳ ಮೇಲೆ ಸರ್ಕಾರ ನಿಗಾ

## ಜಿಎಸ್‌ಟಿ ಇಳಿಕೆಯ ಪ್ರಯೋಜನ ಗ್ರಾಹಕರಿಗೆ ಸಿಗಲಾರಂಭಿಸಿದೆ: ನಿರ್ಮಲಾ



ನಿರ್ಮಲಾ ಸೀತಾರಾಮನ್

**ನವದೆಹಲಿ (ಪಿಟಿಐ):** ಜಿಎಸ್‌ಟಿ ದರ ಪರಿಷ್ಕರಣೆಯ ಪ್ರಯೋಜನವು ಬೆಲೆ ಇಳಿಕೆಯ ರೂಪದಲ್ಲಿ ಗ್ರಾಹಕರಿಗೆ ಸಿಗಲಾರಂಭಿಸಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಶನಿವಾರ ಹೇಳಿದರು.

'ಜಿಎಸ್‌ಟಿ ಉಳಿತಾಯ ಉತ್ಸವ'ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 54 ಉತ್ಪನ್ನಗಳ ಬೆಲೆಯ ಮೇಲೆ ಕೇಂದ್ರ ಸರ್ಕಾರವು ದೇಶದಾದ್ಯಂತ ನಿಗಾ ಇರಿಸಿದೆ ಎಂದು ತಿಳಿಸಿದರು. ಜಿಎಸ್‌ಟಿ ದರ ಪರಿಷ್ಕರಣೆ ಜಾರಿಗೆ ಬಂದ ದಿನದಿಂದಲೂ ನಿಗಾ ಇಡಲಾಗಿದೆ ಎಂದರು.

'ಜಿಎಸ್‌ಟಿ ದರ ಇಳಿಕೆಯ ಕಾರಣದಿಂದಾಗಿ ಖರೀದಿ ಹೆಚ್ಚಾಗಿದೆ. ಹೆಚ್ಚು ಖರೀದಿ ಪ್ರವೃತ್ತಿಯು ಮುಂದುವರಿಯಲಿದೆ. ಪ್ರತಿ ಉತ್ಪನ್ನದ ಮೇಲೆ ಸಿಗುವ ಪ್ರಯೋಜನವನ್ನು ಕಂಪನಿಗಳು ಗ್ರಾಹಕರಿಗೆ ವರ್ಗಾಯಿಸುತ್ತಿವೆ ಎಂಬುದು ನಮಗೆ ಮನವರಿಕೆ ಆಗಿದೆ' ಎಂದು ಅವರು ಹೇಳಿದರು.

ಜಿಎಸ್‌ಟಿ ದರ ಇಳಿಕೆಗೆ ಅನುಗುಣವಾಗಿ ಬೆಲೆಯನ್ನು ಇಳಿಕೆ ಮಾಡಿಲ್ಲ ಎಂಬುದನ್ನು ಹೇಳುವ 3,169 ದೂರುಗಳು ಗ್ರಾಹಕ ವ್ಯವಹಾರಗಳ ಇಲಾಖೆಗೆ ಬಂದಿವೆ. ಈ ಪೈಕಿ 3,075 ದೂರುಗಳನ್ನು ಪರೋಕ್ಷ ತೆರಿಗೆಗಳು ಮತ್ತು ಸುಂಕಗಳ ಕೇಂದ್ರೀಯ ಮಂಡಳಿಯ (ಸಿಬಿಐಸಿ) ನೋಡಲ್ ಅಧಿಕಾರಿಗಳಿಗೆ ರವಾನಿಸಲಾಗಿದೆ. ಒಟ್ಟು 94 ದೂರುಗಳನ್ನು ಇಲಾಖೆಯು ಇತ್ಯರ್ಥಪಡಿಸಿದೆ ಎಂದು ನಿರ್ಮಲಾ ಅವರು ವಿವರ ನೀಡಿದರು.

ದರ ಇಳಿಕೆಯ ಬಗ್ಗೆ ಮಾಹಿತಿ ನೀಡಿದ ನಿರ್ಮಲಾ, 'ಶಾಂಪೂ, ಟಾಕಂ ಪೌಡರ್, ಮೇಜು, ಅಡುಗೆ ಮನೆ ಉಪಕರಣಗಳು, ಕಬ್ಬಿಣ, ಉಕ್ಕು, ತಾಮ್ರದ ಪಾತ್ರೆಗಳು, ಆಟಿಕೆಗಳು, ಕೊಡೆಗಳ ಬೆಲೆಯು ನಿರೀಕ್ಷೆಗಿಂತ ಹೆಚ್ಚಿನ ಮಟ್ಟದಲ್ಲಿ ಇಳಿಕೆ ಕಂಡಿವೆ' ಎಂದರು.

**₹20 ಸಾವಿರ ಕೋಟಿ ಹೆಚ್ಚುವರಿ ಖರೀದಿ:** ಜಿಎಸ್‌ಟಿ ವ್ಯವಸ್ಥೆಯಲ್ಲಿ ತಂದ ಸುಧಾರಣೆಗಳ ಕಾರಣದಿಂದಾಗಿ ಈ ವರ್ಷದಲ್ಲಿ ಹೆಚ್ಚುವರಿಯಾಗಿ ₹20 ಸಾವಿರ ಕೋಟಿ ಮೌಲ್ಯದ ಎಲೆಕ್ಟ್ರಾನಿಕ್ಸ್ ಉಪಕರಣಗಳ ಖರೀದಿ ಆಗುವ ನಿರೀಕ್ಷೆ ಇದೆ ಎಂದು ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಐ.ಟಿ. ಸಚಿವ ಅಶ್ವಿನಿ ವೈಷ್ಣವ್ ಹೇಳಿದರು.

ಕಳೆದ ವರ್ಷದ ನವರಾತ್ರಿ ಸಂದರ್ಭದಲ್ಲಿ ಆಗಿದ್ದ ಮಾರಾಟ ಪ್ರಮಾಣಕ್ಕೆ ಹೋಲಿಸಿದರೆ ಈ ಬಾರಿಯ ಮಾರಾಟವು ಶೇ 20ರಿಂದ ಶೇ 25ರವರೆಗೆ ಹೆಚ್ಚಾಗಿದೆ ಎಂಬುದನ್ನು ರಿಟೇಲ್ ಮಳಿಗೆಗಳಿಂದ ಪಡೆದಿರುವ ಮಾಹಿತಿ ಹೇಳುತ್ತಿದೆ ಎಂದು ವೈಷ್ಣವ್ ತಿಳಿಸಿದರು.

'ಎಲೆಕ್ಟ್ರಾನಿಕ್ಸ್ ಸರಕುಗಳಿಗೆ ಬೇಡಿಕೆ ಹೆಚ್ಚಾಗಿರುವುದರಿಂದಾಗಿ ಅವುಗಳ ತಯಾರಿಕಾ ಕ್ಷೇತ್ರವು ಎರಡಂಕಿಗಳ ವೇಗದಲ್ಲಿ ಬೆಳವಣಿಗೆ ಕಾಣುತ್ತಿದೆ. ಈ ವರ್ಷ ಬೇಡಿಕೆಯು ಶೇ 10ರಷ್ಟಕ್ಕಿಂತ ಹೆಚ್ಚಾಗಲಿದೆ' ಎಂದರು.

# ಸುದ್ದಿ 2 ನಿಮಿಷ

### ಎಚ್‌ಡಿಎಫ್‌ಸಿ ಬ್ಯಾಂಕ್ ಲಾಭ ಏರಿಕೆ

**ಮುಂಬೈ (ಪಿಟಿಐ):** ದೇಶದ ಅತಿದೊಡ್ಡ ಖಾಸಗಿ ಬ್ಯಾಂಕ್ ಆಗಿರುವ ಎಚ್‌ಡಿಎಫ್‌ಸಿ ಬ್ಯಾಂಕ್ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹19,610 ಕೋಟಿ ನಿವ್ವಳ ಲಾಭ ಗಳಿಸಿದೆ. ಇದು ಹಿಂದಿನ ವರ್ಷದ ಇದೇ ಅವಧಿಯಲ್ಲಿ ಕಂಡಿದ್ದ ಲಾಭಕ್ಕೆ ಹೋಲಿಸಿದರೆ ಶೇಕಡ 10ರಷ್ಟು ಹೆಚ್ಚು.

ಬ್ಯಾಂಕ್‌ನ ನಿವ್ವಳ ಬಡ್ಡಿ ವರಮಾನವು ಶೇ 4.8ರಷ್ಟು ಹೆಚ್ಚಾಗಿ ₹31,550 ಕೋಟಿಗೆ ತಲುಪಿದೆ. ಸಾಲ ನೀಡಿಕೆಯು ಶೇ 10ರಷ್ಟು ಹೆಚ್ಚಾಗಿದೆ. ನಿವ್ವಳ ಬಡ್ಡಿ ವರಮಾನ ಪ್ರಮಾಣವು ಮುಂದಿನ ಒಂದು ಅಥವಾ ಎರಡು ವರ್ಷಗಳವರೆಗೆ ಇದೇ ಮಟ್ಟದಲ್ಲಿ ಉಳಿಯಬಹುದು ಅಥವಾ ಇನ್ನೂ ಹೆಚ್ಚಾಗಬಹುದು ಎಂದು ಬ್ಯಾಂಕ್‌ನ ಆಡಳಿತ ಮಂಡಳಿಯು ವಿಶ್ವಾಸ ವ್ಯಕ್ತಪಡಿಸಿದೆ.



ಸಾಲ ನೀಡಿಕೆ ಪ್ರಮಾಣವು ಮುಂದಿನ ವರ್ಷಗಳಲ್ಲಿ ಬ್ಯಾಂಕಿಂಗ್ ವ್ಯವಸ್ಥೆಯ ಸಾಲ ನೀಡಿಕೆಯ ಸರಾಸರಿ ಪ್ರಮಾಣಕ್ಕಿಂತ ಹೆಚ್ಚಳ ಕಾಣಲಿದೆ, ಮಾರುಕಟ್ಟೆಯಲ್ಲಿ ಬ್ಯಾಂಕ್‌ನ ಪಾಲು ಹೆಚ್ಚಾಗಲಿದೆ ಎಂದು ಎಚ್‌ಡಿಎಫ್‌ಸಿ ಬ್ಯಾಂಕ್ ಮುಖ್ಯ ಕಾರ್ಯನಿರ್ವಾಹಕ ಶಶಿಧರ ಜಗದೀಶನ್ ಹೇಳಿದ್ದಾರೆ.

### ಐಸಿಐಸಿಐ ಬ್ಯಾಂಕ್‌ಗೆ ₹13,357 ಕೋಟಿ ಲಾಭ

**ಮುಂಬೈ (ಪಿಟಿಐ):** ಐಸಿಐಸಿಐ ಬ್ಯಾಂಕ್‌ನ ಸೆಪ್ಟೆಂಬರ್ ತ್ರೈಮಾಸಿಕದ ಒಟ್ಟು ಲಾಭವು ಶೇ 3.2ರಷ್ಟು ಹೆಚ್ಚಾಗಿ ₹13,357 ಕೋಟಿಗೆ ತಲುಪಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ₹12,948 ಕೋಟಿ ಲಾಭ ಆಗಿತ್ತು.

ಬ್ಯಾಂಕ್‌ನ ನಿವ್ವಳ ಬಡ್ಡಿ ವರಮಾನವು (ಎನ್‌ಐಎಂ) ಶೇ 7.4ರಷ್ಟು ಹೆಚ್ಚಾಗಿ ₹21,529 ಕೋಟಿಗೆ ತಲುಪಿದೆ. ಸಾಲ ನೀಡಿಕೆಯು ಶೇ 10.6ರಷ್ಟು ಹೆಚ್ಚಳ ಕಂಡಿದ್ದುದು ಎನ್‌ಐಎಂ ಏರಿಕೆಗೆ ನೆರವಾಗಿದೆ.

ಠೇವಣಿ ಸಂಗ್ರಹವು ಶೇ 9.1ರಷ್ಟು ಏರಿಕೆ ಕಂಡಿದೆ. ಒಟ್ಟು ಅನುತ್ಪಾದಕ ಸಾಲಗಳ ಪ್ರಮಾಣವು ಶೇ 1.58ಕ್ಕೆ ಕುಸಿದಿದೆ. ಇದು ಜೂನ್ ತ್ರೈಮಾಸಿಕದಲ್ಲಿ ಶೇ 1.67ರಷ್ಟು ಇತ್ತು. ಹಿಂದಿನ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಇದು ಶೇ 1.97ರಷ್ಟು ಇತ್ತು.

ಸೆಪ್ಟೆಂಬರ್ 30ಕ್ಕೆ ಬ್ಯಾಂಕ್‌ನ ನಗದು ಮೀಸಲು ಅನುಪಾತವು ಶೇ 17.31ರಷ್ಟು ಇತ್ತು.

### ಯೆಸ್ ಬ್ಯಾಂಕ್ ಲಾಭ ಶೇ 18ರಷ್ಟು ಹೆಚ್ಚಳ

**ಮುಂಬೈ (ಪಿಟಿಐ):** ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಯೆಸ್ ಬ್ಯಾಂಕ್‌ನ ನಿವ್ವಳ ಲಾಭವು ಶೇ 18.3ರಷ್ಟು ಏರಿಕೆಯಾಗಿದ್ದು, ₹654 ಕೋಟಿ ಆಗಿದೆ.

ಕಳೆದ ಆರ್ಥಿಕ ವರ್ಷದ ಇದೇ ತ್ರೈಮಾಸಿಕದಲ್ಲಿ ಬ್ಯಾಂಕ್ ₹553 ಕೋಟಿ ಲಾಭ ಗಳಿಸಿತ್ತು. ನಿವ್ವಳ ಬಡ್ಡಿ ವರಮಾನ ಶೇ 4.6ರಷ್ಟು ಹೆಚ್ಚಳವಾಗಿದೆ.

ಬ್ಯಾಂಕ್‌ನ ಇತರೆ ವರಮಾನ ಶೇ 16.9ರಷ್ಟು ಏರಿಕೆಯಾಗಿದ್ದು, ₹1,664 ಕೋಟಿಯಾಗಿದೆ. ಠೇವಣಿ ಪ್ರಮಾಣ ಶೇ 6.9ರಷ್ಟು ಏರಿಕೆಯಾಗಿದೆ. ಕಾರ್ಯಾಚರಣೆ ವೆಚ್ಚವು ಶೇ 0.6ರಷ್ಟು ಹೆಚ್ಚಳವಾಗಿ, ₹2,649 ಕೋಟಿಯಾಗಿದೆ. ಒಟ್ಟು ವಸೂಲಾಗದ ಸಾಲದ ಪ್ರಮಾಣ ಶೇ 1.6ರಷ್ಟಿದ್ದು, ಯಥಾಸ್ಥಿತಿಯಲ್ಲಿದೆ. ಬ್ಯಾಂಕ್‌ನ ಬಂಡವಾಳ ಮೀಸಲು ಅನುಪಾತ (ಸಿಎಆರ್) ಶೇ 15.6ರಷ್ಟಿದೆ ಎಂದು ಬ್ಯಾಂಕ್ ಶನಿವಾರ ತಿಳಿಸಿದೆ.

### ಪಿಎನ್‌ಬಿಗೆ ₹4,904 ಕೋಟಿ ಲಾಭ

**ನವದೆಹಲಿ (ಪಿಟಿಐ):** ಸರ್ಕಾರಿ ಸ್ವಾಮ್ಯದ ಪಂಜಾಬ್ ನ್ಯಾಷನಲ್ ಬ್ಯಾಂಕ್ (ಪಿಎನ್‌ಬಿ) ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹4,904 ಕೋಟಿ ನಿವ್ವಳ ಲಾಭ ಗಳಿಸಿದೆ.

ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹4,303 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಲಾಭದ ಪ್ರಮಾಣ ಶೇ 14ರಷ್ಟು ಹೆಚ್ಚಳವಾಗಿದೆ ಎಂದು ಬ್ಯಾಂಕ್ ಷೇರುಪೇಟೆಗೆ ಶನಿವಾರ ತಿಳಿಸಿದೆ.

ಒಟ್ಟು ವರಮಾನದಲ್ಲಿ ಶೇ 5ರಷ್ಟು ಏರಿಕೆಯಾಗಿದ್ದು, ₹36,214 ಕೋಟಿಯಾಗಿದೆ. ಬ್ಯಾಂಕ್‌ನ ನಿವ್ವಳ ಬಡ್ಡಿ ವರಮಾನ ₹21,047 ಕೋಟಿಯಾಗಿದೆ.

ಒಟ್ಟು ವಸೂಲಾಗದ ಸಾಲದ ಪ್ರಮಾಣ (ಜಿಎನ್‌ಪಿಎ) ಶೇ 4.48ರಿಂದ ಶೇ 3.45ಕ್ಕೆ ಇಳಿದಿದೆ. ನಿವ್ವಳ ಎನ್‌ಪಿಎ ಶೇ 0.46ರಿಂದ ಶೇ 0.36ಕ್ಕೆ ಇಳಿದಿದೆ ಎಂದು ತಿಳಿಸಿದೆ.

### ಕಾಟನ್ ಕಿಂಗ್‌ನಿಂದ ಹೊಸ ಸಂಗ್ರಹ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಹತ್ತಿಯ ಬಟ್ಟೆಗಳ ಮಾರಾಟದಲ್ಲಿ ತೊಡಗಿರುವ ಕಾಟನ್ ಕಿಂಗ್ ಕಂಪನಿಯು 'ಗಿಝಾ' ಹೆಸರಿನ ಹೊಸ ಪ್ರೀಮಿಯಂ ಬಟ್ಟೆಗಳ ಸಂಗ್ರಹವನ್ನು ಮಾರುಕಟ್ಟೆಗೆ ತಂದಿದೆ.

ಈಜಿಪ್ಟ್‌ನಲ್ಲಿ ಬೆಳೆದ ವಿಶ್ವದ ಅತ್ಯುತ್ತಮ ಗಿಝಾ ಹತ್ತಿಯಿಂದ ಈ ಅಂಗಿಗಳನ್ನು ಸಿದ್ಧಪಡಿಸಲಾಗಿದೆ. ಇವು ಉತ್ತಮ ಗುಣಮಟ್ಟ ಹೊಂದಿವೆ, ದೀರ್ಘಕಾಲ ಬಾಳಿಕೆ ಬರುತ್ತವೆ ಎಂದು ಕಂಪನಿ ಹೇಳಿದೆ.

ಕಾರ್ಪೊರೇಟ್ ವಲಯದವರಿಗೆ, ವೃತ್ತಿಪರರಿಗೆ ಮತ್ತು ಉದ್ಯಮಿಗಳಿಗೆ ಸೂಕ್ತವಾಗುವಂತೆ ಈ ಶ್ರೇಣಿಯ ಅಂಗಿಗಳನ್ನು ಸಿದ್ಧಪಡಿಸಲಾಗಿದೆ.

ಹೊಸ ಸಂಗ್ರಹವು 'ಕಾಟನ್ ಕಿಂಗ್'ನ ಮಳಿಗೆಗಳಲ್ಲಿ ಮತ್ತು ಆನ್‌ಲೈನ್ ವೇದಿಕೆಯಲ್ಲಿ ಲಭ್ಯವಿದೆ.

### ₹2 ಲಕ್ಷ ಕೋಟಿ ದಾಟಿದ ಕರೂರು ವೈಶ್ಯ ಬ್ಯಾಂಕ್ ವಹಿವಾಟು

**ಚೆನ್ನೈ (ಪಿಟಿಐ):** ತಮಿಳುನಾಡು ಮೂಲದ ಕರೂರು ವೈಶ್ಯ ಬ್ಯಾಂಕ್‌ನ ಒಟ್ಟು ವ್ಯವಹಾರ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹2 ಲಕ್ಷ ಕೋಟಿ ದಾಟಿದೆ ಎಂದು ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ರಮೇಶ್ ಬಾಬು ಬಿ. ಹೇಳಿದ್ದಾರೆ.

ಕಳೆದ ಆರ್ಥಿಕ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಬ್ಯಾಂಕ್ ₹473 ಕೋಟಿ ನಿವ್ವಳ ಲಾಭ ಗಳಿಸಿತ್ತು. ಈ ಬಾರಿ ₹574 ಕೋಟಿ ಲಾಭ ಗಳಿಸಿದ್ದು, ಲಾಭದ ಪ್ರಮಾಣ ಶೇ 21ರಷ್ಟು ಹೆಚ್ಚಳವಾಗಿದೆ.

ಬ್ಯಾಂಕ್‌ನ ಒಟ್ಟು ವ್ಯವಹಾರ ಕಳೆದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹1,76,138 ಕೋಟಿಯಷ್ಟಿತ್ತು. ಅದು ಈ ಬಾರಿ ₹2,03,216 ಕೋಟಿಗೆ ಏರಿಕೆಯಾಗಿದ್ದು, ಶೇ 15ರಷ್ಟು ಏರಿಕೆ ಕಂಡಿದೆ. ಬ್ಯಾಂಕ್‌ನ ಒಟ್ಟು ಠೇವಣಿಯಲ್ಲಿ ಶೇ 15ರಷ್ಟು ಹೆಚ್ಚಳವಾಗಿದ್ದು, ₹1.10 ಲಕ್ಷ ಕೋಟಿಯಾಗಿದೆ. ಬ್ಯಾಂಕ್ ನೀಡಿದ ಸಾಲವು ₹92,724 ಕೋಟಿಯಾಗಿದ್ದು, ಶೇ 14ರಷ್ಟು ಏರಿಕೆಯಾಗಿದೆ ಎಂದು ಶನಿವಾರ ತಿಳಿಸಿದ್ದಾರೆ.

### 'ಶಾಂತಿ ಅಥವಾ ಅರಾಜಕತೆ: ಆಯ್ಕೆ ನಿಮ್ಮದು'

**ಇಸ್ಲಾಮಾಬಾದ್ / ನವದೆಹಲಿ (ಪಿಟಿಐ):** 'ಶಾಂತಿ ಮಾರ್ಗ ಹಿಡಿಯಿರಿ ಇಲ್ಲವೇ ಅರಾಜಕತೆಯ ಅವ್ಯವಸ್ಥೆ ಅನುಭವಿಸಿ' ಎಂದು ಅಫ್ಗಾನಿಸ್ತಾನಕ್ಕೆ ಪಾಕಿಸ್ತಾನದ ಸೇನಾ ಮುಖ್ಯಸ್ಥ ಫೀಲ್ಡ್ ಮಾರ್ಷಲ್ ಸೈಯದ್ ಆಸಿಂ ಮುನೀರ್ ಶನಿವಾರ ಎಚ್ಚರಿಕೆ ನೀಡಿದರು.

ಖೈಬರ್ ಪಖ್ತುಂಖ್ವಾದಲ್ಲಿ ನಡೆದ ಪಾಕಿಸ್ತಾನ ಮಿಲಿಟರಿ ಅಕಾಡೆಮಿಯ ಆರ್ಮಿ ಕೆಡೆಟ್‌ಗಳ ಪದವಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, 'ಉಗ್ರರು ಅಫ್ಗಾನಿಸ್ತಾನದಲ್ಲಿ ನಿಂತು ಪಾಕಿಸ್ತಾನದ ಮೇಲೆ ದಾಳಿ ನಡೆಸುವುದರ ವಿರುದ್ಧ ತಕ್ಷಣ ಕ್ರಮ ಕೈಗೊಳ್ಳಿ' ಎಂದು ತಾಕೀತು ಮಾಡಿದರು. ಅಫ್ಗನ್‌ನಲ್ಲಿನ ಉಗ್ರರ ಸೇನಾ ನೆಲೆಗಳ ಮೇಲೆ ಪಾಕಿಸ್ತಾನ ಶುಕ್ರವಾರ ದಾಳಿ ನಡೆ ಸಿದೆ. ಈ ಬೆನ್ನಲ್ಲೇ ಮುನೀರ್ ಈ ಹೇಳಿಕೆ ನೀಡಿದರು.

**ಶಾಂತಿ ಮಾತುಕತೆ:** ಪಾಕಿಸ್ತಾನ–ಅಫ್ಗಾನಿಸ್ತಾನ ನಡುವಣ ಸೇನಾ ಸಂಘರ್ಷದಿಂದಾಗಿ ಉಭಯ ದೇಶಗಳ ನಡುವೆ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿದೆ. ಸಂಘರ್ಷ ನಿಲ್ಲಿಸಲು ಕತಾರ್ ಸರ್ಕಾರವು ನಿರಂತರವಾಗಿ ಯತ್ನಿಸುತ್ತಿದೆ.

ಈ ಮಧ್ಯೆ ಪಾಕಿಸ್ತಾನ ರಕ್ಷಣಾ ಸಚಿವ ಖ್ವಾಜಾ ಆಸೀಫ್ ನೇತೃತ್ವದ ನಿಯೋಗವು ಅಫ್ಗಾನಿಸ್ತಾನದ ಪ್ರತಿನಿಧಿಗಳೊಂದಿಗೆ ದೋಹಾದಲ್ಲಿ ಮಾತುಕತೆ ನಡೆಸಲಿದೆ ಎಂದು ಪಾಕಿಸ್ತಾನ ಸರ್ಕಾರವು ಶನಿವಾರ ತಿಳಿಸಿದೆ.

**1,200 ಬಾರಿ ಗಡಿ ಉಲ್ಲಂಘನೆ:** ಕಳೆದ ನಾಲ್ಕು ವರ್ಷದಲ್ಲಿ ಪಾಕಿಸ್ತಾನ ಸೇನೆಯು 1,200 ಬಾರಿ ಅಫ್ಗಾನಿಸ್ತಾನದ ಗಡಿಯನ್ನು, 710 ಬಾರಿ ವಾಯುಮಾರ್ಗ ಉಲ್ಲಂಘಿಸಿದೆ ಎಂದು ಅಫ್ಗನ್ ಮೂಲಗಳು ತಿಳಿಸಿವೆ.

### ಭೌತವಿಜ್ಞಾನಿ ಚೆನ್ ನಿಂಗ್ ಯಾಂಗ್ ನಿಧನ

**ಬೀಜಿಂಗ್ (ಪಿಟಿಐ):** ನೊಬೆಲ್ ಪುರಸ್ಕೃತ ಭೌತವಿಜ್ಞಾನಿ, ಶತಾಯುಷಿ ಚೆನ್ ನಿಂಗ್ ಯಾಂಗ್ (103) ಶನಿವಾರ ನಿಧನರಾಗಿದ್ದಾರೆ.



ಚೆನ್ ನಿಂಗ್ ಯಾಂಗ್

ಚೀನಾದ ಪೂರ್ವ ಭಾಗದಲ್ಲಿರುವ ಅನ್ಹುಯಿ ಪ್ರಾಂತ್ಯದ ಹೆಫೆಯಲ್ಲಿ 1922ರಲ್ಲಿ ಜನಿಸಿದ್ದ ಚೆನ್, 1940ರ ದಶಕದಲ್ಲಿ ಶೈಕ್ಷಣಿಕ ಅಧ್ಯಯನಕ್ಕಾಗಿ ಅಮೆರಿಕಕ್ಕೆ ಹೋಗಿದ್ದರು. 1957ರಲ್ಲಿ ಭೌತಶಾಸ್ತ್ರದಲ್ಲಿ ನೊಬೆಲ್ ಪುರಸ್ಕಾರ ಪಡೆದಿದ್ದರು ಎಂದು ಮಾಧ್ಯಮಗಳು ವರದಿ ಮಾಡಿವೆ.

'ಇಪ್ಪತ್ತನೇ ಶತಮಾನದ ಶ್ರೇಷ್ಠ ಭೌತವಿಜ್ಞಾನಿಗಳಲ್ಲಿ ಯಾಂಗ್ ಒಬ್ಬರು' ಎಂದು ಶಾಂಘೈ ಇನ್‌ಸ್ಟಿಟ್ಯೂಟ್ ಫಾರ್ ಅಡ್ವಾನ್ಸ್ಡ್ ಸ್ಟಡೀಸ್‌ನ ವಿಲ್ಜೆಕ್ ಕ್ವಾಂಟಮ್ ಸೆಂಟರ್‌ನ ಭೌತಶಾಸ್ತ್ರದ ಪ್ರಾಧ್ಯಾಪಕರು ಮತ್ತು ಸಹಾಯಕ ನಿರ್ದೇಶಕರಾದ ಶಿ ಯು ಹೇಳಿದ್ದಾರೆ.

'ಯಾಂಗ್–ಮಿಲ್ಸ್ ಸಿದ್ಧಾಂತವಿಲ್ಲದೆ ಯಾವುದೇ ಪ್ರಮಾಣಿತ ಮಾದರಿ ಇರಲು ಸಾಧ್ಯವಿಲ್ಲ' ಎಂದು ಅವರು 'ದಿ ಪೋಸ್ಟ್'ಗೆ ತಿಳಿಸಿದ್ದಾರೆ.

# ರೋಹಿತ್, ವಿರಾಟ್‌ಗೆ ಸತ್ವಪರೀಕ್ಷೆ

## ಆಸ್ಟ್ರೇಲಿಯಾ ವಿರುದ್ಧ ಮೊದಲ ಏಕದಿನ ಪಂದ್ಯ ಇಂದು • ಗಿಲ್ ನಾಯಕತ್ವಕ್ಕೆ ಸವಾಲು

**ಪರ್ತ್ (ಪಿಟಿಐ):** ಕ್ರಿಕೆಟ್ ಜೀವನದ ಸಂಧ್ಯಾಕಾಲದಲ್ಲಿರುವ ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಅವರ ಪಾಲಿಗೆ ಆಸ್ಟ್ರೇಲಿಯಾ ವಿರುದ್ಧ ಭಾನುವಾರ ಇಲ್ಲಿ ಆರಂಭವಾಗಲಿರುವ ಏಕದಿನ ಸರಣಿ ಮಹತ್ವದ್ದು. ಇದೇ ಮೊದಲ ಬಾರಿ ಏಕದಿನ ಸರಣಿಗೆ ಪೂರ್ಣ ಪ್ರಮಾಣದ ನಾಯಕನಾಗಿರುವ ಶುಭಮನ್ ಗಿಲ್ ಅವರನ್ನೂ ಈ ಸರಣಿಯು ಸತ್ವಪರೀಕ್ಷೆಗೆ ಒಡ್ಡಲಿದೆ.

ಅನುಭವಿಗಳಾದ ಕೊಹ್ಲಿ ಮತ್ತು ರೋಹಿತ್ ಅವರು ಚಾಂಪಿಯನ್ಸ್ ಟ್ರೋಫಿಯಲ್ಲಿ ಆಡಿ ಏಳು ತಿಂಗಳಾದ ಮೇಲೆ ರಾಷ್ಟ್ರೀಯ ತಂಡಕ್ಕೆ ಮರಳಿದ್ದಾರೆ. ಈ ಅವಧಿಯಲ್ಲಿ ಭಾರತದ ಕ್ರಿಕೆಟ್‌ನಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಕೊಹ್ಲಿ, ರೋಹಿತ್ ಅವರ ಅನುಪಸ್ಥಿತಿ ಕಾಡದ ರೀತಿಯಲ್ಲಿ ಟೆಸ್ಟ್ ತಂಡ ಆಡುತ್ತಿದೆ.

ಈ ಸರಣಿಗೆ ಸಜ್ಜಾಗಲು ಇಬ್ಬರೂ ಸಾಕಷ್ಟು ಶ್ರಮ ಹಾಕಿದ್ದಾರೆ. ರೋಹಿತ್ ತಮ್ಮ ತೂಕವನ್ನು ಸಾಕಷ್ಟು ಇಳಿಸಿಕೊಂಡಿದ್ದಾರೆ. ಲಂಡನ್‌ನಲ್ಲಿ ನೆಲೆಸಿರುವ ವಿರಾಟ್ ಕೊಹ್ಲಿ ಅವರೂ ಖಾಸಗಿ ಟ್ರೇನರ್ ನೆರವಿನಿಂದ ಫಿಟ್ನೆಸ್ ಕಾಪಾಡಿಕೊಂಡಿದ್ದಾರೆ.

ಆದರೆ ಐಪಿಎಲ್ ನಂತರ ಸ್ಪರ್ಧಾತ್ಮಕ ಪಂದ್ಯದ ಅಭ್ಯಾಸವಿಲ್ಲದೇ ಕಣಕ್ಕಿಳಿಯುತ್ತಿರುವುದು ಈ ಇಬ್ಬರೂ ತಾರೆಯರಿಗೆ ಸವಾಲು ಒಡ್ಡಲಿದೆ. ಈಗ ತಮಗೆ ಉಳಿದಿರುವ ಏಕೈಕ ಮಾದರಿಯಲ್ಲಿ ತಮ್ಮ ವೃತ್ತಿ ಬದುಕನ್ನು ಇನ್ನಷ್ಟು ದೀರ್ಘ ಕಾಲ ವಿಸ್ತರಿಸಬೇಕಾದರೆ ಇಲ್ಲಿ ಯಶಸ್ಸು ಗಳಿಸುವುದು ಅನಿವಾರ್ಯವಾಗಿದೆ. ಆದರೆ ಕೊಹ್ಲಿ

**ಬಲಾಬಲ**

| ಒಟ್ಟು ಪಂದ್ಯ | 152 |
| --- | --- |
| ಭಾರತಕ್ಕೆ ಗೆಲುವು | 58 |
| ಆಸ್ಟ್ರೇಲಿಯಾಕ್ಕೆ ಗೆಲುವು | 84 |
| ಫಲಿತಾಂಶವಿಲ್ಲ | 10 |

ಅವರಿಗಿಂತ ಹೆಚ್ಚು ಒತ್ತಡ ರೋಹಿತ್ ಅವರಿಗೆ ಇದೆ. ನಾಯಕನಾಗಿರದೇ, ಸೀನಿಯರ್ ಆಟಗಾರನ ಹೊಸ ಪಾತ್ರದಲ್ಲಿ ಅವರು ಹೊಂದಿಕೊಳ್ಳಬೇಕಿದೆ.

ಕೊಹ್ಲಿ ಎಂದಿನಂತೆ ಆಕರ್ಷಕ ಇನಿಂಗ್ಸ್ ಆಡಿದರೆ ಮತ್ತು ರೋಹಿತ್ ತಮ್ಮ ಶಾಟ್ ಮೇಕಿಂಗ್‌ನಲ್ಲಿ ಲಯ ಕಂಡುಕೊಂಡರೆ ಅವರ ಕ್ರಿಕೆಟ್ ಜೀವನ ಇನ್ನಷ್ಟು ಲಂಬಿಸಬಹುದು.

ಆತಿಥೇಯ ತಂಡದ ವೇಗಿಗಳಾದ ಮಿಚೆಲ್ ಸ್ಟಾರ್ಕ್ ಮತ್ತು ಜೋಶ್ ಹೇಜಲ್‌ವುಡ್ ಅವರ ದಾಳಿಯನ್ನು ಈ ಇಬ್ಬರು ಹೇಗೆ ನಿಭಾಯಿಸುತ್ತಾರೆ ಎಂಬುದೂ ಕುತೂಹಲಕ್ಕೆ ಎಡೆಮಾಡಿದೆ. ಈಗ ಆಯ್ಕೆ ಸಮಿತಿ ದಿಟ್ಟ ನಿರ್ಧಾರಗಳನ್ನು ಕೈಗೊಳ್ಳುತ್ತಿರುವ ಕಾರಣ ಇವರಿಬ್ಬರೂ ಯಾವುದನ್ನೂ ಹಗುರವಾಗಿ ತೆಗೆದುಕೊಳ್ಳುವಂತೆ ಇಲ್ಲ. ತಂಡದ ಚಿಂತಕರ ಚಾವಡಿ 2027ರ ಏಕದಿನ ವಿಶ್ವಕಪ್‌ಗೆ ತಂಡ ಕಟ್ಟುವತ್ತ ದೃಷ್ಟಿ ನೆಟ್ಟಿದೆ.

**ಸಂಯೋಜನೆ:** ತಂಡದ ಆಡಳಿತವು, ರೋಹಿತ್ ಮತ್ತು ಶುಭಮನ್ ಗಿಲ್ ಅವರ ಯಶಸ್ವಿ ಆರಂಭಿಕ ಸಂಯೋಜನೆಯನ್ನು ಮುಂದುವರಿಸುವ ಸಾಧ್ಯತೆ ಹೆಚ್ಚು. ಮೂರನೇ ಕ್ರಮಾಂಕದಲ್ಲಿ ಕೊಹ್ಲಿ, ನಂತರ ಶ್ರೇಯಸ್ ಅಯ್ಯರ್, ಕೆ.ಎಲ್. ರಾಹುಲ್ ಆಡಲು ಇಳಿಯಬಹುದು. ರಾಹುಲ್‌ಗೆ ಕೀಪಿಂಗ್ ಹೊಣೆಯೂ ಹೆಗಲೇರಬಹುದು.

ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಗಾಯಾಳಾಗಿರುವ ಕಾರಣ ನಿತೀಶ್ ಕುಮಾರ್ ರೆಡ್ಡಿ ಅವರು ಏಕದಿನ ಕ್ರಿಕೆಟ್‌ಗೆ ಪದಾರ್ಪಣೆ ಮಾಡುವ ಸಾಧ್ಯತೆ ಹೆಚ್ಚಿದೆ. ಮೊಹಮ್ಮದ್ ಸಿರಾಜ್, ಅರ್ಷದೀಪ್ ಅವರಿಗೆ ಬೆಂಬಲವಾಗಿ ಹರ್ಷಿತ್ ರಾಣಾ ಮತ್ತು ಪ್ರಸಿದ್ಧ ಕೃಷ್ಣ ಕಣಕ್ಕಿಳಿಯಬಹುದು. ಸ್ಪಿನ್ ವಿಭಾಗವನ್ನು ಅಕ್ಷರ್ ಪಟೇಲ್ ಮತ್ತು ಕುಲದೀಪ್ ನಿಭಾಯಿಸಲಿದ್ದಾರೆ.

ಆಸ್ಟ್ರೇಲಿಯಾ ತಂಡವು ಅನುಭವಿಗಳಾದ ಮಿಚೆಲ್ ಮಾರ್ಷ್ ಮತ್ತು ಟ್ರಾವಿಸ್ ಹೆಡ್ ಅವರ ಜೊತೆಗೆ ಕೂಪರ್ ಕಾನೊಲಿ, ಮಾರ್ನಸ್ ಲಾಬುಷೇನ್, ಮ್ಯಾಥ್ಯೂ ರೆನ್‌ಶಾ ಅವರಿಂದ ಉಪಯುಕ್ತ ಕೊಡುಗೆ ನಿರೀಕ್ಷಿಸುತ್ತಿದೆ.

**ಪಂದ್ಯ ಆರಂಭ: ಬೆಳಿಗ್ಗೆ 9 (ಭಾರತೀಯ ಕಾಲಮಾನ)**
**ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್**



ತಾಲೀಮು ವೇಳೆ ವಿರಾಟ್ ಕೊಹ್ಲಿ



ಟ್ರೋಫಿಯೊಂದಿಗೆ ಆಸ್ಟ್ರೇಲಿಯಾ ತಂಡದ ನಾಯಕ ಮಿಚೆಲ್ ಮಾರ್ಷ್ ಮತ್ತು ಭಾರತ ತಂಡದ ನಾಯಕ ಶುಭಮನ್ ಗಿಲ್ ಎಎಫ್‌ಪಿ ಚಿತ್ರಗಳು

**ಗಿಲ್‌ಗೆ ಹೆಚ್ಚಿದ ಹೊಣೆ**

ಶುಭಮನ್ ಗಿಲ್ ಅವರಿಗೆ ಈಗ ಟಿ20, ಟೆಸ್ಟ್ ಜೊತೆಗೆ ಏಕದಿನ ತಂಡದ ಸಾರಥ್ಯವನ್ನೂ ವಹಿಸಲಾಗಿದೆ. ಆದರೆ ಇಲ್ಲಿ ಅವರಿಗೆ ಅನುಭವಿಗಳಾದ ಕೊಹ್ಲಿ, ರೋಹಿತ್ ಅವರ ಮಾರ್ಗದರ್ಶನ ಪಡೆಯಲು ಅವಕಾಶವಿದೆ.

ಕೊಹ್ಲಿ ಹಾಕಿಕೊಟ್ಟ ಪರಂಪರೆಯನ್ನು ಮುಂದುವರಿಸಲು ತಾನು ಸಮರ್ಥ ಎಂಬುದನ್ನು 26 ವರ್ಷ ವಯಸ್ಸಿನ ಗಿಲ್ ಈಗಾಗಲೇ ಸಾಬೀತುಪಡಿಸಿದ್ದಾರೆ.



ರೋಹಿತ್ ಶರ್ಮಾ ಬ್ಯಾಟಿಂಗ್ ಅಭ್ಯಾಸ ನಡೆಸಿದರು

# ಆತಂಕದಿಂದ ಸೌರಾಷ್ಟ್ರ ಪಾರು

## ಫಲ ನೀಡದ ಕರ್ನಾಟಕದ ಹೋರಾಟ • ರಣಜಿ ಪಂದ್ಯ ಡ್ರಾ

**ರಾಜಕೋಟ್ (ಪಿಟಿಐ):** ಮೂರನೇ ದಿನ ಟೀ ವೇಳೆಗೆ ಸೌರಾಷ್ಟ್ರ ತಂಡವು ಕರ್ನಾಟಕ ತಂಡದ ವಿರುದ್ಧ ನಿರ್ಣಾಯಕ ನಾಲ್ಕು ರನ್‌ಗಳ ಮುನ್ನಡೆ ಗಳಿಸಿದಾಗಲೇ ಪಂದ್ಯದ ಭವಿಷ್ಯ ಬಹುತೇಕ ನಿರ್ಧಾರವಾಗಿತ್ತು. ಅಂತಿಮ ದಿನವಾದ ಶನಿವಾರ ಟೀ ವೇಳೆ ಸೌರಾಷ್ಟ್ರ ತಂಡ ಆರಂಭದಲ್ಲಿ ಕುಸಿದು ಆತಂಕಕ್ಕೆ ಒಳಗಾದರೂ ಅಂತಿಮವಾಗಿ ಡ್ರಾ ಮಾಡಿಕೊಳ್ಳುವಲ್ಲಿ ಯಶಸ್ವಿಯಾಯಿತು.

ರಣಜಿ ಟ್ರೋಫಿ 'ಬಿ' ಗುಂಪಿನ ಮೊದಲ ಸುತ್ತಿನ ಪಂದ್ಯದಲ್ಲಿ ಸೌರಾಷ್ಟ್ರ ಮೊದಲ ಇನಿಂಗ್ಸ್ ಮುನ್ನಡೆಗಾಗಿ ಮೂರು ಅಂಕ ಮತ್ತು ಕರ್ನಾಟಕ ಒಂದು ಅಂಕ ಪಡೆದವು.

ನಿರಂಜನ ಶಾ ಕ್ರೀಡಾಂಗಣದಲ್ಲಿ ಕೊನೆಯ ದಿನ, 1 ವಿಕೆಟ್‌ಗೆ 89 ರನ್‌ಗಳೊಡನೆ ಎರಡನೇ ಇನಿಂಗ್ಸ್ ಮುಂದುವರಿಸಿದ ಕರ್ನಾಟಕ 232 ರನ್‌ಗಳಿಗೆ ಆಲೌಟ್ ಆಯಿತು. ಮೊತ್ತ 96 ರನ್‌ಗಳಾಗಿದ್ದಾಗ ದೇವದತ್ತ ಪಡಿಕ್ಕಲ್ (19) ನಿರ್ಗಮಿಸಿದರು. ನಂತರ ನಿಯಮಿತವಾಗಿ ವಿಕೆಟ್‌ಗಳು ಬಿದ್ದವು. ನಾಯಕ ಹಾಗೂ ಆರಂಭ ಆಟಗಾರ ಮಯಂಕ್ ಅಗರವಾಲ್ (64, 126ಎ, 4x4) ಐದನೆಯವರಾಗಿ ನಿರ್ಗಮಿಸಿದರು.

ವಿಕೆಟ್ ಕೀಪರ್ ಕೆ.ಎಲ್.ಶ್ರೀಜಿತ್ (31, 30ಎ) ಮತ್ತು ಕೊನೆಯಲ್ಲಿ ವೆಂಕಟೇಶ್ (28, 67ಎ) ಅವರೂ ಉಪಯುಕ್ತ ಆಟವಾಡಿದರು.

ಗೆಲುವಿಗೆ 229 ರನ್ ಗಳಿಸಬೇಕಾಗಿದ್ದ ಸೌರಾಷ್ಟ್ರ ತಂಡಕ್ಕೆ ಶ್ರೇಯಸ್ ಗೋಪಾಲ್ ಪೆಟ್ಟು ನೀಡಿದರು. ಆತಿಥೇಯ ತಂಡ 13 ಓವರುಗಳಾಗುವಷ್ಟರಲ್ಲಿ 43 ರನ್‌ಗಳಿಗೆ 4 ವಿಕೆಟ್ ಕಳೆದುಕೊಂಡು ಅಪಾಯದಲ್ಲಿತ್ತು. ಹಾರ್ವಿಕ್ ದೇಸಾಯಿ (13) ಚಿರಾಗ್ ಜಾನಿ (15) ಮತ್ತು ಅನ್ಶ್ ಗೊಸಾಯಿ (2) ಅವರ ವಿಕೆಟ್‌ಗಳು ಶ್ರೇಯಸ್ ಗೋಪಾಲ್ ಪಾಲಾಗಿದ್ದವು. ಎಡಗೈ ಸ್ಪಿನ್ನರ್ ಶಿಖರ್ ಶೆಟ್ಟಿ ಅವರು ಅರ್ಪಿತ್ ವಸವದಾ (2) ಅವರ ವಿಕೆಟ್ ಪಡೆದಾಗ ಕರ್ನಾಟಕ ತಿರುಗೇಟು ನೀಡುವಂತೆ ಕಂಡಿತು.

ಆದರೆ ಸಮರ್ ಗಜರ್ (ಔಟಾಗದೇ 43) ಮತ್ತು ಜೇ ಗೋಹಿಲ್ (41) ಜೋಡಿ ಆತಂಕದ ನಡುವೆಯೂ ಐದನೇ ವಿಕೆಟ್‌ಗೆ 81 ರನ್ ಜೊತೆಯಾಟವಾಡಿ ಕುಸಿತ ತಪ್ಪಿಸಿತು.



ಅರ್ಧಶತಕ ಗಳಿಸಿದ ಮಯಂಕ್ ಅಗರವಾಲ್ ಸಂಗ್ರಹ ಚಿತ್ರ

ಈ ಜೋಡಿ 25 ಓವರುಗಳನ್ನು ನಿಭಾಯಿಸಿದ್ದರಿಂದ ತಂಡ ಸುರಕ್ಷಿತವಾಗಿ ಸಮಯ ಕಳೆಯಿತು.

ಪಂದ್ಯದಲ್ಲಿ ಒಟ್ಟು 10 ವಿಕೆಟ್ ಪಡೆದ ಧರ್ಮೇಂದ್ರಸಿಂಹ ಜಡೇಜ ಅವರು ಪಂದ್ಯದ ಆಟಗಾರನಾದರು.

ಕರ್ನಾಟಕ ತಂಡ ತನ್ನ ಎರಡನೇ ಪಂದ್ಯವನ್ನು ಇದೇ 25ರಿಂದ ಶಿವಮೊಗ್ಗದಲ್ಲಿ ಗೋವಾ ವಿರುದ್ಧ ಆಡಲಿದೆ.

**ಸ್ಕೋರುಗಳು:** ಮೊದಲ ಇನಿಂಗ್ಸ್: ಕರ್ನಾಟಕ: 372; ಸೌರಾಷ್ಟ್ರ 376; ಎರಡನೇ ಇನಿಂಗ್ಸ್: ಕರ್ನಾಟಕ: 74.2 ಓವರುಗಳಲ್ಲಿ 232 (ಮಯಂಕ್ ಅಗರವಾಲ್ 64, ಕೃಷ್ಣನ್ ಶ್ರೀಜಿತ್ 31, ಎಂ.ವೆಂಕಟೇಶ್ 28; ಧರ್ಮೇಂದ್ರ ಸಿಂಹ ಜಡೇಜ 79ಕ್ಕೆ3, ಜಯದೇವ ಉನದ್ಕತ್ 49ಕ್ಕೆ2, ಯುವರಾಜಸಿಂಹ ದೊಡಿಯಾ 40ಕ್ಕೆ3, ಸಮರ್ ಗಜರ್ 25ಕ್ಕೆ2); ಸೌರಾಷ್ಟ್ರ: 43 ಓವರುಗಳಲ್ಲಿ 5ಕ್ಕೆ 128 (ಸಮರ್ ಗಜರ್ ಔಟಾಗದೇ 43, ಜೇ ಗೋಹಿಲ್ 41; ಶಿಖರ್ ಶೆಟ್ಟಿ 40ಕ್ಕೆ1, ಶ್ರೇಯಸ್ ಗೋಪಾಲ್ 43ಕ್ಕೆ3, ಮೊಹ್ಸಿನ್ ಖಾನ್ 30ಕ್ಕೆ1).

### ಸಿ.ಕೆ. ನಾಯ್ಡು ಟ್ರೋಫಿ: ಮಿಂಚಿದ ಹಾರ್ದಿಕ್, ಸಮಿತ್

# ಸೋಲಿನ ಭೀತಿಯಲ್ಲಿ ರೈಲ್ವೇಸ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಹಾರ್ದಿಕ್ ರಾಜ್ (37ಕ್ಕೆ 3) ಮತ್ತು ಸಮಿತ್ ದ್ರಾವಿಡ್ (25ಕ್ಕೆ 2) ಅವರ ಪರಿಣಾಮಕಾರಿ ಬೌಲಿಂಗ್ ದಾಳಿಯ ನೆರವಿನಿಂದ ಕರ್ನಾಟಕ ತಂಡವು ಕರ್ನಲ್ ಸಿ.ಕೆ. ನಾಯ್ಡು ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ 343 ರನ್‌ಗಳ ಭಾರಿ ಮುನ್ನಡೆ ಪಡೆಯಿತು. ರೈಲ್ವೇಸ್ (ಆರ್‌ಎಸ್‌ಪಿಬಿ) ತಂಡದ ಮೇಲೆ ಫಾಲೋಆನ್ ಹೇರಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದ ಮೂರನೇ ದಿನವಾದ ಶನಿವಾರ ರೈಲ್ವೇಸ್ ತಂಡವು ಮೊದಲ ಇನಿಂಗ್ಸ್‌ನಲ್ಲಿ 81 ಓವರ್‌ಗಳಲ್ಲಿ 186 ರನ್‌ಗಳಿಗೆ (ಶುಕ್ರವಾರ 3 ವಿಕೆಟ್‌ಗೆ 82) ಆಲೌಟ್ ಆಯಿತು. ಅಭಿಷೇಕ್ ಕೌಶಲ್ (73;221ಎ) ಏಕಾಂಗಿ ಹೋರಾಟ ನಡೆಸಿದರು.

ಫಾಲೋಆನ್ ಬಳಿಕ ಎರಡನೇ ಇನಿಂಗ್ಸ್ ಆರಂಭಿಸಿದ ರೈಲ್ವೇಸ್ ದಿನದಾಟದ ಅಂತ್ಯಕ್ಕೆ 10.1 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 41 ರನ್ ಗಳಿಸಿದೆ. ಇನಿಂಗ್ಸ್ ಸೋಲು ತಪ್ಪಿಸಲು ರೈಲ್ವೇಸ್ ಇನ್ನೂ 302 ರನ್ ದೂರದಲ್ಲಿದೆ. ಹೀಗಾಗಿ, ಕೊನೆಯ ದಿನದ ಆಟ ಕುತೂಹಲ ಕೆರಳಿಸಿದೆ.

ಕರ್ನಾಟಕ ತಂಡ ಮೊದಲ ಇನಿಂಗ್ಸ್‌ನಲ್ಲಿ ಪ್ರಖರ್ ಚತುರ್ವೇದಿ (225) ಅವರ ದ್ವಿಶತಕದ ನೆರವಿನಿಂದ 7 ವಿಕೆಟ್‌ಗೆ 529 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತ್ತು.

**ಸಂಕ್ಷಿಪ್ತ ಸ್ಕೋರ್:** ಮೊದಲ ಇನಿಂಗ್ಸ್: ಕರ್ನಾಟಕ: 135.4 ಓವರ್‌ಗಳಲ್ಲಿ 7 ವಿಕೆಟ್‌ಗೆ 529. ರೈಲ್ವೇಸ್: 81 ಓವರ್‌ಗಳಲ್ಲಿ 186 (ಅಭಿಷೇಕ್ ಕೌಶಲ್ 73, ಗರ್ವ್ ಸಾಂಗ್ವನ್ 42; ಸಮಿತ್ ದ್ರಾವಿಡ್ 25ಕ್ಕೆ 2, ಹಾರ್ದಿಕ್ ರಾಜ್ 37ಕ್ಕೆ 3). ಎರಡನೇ ಇನಿಂಗ್ಸ್: ರೈಲ್ವೇಸ್: 10.1 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 41.



ರೈಲ್ವೇಸ್ ತಂಡದ ಅಭಿಷೇಕ್ ಕೌಶಲ್ ವಿಕೆಟ್ ಪಡೆದ ಕರ್ನಾಟಕ ತಂಡದ ಹಾರ್ದಿಕ್‌ರಾಜ್ ಅವರನ್ನು ಸಹ ಆಟಗಾರರು ಅಭಿನಂದಿಸಿದರು ಚಿತ್ರ:ಕೃಷ್ಣ ಕುಮಾರ್ ಪಿ.ಎಸ್.

# ಆಡ್ರಿಯನ್, ನಿಧಿಗೆ ಪ್ರಶಸ್ತಿ 'ಡಬಲ್'

ಪ್ರಜಾವಾಣಿ ವಾರ್ತೆ

**ದಾವಣಗೆರೆ:** ದಿಟ್ಟ ಆಟ ಆಡಿದ ಬೆಂಗಳೂರಿನ ಆಡ್ರಿಯನ್ ಎಡ್ವರ್ಡ್ ಮತ್ತು ನಿಧಿ ಆತ್ಮಾರಾಮ್ ಅವರು ಶನಿವಾರ ಇಲ್ಲಿ ಮುಕ್ತಾಯಗೊಂಡ 15 ಮತ್ತು 17 ವರ್ಷದೊಳಗಿನವರ ರಾಜ್ಯ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ 'ಪ್ರಶಸ್ತಿ ಡಬಲ್' ಸಾಧನೆ ಮಾಡಿದರು.

ರಾಜ್ಯ ಬ್ಯಾಡ್ಮಿಂಟನ್ ಸಂಸ್ಥೆ (ಕೆಬಿಎ) ಹಾಗೂ ದಾವಣಗೆರೆ ಜಿಲ್ಲಾ ಬ್ಯಾಡ್ಮಿಂಟನ್ ಸಂಸ್ಥೆ (ಡಿಡಿಬಿಎ) ಗಳ ಆಶ್ರಯದಲ್ಲಿ ನೇತಾಜಿ ಸುಭಾಷ್‌ಚಂದ್ರ ಬೋಸ್ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ 17 ವರ್ಷದೊಳಗಿನ ಬಾಲಕಿಯರ ಸಿಂಗಲ್ಸ್ ಹಾಗೂ ಡಬಲ್ಸ್‌ನಲ್ಲಿ ನಿಧಿ ಟ್ರೋಫಿ ಎತ್ತಿಹಿಡಿದರು. 15 ವರ್ಷದೊಳಗಿನ ಬಾಲಕರ ಸಿಂಗಲ್ಸ್ ಮತ್ತು ಮಿಶ್ರ ಡಬಲ್ಸ್‌ನಲ್ಲಿ ಆಡ್ರಿಯನ್ ಪ್ರಶಸ್ತಿ ಜಯಿಸಿದರು.

ಸಿಂಗಲ್ಸ್ ಫೈನಲ್‌ನಲ್ಲಿ ನಿಧಿಗೆ ಅಗ್ರ ಶ್ರೇಯಾಂಕಿತೆ ಹಿತೈಶ್ರೀ ಎಲ್. ರಾಜಯ್ಯ ಸವಾಲು ಎದುರಾಗಿತ್ತು. ಮೊದಲ ಗೇಮ್‌ನಲ್ಲಿ 17–21ರಿಂದ ನಿರಾಸೆ ಕಂಡ ನಿಧಿ, ನಂತರದ ಎರಡು ಗೇಮ್‌ಗಳಲ್ಲಿ ಪುಟಿದೆದ್ದರು. 21-17 ಮತ್ತು 21-16ರಿಂದ ಎದುರಾಳಿಯನ್ನು ಹಣಿದರು.

ಡಬಲ್ಸ್ ವಿಭಾಗದ ಪ್ರಶಸ್ತಿ ಸುತ್ತಿನ ಪೈಪೋಟಿಯಲ್ಲಿ ನಿಧಿ ಹಾಗೂ ಸೆಲ್ವ ಸಮೃದ್ಧಿ ಸೆಲ್ವಪ್ರಭು ಜೊತೆಗೂಡಿ ಆಡಿದರು. ಈ ಜೋಡಿಯು 18-21, 21-17, 21-15 ರಿಂದ ದಿಶಾ ರವಿ ಭಟ್ ಮತ್ತು ತನ್ವಿ ಮುನೋತ್ ಅವರನ್ನು ಪರಾಭವಗೊಳಿಸಿತು.

ಮಿಶ್ರ ಡಬಲ್ಸ್ ಫೈನಲ್‌ನಲ್ಲಿ ಚಿರಾಗ್ ಪ್ರಕಾಶ್ ಮತ್ತು ತನ್ವಿ ಮುನೋತ್ 23-25, 21-11, 21-16 ರಿಂದ ಎರಡನೇ ಶ್ರೇಯಾಂಕದ ಆರ್.ಗೌರವ್ ಮತ್ತು ಸುಮೇಧಾ ಶ್ರೀನಿವಾಸ್‌ಗೆ ಆಘಾತ ನೀಡಿ ಟ್ರೋಫಿ ತಮ್ಮದಾಗಿಸಿಕೊಂಡರು.

**ಯಶಸ್‌ಗೆ ಆಘಾತ ನೀಡಿದ ಆರವ್:** 17 ವರ್ಷದೊಳಗಿನ ಬಾಲಕರ ಸಿಂಗಲ್ಸ್ ವಿಭಾಗದ ಪ್ರಶಸ್ತಿಯು ಬೆಂಗಳೂರಿನ ಆರವ್ ಬಾಸಕ್ ಪಾಲಾಯಿತು. ಆರವ್ 17-21, 21-13, 21-17ರಿಂದ 5ನೇ ಶ್ರೇಯಾಂಕಿತ ಆಟಗಾರ, ಚಿಕ್ಕಮಗಳೂರಿನ ಯಶಸ್ ಎಂ.ರೆಡ್ಡಿ ಅವರನ್ನು ಸೋಲಿಸಿದರು.

ಡಬಲ್ಸ್ ವಿಭಾಗದ ಅಂತಿಮ ಘಟ್ಟದ ಹಣಾಹಣಿಯಲ್ಲಿ ಮೆಹುಲ್ ಮಾನವ್ ಮತ್ತು ಸಾತ್ವಿಕ್ ಎಸ್.ಪ್ರಭು 21-19, 21-12 ರಿಂದ ಆರ್.ಗೌರವ್ ಮತ್ತು ಹಾರ್ದಿಕ್ ಮೊಹಂತಿ ವಿರುದ್ಧ ಗೆದ್ದರು.

**ಆಡ್ರಿಯನ್ ಸಾಧನೆ:** 15 ವರ್ಷದೊಳಗಿನವರ ಸಿಂಗಲ್ಸ್ ಫೈನಲ್‌ನಲ್ಲಿ ಮೂರನೇ ಶ್ರೇಯಾಂಕದ ಆಡ್ರಿಯನ್ 21-16, 21-14 ರಿಂದ ಈಶ್ವರ್ ಸಾಯಿ ಅವರನ್ನು ಪರಾಭವಗೊಳಿಸಿದರು.

ಮಿಶ್ರ ಡಬಲ್ಸ್‌ನ ಪ್ರಶಸ್ತಿ ಸುತ್ತಿನ ಹೋರಾಟದಲ್ಲಿ ಆಡ್ರಿಯನ್ ಮತ್ತು ಸುಪ್ರಿತಾ ದೀಪಕ್ 21-17, 21-13ರಿಂದ ಲಕ್ಷ್ ರಾಘು ಮತ್ತು ಅವನಿ ಕುಲಕರ್ಣಿ ವಿರುದ್ಧ ವಿಜಯಿಯಾದರು.

ಬಾಲಕರ ಡಬಲ್ಸ್ ಫೈನಲ್‌ನಲ್ಲಿ ಆರ್ಯನ್ ರಾಘವನ್ ಮತ್ತು ಚಿರಂತ್ ರಾಜ್ ಬಿ.ಆರ್ 21-12, 26-24 ರಿಂದ ಗೌತಮ್ ಎಸ್.ನಾಯರ್ ಮತ್ತು ಸಿದ್ಧಾರ್ಥ್ ಎಸ್.ನಾಯರ್ ಅವರನ್ನು ಸೋಲಿಸಿದರು.



ರಾಜ್ಯ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ವಿವಿಧ ವಿಭಾಗಗಳಲ್ಲಿ ಪ್ರಶಸ್ತಿ ಗೆದ್ದವರು ಟ್ರೋಫಿಯೊಂದಿಗೆ ಸಂಭ್ರಮಿಸಿದರು ಪ್ರಜಾವಾಣಿ ಚಿತ್ರ

**ಮಹಿತಾ ಚಾಂಪಿಯನ್**

15 ವರ್ಷದೊಳಗಿನ ಬಾಲಕಿಯರ ಸಿಂಗಲ್ಸ್ ವಿಭಾಗದಲ್ಲಿ ಬೆಂಗಳೂರು ಗ್ರಾಮಾಂತರದ ಮಹಿತಾ ನಾಯ್ಡು ಸೂರಿಶೆಟ್ಟಿ ಚಾಂಪಿಯನ್ ಆದರು.

ಫೈನಲ್‌ನಲ್ಲಿ ಮಹಿತಾ 22-20, 21-17 ರಿಂದ ಬೆಂಗಳೂರಿನ ಅದಿತಿ ಸುಶಾಂತ್ ಅವರನ್ನು ಪರಾಭವಗೊಳಿಸಿದರು.

ಬಾಲಕಿಯರ ಡಬಲ್ಸ್ ವಿಭಾಗದ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಎರಡನೇ ಶ್ರೇಯಾಂಕದ ಕೀರ್ತಿ ಬಾಲಾಜಿ ಮತ್ತು ಶ್ರಿಯಾ ಜೋಶಿ 21-13, 21-14 ರಿಂದ ಬೆಂಗಳೂರಿನ ಕಂಡಿಬಿಲ್ಲಾ ಶ್ರೇಯಾ ಮತ್ತು ಶ್ರೀನಾಗಲಕ್ಷ್ಮಿ ಅವರನ್ನು ಮಣಿಸಿದರು.

# ಸಾತ್ವಿಕ್– ಚಿರಾಗ್ ಜೋಡಿ ನಿರ್ಗಮನ

**ಒಡೆನ್ಸ್ (ಪಿಟಿಐ):** ಭಾರತದ ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿ, ಡೆನ್ಮಾರ್ಕ್ ಓಪನ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಿಯ ಸೆಮಿಫೈನಲ್‌ನಲ್ಲಿ ನಿರಾಸೆ ಅನುಭವಿಸಿದರು. ಜಪಾನ್‌ನ ತಕುರೊ ಹೊಯಿ– ಯುಗೊ ಕೊಬಯಾಶಿ ಜೋಡಿ ಮೂರು ಗೇಮ್‌ಗಳ ಸೆಣಸಾಟದಲ್ಲಿ ಗೆದ್ದು ಫೈನಲ್ ತಲುಪಿತು.

ಏಷ್ಯನ್ ಗೇಮ್ಸ್ ಚಾಂಪಿಯನ್ ಆಗಿರುವ ಜಪಾನ್‌ನ ಜೋಡಿ ಶನಿವಾರ ನಡೆದ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ 23–21, 18–21, 21–16 ರಿಂದ ಭಾರತದ ಜೋಡಿಯ ಮೇಲೆ 68 ನಿಮಿಷಗಳಲ್ಲಿ ಜಯಗಳಿಸಿತು. ಇದರಿಂದ ಟೂರ್ನಿಯಲ್ಲಿ ಭಾರತದ ಸವಾಲು ಅಂತ್ಯಗೊಂಡಿತು.

ಹಾಂಗ್‌ಕಾಂಗ್ ಸೂಪರ್ 500 ಟೂರ್ನಿ ಮತ್ತು ಚೀನಾ ಮಾಸ್ಟರ್ಸ್ ಸೂಪರ್ 750 ಟೂರ್ನಿಯಲ್ಲೂ ತಕುರೊ–ಕೊಬಯಾಶಿ ಜೋಡಿ ಫೈನಲ್ ತಲುಪಿತ್ತು.

# ಪ್ರಶಸ್ತಿ ಸುತ್ತಿಗೆ ತನ್ವಿ ಲಗ್ಗೆ

**ಗುವಾಹಟಿ (ಪಿಟಿಐ):** ಭಾರತದ ಉದಯೋನ್ಮುಖ ಆಟಗಾರ್ತಿ ತನ್ವಿ ಶರ್ಮಾ ಅವರು ಬಿಡಬ್ಲ್ಯುಎಫ್ ವಿಶ್ವ ಜೂನಿಯರ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಶನಿವಾರ ಪ್ರಶಸ್ತಿ ಸುತ್ತು ಪ್ರವೇಶಿಸಿದರು. ಅದರೊಂದಿಗೆ, ಟೂರ್ನಿಯ ಇತಿಹಾಸದಲ್ಲಿ ಫೈನಲ್ ತಲುಪಿದ ಭಾರತದ ಮೂರನೇ ಆಟಗಾರ್ತಿ ಎಂಬ ಗೌರವ ಅವರದಾಯಿತು.

ಅಗ್ರ ಶ್ರೇಯಾಂಕದ ತನ್ವಿ, ನಾಲ್ಕರ ಘಟ್ಟದ ಪಂದ್ಯದಲ್ಲಿ 15–11, 15–9ರಿಂದ ನೇರ ಗೇಮ್‌ಗಳಿಂದ ಚೀನಾದ ಲಿಯೊ ಸಿ ಯಾ ಅವರನ್ನು ಮಣಿಸಿದರು.

ಆರಂಭದಿಂದಲೇ ಆಕ್ರಮಣಕಾರಿಯಾಗಿ ಆಡಿದ ತನ್ವಿ ಮೊದಲ ಗೇಮ್ ಅನ್ನು 13 ನಿಮಿಷಗಳಲ್ಲಿ ಗೆದ್ದುಕೊಂಡರು. ಒಂದು ಹಂತದಲ್ಲಿ 7–3ರಿಂದ ಮುನ್ನಡೆಯಲ್ಲಿದ್ದ ತನ್ವಿಗೆ ಚೀನಾ ಆಟಗಾರ್ತಿ ಕೊಂಚ ಪ್ರತಿರೋಧ ತೋರಿದರು. ಹಿನ್ನಡೆಯನ್ನು 7–8ಕ್ಕೆ ಇಳಿಸಿಕೊಂಡರು. ಆದರೆ ತನ್ವಿ ಅವರು ಕ್ರಾಸ್ ಕೋರ್ಟ್ ಸ್ಲೈಸ್ ಹಿಟ್‌ಗಳ ಮೂಲಕ ಎದುರಾಳಿಯ ಸವಾಲನ್ನು ಮೆಟ್ಟಿನಿಂತರು. ಎರಡನೇ ಗೇಮ್‌ನಲ್ಲಿ ಎದುರಾಳಿ ಆಟಗಾರ್ತಿಗೆ ಲಯ ಕಂಡುಕೊಳ್ಳಲು ಅವಕಾಶವನ್ನೇ ನೀಡಲಿಲ್ಲ.



ಭಾರತದ ತನ್ವಿ ಶರ್ಮಾ ಪಿಟಿಐ ಚಿತ್ರ

ಫೈನಲ್‌ನಲ್ಲಿ ತನ್ವಿ ಅವರು ಎರಡನೇ ಶ್ರೇಯಾಂಕದ ಅನ್ಯಪತ್ ಫಿಚಿಟ್ ಪ್ರೀಚಸಕ್ (ಥಾಯ್ಲೆಂಡ್) ಅವರನ್ನು ಎದುರಿಸಲಿದ್ದಾರೆ. ಅನ್ಯಪತ್, ಸೆಮಿಫೈನಲ್‌ನಲ್ಲಿ ಸ್ವದೇಶದ ಯತವೀಮಿನ್ ಕೆತ್‌ಲಿಯೆಂಗ್ ಅವರನ್ನು 10–15, 15–11, 15–5ರಿಂದ ಸೋಲಿಸಿದರು.

ವಿಶ್ವದ ಮಾಜಿ ನಂ.1 ಆಟಗಾರ್ತಿ ಸೈನಾ ನೆಹ್ವಾಲ್ (2006 ಹಾಗೂ 2008) ಹಾಗೂ ಅಪರ್ಣಾ ಪೋಪಟ್ (1996) ಅವರು ಈ ಹಿಂದೆ ಈ ಟೂರ್ನಿಯಲ್ಲಿ ಫೈನಲ್ ತಲುಪಿದ್ದರು.

# ತ್ರಿಕೋನ ಸರಣಿ: ಹಿಂದೆ ಸರಿದ ಅಫ್ಗನ್

## ಪಾಕ್ ವೈಮಾನಿಕ ದಾಳಿಯಲ್ಲಿ ಮೂವರು ಕ್ರಿಕೆಟಿಗರ ಸಾವು

**ಲಾಹೋರ್ (ಪಿಟಿಐ):** ಪಾಕಿಸ್ತಾನ ನಡೆಸಿದ ವೈಮಾನಿಕ ದಾಳಿಯಲ್ಲಿ ತಮ್ಮ ದೇಶದ ಮೂವರು ಯುವ ಕ್ರಿಕೆಟಿಗರು ಸಾವಿಗೀಡಾದ ಬಳಿಕ ಅಫ್ಗಾನಿಸ್ತಾನ ಕ್ರಿಕೆಟ್ ಮಂಡಳಿಯು ನವೆಂಬರ್ 17ರಿಂದ ನಿಗದಿಯಾಗಿರುವ ತ್ರಿಕೋನ ಸರಣಿಯಿಂದ ಹಿಂದೆ ಸರಿದಿದೆ. ಪಾಕಿಸ್ತಾನದ ಆತಿಥ್ಯದಲ್ಲಿ ಸರಣಿ ನಡೆಯಬೇಕಿದೆ.

ಶ್ರೀಲಂಕಾ ಸೇರಿ ಮೂರು ರಾಷ್ಟ್ರಗಳನ್ನು ಒಳಗೊಂಡ ಟಿ20 ಸರಣಿ ನ.17ರಿಂದ 29ರವರೆಗೆ ಲಾಹೋರ್‌ನಲ್ಲಿ ನಿಗದಿಯಾಗಿದೆ. ಆದರೆ, ಅಫ್ಗಾನಿಸ್ತಾನ ಹಿಂದೆ ಸರಿದರೂ ಸರಣಿಯು ನಿಗದಿಯಂತೆ ನಡೆಯಲಿದೆ ಎಂದು ಪಾಕಿಸ್ತಾನ ಕ್ರಿಕೆಟ್ ಮಂಡಳಿ (ಪಿಸಿಬಿ) ಶನಿವಾರ ತಿಳಿಸಿದೆ.

ಅಫ್ಗಾನಿಸ್ತಾನಕ್ಕೆ ಬದಲಿಯಾಗಿ ಜಿಂಬಾಬ್ವೆ ತಂಡವು ತ್ರಿಕೋನ ಸರಣಿಯಲ್ಲಿ ಕಣಕ್ಕಿಳಿಯಲಿದೆ. ಸರಣಿಯು ನಿಗದಿತ ವೇಳಾಪಟ್ಟಿಯಂತೆಯೇ ನಡೆಯಲಿದೆ ಎಂದು ಪಿಸಿಬಿ ಪ್ರಕಟಣೆಯಲ್ಲಿ ತಿಳಿಸಿದೆ.

'ಅಫ್ಗಾನಿಸ್ತಾನಕ್ಕೆ ಪರ್ಯಾಯವಾಗಿ ತ್ರಿಕೋನ ಸರಣಿಯಲ್ಲಿ ಪಾಲ್ಗೊಳ್ಳಲು ಜಿಂಬಾಬ್ವೆ ಕ್ರಿಕೆಟ್ ಮಂಡಳಿಗೆ ಆಹ್ವಾನಿಸಲಾಗಿತ್ತು. ನಮ್ಮ ಆಹ್ವಾನಕ್ಕೆ ಜಿಂಬಾಬ್ವೆ ಒಪ್ಪಿಗೆ ಸೂಚಿಸಿದೆ' ಎಂದು ಹೇಳಿದೆ.

ಗಡಿಭಾಗದ ಪಕ್ತಿಕಾ ಪ್ರಾಂತ್ಯದಲ್ಲಿ ಪಾಕಿಸ್ತಾನ ನಡೆಸಿದ ವೈಮಾನಿಕ ದಾಳಿಯಲ್ಲಿ ಅಫ್ಗಾನಿಸ್ತಾನದ ಮೂವರು ಸ್ಥಳೀಯ ಕ್ರಿಕೆಟಿಗರಾದ ಕಬೀರ್ ಆಘಾ, ಸಿಬ್ಗತ್‌ಉಲ್ಲಾ ಮತ್ತು ಹರೂನ್ ಸಾವಿಗೀಡಾಗಿದ್ದರು. ಆಡಿದ ನಂತರ ಅವರು ಊರಿಗೆ ಮರಳುವಾಗ ದಾಳಿಗೆ ಸಿಲುಕಿದ್ದರು. ಇದಾದ ಬಳಿಕ ಅಲ್ಲಿನ ಕ್ರಿಕೆಟ್ ಮಂಡಳಿಯು ತ್ರಿಕೋನ ಸರಣಿಗೆ ತನ್ನ ತಂಡವನ್ನು ಪಾಕಿಸ್ತಾನಕ್ಕೆ ಕಳುಹಿಸುವುದಿಲ್ಲ ಎಂದು ಹೇಳಿದೆ. ಈ ದಾಳಿಯನ್ನು ಹೇಡಿತನದ ಕೃತ್ಯ ಎಂದು ಆಕ್ರೋಶ ವ್ಯಕ್ತಪಡಿಸಿದೆ.

**ಐಸಿಸಿ, ಬಿಸಿಸಿಐ ಖಂಡನೆ**

ಅಫ್ಗಾನಿಸ್ತಾನದ ಮೂವರು ಪ್ರತಿಭಾನ್ವಿತ ಕ್ರಿಕೆಟಿಗರ ಸಾವಿಗೆ ಕಾರಣವಾದ ವೈಮಾನಿಕ ದಾಳಿಯನ್ನು ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ (ಐಸಿಸಿ) ಮತ್ತು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ತೀವ್ರವಾಗಿ ಖಂಡಿಸಿದೆ. ಈ ವಿಚಾರದಲ್ಲಿ ಅಫ್ಗಾನಿಸ್ತಾನ ಕ್ರಿಕೆಟ್ ಮಂಡಳಿಯೊಂದಿಗೆ ಒಗ್ಗಟ್ಟಿನಿಂದ ನಿಲ್ಲುತ್ತದೆ ಎಂದು ಅವು ಹೇಳಿವೆ.

ತ್ರಿಕೋನ ಸರಣಿಯಿಂದ ಹಿಂದೆಸರಿಯುವ ಅಫ್ಗಾನಿಸ್ತಾನ ಮಂಡಳಿಯ ನಿರ್ಧಾರವನ್ನು ಸ್ವಾಗತಿಸುವುದಾಗಿ ಹಿರಿಯ ಆಟಗಾರ ರಶೀದ್ ಖಾನ್ ಹೇಳಿದ್ದಾರೆ.

### ಆಪರೇಷನ್ ಸಿಂಧೂರ 'ಟ್ರೇಲರ್' ಆಗಿತ್ತು: ರಕ್ಷಣಾ ಸಚಿವ ರಾಜನಾಥ ಸಿಂಗ್

# 'ಬ್ರಹ್ಮೋಸ್‌ನಿಂದ ಪಾಕ್ ತಪ್ಪಿಸಿಕೊಳ್ಳಲಾಗದು'

**ಲಖನೌ (ಪಿಟಿಐ):** 'ಭಾರತದ ಬ್ರಹ್ಮೋಸ್ ಕ್ಷಿಪಣಿ ಪಾಕಿಸ್ತಾನದ ಮೂಲೆಮೂಲೆಯನ್ನೂ ತಲುಪುವ ಸಾಮರ್ಥ್ಯ ಹೊಂದಿದೆ. ಅದರಿಂದ ತಪ್ಪಿಸಿಕೊಳ್ಳಲು ಅವರಿಗೆ ಸಾಧ್ಯವೇ ಇಲ್ಲ' ಎಂದು ರಕ್ಷಣಾ ಸಚಿವ ರಾಜನಾಥ ಸಿಂಗ್ ಶನಿವಾರ ಹೇಳಿದರು.

'ಭಾರತದ ಸೇನೆ ಈಚೆಗೆ ನಡೆಸಿದ ಸಿಂಧೂರ ಕಾರ್ಯಾಚರಣೆಯು 'ಟ್ರೇಲರ್' ಆಗಿತ್ತು. ಗೆಲುವು ಸಾಧಿಸುವುದು ಭಾರತಕ್ಕೆ ಅಭ್ಯಾಸವಾಗಿಬಿಟ್ಟಿದೆ ಎಂಬುದನ್ನು ಈ ಕಾರ್ಯಾಚರಣೆ ಸಾಬೀತುಪಡಿಸಿದೆ' ಎನ್ನುವ ಮೂಲಕ ಅವರು ನೆರೆಯ ಪಾಕಿಸ್ತಾನಕ್ಕೆ ಎಚ್ಚರಿಕೆ ನೀಡಿದರು.

ರಾಜನಾಥ ಸಿಂಗ್ ಅವರು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರೊಂದಿಗೆ ಇಲ್ಲಿನ ಸರೋಜಿನಿ ನಗರದ ಬ್ರಹ್ಮೋಸ್ ಏರೋಸ್ಪೇಸ್ ಘಟಕದಲ್ಲಿ ತಯಾರಿಸಲಾದ ಬ್ರಹ್ಮೋಸ್ ಕ್ಷಿಪಣಿಗಳ ಮೊದಲ ಬ್ಯಾಚ್‌ಅನ್ನು ಉದ್ಘಾಟಿಸಿದರು.

'ಪಾಕಿಸ್ತಾನದ ಇಂಚಿಂಚೂ ನೆಲವನ್ನೂ ತಲುಪುವ ಸಾಮರ್ಥ್ಯವನ್ನು ಬ್ರಹ್ಮೋಸ್ ಹೊಂದಿದೆ. ಪಾಕಿಸ್ತಾನ ಎಂಬ ದೇಶವನ್ನು ಸೃಷ್ಟಿಸಲು ಭಾರತಕ್ಕೆ ಸಾಧ್ಯವಾದರೆ, ಸಮಯ ಬಂದಾಗ ಆ ದೇಶವನ್ನು...' ಎನ್ನುತ್ತಾ ಮಾತು ಅರ್ಧಕ್ಕೆ ನಿಲ್ಲಿಸಿದರು. ಆ ಬಳಿಕ ಮುಂದುವರಿಸಿ, 'ಆ ಬಗ್ಗೆ ನಾನು ಹೆಚ್ಚು ಹೇಳಬೇಕಾಗಿಲ್ಲ. ನೀವೆಲ್ಲರೂ ಸಾಕಷ್ಟು ಬುದ್ಧಿವಂತರಿದ್ದೀರಿ' ಎಂದು ಹೇಳಿದರು.

ಆಪರೇಷನ್ ಸಿಂಧೂರದ ಯಶಸ್ಸನ್ನು ಶ್ಲಾಘಿಸಿದ ಸಿಂಗ್, 'ಈ ಕಾರ್ಯಾಚರಣೆಯು ಭಾರತೀಯರಲ್ಲಿ ಹೊಸ ವಿಶ್ವಾಸವನ್ನು ತುಂಬಿದೆ ಮತ್ತು ಬ್ರಹ್ಮೋಸ್‌ನ ಶಕ್ತಿಯನ್ನು ಜಗತ್ತಿನ ಮುಂದೆ ಸಾಬೀತುಪಡಿಸಿದೆ' ಎಂದರು.

'ಅದೇ ವಿಶ್ವಾಸವನ್ನು ಕಾಪಾಡಿಕೊಳ್ಳುವುದು ನಮ್ಮ ಸಾಮೂಹಿಕ ಜವಾಬ್ದಾರಿಯಾಗಿದೆ. ಇಡೀ ಜಗತ್ತು ಈಗ ಭಾರತದ ಸೇನೆಯ ಸಾಮರ್ಥ್ಯವನ್ನು ಗುರುತಿಸುತ್ತದೆ. ಭಾರತವು ತನ್ನ ಕನಸುಗಳನ್ನು ನನಸಾಗಿಸಬಹುದು ಎಂಬ ನಮ್ಮ ನಂಬಿಕೆಗೆ ಬ್ರಹ್ಮೋಸ್ ಬಲ ನೀಡಿದೆ' ಎಂದು ಹೇಳಿದರು.

ಪಹಲ್ಗಾಮ್ ದಾಳಿಗೆ ಪ್ರತಿಯಾಗಿ ಪಾಕಿಸ್ತಾನದ ಭಯೋತ್ಪಾದಕ ಮೂಲಸೌಕರ್ಯಗಳನ್ನು ಗುರಿಯಾಗಿಸಿ ಭಾರತದ ಸೇನೆ ಸಿಂಧೂರ ಕಾರ್ಯಾಚರಣೆ ನಡೆಸಿತ್ತು. ಪಾಕಿಸ್ತಾನದ ಗುರಿಗಳನ್ನು ಧ್ವಂಸಗೊಳಿಸಲು ಸ್ವದೇಶಿ ನಿರ್ಮಿತ ಬ್ರಹ್ಮೋಸ್ ಸೂಪರ್‌ಸಾನಿಕ್ ಕ್ಷಿಪಣಿಗಳನ್ನು ಬಳಸಲಾಗಿತ್ತು.

'ಬ್ರಹ್ಮೋಸ್ ಕ್ಷಿಪಣಿಗಳ ಯಶಸ್ವಿ ತಯಾರಿಕೆಯು ಒಂದು ಕಾಲದಲ್ಲಿ ಕನಸು ಎಂದು ಭಾವಿಸಿದ್ದು ಈಗ ನನಸಾಗಿದೆ ಎಂಬುದನ್ನು ತೋರಿಸುತ್ತದೆ. ಈ ಯೋಜನೆಯು ತಾಳ್ಮೆ, ಕಠಿಣ ಪರಿಶ್ರಮ ಮತ್ತು ಬದ್ಧತೆಯನ್ನು ಪ್ರತಿನಿಧಿಸುತ್ತದೆ' ಎಂದು ಹೇಳಿದರು.

ಮುಖ್ಯಮಂತ್ರಿ ಆದಿತ್ಯನಾಥ ಅವರು, 'ಇದು ಉತ್ತರ ಪ್ರದೇಶಕ್ಕೆ ಹೆಮ್ಮೆಯ ಕ್ಷಣವಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರ ಮೇಕ್ ಇನ್ ಇಂಡಿಯಾ ಪರಿಕಲ್ಪನೆಯು ಈ ಸಾಧನೆಯ ಹಿಂದಿದೆ' ಎಂದರು.



ಬ್ರಹ್ಮೋಸ್ ಕ್ಷಿಪಣಿಗಳ ಮೊದಲ ಬ್ಯಾಚ್‌ನ ಉದ್ಘಾಟನಾ ಸಮಾರಂಭದಲ್ಲಿ ರಾಜನಾಥ ಸಿಂಗ್, ಯೋಗಿ ಆದಿತ್ಯನಾಥ ಪಾಲ್ಗೊಂಡರು ಪಿಟಿಐ ಚಿತ್ರ

> ಬ್ರಹ್ಮೋಸ್ ಕೇವಲ ಕ್ಷಿಪಣಿಯಲ್ಲ. ಇದು ಭಾರತದ ಹೆಚ್ಚುತ್ತಿರುವ ಶಕ್ತಿಯ ಸಂಕೇತ. ಭೂಸೇನೆ, ನೌಕಾಪಡೆ ಮತ್ತು ವಾಯುಪಡೆಯ ಪ್ರಮುಖ ಆಧಾರಸ್ತಂಭವಾಗಿದೆ
> **ರಾಜನಾಥ ಸಿಂಗ್**, ರಕ್ಷಣಾ ಸಚಿವ

**ಪರಮಾಣು ಜಗತ್ತಿನಲ್ಲಿ ಯುದ್ಧಕ್ಕೆ ಜಾಗ ಇಲ್ಲ: ಆಸಿಮ್ ಮುನೀರ್**

**ಇಸ್ಲಾಮಾಬಾದ್ (ಪಿಟಿಐ):** 'ಪರಮಾಣು ಜಗತ್ತಿನಲ್ಲಿ ಯುದ್ಧಕ್ಕೆ ಜಾಗ ಇಲ್ಲ ಎಂದು ಭಾರತದ ಸೇನಾ ನಾಯಕತ್ವಕ್ಕೆ ಸಲಹೆ ಮತ್ತು ಎಚ್ಚರಿಕೆ ನೀಡುತ್ತೇನೆ' ಎಂದು ಪಾಕಿಸ್ತಾನದ ಸೇನಾ ಮುಖ್ಯಸ್ಥ ಫೀಲ್ಡ್ ಮಾರ್ಷಲ್ ಸೈಯದ್ ಆಸಿಮ್ ಮುನೀರ್ ಶನಿವಾರ ಹೇಳಿದರು.

ಖೈಬರ್ ಪಖ್ತುಂಖ್ವಾದಲ್ಲಿ ನಡೆದ ಪಾಕಿಸ್ತಾನ ಮಿಲಿಟರಿ ಅಕಾಡೆಮಿಯ ಆರ್ಮಿ ಕೆಡೆಟ್‌ಗಳ ಪದವಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, 'ನಾವು ಎಂದಿಗೂ ಹೆದರಲ್ಲ, ಪ್ರಚೋದಿಸುವುದಿಲ್ಲ. ಆದರೆ ಸಣ್ಣ ಪ್ರಚೋದನೆಗೂ ಅಂಜಿಕೆ ಇಲ್ಲದೆ ಪ್ರತಿಕ್ರಿಯಿಸುತ್ತೇವೆ' ಎಂದರು.

ಭಾರತ–ಪಾಕಿಸ್ತಾನ ನಡುವಣ ಇತ್ತೀಚೆಗೆ ನಡೆದ ಸೇನಾ ಸಂಘರ್ಷವನ್ನು ಉಲ್ಲೇಖಿಸಿ, 'ದೇಶದ ಸಶಸ್ತ್ರ ಪಡೆಗಳು ಎಲ್ಲ ಬೆದರಿಕೆಗಳನ್ನು ತಟಸ್ಥಗೊಳಿಸುವ ಮೂಲಕ ಗಮನಾರ್ಹ ವೃತ್ತಿಪರತೆ ಮತ್ತು ದೂರಗಾಮಿ ಸಾಮರ್ಥ್ಯವನ್ನು ಪ್ರದರ್ಶಿಸಿವೆ. ಸೇನಾಬಲದಲ್ಲಿ ಬಲಿಷ್ಠವಾಗಿ ಇರುವ ದೇಶವನ್ನು ಮಣಿಸಿವೆ' ಎಂದು ಹೇಳಿದರು.

'ಪಾಕಿಸ್ತಾನವನ್ನು ಮಣಿಸಲು ಭಾರತವು ಭಯೋತ್ಪಾದಕರನ್ನು ಅಸ್ತ್ರವಾಗಿ ಬಳಸಿತ್ತು' ಎಂದು ಆರೋಪಿಸಿ, ಭಯೋತ್ಪಾದಕರಿಂದ ಪಾಕಿಸ್ತಾನವನ್ನು ಏನೂ ಮಾಡಲು ಸಾಧ್ಯವಿಲ್ಲ ಎಂದು ಹೇಳಿದರು.

# ದೆಹಲಿ: ವಸತಿ ಸಮುಚ್ಚಯದಲ್ಲಿ ಬೆಂಕಿ ಅವಘಡ

**ನವದೆಹಲಿ (ಪಿಟಿಐ):** ಹಲವು ಲೋಕಸಭಾ, ರಾಜ್ಯಸಭಾ ಸಂಸದರು ವಾಸವಿರುವ, ನವದೆಹಲಿಯ ಬ್ರಹ್ಮಪುತ್ರ ವಸತಿ ಸಮುಚ್ಚಯದಲ್ಲಿ ಶನಿವಾರ ಮಧ್ಯಾಹ್ನ ಭಾರಿ ಬೆಂಕಿ ಅವಘಡ ಸಂಭವಿಸಿದೆ.

'ರಾಮ್ ಮನೋಹರ್ ಲೋಹಿಯಾ ಆಸ್ಪತ್ರೆ ಮುಂಭಾಗದಲ್ಲಿರುವ ಕಟ್ಟಡದಲ್ಲಿ ಸಂಭವಿಸಿದ ದುರಂತದಲ್ಲಿ ಯಾರೂ ಮೃತಪಟ್ಟಿಲ್ಲ' ಎಂದು ದೆಹಲಿಯ ಅಗ್ನಿಶಾಮಕ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

'ಕೆಲವು ಮಕ್ಕಳು ಗಾಯಗೊಂಡಿದ್ದು, ಆರ್‌ಎಂಎಲ್ ಆಸ್ಪತ್ರೆಗೆ ದಾಖಲಿಸಲಾಗಿದೆ' ಎಂದು ಸ್ಥಳೀಯ ನಿವಾಸಿಗಳು ತಿಳಿಸಿದ್ದಾರೆ.

'ಕೆಲವರು ಪಟಾಕಿ ಸಿಡಿಸಿದ್ದರಿಂದ ಕೆಳಭಾಗದಲ್ಲಿ ಸೋಫಾಕ್ಕೆ ಬೆಂಕಿ ಹತ್ತಿಕೊಂಡಿತ್ತು. ಕ್ಷಣಾರ್ಧದಲ್ಲಿ ಇಡೀ ಕಟ್ಟಡಕ್ಕೆ ಬೆಂಕಿ ವ್ಯಾಪಿಸಿತು' ಎಂದು ಸ್ಥಳೀಯರು ತಿಳಿಸಿದ್ದಾರೆ.

'ಕಟ್ಟಡದ ನೆಲಮಹಡಿಯಲ್ಲಿದ್ದ (ಸೆಲ್ಲಾರ್) ಸೋಫಾಕ್ಕೆ ಬೆಂಕಿ ಹತ್ತಿಕೊಂಡಿತ್ತು. ಹೊಗೆ ಮೇಲ್ಭಾಗಕ್ಕೆ ಆವರಿಸಿದ್ದರಿಂದ, ಮೇಲಿನ ಮಹಡಿಗಳಲ್ಲಿಯೂ ಹಾನಿ ಸಂಭವಿಸಿತು' ಎಂದು ದೆಹಲಿ ಅಗ್ನಿಶಾಮಕ ಇಲಾಖೆಯ ಅಧಿಕಾರಿ ಭೂಪೇಂದ್ರ ಪ್ರಕಾಶ್ ತಿಳಿಸಿದ್ದಾರೆ.

'ಬೆಂಕಿಗೆ ಕಾರಣವೇನು ಎಂಬುದರ ಕುರಿತು ತನಿಖೆ ನಡೆಸಲಾಗುತ್ತಿದೆ' ಎಂದು ಹೇಳಿದ್ದಾರೆ,

# ಮಹಿಳಾ ತಂಡಕ್ಕೆ ನಿರ್ಣಾಯಕ ಪಂದ್ಯ

## ಭಾರತ ವನಿತೆಯರಿಗೆ ಇಂದೋರ್‌ನಲ್ಲಿ ಇಂದು ಇಂಗ್ಲೆಂಡ್ ಸವಾಲು
## • ತಂಡದ ಸಂಯೋಜನೆಯಲ್ಲಿ ಬದಲಾವಣೆ ಸಾಧ್ಯತೆ

**ಇಂದೋರ್ (ಪಿಟಿಐ):** ಸತತ ಎರಡು ಸೋಲುಗಳಿಂದ ಕಂಗಾಲಾಗಿರುವ ಭಾರತ ಮಹಿಳಾ ತಂಡ ಈಗ ತನ್ನ ಅಭಿಯಾನವನ್ನು ಸರಿದಾರಿಗೆ ತರುವ ಒತ್ತಡದಲ್ಲಿದೆ. ಭಾನುವಾರ ಇಂಗ್ಲೆಂಡ್ ವಿರುದ್ಧ ಹೋಳ್ಕರ್ ಕ್ರೀಡಾಂಗಣದಲ್ಲಿ ನಡೆಯಲಿರುವ ಮಹಿಳಾ ಏಕದಿನ ವಿಶ್ವಕಪ್‌ನ ಪಂದ್ಯ ಹರ್ಮನ್‌ಪ್ರೀತ್ ಕೌರ್ ಪಡೆಗೆ ನಿರ್ಣಾಯಕವಾಗಿದೆ.

ವಿಶಾಖಪಟ್ಟಣದಲ್ಲಿ ಆತಿಥೇಯ ತಂಡವು ದಕ್ಷಿಣ ಆಫ್ರಿಕಾ ಮತ್ತು ಆಸ್ಟ್ರೇಲಿಯಾ ಎದುರು ಮೂರು ವಿಕೆಟ್‌ಗಳ ಸೋಲನುಭವಿಸಿತ್ತು. ಈ ಹಿನ್ನಡೆಯು ತಂಡದ ತಂತ್ರಗಾರಿಕೆಯ ಮೇಲೆ ಪ್ರಶ್ನೆ ಏಳುವಂತೆ ಮಾಡಿದೆ. ಹಾಲಿ ವಿಶ್ವಕಪ್‌ನ ಈವರೆಗಿನ ಪಂದ್ಯಗಳಲ್ಲಿ ಐವರು ಬ್ಯಾಟರ್‌ಗಳು, ಐವರು ಬೌಲರ್, ಒಬ್ಬರು ಕೀಪರ್ ಸಂಯೋಜನೆ ರೂಪಿಸಿ ಆಡುತ್ತಿರುವುದು ತಂಡದ 'ಟೆಂಪ್ಲೆಟ್' ಆಗಿದೆ. ಬೌಲರ್‌ಗಳಲ್ಲಿ ಮೂವರು ಆಲ್ ರೌಂಡರ್ ಪಾತ್ರವಹಿಸುತ್ತಿದ್ದಾರೆ.



ತಾಲೀಮು ನಡೆಸುತ್ತಿರುವ ಸ್ಮೃತಿ ಮಂದಾನ (ಎಡ), ರಿಚಾ ಘೋಷ್ ಪಿಟಿಐ ಚಿತ್ರ

ಆದರೆ ಇದು ತಂಡದ ಇತಿಮಿತಿಗಳನ್ನು ಬಯಲುಗೊಳಿಸಿದೆ. ಸೆಮಿಫೈನಲ್ ರೇಸ್‌ನಲ್ಲಿ ಇರಬೇಕಾದರೆ ಉಳಿದಿರುವ ಮೂರು ಪಂದ್ಯಗಳಲ್ಲಿ ಕನಿಷ್ಠ ಎರಡನ್ನು ಗೆಲ್ಲಲೇಬೇಕಾದ ಅನಿವಾರ್ಯತೆ ಇದೆ. ಪರಿಣತ ಬೌಲರ್ ಇಲ್ಲದಿರುವುದು ತಂಡಕ್ಕೆ ದುಬಾರಿ ಆಗಿದೆ. ದಕ್ಷಿಣ ಆಫ್ರಿಕಾ, ಆಸ್ಟ್ರೇಲಿಯಾ ತಂಡಗಳು, 251 ಮತ್ತು 330 ರನ್‌ಗಳನ್ನು ಚೇಸ್ ಮಾಡಿರುವುದು ಆತಿಥೇಯರ ಸೀಮಿತ ಬೌಲಿಂಗ್ ಶಕ್ತಿಗೆ ಕನ್ನಡಿಯಾಗಿದೆ.

ಐಸಿಸಿ
ಮಹಿಳಾ ಏಕದಿನ ವಿಶ್ವಕಪ್

ಆಲ್‌ರೌಂಡರ್‌ಗಳ ಮೂಲಕ ಬ್ಯಾಟಿಂಗ್ ವಿಭಾಗ ಬಲಪಡಿಸಲು ಅಮನ್ಜೋತ್ ಅವರಿಗೆ ಮಣೆಹಾಕಿದ್ದು, ರೇಣುಕಾ ಸಿಂಗ್ ಬೆಂಚ್ ಕಾಯಬೇಕಿದೆ. ವೇಗದ ವಿಭಾಗದಲ್ಲಿ ಕ್ರಾಂತಿ ಗೌಡ್ ಮಾತ್ರ ಪರಿಣಾಮಕಾರಿ ಎನಿಸಿದ್ದಾರೆ.

ತಂಡಕ್ಕೆ ಇನ್ನೊಂದು ಚಿಂತೆ ಎಂದರೆ ಅಗ್ರ ಸರದಿಯ ಬ್ಯಾಟರ್‌ಗಳು ಲಯದಲ್ಲಿ ಇಲ್ಲದಿರುವುದು. ಸ್ಮೃತಿ ಮಂದಾನ, ಪ್ರತಿಕಾ ರಾವಲ್ ಸರಾಗವಾಗಿ ಆಡಿಲ್ಲ. ಆಸ್ಟ್ರೇಲಿಯಾ ವಿರುದ್ಧ ಮಾತ್ರ ಇಬ್ಬರೂ ಅರ್ಧಶತಕಗಳನ್ನು ಗಳಿಸಿದ್ದರು. ಆದರೆ ನಾಯಕಿ ಹರ್ಮನ್‌ಪ್ರೀತ್ ಕೌರ್ ಮತ್ತು ಜೆಮಿಮಾ ರಾಡ್ರಿಗಸ್ ಅವರಿಂದ ಗಮನಾರ್ಹ ಕೊಡುಗೆ ಬಂದಿಲ್ಲ.

ಹೋಳ್ಕರ್ ಕ್ರೀಡಾಂಗಣ ಸಾಂಪ್ರದಾಯಿಕವಾಗಿ ಬ್ಯಾಟರ್ ಸ್ನೇಹಿ ಎನಿಸಿದೆ. ಇಲ್ಲಿನ ಪಂದ್ಯಗಳು ದೊಡ್ಡ ಮೊತ್ತಗಳನ್ನು ಕಂಡಿವೆ.

ಭಾರತದ ಕಥೆ ಈ ರೀತಿಯಾದರೆ, ನಾಲ್ಕು ಬಾರಿಯ ಚಾಂಪಿಯನ್ ಇಂಗ್ಲೆಂಡ್ ಉತ್ತಮ ಸ್ಥಿತಿಯಲ್ಲಿದೆ. ಆಸ್ಟ್ರೇಲಿಯಾ ಬಿಟ್ಟರೆ, ಅಜೇಯವಾಗಿ ಉಳಿದ ಇನ್ನೊಂದು ತಂಡ ಇಂಗ್ಲೆಂಡ್. ವೈಯಕ್ತಿಕ ಆಟಗಳಿಂದ ಪಂದ್ಯ ಗೆಲ್ಲಿಸಬಲ್ಲ ಸಮರ್ಥ ಆಟಗಾರ್ತಿಯರು ತಂಡದಲ್ಲಿದ್ದಾರೆ. ತಂಡದ ಬ್ಯಾಟರ್‌ಗಳು ಪಾಕಿಸ್ತಾನ ಎದುರು ಇಕ್ಕಟ್ಟಿಗೆ ಸಿಲುಕಿದ್ದರೂ ಮಳೆ ರಕ್ಷಿಸಿತ್ತು. ಬಾಂಗ್ಲಾದೇಶ ವಿರುದ್ಧವೂ ತಂಡದ ಬ್ಯಾಟಿಂಗ್ ಕೈಕೊಟ್ಟಿತ್ತು. ಆದರೆ ಬೌಲಿಂಗ್ ವಿಭಾಗ ಪ್ರಬಲವಾಗಿದೆ. ಇನ್ನೊಂದು ಪಂದ್ಯ ಗೆದ್ದರೆ, ನಾಟ್ ಶಿವರ್ ಬ್ರಂಟ್ ಬಳಗದ ಸೆಮಿಫೈನಲ್ ಹಾದಿ ಸುಗಮವಾಗಲಿದೆ.

**ಪಂದ್ಯ ಆರಂಭ: ಮಧ್ಯಾಹ್ನ 3.00**
**ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್**

## ಕಿವೀಸ್–ಪಾಕ್ ಪಂದ್ಯ ಮಳೆಪಾಲು

**ಕೊಲಂಬೊ (ಪಿಟಿಐ):** ಎಡೆಬಿಡದೇ ಬಂದ ಮಳೆಯಿಂದಾಗಿ ನ್ಯೂಜಿಲೆಂಡ್ ಮತ್ತು ಶ್ರೀಲಂಕಾ ನಡುವಣ ಮಹಿಳಾ ಏಕದಿನ ವಿಶ್ವಕಪ್ ಪಂದ್ಯವನ್ನು ಶನಿವಾರ ಸ್ಥಗಿತಗೊಳಿಸಲಾಯಿತು. ಈ ಫಲಿತಾಂಶದ ಪರಿಣಾಮ ದಕ್ಷಿಣ ಆಫ್ರಿಕಾದ ಸೆಮಿಫೈನಲ್ ಪ್ರವೇಶ ಖಚಿತಗೊಂಡಿತು.

ತಲಾ 36 ಓವರುಗಳ ಪಂದ್ಯ ಆಡಿಸಲು ನಿರ್ಧರಿಸಲಾದರೂ 25 ಓವರುಗಳ ಆಟವಷ್ಟೇ ಸಾಧ್ಯವಾಯಿತು. ನಂತರ ಮಳೆ ಅವಕಾಶ ನೀಡಲಿಲ್ಲ. ಬ್ಯಾಟಿಂಗ್‌ಗೆ ಕಳುಹಿಸಲ್ಪಟ್ಟ ಪಾಕಿಸ್ತಾನ ಈ ವೇಳೆ 5 ವಿಕೆಟ್‌ಗೆ 92 ರನ್ ಗಳಿಸಿತ್ತು.

ಆರ್.ಪ್ರೇಮದಾಸ ಕ್ರೀಡಾಂಗಣದಲ್ಲಿ ಇದು ಫಲಿತಾಂಶವಿಲ್ಲದೇ ಕೊನೆಗೊಂಡ ನಾಲ್ಕನೇ ಪಂದ್ಯವಾಗಿದೆ. ಇದಕ್ಕೆ ಮೊದಲು ಲಂಕಾ– ಆಸ್ಟ್ರೇಲಿಯಾ, ಲಂಕಾ– ನ್ಯೂಜಿಲೆಂಡ್, ಇಂಗ್ಲೆಂಡ್– ಪಾಕಿಸ್ತಾನ ಪಂದ್ಯಕ್ಕೆ ಮಳೆ ಕಾಡಿತ್ತು.

ಇದರ ಪರಿಣಾಮ ದಕ್ಷಿಣ ಆಫ್ರಿಕಾ (5 ಪಂದ್ಯಗಳಿಂದ 8 ಪಾಯಿಂಟ್ಸ್) ಸೆಮಿಫೈನಲ್ ಪ್ರವೇಶಿಸಿದ ಎರಡನೇ ತಂಡವೆನಿಸಿತು. ಆಸ್ಟ್ರೇಲಿಯಾ (5 ಪಂದ್ಯಗಳಿಂದ 9) ಈ ಮೊದಲೇ ಸೆಮಿಫೈನಲ್ ತಲುಪಿತ್ತು. ನ್ಯೂಜಿಲೆಂಡ್ (5 ಪಂದ್ಯಗಳಿಂದ 4) ಐದನೇ ಸದ್ಯ ಐದನೇ ಸ್ಥಾನದಲ್ಲಿದೆ ಹಾಗೂ ಪಾಕಿಸ್ತಾನ (5 ಪಂದ್ಯಗಳಿಂದ 2) ಕೊನೆಯ ಸ್ಥಾನದಲ್ಲಿದೆ.

ಭಾರತ ತಂಡವು (4 ಪಂದ್ಯಗಳಿಂದ 4 ಪಾಯಿಂಟ್ಸ್) ನಾಲ್ಕನೇ ಸ್ಥಾನದಲ್ಲಿದೆ.

# ಮಹಿಳಾ ಕ್ರಿಕೆಟ್: ಕಿರಣ್ ನವಗಿರೆ ವೇಗದ ಶತಕ



**ನಾಗ್ಪುರ (ಪಿಟಿಐ):** ಮಹಾರಾಷ್ಟ್ರ ತಂಡದ ಆರಂಭ ಆಟಗಾರ್ತಿ ಕಿರಣ್ ನವಗಿರೆ ಅವರು 34 ಎಸೆತಗಳಲ್ಲಿ ಶತಕ ಸಿಡಿಸುವ ಮೂಲಕ ಮಹಿಳಾ ಟಿ20 ಕ್ರಿಕೆಟ್‌ನಲ್ಲಿ ಅತ್ಯಂತ ವೇಗದ ಶತಕದ ದಾಖಲೆ ನಿರ್ಮಿಸಿದರು.

26 ವರ್ಷದ ನವಗಿರೆ ಅವರು ಬಿಸಿಸಿಐ ಮಹಿಳಾ ಟಿ20 ಟ್ರೋಫಿ ಟೂರ್ನಿಯಲ್ಲಿ ಪಂಜಾಬ್ ವಿರುದ್ಧದ ಪಂದ್ಯದಲ್ಲಿ ಈ ಸಾಧನೆ ಮಾಡಿದರು. ಈ ಪಂದ್ಯವನ್ನು ಮಹಾರಾಷ್ಟ್ರ ಒಂಬತ್ತು ವಿಕೆಟ್‌ಗಳಿಂದ ಸುಲಭವಾಗಿ ಗೆದ್ದುಕೊಂಡಿತು.

ನಾಗ್ಪುರದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಪಂಜಾಬ್ 20 ಓವರ್‌ಗಳಲ್ಲಿ 6 ವಿಕೆಟ್‌ಗೆ 110 ರನ್ ಗಳಿಸಿತ್ತು. ಈ ಗುರಿಯನ್ನು ಬೆನ್ನಟ್ಟಿದ ಮಹಾರಾಷ್ಟ್ರ ತಂಡವು ನವಗಿರೆ ಅವರ ಅಬ್ಬರದ ಬ್ಯಾಟಿಂಗ್ ಬಲದಿಂದ ಕೇವಲ 8 ಓವರ್‌ಗಳಲ್ಲಿ ಒಂದು ವಿಕೆಟ್‌ಗೆ 113 ರನ್ ಗಳಿಸಿ ಗೆಲುವು ಸಾಧಿಸಿತು. ಅದರಲ್ಲಿ ನವಗಿರೆ (ಅಜೇಯ 106) ಸಿಂಹಪಾಲು ರನ್ ಗಳಿಸಿದರು. ಅವರೊಂದಿಗೆ ಇನಿಂಗ್ಸ್ ಆರಂಭಿಸಿದ ಈಶ್ವರಿ ಸವ್ಕಾರ್ 1 ರನ್ ಗಳಿಸಿ ಔಟಾದರೆ, ಎಂ.ಆರ್. ಮಾಗ್ರೆ 6 ರನ್ ಗಳಿಸಿದರು.

ಮಹಿಳಾ ಟಿ20 ಕ್ರಿಕೆಟ್‌ನಲ್ಲಿ ಈವರೆಗೆ ಅತಿ ವೇಗದ ಶತಕದ ದಾಖಲೆ ನ್ಯೂಜಿಲೆಂಡ್‌ನ ಸೋಫಿ ಡಿವೈನ್ ಅವರ ಹೆಸರಲ್ಲಿತ್ತು. 2020–21ರ ನ್ಯೂಜಿಲೆಂಡ್ ಮಹಿಳಾ ಟಿ20 ಟೂರ್ನಿಯಲ್ಲಿ ವೆಲ್ಲಿಂಗ್ಟನ್ ತಂಡದ ಪರ ಆಡಿದ್ದ ಸೋಫಿ ಅವರು ಒಟಾಗೊ ವಿರುದ್ಧ 36 ಎಸೆತಗಳಲ್ಲಿ ಮೂರಂಕಿ ದಾಟಿದ್ದರು.



# ಆರ್ಚರಿ: ಜ್ಯೋತಿಗೆ ಚಾರಿತ್ರಿಕ ಕಂಚು



**ನಾನ್‌ಜಿಂಗ್ (ಚೀನಾ), (ಪಿಟಿಐ):** ಅನುಭವಿ ಜ್ಯೋತಿ ಸುರೇಖಾ ವೆನ್ನಂ ಅವರು ಇಲ್ಲಿ ಶನಿವಾರ ನಡೆದ ಆರ್ಚರಿ ವಿಶ್ವಕಪ್ ಫೈನಲ್‌ನಲ್ಲಿ ಅಮೋಘ ಪ್ರದರ್ಶನ ನೀಡಿ ಚಾರಿತ್ರಿಕ ಕಂಚಿನ ಪದಕ ಗೆದ್ದರು. ಮಹಿಳೆಯರ ಕಾಂಪೌಂಡ್ ವಿಭಾಗದಲ್ಲಿ ಪದಕ ಗೆದ್ದ ಭಾರತದ ಮೊದಲ ಬಿಲ್ಗಾರ್ತಿ ಎಂಬ ಹೆಗ್ಗಳಿಕೆಗೂ ಅವರು ಪಾತ್ರರಾದರು.

ಏಷ್ಯನ್ ಗೇಮ್ಸ್ ಹಾಲಿ ಚಾಂಪಿಯನ್ ಜ್ಯೋತಿ ಅವರು ಕಂಚಿನ ಪದಕದ ಪ್ಲೇ ಆಫ್ ಸುತ್ತಿನಲ್ಲಿ 150–145 ಅಂಕಗಳಿಂದ ಎರಡನೇ ಶ್ರೇಯಾಂಕದ ಎಲ್ಲಾ ಗಿಬ್ಸನ್ (ಬ್ರಿಟನ್) ಅವರಿಗೆ ಆಘಾತ ನೀಡಿದರು.

ಈ ಋತುವಿನ ವಿಶ್ವಕಪ್ ಫೈನಲ್‌ನಲ್ಲಿ ಭಾರತದ ಇಬ್ಬರು ಸೇರಿ ಒಟ್ಟು ಎಂಟು ಬಿಲ್ಗಾರ್ತಿಯರು ಕಣದಲ್ಲಿದ್ದರು. ಮೂರನೇ ಶ್ರೇಯಾಂಕದ ಜ್ಯೋತಿ, ಕ್ವಾರ್ಟರ್ ಫೈನಲ್‌ನಲ್ಲಿ 143–140ರಿಂದ ಅಮೆರಿಕದ ಅಲೆಕ್ಸಿಸ್ ರುಯಿಜ್ ವಿರುದ್ಧ ಗೆಲುವಿನೊಂದಿಗೆ ಶುಭಾರಂಭ ಮಾಡಿದ್ದರು. ಆದರೆ, ಸೆಮಿಫೈನಲ್‌ನ ರೋಚಕ ಹಣಾಹಣಿಯಲ್ಲಿ 143-145ರಿಂದ ಅಗ್ರ ಶ್ರೇಯಾಂಕದ ಆಂಡ್ರಿಯಾ ಬೆಸೆರಾ (ಮೆಕ್ಸಿಕೊ) ಅವರಿಗೆ ಮಣಿದರು.

ಚಿನ್ನದ ಪದಕದ ಸುತ್ತಿನಲ್ಲಿ ಮೆಕ್ಸಿಕೊದ ಬಿಲ್ಗಾರ್ತಿಯರಿಬ್ಬರು ಮುಖಾಮುಖಿಯಾದರು. ಐದನೇ ಶ್ರೇಯಾಂಕದ ಮರಿಯಾನಾ ಬರ್ನಾಲ್ ಅವರು ಅಗ್ರ ಶ್ರೇಯಾಂಕದ ಆಂಡ್ರಿಯಾ ಅವರಿಗೆ ಆಘಾತ ನೀಡಿದರು. ಸ್ಪರ್ಧೆಯಲ್ಲಿ ಅವರಿಬ್ಬರೂ ತಲಾ 147 ಅಂಕ ಗಳಿಸಿದರು. ಶೂಟ್ ಆಫ್‌ನಲ್ಲಿ ಬರ್ನಾಲ್ ಗೆಲುವಿನ ನಗೆ ಬೀರಿದರು.

2021ರ ವಿಶ್ವ ಚಾಂಪಿಯನ್‌ಷಿಪ್ ಬೆಳ್ಳಿ ಪದಕ ವಿಜೇತೆ 29 ವರ್ಷ ವಯಸ್ಸಿನ ಜ್ಯೋತಿ ಅವರಿಗೆ ಇದು ಮೂರನೇ ವಿಶ್ವಕಪ್ ಫೈನಲ್ ಆಗಿದೆ. ಈ ಹಿಂದೆ ಟ್ಲಾಕ್ಸ್‌ಕಲಾ (2022) ಮತ್ತು ಹರ್ಮೊಸಿಲೊ (2023) ಆವೃತ್ತಿಗಳಲ್ಲಿ ಆರಂಭಿಕ ಸುತ್ತಿನಲ್ಲೇ ಹೊರಬಿದ್ದಿದ್ದರು.

ಭಾರತದ ಮತ್ತೊಬ್ಬ ಸ್ಪರ್ಧಿ ಮಧುರಾ ಧಮನ್ ಗಾಂವ್ಕರ್ ಅವರು ಕ್ವಾರ್ಟರ್ ಫೈನಲ್‌ನಲ್ಲಿ 142-145 ಅಂತರದಲ್ಲಿ ಮರಿಯಾನಾ ಬರ್ನಾಲ್ ಅವರಿಗೆ ಶರಣಾಗಿ ಅಭಿಯಾನ ಮುಗಿಸಿದರು.

**ಪುರುಷರಿಗೆ ನಿರಾಸೆ:** ಪುರುಷರ ವಿಭಾಗದಲ್ಲಿ ಕಣ ದಲ್ಲಿದ್ದ ರಿಷಭ್ ಯಾದವ್ ಅವರು ಕಂಚಿನ ಪ್ಲೇ ಆಫ್ ಸುತ್ತಿನಲ್ಲಿ ಮುಗ್ಗರಿಸಿದರು. ರಿಷಭ್ ಮತ್ತು ನೆದರ್ಲೆಂಡ್ಸ್‌ನ ಮೈಕ್ ಸ್ಕ್ಲೋಸರ್ ಸ್ಪರ್ಧೆಯಲ್ಲಿ ತಲಾ 147 ಅಂಕ ಗಳಿಸಿದ್ದರು. ನಂತರ ಶೂಟ್ ಆಫ್‌ನಲ್ಲಿ ಮಾಜಿ ಚಾಂಪಿಯನ್ ಮೈಕ್ ಗೆಲುವು ಸಾಧಿಸಿದರು.

ಈ ಋತುವಿನ ವಿಶ್ವಕಪ್ ಫೈನಲ್‌ಗೆ ರಿಕರ್ವ್ ವಿಭಾಗದಲ್ಲಿ ಭಾರತದ ಯಾವುದೇ ಸ್ಪರ್ಧಿ ಅರ್ಹತೆ ಪಡೆದಿಲ್ಲ.

# ಬುಲ್ಸ್‌ಗೆ ಮಣಿದ ದಬಂಗ್ ಡೆಲ್ಲಿ

**ನವದೆಹಲಿ (ಪಿಟಿಐ):** ರೇಡರ್ ಅಲಿರೆಜಾ ಮಿರ್ಜೈಯನ್ ಅವರ 'ಸೂಪರ್ ಟೆನ್' ಸಾಹಸದ ನೆರವಿನಿಂದ ಬೆಂಗಳೂರು ಬುಲ್ಸ್ ತಂಡವು ಪ್ರೊ ಕಬಡ್ಡಿ ಲೀಗ್‌ನ ಪಂದ್ಯದಲ್ಲಿ ಶನಿವಾರ 33–23ರಿಂದ ಪ್ರಬಲ ದಬಂಗ್ ಡೆಲ್ಲಿ ತಂಡವನ್ನು ಮಣಿಸಿತು.

16 ಪಂದ್ಯಗಳಲ್ಲಿ ಒಂಬತ್ತನೇ ಗೆಲುವು ಸಾಧಿಸಿದ ಬುಲ್ಸ್ ತಂಡವು 18 ಅಂಕಗಳೊಂದಿಗೆ ಲೀಗ್ ಪಟ್ಟಿಯಲ್ಲಿ ನಾಲ್ಕನೇ ಸ್ಥಾನಕ್ಕೇರಿತು. ದಬಂಗ್ ತಂಡಕ್ಕೆ 17 ಪಂದ್ಯಗಳಲ್ಲಿ ಇದು ನಾಲ್ಕನೇ ಸೋಲು. 26 ಅಂಕಗಳೊಂದಿಗೆ ಎರಡನೇ ಸ್ಥಾನದಲ್ಲಿದೆ.

ದಿನದ ಮತ್ತೊಂದು ಪಂದ್ಯದಲ್ಲಿ ಭರತ್ ಮತ್ತು ವಿಜಯ್ ಮಲಿಕ್ ಅವರ ಸೂಪರ್ ಟೆನ್ ನೆರವಿನಿಂದ ತೆಲುಗು ಟೈಟನ್ಸ್ ತಂಡವು 40–31ರಿಂದ ಪುಣೇರಿ ಪಲ್ಟನ್ ತಂಡವನ್ನು ಮಣಿಸಿತು. ಇನ್ನೊಂದು ಪಂದ್ಯದಲ್ಲಿ ಜೈಪುರ ಪಿಂಕ್ ಪ್ಯಾಂಥರ್ಸ್ ತಂಡವು 38–30ರಿಂದ ಬೆಂಗಾಲ್ ವಾರಿಯರ್ಸ್ ಎದುರು ಜಯ ಸಾಧಿಸಿತು.

## ಜೋಹರ್ ಕಪ್ ಹಾಕಿ: ಭಾರತಕ್ಕೆ ಬೆಳ್ಳಿ

**ಜೊಹರ್, ಮಲೇಷ್ಯಾ (ಪಿಟಿಐ):** ಭಾರತ ಜೂನಿಯರ್ ಪುರುಷರ ತಂಡವು ಶನಿವಾರ ನಡೆದ ಸುಲ್ತಾನ್ ಆಫ್ ಜೋಹರ್ ಕಪ್ ಹಾಕಿ ಟೂರ್ನಿಯ ಫೈನಲ್‌ನಲ್ಲಿ 1–2 ಗೋಲುಗಳಿಂದ ಆಸ್ಟ್ರೇಲಿಯಾ ವಿರುದ್ಧ ಪರಾಭವಗೊಂಡು ರನ್ನರ್ ಅಪ್ ಆಯಿತು.

ಮೂರು ಬಾರಿಯ ಚಾಂಪಿಯನ್ ಭಾರತ ತಂಡಕ್ಕೆ ಇದು ದಾಖಲೆಯ ಎಂಟನೇ ಫೈನಲ್ ಆಗಿತ್ತು. ಆರು ಪೆನಾಲ್ಟಿ ಕಾರ್ನರ್ ಅವಕಾಶಗಳನ್ನು ಕೈಚೆಲ್ಲಿದ ಭಾರತ ತಂಡವು ಟೂರ್ನಿಯಲ್ಲಿ ಎರಡನೇ ಬಾರಿ ಆಸ್ಟ್ರೇಲಿಯಾ ತಂಡಕ್ಕೆ ಮಣಿಯಿತು. ಲೀಗ್ ಹಂತದಲ್ಲಿ 2–4 ಗೋಲುಗಳಿಂದ ಆ ತಂಡಕ್ಕೆ ಸೋತಿತ್ತು.

ಪ್ರಜಾವಾಣಿ ಭಾನುವಾರ • ಅಕ್ಟೋಬರ್ 19, 2025

# ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331






ಪ್ರಜಾವಾಣಿ
# ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

# PROPERTY CORNER

ಕ್ಲಾಸಿಫೈಡ್ಸ್

## REAL ESTATE SELLING

### Sites

### Anekal

**KHB Sites in Surya City Near Jigani**
**STRRA & BMRDA APPROVED PLOTS**
Near Bannerghatta Road Akhata & Ekhata Plots Ready for Registration SBI & Nationalised Bank Loan (Land Owner Share) **Call : 74115 54412**

### Airport Road

**"40X60 WITH_E_KATHA**
BIAAPA`approved old`Layout formed`in`2008 Bagalur`near KIADB`Aero`park 6`kms before`Airport, excellent`place for`investment, 75%`Bank_Loan available, ₹6000/-P.sft "Sri.Ganesh Estate" 9845286505"

### Bannerghatta Road

**SITE SALE** Classic Orchards 4780sqft Corner Odd Dimension Excellent Location NRI Owner 22,000/sqft full Cheque Payment. Genuine Buyers: 7026500097

**BANNERAGATTA ROAD** Classic Orchid Layout 4759sqft SWC 23000/- Nisarga Layout 50x80 3500/- To 5000/- 9449655947

### Malur

**MALUR. LUXURY** Resort Villa Plots, 0 KMS from Xpress Highway, MPA/ BMRDA Approved, Ekatha Ready for Registration. 50 + Premium Amenities. Call :8404084041.

### Chandapura

**KHB SITE** SALE at Surya Nagar Phase 2 30x40, 20x30, Near Anekal Road, Chandrapura 9066865343

### Devanahalli

**FOR SALE** PRIME PROPERTY WITH THREE SIDES ROAD, BANGALORE- HYDERABAD NATIONAL HIGHWAY, OPPOSITE TO NANDI UPACHAR HOTEL, NANDI HILLS ROAD, STRR 320FEET DABASPET- CHENNAI EXPRESS HIGHWAY AND STRR SERVICE ROAD, 1-05GUNTAS, CORNER PROPERTY WITH 3.5 FAR, CONTACT VICTORY PROPERTIES. www.victoryproperties.in, info@victoryproperties.in. 7411692219/ 8618576685/ 9482303339/ 9686894972

### J P Nagar

**"J.P.NAGAR, SRINIDHI_LAYOUT**
30x51 Residential Site, East Facing, BBMP A_Katha, Full White. Owner: 9845088449/ 9845249799"

### Kanakapura Road

**SITE FOR_SALE:**
MARUTHI LAYOUT Subramanyapura 30x50 West Facing 30_Feet Road, BBMP_A_katha. Call_9740148870 9341050991.

### Magadi Road

**30X40 WEST_FACE**
BEL 1st Stage, BDA_Allotment, Nearest East West College, Herohalli_Magadi Road. No Broker. Call 9008652533

### Multiple Locations

**SELLING/ BUYING**
HOUSES, SITES:30x40_40x60 FLATS, COMMERCIAL, Jayanagar, JP.Nagar BASAVANAGUDI Kanakapura Road, BANASHANKARI, BTM_HSR. CALL_7760019494

### Nagarabhavi

**"RAILWAY 2ND_STAGE**
30x40_West facing, builder location, opp.Soda factory, near_Ullal RTO, Good_Location. 9845408408

**"NAGARABHAVI NEAR** Deepa Complex 40x60 East MPM_Layout 35_feet_Road, Vastu_BDA Site. 9448432633"




**SITE FOR_SALE**
30x50 WEST`SOUTH CORNER BDA NAGARABHAVI 'D'_GROUP RAJAJINAGAR HOUSING COOPERATIVE SOCIETY 'E'_BLOCK. Contact: 8105688602.

### Arishina Kunte

**ADARSHANAGAR/ ARISHINAKUNTE,** Bangalore-Tumkur Highway, SITE:40'x60', N/F(Park) Road, CMC E-Khata Rs.6000/SFT, Call: 7892206438.

### Banashankari

**SALE BSK** 6th Stage 4th B-Block 40x60 west Facing 2Cr also 40x60 South Facing 6th Block 2.10Cr behind 100ft Road, site owners 9945373839, 9620041313

**BANASHANKARI 6TH** STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

**BSK 5TH** stage 30x40 East Facing Uttarahalli Kengeri Main Road Near Poornaprajna layout: 9606922132/ 8618385836

**BANASHANKARI** 6TH Stage,BDA 40x60, Site For Sale Near 100 Feet Road Cheque Payment: 9916817739

### Anjanapura

**SALE BDA** 30x40 Anjanapura 5th G Block South facing 40x60 west facing commercial site 2nd Block. Contact 9620041313, 9945373839

**SITE FOR** Sale Anjanapura 10 Block BDA 50X80 - 4000 sqft South Facing Contact: 9844274211

**ANJANAPURA** BDA Site For Sale, 1ST Block 20x30, W/F Price 65 Lakhs Negotiable 9740150364/8884707773

### Basavanagudi

**NORTH FACING** SITE FOR Sale At Thyagarajanagar Basavanagudi measuring 690 Sq.Ft Brokers Excuse. Call: 9880137031

### Uttarahalli

**UTTARAHALLI PLOT**
Sale 27.5'x65' BBMP A_Khatha. North facing & Lake View. Rs.15,000/sft. Call: 6362348146

### Vijayanagar

**SITE FOR** SALE:
60X90 WEST FACING WOC ROAD RPC LAYOUT ONLY GENUINE BUYERS CONTACT: 6363250343

### Vishweshwariah Layout

**BUYING/ SELLING**
20x30, 30x40, 40x60, 50x80 BDA Sites VISHVESHWARAIAH LAYOUT, KEMPEGOWDA LAYOUT, BANASHANKARI 6th Stage. Contact: 8892901567

**"AVAILABLE VISHVESWARAIAH**
1st- 50x80, 5th-40x60_North, 3rd-40x60, MPM_40x60 Good_location, Genuine Buyers/Seller. 9448733456/ 7259675150"

**"40X60 NORTH_FACING**
TOP_LOCATION RESIDENTIAL BDA SITE 6TH BLOCK VISHVESHWARAIAH LAYOUT IMMEDIATE_SALE- 9845143579"

**BUYING/ SELLING**
20x30, 30x40, 40x60, 50x80 BDA Sites VISHVESHWARAIAH LAYOUT, KEMPEGOWDA LAYOUT, Contact: 9035470616

***BUYING/SELLING* 20X30** 30x40,40x60,50X80 BDA SITES VISHWESHWARAIAH KEMPEGOWDA LAYOUT. Contact:SREENIDHI PROPERTY JUNCTION. 9742681666

**SIR M** Vishveswaraiah Layout 20x30 BDA Site Sale West Facing of Rs. 65L. Lokesh 9886201690

### Mysore

**50×80 PRIME RESIDENTIAL SITE FOR SALE**
40 Feet Road,South Face, Behind 80 Ft. Road, Vijayanagar 4th Stage, Close to Marimallapa Compound, Mysore. Resale Property 2.9cr Negotiable
**Contact:**
**9739703467**
**9686895205**

**MYSORE MUDA** SITE 50x80 SALE Vijayanagara 4th Stage 2nd Phase 60ft Road Rs.8750 Psft Brokers Excuse saleprimesite@gmail.com

### Kempegowda Layout

**SITES FOR** sale Nadaprabhu Kempegowda Layout 'BDA' no. 1678, 40*60 south facing 'E' Sector 8th block, and no. 1046, 50*80 west facing 'K' Sector 1st block 330 feet peripheral ring road commercial property. 9980339217/ 9448709882

## Commerical

### Anjanapura

**COMMERCIAL SITE**
FOR SALE Site No. 685 Anjanapura 8th block, north facing 50*80. Call 6362874644.

### Vishweshwariah Layout

**BDA COMMERCIAL** 40×60 Site,s Sale SMVL 5th Block Near KLE Law College 60ft Road: 9980433004

## Farm House/ Land/ Resorts

### Out-Station

**JACKANARAI, KALLAR,** NILGIRIS, Tamil Nadu: 65 Acres Patta Land with Teak Wood many more for SALE Contact: 9848392893, 9052200009

## Residential/ Commercial

### Girinagar

**40×60 SITE** old house for sale in girinagar, near Nandagokula sabhangana, Genuine buyer, no middle men please. Email pgnagara@gmail.com.

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ
ಕ್ಲಾಸಿಫೈಡ್ಸ್

# REAL ESTATE SELLING

## House

### Banashankari

**BSK 2ND** Stage 60x90 Prime Residential Property With Old House For-Sale Only Genuine Buyers No Brokers GTR 9986490019

### J P Nagar

**SALE BDA HOUSE** 20x24 Jayanagar 6th Block Three Units Near Metro Station RS. 1.25 Crore 7892531744 9448369117

**SALE 20X30** old Building West Facing J.P.Nagar 4th Phase Rs. 1.40cr Negotiable Contact: 9880425607

**FOR SALE:** JP.NAGAR 5th Phase Fully Furnished 4BHK 30 Squares DUPLEX Residential Building on 40x60- 8 Crores. Buyers Call: 9343728200.

### Kengeri

**RESIDENCIAL BUILDING_SALE** 30x50`BBMP E-katha 1_Lakh Rental`Income 2BHK:5units, 3BHK:1Unit Near_Hoysala circle Kengeri Upanagar. Brokers`Excuse. Call_9738016535

### Vijayanagar

**3BHK 2FLOOR** BUILDING 1200.Sqft. (680.Sqft. BDA_Site) 500.Sqft.Covered Carparking, 2.2cr.Nego Next`to Prominent Main Road, Close`to Vijayanagar Metro Station. 9980349098.

### Vidyaranyapura

**4-STORY HOUSE** FOR-SALE in Ramchandrapura, Jalahalli (post), Bangalore 560013. The property boasts of 5 Houses with 2 BHK (3 Houses)and 1 BHK (2 Houses) with Parking Space. Price: 17500000/-. Property Size:600 sqft. Total built-up area:2700sqft. Constructed: April 2025. South-Facing Road, All House East-Facing. Contact: D.Gopal 9880450523/ 8496085574.

**60'X40' BEL** Layout, 2 Block, Independent 4 BHK Duplex Ready to move 16000/- S/F: 9844264852

### Rajajinagar

**30X40 BUILDING** Sale G +2, 6th block Rajajinagar, East face, 27 thousand/ sft. Ramesh: 9845253456.

## Flat

### Lingarajapuram

**APARTMENTS LINGARAJAPURAM** Near Davis Road 2 Bedrooms 1070 Sqft 64L, 750 Sqft 45L with Carpark: 9945855800

### Banashankari

**SALE FLAT** NANDI ENCLAVE BSK 3RD STAGE 2BHK FURNISHED 1050 SQFT CARPARKING RS.70 LAKHS DETAILS: 7892035229

### Hennur

**3BHK LUXURY** Flats For-Sale/ Rent at Promax Dreamville Home, Hennur Main-Road Kothanur Bangalore-77. 8073977742 6364588805

### Jayanagar

**SALE 2-BHK** FLAT G.F. NORTH FULLY FURNISHED JAYANAGAR 1st BLOCK EAST GENUINE BUYERS 7795936271 9480338676

### Kengeri

**KENGERI, 1** BHK BDA Apartment 1st Floor For Sale of Rs. 17 Lakhs, Lokesh: 9886201690

### Kanakapura Road

**3BHK APARTMENT** for`Sale 40x60, 2400.Sqft. Individual Floor near_Vajarahalli and Raghuvanahalli Metro_Station 1`KM. Call_9740148870 9341050991.

### Vidyaranyapura

**VIDYARANYAPURA: EAST** FACING 2BHK FLAT 1ST FLOOR, 1195SQFT NEAR DURGA PARAMESWARI TEMPLE CONTACT 7996381014.

### Seshadripuram

**2 BHK** Flat for Sale 923 sqft N/F Madhavanagar 560001. Contact Number: 9845042454.

## Agricultural Land

### Out-Station

**LAND @** Reasonable Price Tumkur 110acre, Pavagada 550, Mysore 280, Gulbarga 7000, Maharashtra 3500, 9535195656

# REAL ESTATE BUYING

## Sites

### Banashankari

**BDA SITES** WANTED ARKAVATHY ANJANAPURA BANASHANKRI 6TH STAGE VISHWESWARAIAH KEMPEGOWDA ANY BDA LAYOUT; 9845062822/ 8660751654

### Multiple Locations

**WANTED BDA SITES** Anjanapura- Arkavathi Banashankari 6th.Stage, Vishweswaraiah, Kempegowda, SAPTHAGIRI (Opp.BDA Head Office, Kumara Park). 9036360366.

### Vishweshwariah Layout

**WANTED BDA** Sites (NRI) Nagarbhavi, Vishweshwaraiah Layout, Banashankari, Kempegowda Layout Contact: 9620696913/ 9880781399 Immediate Settlement

**"BUYING/ SELLING"** 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

## Real Estate Agents

### Mysore Road

**ANY PROPERTY** only Buyers and Sellers in Around Mysore Road Contact: 9845810954 / 9353992532

## Joint Development

### General

**WANTED INVESTORS** ON PROPERTIES WITH GOOD PROFIT SHARING RETURNS WITH LEGAL BOUNDED TERMS, FOR A 35 YEARS EXPERIENCED REAL ESTATE COMPANY HAVING RERA APPROVAL ON INDIVIDUAL NAME, MEMBER OF BRAI (BANGALORE REALTORS ASSOCIATION OF INDIA) BASED IN BANGALORE SOUTH, CONTACT: 7411692219/ 8618576685/ 9482303339/ 9686894972. www.victoryproperties.in, info@victoryproperties.in

# BUILDERS ESSENTIAL

## Water Proofing

**LEAKAGE... LEAKAGE...** Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

# RENTAL PROPERTIES

## Accommodation Available

### Commercial

**Bareshell 5000 Sqft OFFICE SPACE**
available in 2nd Floor, in Majestic Terraces Building in Electronic city Phase-1. Contact : 9844023523

**FOR RENT,** Off` 80ft Kanakapura Road, 10x15 Shop, Excellent Commercial location suitable`for Sandwhich, Ice-creams, Coffee Shop, Owner 9845232711

**2BHK HOUSE** Rent Ground Floor (1300sft) Suitable Office/ House, YELAHANKA, KOGILU MAIN ROAD, 8880974545.

### House

**FIRST FLOOR** Accommodation available 2Bedroom, Verandah, Dining, Hall Vegetarian only. Geleyarabalaga, Mahalakshmipura, Contact: 9342782113

## Accommodation Wanted

### Flat

**WANTED 2 BHK** FLAT/HOUSE for RENT in Rajarajeshwari Nagar. Brokers Excuse. Owners only Call: 9845054262.

# JOB OPPORTUNITIES

## General

**WANTED STORE** Assistants in Jayanagar and Koramangala Timings 9:30 am to 9 pm Sunday holiday salary Rs. 15,000. Location Room can be provided. Call 8050666007

**REQUIRED SPORTS** teacher, maths and english Teacher for high school contact Kenmore School 9901501185 or email kenmoreschool@gmail.com

## Teachers/ Professors

**JYOTI NIVAS COLLEGE AUTONOMOUS**
Koramangala, Bangalore -560 095
Ph : 25530137 Fax : 2553 3886
www.jyotinivas.org
Email : info@jyotinivas.org
**REQUIRES**
**Assistant Professors**
in Psychology, Computer Science, Mathematics and French
**Qualification :** Ph.D from a reputed University. Preference for Reserved Category.
**Apply to the Principal Jyoti Nivas College Autonomous**
**info@jyotinivas.org on or before 25.10.2025**

**BEST SCIENCE,** Maths, English, Hindi, Kannada , PE Teachers, NTT (Preferably NORTH EASTERN SIDE) for reputed CBSE SCHOOL (West Bangalore-Metro connected)Good Salary for Honest & dedicated Teachers 9449835744, 9535601743.

**"WANTED TRAINED** Home Tutor for 8th Standard CBSE-Math, Science,Social, English`near Yashwantpur and Keyboard Trainers. Contact: 9243101700/ 9243127555"

## Multiple Vacancy

**ಫ್ರೀಡಂ ಟಿವಿ**
(ಸಂಪಿಗೆ ಮೀಡಿಯಾ ಪ್ರೈವೇಟ್ ಲಿಮಿಟೆಡ್), ಬ್ರಿಗೇಡ್ ಪ್ಲಾಜಾ, 6ನೇ ಮಹಡಿ, ಎಸ್.ಸಿ. ರಸ್ತೆ, ಗಾಂಧಿನಗರ, ಬೆಂಗಳೂರು.
**ಬೇಕಾಗಿದ್ದಾರೆ**
**ಆಫೀಸ್ ಅಡ್ಮಿನಿಸ್ಟ್ರೇಟರ್ 1 ಹುದ್ದೆ**
ಅಡ್ಮಿನ್ ಹುದ್ದೆಗೆ ಲಿಮಿಟೆಡ್ ಕಂಪನಿಗಳಲ್ಲಿ 10+ ವರ್ಷಗಳ ಅನುಭವ ಹೊಂದಿರಬೇಕು. ಅಕೌಂಟ್ಸ್, ಪರ್ಚೇಸ್, ಸೇಲ್ಸ್ ಕೋ ಆರ್ಡಿನೇಷನ್, ಆಡಿಟ್ ಹಾಗೂ ಲೀಗಲ್ ಕಂಪ್ಲೈನ್ಸ್ ನಲ್ಲಿ ಹಿಡಿತ ಹೊಂದಿರಬೇಕು.
**ಅಕೌಂಟೆಂಟ್ - 1 ಹುದ್ದೆ**
ಅಕೌಂಟೆಂಟ್ ಹುದ್ದೆಗೆ ಕನಿಷ್ಠ ಮೂರುವರ್ಷ CA ಕಚೇರಿಯಲ್ಲಿ ದುಡಿದ ಅನುಭವ ಇರಬೇಕು.
ಸಂಪರ್ಕಿಸಿ: **9448972702**
ವಾಟ್ಸಪ್ ನಂ: **6366513906**

# BUSINESS

## Business to Business

### Business

**PROPERY COLLATERALS/** Joint Ventures/ Schools/ Colleges/ Hospitals/ Takeovers/ Selling/ Buying/ New Ideas. Dr. Swamy Naidu (Vamshadhara Projects & Serivces).... 9342247637.

**ALL LOANS** from Bank/ Pvt. (Direct): Mortgage (any property, with/ without income), Projects, takeover, NPA, 3rd party collateral, Sharing, Subsidy. Cibil no issue Low int. DSA, Mediators also welcome. Cont: 9019388175

### Finance

**WE ARRANGE** Mortgage, Purchase Construction and Business Loan from Scheduled Bank. Mrs Jyothi- 8971132289/ 9380509779.

## Business Offers

### General

**WE HAVE** buyers for well-established Schools and colleges in Bangalore. If the next generation is not interested & No_one to support you, sell the business & retire peacefully. Arun 9845077299.



# MATRIMONIAL

## Brides Wanted

### Hindu

**BRIDE WANTED**
Wanted Educated Beautiful Bangalore Based Lady (South Indian) to manage house, between 55/60 age for a Senior Citizen 70 years, and a Foreign Retuned, Handsome Healthy Person Having House, Cars and Working Management Consultant. Children Settled Abroad / India
Contact : 93422 47637

# PERSONAL

## Change of Name

**CHANGE OF NAME**
I,**GOPAL KRISHNA RAO KN,** S/o Narayana Rao KN, resident of No 167, Gangamma Gudi Road, M V EXTN, Hoskote, Bangalore Rural, Karnataka- 562114. have changed my name from **GOPAL KRISHNA RAO KN** to **GOPALA KRISHNA RAO KN** vide affidavit dated 13/10/2025, Sworn before notary B.Hanumantaraya, Bangalore

**CHANGE OF NAME**
I, **SREELAKSHMI G. S.** W/o Gopalakrishna Rao K.N, residing at No.167, Gangamma Gudi Road, M.V. Extension, Hosakote, Bengaluru - 562114, have changed my name from **SREELAKSHMI G. S.** to **SHREE LAKSHMI G.S.** vide affidavit 13.10.2025 before notary B.Hanumantharaya, Bengaluru

**CHANGE OF NAME**
I, **TAJUDDIN,** Residing at # 209-B, JHBCS Layout, 9th Cross End, Near Minhaj Masjid, Minhaj Nagar, J P Nagar, Bengaluru - 560078, have changed our minor daughter's name from **TAQIYYAA** to **TAQIYYAA TAJ** vide affidavit dated 17.10.2025 before notary L. Puttaraju, Bengaluru. Henceforth she shall be called as **TAQIYYAA TAJ** only

**I, AKHIL** (Old Name) R/o Kanaka Nilaya, HIG 23, 15th Ward, KHB Colony, Sindhanur. Have changed my name as AKHIL GOVINDRAO HAGARAGOND (New Name) vide affidavit Dtd: 14-10-2025 sworn before Advocate & Notary Public H. Pampanna at Sindhanur

**CHANGE OF NAME**
I, **SWATHI P SHIVRANJINI @ SWATHI SIVARANJINI** residing at No. 77, 12th Main, 2nd Cross, Next to Ajit Layout, Vinayaka Layout, Bangalore - 560049 Declare that the above names pertain to me and henceforth I shall be known as **SWATHI SIVARANJINI** vide affidavit dated 08.10.2025 before Notary C.Giri Babu, Bangalore.

## Lost

**LOST**
It is Notified for the information that my Original Certificate of BBM Degree in the year May 2011, Roll No.08BMC08041 issued by Bangalore University has been lost. Ananya.S.N, D/o S.S. Nagesh, 1/25/2, 6th Cross, 5th Block, BSK 3rd Stage, Bangalore-85, Contact: 8971525369 Police Complaint No.1816993/2025

**LOST OF SALE DEED**
I, **Prashant Kishorkumar Doshi** Residing at No.617.21st Main, 36th Corss, 4th T Block Jayanagar, Bangalore-560041 have Lost my **original Sale Deed** No.BNG(U)-KNGR/21827/2002-2003 Measuring 30x50 Site No.122, House List Katha No.4635/122 Sy.No.105 situated at Gottigere, Uttarahalli Hobli, Bangalore South Taluk. If anybody find Please **Contact: 9845290492**

# TOURS & TRAVEL

## Travel

**SRILANKA TOUR,** WONDERFUL ONE WEEK, IMPORTANT PLACES INCLUDED. BEST ARRANGEMENTS. LIMITED SEATS. GANESH SHENOY 8310028157


ARVIND PROPERTIES
FOR FAITH AND RELIABILITY
Perfectly Placed for a
PROMISING FUTURE
PROXIMITY
Located on the Intermediate Ring Road, with a newly upgraded double road ensuring seamless connectivity.
In the vicinity of proposed International Airport.
Strategically located near Dabaspet industrial area.
Minutes away from upcoming Metro and Economic Corridors.
Close to the City's future - Knowledge Health Innovation Research-City (KHIR-City) Project.
ARVIND PROPERTIES
E - Khata
Bank Loan Available
Ready for Registration
BMRDA & RERA Approved
50 ACRES
900 PLOTS
Children's Play Area
Open Gymnasium
Swimming Pool
Basketball Court
Recreational Parks
Amphitheatre
Lawn Tennis Court
Temple
Jogging & Cycling Track
ನೆಲಮಂಗಲ
ಸೊಂಡೆಕೊಪ್ಪ ರಸ್ತೆ
99986 08666
www.arvindproperties.com


NISCHITHA DIVINE PAARK
"Where Every Stay Feels Blessed"
INVEST SMART. LIVE SMARTER
Launching Price Starts from
₹3999 per sqft
Premium Plots with clear Titles
100ft & 60ft wide road Connectivity
Water & Power Connectivity 24/7
Excellent ROI & Rapid Value Growth
ನೆಲಮಂಗಲ
Life-style Amenities
landscaped park
Cricket Pitch
Kids Play Area
Senior citizen Zone
Location Highlights
Just 5 mins from NH4
2 Km from BH Road
Close to schools, Colleges & Hospitals
Great Connectivity to Peenya & Nice Road
SRIVEN DAKSHA ELITE
ಶ್ರೀವೆನ್ ದಕ್ಷ ಎಲೈಟ್
ಬೊಮ್ಮಸಂದ್ರ
ಕೈಗಾರಿಕಾ ಪ್ರದೇಶದ ಹತ್ತಿರ
1 BHK ₹33 LACS*
2BHK
58.5 Lakhs
49.9 lakhs
3BHK
68.5 Lakhs
53.9 lakhs
RERA Regd.
BMRDA Approved
NISCHITHA PROPERTIES Pvt.Ltd.
More Than Real Estate
80-90% ಬ್ಯಾಂಕ್ ಸಾಲ ಲಭ್ಯವಿದೆ
www.nischithaproperties.com
9164009004


Kt Special Tea
AISHWARYA'S
SHALIMAR GOLD TEA
"ಕರ್ನಾಟಕದ ಅತ್ಯಂತ"
ರುಚಿಕರವಾದ ಚಹಾ
ದೀಪಾವಳಿ ಹಬ್ಬದ ಶುಭಾಶಯಗಳು
₹18 ಮೌಲ್ಯದ ಆಕರ್ಷಕ ಗ್ಲಾಸ್ ಉಚಿತ
₹35 ಮೌಲ್ಯದ 500g ಸಕ್ಕರೆ ಉಚಿತ
250g
1kg
White Label SUGAR
ಅದ್ಭುತ ರುಚಿ * ಮಿತವಾದ ಬೆಲೆ * ಉತ್ಕೃಷ್ಟ ಗುಣಮಟ್ಟ
TRADE ENQUIRIES
Bangalore
Sales Head
+91 9980 157884
Rest of Karnataka
Satish RSM
+91 97313 03541
ಕರ್ನಾಟಕದ ಹೆಮ್ಮೆ
Available in amazon
www.aishwaryateaindustries.com
aishwaryatea@gmail.com


# ‘ಧುರಂಧರ್’ಗೆ ಹನುಮ್ಯಾನ್‌ಕೈಂಡ್ ಇಂಧನ


ಹನುಮ್ಯಾನ್‌ಕೈಂಡ್

**ಹನುಮ್ಯಾನ್‌ಕೈಂಡ್** (ಸೂರಜ್ ಚೆರೂಕಾಟ್) ರ‍್ಯಾಪ್ ಗೀತೆಗಳಿಗೆ ಮೈಯೆಲ್ಲ ಕಿವಿಯಾಗುವ ಹೊಸ ತಲೆಮಾರಿನವರ ಸಂಖ್ಯೆ ದೊಡ್ಡದಿದೆ. ಅಚ್ಚರಿ ಹುಟ್ಟಿಸುವಂತಹ ಲಯದಲ್ಲಿ ಅವರು ಕಟ್ಟುವ ಗೀತೆಗಳ ತೀವ್ರತೆ ಕಂಡು ಸಂಗೀತ ನಿರ್ದೇಶಕ ಶಾಶ್ವತ್ ಸಚ್‌ದೇವ್ ಅವರಿಂದ ‘ಧುರಂಧರ್’ ಹಿಂದಿ ಚಿತ್ರಕ್ಕೆ ಒಂದು ಹಾಡನ್ನು ಹಾಡಿಸಿದ್ದಾರೆ. ಪಂಜಾಬಿ ಜನಪದ ಹಾಗೂ ರ‍್ಯಾಪ್‌ನ ಹದವರಿತ ಮಿಶ್ರಣದ ಶೈಲಿಯಲ್ಲಿರುವ ‘ನಾ ದೇ ದಿಲ್ ಪರದೇಸಿ ನು’ (ಜೋಗಿ) ಎಂಬ ಗೀತೆಯನ್ನೇ ಈಗ ಚಿತ್ರದ ಶೀರ್ಷಿಕೆ ಹಾಡೆಂದು ಚಿತ್ರತಂಡ ಪ್ರಕಟಿಸಿದೆ. ಈ ಹಾಡಿನ ಓಘ ಮತ್ತು ವೇಗ ಕಂಡು ನಿಬ್ಬೆರಗಾಗಿರುವ ವರ್ಗವೊಂದು ಅದಾಗಲೇ ಗೀತೆಯ ಗುಣಾವಗುಣಗಳ ವಿಶ್ಲೇಷಣೆಯಲ್ಲಿ ತೊಡಗಿದೆ. ಇದೇ ಮೊದಲ ಬಾರಿಗೆ ಭಾರತದ ಸಿನಿಮಾವೊಂದಕ್ಕೆ ಹನುಮ್ಯಾನ್‌ಕೈಂಡ್ ಹಾಡು ಹಾಡಿದ್ದಾರೆನ್ನುವುದು ವಿಶೇಷ.

2019ರಲ್ಲಿ ‘ಉರಿ– ದಿ ಸರ್ಜಿಕಲ್ ಸ್ಟ್ರೈಕ್’ ಹಿಂದಿ ಸಿನಿಮಾ ನಿರ್ದೇಶಿಸಿ ₹350 ಕೋಟಿಗೂ ಹೆಚ್ಚು ಹಣ ಗಳಿಕೆಗೆ ಕಾರಣರಾಗಿದ್ದ ಆದಿತ್ಯ ಧರ್ ಈ ಚಿತ್ರದ ನಿರ್ದೇಶಕರು. ನಿರ್ಮಾಣದಲ್ಲಿ ಕೂಡ ಅವರ ಪಾಲಿದೆ. ಲೋಕೇಶ್ ಧರ್, ಜ್ಯೋತಿ ದೇಶಪಾಂಡೆ ಅವರು ನಿರ್ಮಾಣದ ತಂಡದಲ್ಲಿರುವ ಪ್ರಮುಖರು. ವಿಕಾಶ್ ನೌಲಾಖಾ ಛಾಯಾಚಿತ್ರ-ಗ್ರಹಣ ಇರುವ ಈ ಸಿನಿಮಾದಲ್ಲಿ ಬೇಹುಗಾರಿಕಾ ಕಥನದ ಎಳೆಯೊಂದು ಇದೆ. 2023ರಲ್ಲಿ ‘ರಾಕಿ ಔರ್ ರಾಣಿ ಕಿ ಪ್ರೇಮ್ ಕಹಾನಿ’ ಹಿಂದಿ ಸಿನಿಮಾ ಜನಪ್ರಿಯ ಸಿನಿಮಾ ವಿಭಾಗದಲ್ಲಿ ರಾಷ್ಟ್ರ ಪ್ರಶಸ್ತಿ ಗಳಿಸಿತ್ತು. ಅದಾದ ನಂತರ ರಣವೀರ್ ಸಿಂಗ್ ಮೇಲೆ ನಿರೀಕ್ಷೆ ಮೂಡಿಸಿರುವ ಚಿತ್ರವಿದು. ಹಲವು ಆಸಕ್ತಿಕರ ತಿರುವುಗಳಿರುವ, ಸಾಹಸ ದೃಶ್ಯಗಳಿಂದ ಇಡುಕಿರಿದಿರುವ ಈ ಸಿನಿಮಾ, ಬಾಲಿವುಡ್‌ಗೆ ಜೀವಾನಿಲವಾಗಬಲ್ಲದು ಎಂಬ ನಿರೀಕ್ಷೆ ಚಿತ್ರೋದ್ಯಮದಲ್ಲಿದೆ.

ಸಂಜಯ್ ದತ್, ಆರ್.ಮಾಧವನ್, ಅಕ್ಷಯ್ ಖನ್ನ, ಅರ್ಜುನ್ ರಾಮ್‌ಪಾಲ್ ಹಾಗೂ ಸಾರಾ ಅರ್ಜುನ್ ತಾರಾ ಬಳಗದಲ್ಲಿರುವ ಈ ಸಿನಿಮಾ ಡಿಸೆಂಬರ್‌ನಲ್ಲಿ ತೆರೆಕಾಣಲಿದೆ.


‘ಧುರಂಧರ್’ ಚಿತ್ರದಲ್ಲಿ ರಣವೀರ್ ಸಿಂಗ್

## ‘ಜಸ್ಸಿ ವೆಡ್ಸ್ ಜಸ್ಸಿ’ ಸಿನಿಮಾ ನ. 7ಕ್ಕೆ ಬಿಡುಗಡೆ

ಹರ್ಷವರ್ಧನ್ ಸಿಂಗ್ ದೇವ್, ರೆಹಮತ್ ರತ್ತನ್ ಮತ್ತು ರಣವೀರ್ ಶೋರೆ ನಟಿಸಿರುವ ‘ಜಸ್ಸಿ ವೆಡ್ಸ್ ಜಸ್ಸಿ’ ಸಿನಿಮಾ ನವೆಂಬರ್ 7ರಂದು ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಲಿದೆ ಎಂದು ಚಿತ್ರತಂಡ ಮಾಹಿತಿ ನೀಡಿದೆ. ಪರಣ್ ಬಾವಾ ನಿರ್ದೇಶನದ ಮೊದಲ ಸಿನಿಮಾ ಇದಾಗಿದ್ದು, ‘ಕ್ರೇಜಿ ಫನ್‌ರೈಡ್’ ಎಂಬ ಟ್ಯಾಗ್‌ಲೈನ್ ನೀಡಿದ್ದಾರೆ.

ಈ ಚಿತ್ರದಲ್ಲಿ ಸಿಖಂದರ್ ಖೇರ್, ಮನು ರಿಷಿ ಚಡ್ಡಾ, ಸುದೇಶ್ ಲೆಹ್ರಿ ಮತ್ತು ಗ್ರುಷಾ ಕಪೂರ್ ನಟಿಸಿದ್ದಾರೆ. ಸೋಮಸಿಂಗ್ ಡಿಯೋ ಮತ್ತು ಮಜಾಹಿರ್ ಅಬ್ಬಾಸ್ ನಿರ್ಮಾಣ ಮಾಡಿದ್ದಾರೆ.

ಕಾಮಿಡಿ ಹಾಗೂ ಭಾವನಾತ್ಮಕ ವಿಷಯ ಆಧಾರಿತ ‘ಜಸ್ಸಿ ವೆಡ್ಸ್ ಜಸ್ಸಿ’ ಸಿನಿಮಾವು ಪ್ರೇಕ್ಷರ ಗಮನ ಸೆಳೆಯುತ್ತದೆ ಎಂದು ಚಿತ್ರತಂಡ ಹೇಳಿಕೊಂಡಿದೆ.



## ‘ವಡಾ ಚೆನ್ನೈ’ ಹಳಿಗೆ ವೆಟ್ರಿಮಾರನ್

**‘ಜೈಲರ್’** ಸಿನಿಮಾ ನಿರ್ದೇಶಕ ನೆಲ್ಸನ್ ದಿಲೀಪ್ ಕುಮಾರ್ ಗೊತ್ತಲ್ಲ. ಅವರು ಸಿಲಂಬರಸನ್ ಅವರ ಸಂದರ್ಶನ ಮಾಡುವ ದೃಶ್ಯವೊಂದು ಈಗ ಓಡಾಡುತ್ತಿದೆ. ಅದರಲ್ಲಿ ಅವರು ಸಿಂಬು ಅರ್ಥಾತ್ ಸಿಲಂಬರಸನ್ ಅವರನ್ನು, ‘ನಿಮ್ಮ ಬಗ್ಗೆ ಸಿನಿಮಾ ಆದರೆ ಆ ಪಾತ್ರವನ್ನು ಯಾರು ಮಾಡಬೇಕು’ ಎಂದು ಪ್ರಶ್ನಿಸುತ್ತಾರೆ. ಆಗ ಸಿಂಬು, ‘ಧನುಷ್ ಮಾಡಿದರೆ ಚೆನ್ನಾಗಿರುತ್ತದೆ’ ಎನ್ನುತ್ತಾರೆ. ಇದು ‘ಅರಸನ್’ ತಮಿಳು ಸಿನಿಮಾ ಟ್ರೈಲರ್‌ನಲ್ಲಿನ ತುಣುಕು.

ಪಾತಕಲೋಕದ ವಸ್ತುವನ್ನು ಇಟ್ಟುಕೊಂಡು ನಿರ್ದೇಶಕ ವೆಟ್ರಿಮಾರನ್ ಏಳು ವರ್ಷಗಳ ಹಿಂದೆ ‘ವಡಾ ಚೆನ್ನೈ’ ಸಿನಿಮಾ ನಿರ್ದೇಶಿಸಿದ್ದರು. ಈಗ ಅದೇ ಶೈಲಿಯಲ್ಲಿ ‘ಅರಸನ್’ ಕಟ್ಟುತ್ತಿದ್ದಾರೆ. ಅದನ್ನು ಚಿತ್ರದ ಟ್ರೈಲರ್‌ನ ದೃಶ್ಯಗಳೇ ಸಾರಿವೆ. ‘ವಡಾ ಚೆನ್ನೈ’ನಲ್ಲಿ ಧನುಷ್ ಅಭಿನಯಿಸಿದ್ದರು. ಆ ಸಿನಿಮಾದ ಪಾತ್ರಕ್ಕೆ ಕನೆಕ್ಟ್ ಮಾಡುವ ಉದ್ದೇಶದಿಂದಲೇ ನೆಲ್ಸನ್ ಅವರಿಂದ ಸಿಂಬು ಸಂದರ್ಶನ ಮಾಡಿಸುವ ದೃಶ್ಯವೊಂದನ್ನು ಚಿತ್ರಕ್ಕೆ ಅಳವಡಿಸಿರುವುದು. ‘ವಿಡು ದಲೈ’ ತಮಿಳು ಚಿತ್ರವನ್ನು ಎರಡು ಭಾಗಗಳಲ್ಲಿ ನಿರ್ದೇಶಿಸಿದ್ದ ವೆಟ್ರಿಮಾರನ್, ಅವುಗಳಲ್ಲಿ ಸೋಲುಂಡಿದ್ದರು. ಹಾಕಿದ್ದ ಬಂಡವಾಳ ಸಲೀಸಾಗಿ ಮರಳ ಲಾರದಂತಹ ಪ್ರತಿಕ್ರಿಯೆ ಆ ಚಿತ್ರಗಳಿಗೆ ಪ್ರೇಕ್ಷಕರಿಂದ ಸಿಕ್ಕಿತ್ತಷ್ಟೆ.

‘ಅಸುರನ್’, ‘ವಡಾ ಚೆನ್ನೈ’ ಸಿನಿಮಾಗಳ ಗೆಲುವು ವೆಟ್ರಿಮಾರನ್ ಅವರಿಗೆ ಕೆಲವು ಪ್ರಯೋಗಗಳಿಗೆ ಕೈಹಾಕುವಷ್ಟು ಆತ್ಮವಿಶ್ವಾಸವನ್ನು ತಂದುಕೊಟ್ಟಿದ್ದವು. ಅದರ ಫಲವಾಗಿಯೇ ಅವರು ‘ವಿಡು ದಲೈ’ ತಯಾರಿಸಿದ್ದು. ಈಗ ಮತ್ತೆ ಅವರು ತಮ್ಮ ಹಳೆಯ ಶೈಲಿಗೆ ‘ಅರಸನ್’ ಮೂಲಕ ಮರಳುತ್ತಿದ್ದಾರೆ. ಸಿಂಬು ದ್ವಿಪಾತ್ರದಲ್ಲಿ ಅಭಿನಯಿಸಿರುವ ಚಿತ್ರವಿದು. ಒಂದು ಪಾತ್ರದಲ್ಲಿ ಅವರು ಯುವಕ. ಇನ್ನೊಂದರಲ್ಲಿ ಕೂದಲು ಹಣ್ಣಾಗಿರುವ ಹಳೆಯ ಡಾನ್.

ಇದೇ ಮೊದಲ ಬಾರಿಗೆ ಸಂಗೀತ ನಿರ್ದೇಶಕ ಅನಿರುದ್ಧ್ ರವಿಚಂದರ್ ಅವರಿಂದ ತಮ್ಮ ಚಿತ್ರದ ಹಾಡುಗಳಿಗೆ ವೆಟ್ರಿಮಾರನ್ ಮಟ್ಟು ಹಾಕಿಸಲಿದ್ದಾರೆ. ಕೆವಿನ್ ಹಾಗೂ ಮಣಿಕಂಠನ್ ಕೂಡ ಚಿತ್ರದ ಪ್ರಮುಖ ಪಾತ್ರಗಳಿಗೆ ಬಣ್ಣ ಹಚ್ಚಲಿದ್ದಾರೆ.

## ವಿಜಯ್‌ಗೆ ಕೀರ್ತಿ ಜೋಡಿ



ಟಾಲಿವುಡ್ ನಟ ವಿಜಯ್ ದೇವರಕೊಂಡ ನಟನೆಯ ಹೊಸ ಸಿನಿಮಾ ಸೆಟ್ಟೇರಿದೆ. ವಿಜಯ್‌ಗೆ ಜೋಡಿಯಾಗಿ ಈ ಬಾರಿ ಕೀರ್ತಿ ಸುರೇಶ್ ನಟಿಸುತ್ತಿದ್ದು, ಹೈದರಾಬಾದ್‌ನಲ್ಲಿ ಇತ್ತೀಚೆಗೆ ಚಿತ್ರದ ಮುಹೂರ್ತ ನಡೆದಿದೆ.

ನಿರ್ಮಾಪಕ ಅಲ್ಲು ಅರವಿಂದ್ ಅವರು ಚಿತ್ರಕ್ಕೆ ಕ್ಲ್ಯಾಪ್ ಮಾಡಿದರು. ನಿರ್ಮಾಪಕ ನಿರಂಜನ್ ರೆಡ್ಡಿ ಚಿತ್ರೀಕರಣಕ್ಕೆ ಚಾಲನೆ ನೀಡಿದರೆ, ನಿರ್ದೇಶಕ ಹನು ರಾಘವಪುಡಿ ಮೊದಲ ದೃಶ್ಯವನ್ನು ನಿರ್ದೇಶಿಸಿದರು. ಶ್ರೀ ವೆಂಕಟೇಶ್ವರ ಕ್ರಿಯೇಷನ್ಸ್ ಬ್ಯಾನರ್ ಅಡಿಯಲ್ಲಿ ನಿರ್ಮಾಪಕರಾದ ದಿಲ್ ರಾಜು ಮತ್ತು ಶಿರೀಶ್ ಈ ಚಿತ್ರ ನಿರ್ಮಾಣ ಮಾಡುತ್ತಿದ್ದಾರೆ. ‘ರಾಜಾ ವಾರು ರಾಣಿಗಾರು’ ಚಿತ್ರದ ಮೂಲಕ ಖ್ಯಾತಿ ಪಡೆದ ನಿರ್ದೇಶಕ ರವಿಕಿರಣ್ ಕೋಲಾ ಈ ಪ್ರಾಜೆಕ್ಟ್‌ಗೆ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ.

ಶ್ರೀ ವೆಂಕಟೇಶ್ವರ ಕ್ರಿಯೇಷನ್ಸ್ ಬ್ಯಾನರ್ ಅಡಿಯಲ್ಲಿ ಮೂಡಿಬರುತ್ತಿರುವ 59ನೇ ಚಿತ್ರ ಇದಾಗಿದೆ. ಗ್ರಾಮೀಣ ಆ್ಯಕ್ಷನ್ ಡ್ರಾಮಾ ಹಿನ್ನೆಲೆಯಲ್ಲಿ ಸಿನಿಮಾ ಮೂಡಿ ಬರಲಿದ್ದು, ಇದೇ ತಿಂಗಳ 16ರಿಂದ ಚಿತ್ರೀಕರಣ ಪ್ರಾರಂಭವಾಗಲಿದೆ. ಮುಂದಿನ ವರ್ಷ ಸಿನಿಮಾ ಬಿಡುಗಡೆ ಮಾಡಲು ಚಿತ್ರತಂಡ ಯೋಜನೆ ಹಾಕಿಕೊಂಡಿದೆ.



ಸಿನಿ ಹನಿ

## ಅಮಿತಾಭ್ ಬಚ್ಚನ್ ಮುಂದೆ ಲುಂಗಿ ಕಟ್ಟಿ ಡೈಲಾಗ್ ಹೇಳಿದ ರಿಷಬ್

ಸ್ಯಾಂಡಲ್‌ವುಡ್ ನಟ ರಿಷಬ್ ಶೆಟ್ಟಿ ‘ಕೌನ್ ಬನೇಗಾ ಕರೋಡ್‌ಪತಿ’ ಕಾರ್ಯಕ್ರಮದಲ್ಲಿ ಬಾಲಿವುಡ್ ನಟ ಅಮಿತಾಭ್ ಬಚ್ಚನ್ ಅವರ ಜೊತೆಗೆ ಕಾಣಿಸಿಕೊಂಡಿದ್ದಾರೆ. ಕಳೆದ ಶನಿವಾರ ಅಮಿತಾಭ್ ಅವರ ಹುಟ್ಟುಹಬ್ಬ ಇತ್ತು. ಹೀಗಾಗಿ, ರಿಷಬ್ ಶೆಟ್ಟಿ ಬಾಲಿವುಡ್ ಬಿಗ್ ಬಿ ಜೊತೆಗಿರುವ ಫೋಟೊವನ್ನು ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಳ್ಳುವ ಮೂಲಕ ಹುಟ್ಟುಹಬ್ಬಕ್ಕೆ ಶುಭ ಕೋರಿದ್ದರು.



ಇದೀಗ, ಅಮಿತಾಭ್ ನಡೆಸಿಕೊಡುವ ‘ಕೌನ್ ಬನೇಗಾ ಕರೋಡ್‌ಪತಿ’ ಕಾರ್ಯಕ್ರಮದಲ್ಲಿ ರಿಷಬ್ ಭಾಗವಹಿಸಿದ್ದಾರೆ. ಸೋನಿ ಟಿ.ವಿ ತನ್ನ ಸಾಮಾಜಿಕ ಮಾಧ್ಯಮದಲ್ಲಿ ಪ್ರೋಮೊ ಒಂದನ್ನು ಬಿಡುಗಡೆ ಮಾಡಿದೆ. ಆ ಪ್ರೋಮೊದಲ್ಲಿ ರಿಷಬ್ ಶೆಟ್ಟಿ ಅವರನ್ನು ಅಮಿತಾಭ್ ಅವರು ‘ಕೌನ್ ಬನೇಗಾ ಕರೋಡ್‌ಪತಿ’ ವೇದಿಕೆಗೆ ಬರಮಾಡಿಕೊಂಡಿದ್ದಾರೆ. ಈ ವೇಳೆ ರಿಷಬ್ ಲುಂಗಿ ಕಟ್ಟಿ, ಅಮಿತಾಭ್ ಮುಂದೆಯೇ ಖಡಕ್ ಡೈಲಾಗ್ ಹೇಳಿದ್ದಾರೆ. ಆಗ ರಿಷಬ್ ಅವರು ಅಮಿತಾಭ್ ಅವರಿಗೆ ವಿಶೇಷ ಉಡುಗೊರೆಯನ್ನು ಕೂಡ ನೀಡಿದ್ದಾರೆ.

ರಿಷಬ್ ಶೆಟ್ಟಿ ನಟಿಸಿ, ನಿರ್ದೇಶಿಸಿರುವ ‘ಕಾಂತಾರ ಚಾಪ್ಟರ್ 1’ ಸಿನಿಮಾ ಅ. 2ರಂದು ಅದ್ದೂರಿಯಾಗಿ ತೆರೆಕಂಡಿತ್ತು. ಬಿಡುಗಡೆಯಾದ ಮೊದಲ ವಾರದಲ್ಲಿ ವಿಶ್ವದಾದ್ಯಂತ ₹ 509.25 ಕೋಟಿ ಗಳಿಸಿದ ಸಿನಿಮಾ ಇಲ್ಲಿಯವರೆಗೂ ಸುಮಾರು ₹ 650 ಕೋಟಿ ಬಾಚಿದೆ. ಕರ್ನಾಟಕದಲ್ಲೇ ಸಿನಿಮಾ ಸುಮಾರು ₹ 190 ಕೋಟಿಯಷ್ಟು ಗಳಿಸಿದೆ ಎಂದಿವೆ ಮೂಲಗಳು. ರಾಜಧಾನಿ ಬೆಂಗಳೂರಿನ ಏಕಪರದೆ ಚಿತ್ರಮಂದಿರಗಳಲ್ಲಿ ಮೊದಲ ವಾರ ಸುಮಾರು ₹ 80 ಲಕ್ಷದಿಂದ ₹ 1 ಕೋಟಿವರೆಗೆ ಗಳಿಕೆಯಾಗಿದೆ.

ಸಾಂಸ್ಕೃತಿಕ




## ವಾರ್ಷಿಕೋತ್ಸವ

**ಆರೋಹಣ** ಟ್ರಸ್ಟ್‌ನ 7ನೇ ವರ್ಷದ ವಾರ್ಷಿಕೋತ್ಸವ ಸಮಾರಂಭವನ್ನು ಅಕ್ಟೋಬರ್ 19ರಂದು ಭಾನುವಾರ ಹಮ್ಮಿಕೊಳ್ಳಲಾಗಿದೆ.
**ಉದ್ಘಾಟನೆ:** ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ. ಅತಿಥಿಗಳು: ಮನು ಬಳಿಗಾರ್, ಸತೀಶ್ ಹಂಪಿಹೊಳಿ. **ಪ್ರಶಸ್ತಿ ಪುರಸ್ಕೃತರು:** ಜನಪದ ಗಾಯಕ ಬಾನಂದೂರು ಕೆಂಪಯ್ಯ. ಗೀತಾ ರಾಮಾನುಜಮ್. ಅಧ್ಯಕ್ಷತೆ: ರೂಪಾ ನಾಗೇಂದ್ರ. ನೃತ್ಯ ಪ್ರದರ್ಶನ: ಕಲಾ ಭಾರತಿ ತಂಡದಿಂದ. ಭರತನಾಟ್ಯ: ಸಾಧನ ನೃತ್ಯ ಕೇಂದ್ರದಿಂದ.
**ಸ್ಥಳ:** ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ. ಬೆಳಿಗ್ಗೆ 10ರಿಂದ.

## ‘ಬೆರಳ್‌ಗೆ ಕೊರಳ್’ ಪ್ರದರ್ಶನ

ರಾಷ್ಟ್ರಕವಿ ಕುವೆಂಪು ವಿರಚಿತ ‘ಬೆರಳ್‌ಗೆ ಕೊರಳ್’ ರಂಗಪ್ರಯೋಗವನ್ನು ಅಕ್ಟೋಬರ್ 19ರಂದು ಭಾನುವಾರ ಸಂಜೆ 7ಕ್ಕೆ ಹಮ್ಮಿಕೊಳ್ಳಲಾಗಿದೆ.
**ನಿರ್ದೇಶನ:** ಎಸ್.ರಾಘವೇಂದ್ರ.
**ಸ್ಥಳ:** ಕಲಾಗ್ರಾಮ ಸಾಂಸ್ಕೃತಿಕ ಸಮುಚ್ಚಯ, ಮಲ್ಲತ್ತಹಳ್ಳಿ.


ಬೆರಳ್‌ಗೆ ಕೊರಳ್ ನಾಟಕದ ದೃಶ್ಯ

## ಸೀಕ್ವೆಲ್‌ನಲ್ಲಿ ನಟಿಸಲು ಅಭ್ಯಂತರವಿಲ್ಲ



ಚಿತ್ರದ ಸೀಕ್ವೆಲ್‌ನಲ್ಲಿ ನಟಿಸಲು ಯಾವುದೇ ಅಭ್ಯಂತರವಿಲ್ಲ. ಏಕೆಂದರೆ ಸಿನಿಮಾದ ಸ್ಕ್ರಿಪ್ಟ್ ಒಂದು ಪಾತ್ರವನ್ನು ಮತ್ತೆ ನೋಡಲು ಬಯಸುತ್ತದೆ ಎಂದು ಬಾಲಿವುಡ್ ನಟ ಅಜಯ್ ದೇವಗನ್ ಹೇಳಿದ್ದಾರೆ.

ಈ ವರ್ಷದಲ್ಲಿ ಅಜಯ್ ದೇವಗನ್ ತಮ್ಮ ಹಿಂದಿನ ಹಿಟ್ ಚಿತ್ರಗಳಾದ ‘ರೈಡ್ 2’, ‘ಸನ್ ಆಫ್ ಸರ್ದಾರ್–2’ ಸಿನಿಮಾಗಳಲ್ಲಿ ಅಭಿನ-ಯಿಸಿದ್ದರು. ಇದೀಗ ‘ದೇ ದೇ ಪ್ಯಾರ್ ದೇ 2’ ಸೀಕ್ವೆಲ್‌ನಲ್ಲಿ ನಟಿಸಿದ್ದಾರೆ. ಈ ಚಿತ್ರವು 14ರಂದು ದೇಶದಾದ್ಯಂತ ಚಿತ್ರಮಂದಿರಗಳಲ್ಲಿ ಬಿಡುಗಡೆಯಾ-ಗಲಿದೆ ಎಂದು ಚಿತ್ರತಂಡ ಹೇಳಿದೆ.

ನಿರ್ಮಾಪಕ ಲವ್ ರಂಜನ್ ಜತೆ ಕೆಲಸ ಮಾಡಲು ಇಷ್ಟವಾಗುತ್ತದೆ ಎಂದು ಕೂಡ ಇದೇ ಸಂದರ್ಭದಲ್ಲಿ ಅಜಯ್ ದೇವಗನ್ ಹೇಳಿದ್ದಾರೆ.

ಈ ಬಗ್ಗೆ ಮಾತನಾಡಿರುವ ಅವರು, ಬೇರೆ ರೀತಿಯ ಸ್ಕ್ರಿಪ್ಟ್ ಇದ್ದಾಗ ನನಗೆ ಸೀಕ್ವೆಲ್‌ಗಳು ಇಷ್ಟವಾಗುವುದಿಲ್ಲ ಎಂದಿದ್ದಾರೆ.


ಡಾರ್ಲಿಂಗ್ ಕೃಷ್ಣ ಮನೀಶಾ

## ‘ಬ್ರ್ಯಾಟ್’ ಚಿತ್ರದ ಟ್ರೇಲರ್ ಬಿಡುಗಡೆ

ಡಾರ್ಲಿಂಗ್ ಕೃಷ್ಣ ನಾಯಕನಾಗಿ ನಟಿಸಿರುವ ಬಹುನಿರೀಕ್ಷಿತ ‘ಬ್ರ್ಯಾಟ್’ ಚಿತ್ರದ ಟ್ರೇಲರ್ ಅನ್ನು ಕಿಚ್ಚ ಸುದೀಪ್ ಅನಾವರಣ ಮಾಡಿದರು.

ಶಶಾಂಕ್ ಒಳ್ಳೆಯ ಕಥೆಗಾರ. ಅವರ ನಿರ್ದೇಶನದ ಚಿತ್ರ ಎಂದ ಮೇಲೆ ಚೆನ್ನಾಗಿರುತ್ತದೆ. ಹಾಗೆ ಡಾರ್ಲಿಂಗ್ ಕೃಷ್ಣ ಕೂಡ ಉತ್ತಮ ನಟ. ಇವರಿಬ್ಬರ ಕಾಂಬಿನೇಶನ್‌ನಲ್ಲಿ ಮೂಡಿಬಂದಿದ್ದ ‘ಕೌಸಲ್ಯ ಸುಪ್ರಜ ರಾಮ’ ಚಿತ್ರ ಕೂಡ ಬಿಗ್ ಹಿಟ್ ಆಗಿತ್ತು. ಈ ಚಿತ್ರ ಕೂಡ ಸೂಪರ್ ಹಿಟ್ ಆಗಲಿ ಎಂದು ಸುದೀಪ್ ಹಾರೈಸಿದರು.

‘ಕೌಸಲ್ಯ ಸುಪ್ರಜ ರಾಮ’ದಂತೆ ಬ್ರ್ಯಾಟ್ ಚಿತ್ರದ ಟ್ರೇಲರ್ ಅನ್ನು ಸುದೀಪ್ ಅವರೇ ಬಿಡುಗಡೆ ಮಾಡಿದ್ದಾರೆ. ಇದು ಕೂಡ ದೊಡ್ಡ ಹಿಟ್ ಆಗುವ ನಂಬಿಕೆ ಇದೆ. ಈ ಚಿತ್ರವನ್ನು ಪ್ಯಾನ್ ಇಂಡಿಯಾ ಚಿತ್ರವೆಂದು ನಿರ್ಮಾಣ ಮಾಡಲಾಗಿದ್ದು, ಈವರೆಗೆ ಟೀಸರ್ ಹಾಗೂ ಹಾಡುಗಳನ್ನು ಎಲ್ಲಾ ಭಾಷೆಗಳಲ್ಲಿಯೂ ಬಿಡುಗಡೆ ಮಾಡಿಕೊಂಡು ಬರಲಾಗಿದೆ. ಸದ್ಯಕ್ಕೆ ಟ್ರೇಲರ್ ಕನ್ನಡದಲ್ಲಿ ಮಾತ್ರ ಬಿಡುಗಡೆಯಾಗಿದೆ. ಮುಂದಿನ ದಿನಗಳಲ್ಲಿ ಬೇರೆ ಭಾಷೆಗಳಲ್ಲಿಯೂ ಟ್ರೇಲರ್ ಅನಾವರಣಗೊಳ್ಳಲಿದೆ ಎಂದರು ನಿರ್ದೇಶಕ ಶಶಾಂಕ್.

ಡಾಲ್ಫಿನ್ ಎಂಟರ್‌ಟೈನ್‌ಮೆಂಟ್ ಲಾಂಛನದಲ್ಲಿ ಮಂಜುನಾಥ್ ಕಂದಕೂರ್ ನಿರ್ಮಿಸಿರುವ, ಶಶಾಂಕ್ ನಿರ್ದೇಶನವಿದೆ.

ಡಾರ್ಲಿಂಗ್ ಕೃಷ್ಣ ಮಾತನಾಡಿ, ‘ಶಶಾಂಕ್ ನನಗೆ ನಾಲ್ಕೈದು ಕಥೆಗಳನ್ನು ಹೇಳಿದರು. ಅದರಲ್ಲಿ ನನಗೆ ಈ ಕಥೆ ಹಿಡಿಸಿತು. ಅರ್ಜುನ್ ಜನ್ಯ ಅವರ ಸಂಗೀತ ಸಂಯೋಜನೆಯಲ್ಲಿ ಮೂಡಿಬಂದಿರುವ ಹಾಡುಗಳು ಹಾಗೂ ಚಿತ್ರದ ಟೀಸರ್ ನಿರೀಕ್ಷೆಗೂ ಮೀರಿ ಜನರನ್ನು ತಲುಪಿದೆ. ಈ ಚಿತ್ರದ ನನ್ನ ಲುಕ್ ಕೂಡ ಅಭಿಮಾನಿಗಳಿಗೆ ಇಷ್ಟವಾಗಿದೆ. ಇದೇ ಅ.31ಕ್ಕೆ ನಮ್ಮ ಚಿತ್ರ ತೆರೆಗೆ ಬರುತ್ತಿದೆ. ಪ್ರೋತ್ಸಾಹಿಸಿ’ ಎಂದು ಕೋರಿದರು.

ನಾಯಕಿ ಮನಿಶಾ ಕಂದಕೂರ್, ರಮೇಶ್ ಇಂದಿರಾ, ಡ್ರ್ಯಾಗನ್ ಮಂಜು, ಆನಂದ್ ಆಡಿಯೊ ಸಂಸ್ಥೆಯ ಆನಂದ್, ಗಾಯಕ ಬಾಲು ಬೆಳಗುಂದಿ, ಗಾಯಕಿ ಲಹರಿ, ನಿರ್ಮಾಪಕರ ಸಹೋದರ ಬದರಿನಾಥ್ ಇದ್ದರು.

## ‘ದಿಗ್ಲುಪುರ’ಕ್ಕೆ ಮುಹೂರ್ತ

ಕನ್ನಡದಲ್ಲಿ ಮಾಟ–ಮಂತ್ರ ಆಧಾರಿತ ಚಿತ್ರಗಳು ತೀರಾ ವಿರಳ. ದಶಕಗಳ ಹಿಂದೆ ಏಟು–ಎದಿರೇಟು, ಈಚೆಗೆ ಕಟಕದಂಥ ಸಿನಿಮಾಗಳು ಬಂದಿದ್ದವು. ಬಹಳ ದಿನಗಳ ನಂತರ ಇಂಥದ್ದೆ ಎಳೆ ಇರುವ ಚಿತ್ರವೊಂದು ಸೆಟ್ಟೇರಿದೆ. ಅದುವೇ ದಿಗ್ಲುಪುರ.

ಈಚೆಗೆ ಕಂಠೀರವ ಸ್ಟುಡಿಯೊದಲ್ಲಿ ಈ ಚಿತ್ರದ ಮುಹೂರ್ತ ಸಮಾರಂಭ ನಡೆಯಿತು. ಸಾಹಸ ನಿರ್ದೇಶಕ ಥ್ರಿಲ್ಲರ್ ಮಂಜು ಮುಹೂರ್ತ ದೃಶ್ಯಕ್ಕೆ ಕ್ಲಾಪ್ ಮಾಡಿದರು. ‘ದ ಡೆಡ್ ವಾಕ್ ಇನ್ ಸ್ಕೇರಿ ವಿಲೇಜ್’ ಎಂಬ ಅಡಿಬರಹ ಇರೋ ಈ ಚಿತ್ರಕ್ಕೆ ಮನೋಜ್ಞ ಮನ್ವಂತರ ಕಥೆ, ಚಿತ್ರಕಥೆ ಬರೆದು ಆ್ಯಕ್ಷನ್ ಕಟ್ ಹೇಳಿದ್ದಾರೆ.
ರೇರ್ ವಿಜನ್ ಮೂವೀ ಮೇಕರ್ಸ್ ಮೂಲಕ ಆರ್.ವಿ.ಎಂ.ಎಂ. ಪ್ರೊಡಕ್ಷನ್ಸ್ ಈ ಚಿತ್ರವನ್ನು ನಿರ್ಮಿಸುತ್ತಿದೆ. ರಮೇಶ್ ಪಂಡಿತ್, ಲಯ ಕೋಕಿಲ, ಫರ್ದಿನ್ ಅಹ್ಮದ್ ಪ್ರಮುಖ ಪಾತ್ರಗಳಲ್ಲಿದ್ದಾರೆ.

ಈ ಬಗ್ಗೆ ಮಾತನಾಡಿದ ನಿರ್ದೇಶಕ ಮನೋಜ್ಞ ಮನ್ವಂತರ, ‘ಒಂದೊಳ್ಳೆ ಕಟೆಂಟ್ ಇಟ್ಟುಕೊಂಡು ಸಿನಿಮಾ ಮಾಡಿದರೆ ಗೆಲುವು ಖಂಡಿತ. ಕಂಡು ಕೇಳಿದ ಕಾಲ್ಪನಿಕ ವಿಷಯ ಇಟ್ಟುಕೊಂಡು ಈ ಸಿನಿಮಾ ಮಾಡುತ್ತಿದ್ದೇನೆ. ಭಯ ಅಂದರೇನು?, ಅದರ ಸ್ವರೂಪ ಹೇಗಿರುತ್ತೆ?, ಮನುಷ್ಯ ಸತ್ತರೂ ಆತನ ಆಲೋಚನೆಗಳು ಸಾಯಲ್ಲ ಅನ್ನುವುದೇ ಚಿತ್ರದ ಮೂಲ ಪರಿಕಲ್ಪನೆ’ ಎಂದು ಸಿನಿಮಾ ಕುರಿತು ಮಾಹಿತಿ ನೀಡಿದರು.

80ರ ದಶಕದಲ್ಲಿ ದಿಗ್ಲುಪುರ ಎಂಬ ಕಾಲ್ಪನಿಕ ಹಳ್ಳಿಯಲ್ಲಿ ತಮ್ಮ ಅಹಮಿಕೆಯನ್ನು ನೀಗಿಕೊಳ್ಳುವ ಸಲುವಾಗಿ ಮತ್ತು ತಮ್ಮನ್ನು ವಿರೋಧಿಸುವವ-ರನ್ನು ಮಂತ್ರಶಕ್ತಿಯಿಂದ ಕೊಲ್ಲುವ ಮಂತ್ರವಾ-ದಿಗಳಿರುತ್ತಾರೆ. ಇಂಥ ಹಳ್ಳಿಗೆ ಹೋದವರು ನಿಗೂಢವಾಗಿ ಸಾವನ್ನಪ್ಪುತ್ತಾರೆ. ಐದು ಜನ ನಾಯಕರು ಅಲ್ಲಿಗೆ ಹೋಗಿ, ಅದರ ರಹಸ್ಯವನ್ನು ಬಯಲಿಗೆಳೆಯುತ್ತಾರೆ. ಅಲ್ಲಿಂದ ಬಂದ ಮೇಲೆ ಅವರೂ ಸಾವನ್ನಪ್ಪುತ್ತಾರೆ. ಇದಕ್ಕೆಲ್ಲ ಕಾರಣವೇನು ಎನ್ನುವುದೇ ದಿಗ್ಲುಪುರ ಚಿತ್ರದ ಎಳೆ ಎಂದು ಹೇಳಿದರು.

ರಾಮನಗರ, ಚನ್ನಪಟ್ಟಣ, ತೈಲೂರು, ಮುತ್ತತ್ತಿ, ತಲಕಾಡು ಸುತ್ತಮುತ್ತ ಶೂಟಿಂಗ್ ನಡೆಸುವ ಯೋಜನೆಯಿದೆ. ಹಿರಿಯನಟ ರಮೇಶ್ ಪಂಡಿತ್, ಲಯ ಕೋಕಿಲ ಆ ಊರಿನ ಇಬ್ಬರು ಪ್ರಬಲ ಮಂತ್ರವಾದಿಗಳಾಗಿ ಕಾಣಿಸಿಕೊಳ್ಳುತ್ತಿದ್ದಾರೆ.


ದಿಗ್ಲುಪುರ ಚಿತ್ರತಂಡ

ಪ್ರಜಾವಾಣಿ
ಪ್ರಜಾಪ್ಲಸ್
ಮನರಂಜನೆ | ಜಾಹೀರಾತು
ಪ್ರೋತ್ಸಾಹ | ಉದ್ಯಮ ಅಭಿವೃದ್ಧಿ
ಭಾನುವಾರ • ಅಕ್ಟೋಬರ್ 19, 2025



# ಬೆಳಕಿನ ಹಬ್ಬ

## ಕೂದಲು, ಚರ್ಮದ ಆರೈಕೆ

ದೀಪಾವಳಿ ಅಂದ ತಕ್ಷಣ ತರಹೇವಾರಿ ದೀಪಗಳ ಜೊತೆಗೆ ಚಿತ್ತಾಕರ್ಷಕ ಪಟಾಕಿಗಳು ಕಣ್ಮನ ಸೆಳೆಯುತ್ತವೆ. ಆದರೆ ಅದೇ ಪಟಾಕಿಗಳಿಂದ ನಮ್ಮ ಚರ್ಮಕ್ಕೆ ಆಗುವ ಹಾನಿ ಅದೆಷ್ಟು ಗೊತ್ತೇ? ಪಟಾಕಿಗಳು ಹೊರಹಾಕುವ ಸಲ್ಫರ್ ಡೈ ಆಕ್ಸೈಡ್, ಲೋಹದ ಅಂಶಗಳು, ಹೊಗೆಯಂತಹ ಎಲ್ಲಾ ಅಂಶಗಳು ನಿಮ್ಮ ತ್ವಚೆಯನ್ನು ಹಾಳು ಮಾಡುವುದರಲ್ಲಿ ಮುಂದಿರುತ್ತವೆ.



ಡಾ.ಅಭಿರಾಮ್

ಈ ಕಾರಣಕ್ಕೆ, ದೀಪಾವಳಿಯ ವೇಳೆ ಪಟಾಕಿಯಿಂದ ತ್ವಚೆಗಾಗುವ ಹಾನಿಯನ್ನು ಹೇಗೆ ತಪ್ಪಿಸಿಕೊಳ್ಳಬೇಕು ಎಂಬುದಕ್ಕೆ ಇಲ್ಲಿವೆ ಉಪಯುಕ್ತ ಸಲಹೆಗಳು:

- ಹೊರಗಡೆಯಿಂದ ಮನೆಗೆ ಬಂದ ತಕ್ಷಣ ಮುಖ ತೊಳೆಯಿರಿ.
- ನಿಮ್ಮ ತ್ವಚೆಗೆ ಹೊಂದುವ ಕ್ಲೆನ್ಸರ್‌ನಿಂದ ಮುಖ ತೊಳೆದು ನಂತರ ಸೆರಾಮೈಡ್ಸ್ ಅಥವಾ ಆಲೊವೆರಾವುಳ್ಳ ಮಾಯಿಶ್ಚರೈಸರ್ ಬಳಸಿ.
- ನಿಮಗೆ ಆಸ್ತಮಾ ಇದ್ದಲ್ಲಿ ಅಥವಾ ಸೂಕ್ಷ್ಮ ತ್ವಚೆಯುಳ್ಳವರಾಗಿದ್ದಲ್ಲಿ ಪಟಾಕಿ ಹೆಚ್ಚಾಗಿ ಸಿಡಿಸುವ ಸಮಯದಲ್ಲಿ ಹೊರಗೆ ಹೋಗುವುದನ್ನು ತಪ್ಪಿಸಿ.

### ಡಯಟ್ ಹೀಗಿರಲಿ

- ಅತಿಯಾದ ಸಿಹಿ ಹಾಗೂ ಕರಿದ ಪದಾರ್ಥಗಳು ಮೊಡವೆ ಅಥವಾ ಉರಿಯೂತಕ್ಕೆ ಕಾರಣವಾಗಬಹುದು.
- ಹಬ್ಬದೂಟದಲ್ಲಿ ಆ್ಯಂಟಿ ಆಕ್ಸಿಡೆಂಟ್ ಸಮತೋಲನದಲ್ಲಿ ಇರುವಂತೆ ನೋಡಿಕೊಳ್ಳಿ. ಅಂದರೆ ಹಣ್ಣು, ಸೊಪ್ಪು, ತರಕಾರಿಗಳನ್ನು ಹೆಚ್ಚು ಸೇವಿಸಿ.
- ಪ್ರತಿದಿನ ಒಂದು ಬಟ್ಟಲು ಮೊಸರನ್ನು ಖಾಲಿ ಹೊಟ್ಟೆಯಲ್ಲಿ ಸೇವಿಸಿ. ಇದು ಹೊಟ್ಟೆಯ ಆರೋಗ್ಯವನ್ನು ಕಾಪಾಡುವುದರ ಜೊತೆಗೆ ನಿಮ್ಮ ಚರ್ಮವನ್ನೂ ಆರೋಗ್ಯಕರವಾಗಿ ಇರಿಸುತ್ತದೆ.
- ಸಾಮಾನ್ಯವಾಗಿ ಹಬ್ಬ ಅಥವಾ ಸಮಾರಂಭದ ವೇಳೆ ನೀರು ಸೇವನೆಯನ್ನು ಕಡಿಮೆ ಮಾಡುತ್ತೇವೆ. ಹಾಗೆಯೇ ಸಿಹಿ ಅಥವಾ ಚಹಾ, ಕಾಫಿಯಂತಹ ಪಾನೀಯಗಳ ಸೇವನೆ ಹೆಚ್ಚಾಗಿರುತ್ತದೆ. ಇದರ ಪರಿಣಾಮವಾಗಿ ಚರ್ಮವು ಹೊಳಪು ಕಳೆದುಕೊಳ್ಳುತ್ತದೆ. ಹಾಗಾಗಿ ಈ ನ ಸಲಹೆಗಳನ್ನು ಪಾಲಿಸಿ.
- ಹೆಚ್ಚಿನ ಪ್ರಮಾಣದಲ್ಲಿ ನೀರು ಸೇವಿಸಿ. ನೀರಿಗೆ ಲಿಂಬು ಅಥವಾ ಪುದೀನ ಸೇರಿಸಿ ಕುಡಿದರೆ ಉತ್ತಮ.
- ನೀರಿನ ಪ್ರಮಾಣ ಹೆಚ್ಚಾಗಿರುವ ಸೌತೆಕಾಯಿ, ಕಿತ್ತಳೆ ಮತ್ತು ದಾಳಿಂಬೆ ಹಣ್ಣುಗಳನ್ನು ಹೆಚ್ಚಾಗಿ ಸೇವಿಸಿ.
- ಚರ್ಮವು ರಾತ್ರಿಯ ವೇಳೆಗೆ ಒಣಗಿದಂತೆ ಆಗುವುದರಿಂದ ಹೈಡ್ರೇಟಿಂಗ್ ಸೀರಮ್ ಬಳಸಿ.
- ಮಾಲಿನ್ಯದಿಂದಾಗಿ ಹಾನಿಕಾರಕ ವಿಕಿರಣಗಳಿಂದ ತಪ್ಪಿಸಿಕೊಳ್ಳಲು ಹಗಲಿನ ವೇಳೆ ಸನ್‌ಸ್ಕ್ರೀನ್ ಲೋಷನ್ (SPF 30 ಅಥವಾ ಅದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಇರುವಂತೆ) ಬಳಸಿ.
- ನಿಮಗೆ ದೂಳಿನ ಅಲರ್ಜಿಯಿದ್ದರೆ, ಮೊಡವೆಗಳು, ಇಸುಬು ಅಥವಾ ಎಕ್ಸಿಮಾದಂತಹ ಚರ್ಮದ ಸಮಸ್ಯೆಗಳಿದ್ದರೆ ಹೊರಗೆ ಹೋಗುವುದನ್ನು ಆದಷ್ಟೂ ತಪ್ಪಿಸಿ ಮತ್ತು ಆಗಾಗ ಮುಖವನ್ನು ಸ್ಪರ್ಶಿಸಬೇಡಿ.

### ಪಟಾಕಿ ಸಿಡಿತದಿಂದ ಸುಟ್ಟಗಾಯಗಳಾಗದಂತೆ ತಡೆಯಲು

- ಕಾಟನ್ ಬಟ್ಟೆಗಳನ್ನು ಧರಿಸಿ – ದೊಗಳೆ ಅಥವಾ ಸಿಂಥೆಟಿಕ್ ಬಟ್ಟೆಗಳನ್ನು ಧರಿಸದಿರಿ.
- ಪಟಾಕಿ ಸಿಡಿಸುವ ಸ್ಥಳದ ಹತ್ತಿರ ಒಂದು ಬಕೆಟ್‌ನಲ್ಲಿ ನೀರು ಅಥವಾ ಮರಳು ಇಡಿ.
- ಆದಷ್ಟೂ ಬಯಲಿನಲ್ಲಿ ಪಟಾಕಿ ಸಿಡಿಸಿ – ಇದರಿಂದ ಬೇರೆಯವರಿಗೆ ಹಾನಿಯಾಗುವುದನ್ನು ತಪ್ಪಿಸಬಹುದು.
- ಮಕ್ಕಳು ಪಟಾಕಿ ಸಿಡಿಸುವಾಗ ಜೊತೆಯಲ್ಲಿರಿ. ಪಟಾಕಿ ಇರಿಸಿದ ಸ್ಥಳದಿಂದ ದೂರ ಇರುವಂತೆ ನೋಡಿಕೊಳ್ಳಿ.
- ಹೊರಗೆ ಹೋಗುವ ಮೊದಲು ಚರ್ಮಕ್ಕೆ ಮಾಯಿಶ್ಚರೈಸರ್ ಲೇಪಿಸಿಕೊಳ್ಳಿ, ಚರ್ಮವು ಜಿಡ್ಡಿನಿಂದ ಕೂಡಿದ್ದರೆ ಸುಟ್ಟ ಗಾಯಗಳಾಗುವುದನ್ನು ತಪ್ಪಿಸಬಹುದು.

**ಹಬ್ಬದ ವೇಳೆ ಅಧಿಕ ಸಮಯದ ಮೇಕಪ್ ಮತ್ತು ಸಿಹಿ ಪದಾರ್ಥ ಸೇವನೆ, ಹೊಗೆ ಇದೆಲ್ಲದರಿಂದ ತೊಂದರೆಗೊಳಗಾದ ಚರ್ಮವನ್ನು ಮತ್ತೆ ಮೊದಲಿನಂತಾಗಿಸಲು ಈ ರೀತಿ ಮಾಡಿ**

- ನಿಮ್ಮ ಮೇಕಪ್ ಅನ್ನು ಸಂಪೂರ್ಣವಾಗಿ ಎಣ್ಣೆಯುಕ್ತ ಕ್ಲೆನ್ಸರ್‌ನಿಂದ ಸ್ವಚ್ಛಗೊಳಿಸಿ
- ತ್ವಚೆಗೆ ಹೊಂದುವ ಫೇಸ್‌ವಾಷ್ ಮತ್ತು ಮಾಯಿಶ್ಚರೈಸರ್ ಬಳಸಿ

ತ್ವಚೆಯ ಸಂರಕ್ಷಣೆ ತುಂಬಾ ಮುಖ್ಯವಾದದ್ದು. ಅದರಲ್ಲೂ ನಿಮಗೆ ಮೊಡವೆ, ಇಸುಬು ತರಹದ ಚರ್ಮದ ಸಮಸ್ಯೆಯಿದ್ದಲ್ಲಿ ಅತಿಯಾದ ಮೇಕಪ್ ಬೇಡ. ಹೊಗೆಯಿಂದ ದೂರವಿರಿ. ವೈದ್ಯರು ಸೂಚಿಸಿದ ಕ್ರೀಮ್‌ಗಳನ್ನು ತಪ್ಪದೇ ಬಳಸಿ. ಚರ್ಮಕ್ಕೆ ಸಂಬಂಧಿಸಿದಂತೆ ಯಾವುದೇ ಸಮಸ್ಯೆಗಳು ಕಂಡುಬಂದಲ್ಲಿ ಕೂಡಲೇ ಚರ್ಮತಜ್ಞರನ್ನು ಸಂಪರ್ಕಿಸಿ ಸಲಹೆ ಪಡೆದುಕೊಳ್ಳಿ.

**ಡಾ. ಅಭಿರಾಮ್ ರಾಯಪತಿ,**
ಚರ್ಮರೋಗ ತಜ್ಞ, ವಾಸವಿ ಆಸ್ಪತ್ರೆ



# ಆಟಿಸಂ ಹೊಸ ಭರವಸೆ ನಡವಳಿಕೆ ಚಿಕಿತ್ಸೆ

ಆಟಿಸಂ ಸಮಸ್ಯೆ ಹೊಂದಿರುವ ಮಕ್ಕಳಿಗೆ ಹಾಗೂ ಪಾರ್ಶ್ವವಾಯು ನಂತರ ಸಂವಹನ ಸಾಮರ್ಥ್ಯ ಕಳೆದುಕೊಂಡ ವಯಸ್ಕರಿಗೆ ಸಮಗ್ರ ಚಿಕಿತ್ಸೆ ನೀಡುತ್ತಿದೆ 'ಸಂವಾದ್' ಸೆಂಟರ್ ಫಾರ್ ಸ್ಪೀಚ್ ಆ್ಯಂಡ್ ಎಬಿಎ ಥೆರಪಿ ಸಂಸ್ಥೆ.

ಆಟಿಸಂನಿಂದ ಬಳಲುವ ಮಕ್ಕಳಿಗೆ ನೆರವಾಗಲು ಸ್ಪೀಚ್ ಥೆರಪಿಯೊಂದೇ ಸಾಕಾಗುವುದಿಲ್ಲ ಎಂಬ ಅರಿವಿನ ಮೂಲಕವೇ ಸಂವಾದ್ ಅಸ್ತಿತ್ವಕ್ಕೆ ಬಂದಿದೆ ಎನ್ನುತ್ತಾರೆ ಸಂಸ್ಥೆಯ ಸ್ಥಾಪಕಿ ರಾಧಿಕಾ ಪೂವಯ್ಯ.

'2002ರಲ್ಲಿ ಸಂವಾದ್‌ನ ಮೊದಲ ಕೇಂದ್ರ ಆರಂಭಿಸಿದಾಗ, ಆಟಿಸಂ ಕುರಿತ ಅರಿವು ಭಾರತದಲ್ಲಿ ಹೆಚ್ಚಾಗುತ್ತಿತ್ತು. ಆದರೆ, ಬರೀ ಸ್ಪೀಚ್ ಥೆರಪಿಯೊಂದೇ ಈ ಮಕ್ಕಳಲ್ಲಿ ಸಮರ್ಪಕ ಬದಲಾವಣೆ ತರುವುದಿಲ್ಲ ಎಂಬುದು ನನಗೆ ಸ್ಪಷ್ಟವಾಯಿತು. ಆಗಲೇ 'ಅಪ್ಲೈಡ್ ಬಿಹೇವಿಯರ್ ಅನಾಲಿಸಿಸ್' (ಎಬಿಎ) ಎಂಬ ನೂತನ ಚಿಕಿತ್ಸಾ ವಿಧಾನವನ್ನು ಅರಿತುಕೊಂಡೆ. ಈ ಕ್ಷೇತ್ರದಲ್ಲಿ ಅಮೆರಿಕದ ಫ್ಲಾರಿಡಾ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿ ಪಡೆದು, ಭಾರತದ ಮೊದಲ ಬೋರ್ಡ್ ಪ್ರಮಾಣೀಕೃತ ನಡವಳಿಕೆ ವಿಶ್ಲೇಷಕಿ (ಬಿಸಿಬಿಎ) ಮತ್ತು ಭಾಷಣ ರೋಗಶಾಸ್ತ್ರಜ್ಞೆಯಾಗಿ ಪರಿಣತಿಯನ್ನು ಗಳಿಸಿದೆ' ಎಂದು ಹೇಳುತ್ತಾರೆ.

ಮೊದಲ ಹಂತದಲ್ಲಿಯೇ ಎಬಿಎ ಚಿಕಿತ್ಸೆ ಆರಂಭಿಸಿದ ಮಕ್ಕಳಲ್ಲಿ ಗಮನಾರ್ಹವಾದ ಪ್ರಗತಿ ಕಂಡುಬರುತ್ತದೆ. ಆದರೆ ದೇಶದಲ್ಲಿ ಎಬಿಎ ಚಿಕಿತ್ಸಕರ ಕೊರತೆ ಇದೆ. ಭವಿಷ್ಯದಲ್ಲಿ ವಿಶ್ವವಿದ್ಯಾಲಯಗಳೇ ಈ ಕೋರ್ಸ್ ಅನ್ನು ನೀಡುವಂತೆ ಆಗಬೇಕು ಎಂಬುದು ಅವರ ಕನಸು.

2005ರಲ್ಲಿ ಸಂವಾದ್ ಇನ್‌ಸ್ಟಿಟ್ಯೂಟ್ ಆಫ್ ಸ್ಪೀಚ್ ಆ್ಯಂಡ್ ಹಿಯರಿಂಗ್ ಸ್ಥಾಪನೆಯಾಗಿದ್ದು, ಇಂದು ಬೆಂಗಳೂರಿನ ಮೂರು ಕೇಂದ್ರಗಳಲ್ಲಿ 20ಕ್ಕೂ ಹೆಚ್ಚು ತಜ್ಞರನ್ನು ಹೊಂದಿದೆ. ಅಮೆರಿಕದ ಸಿರಾಕ್ಯೂಸ್ ವಿಶ್ವವಿದ್ಯಾಲಯದೊಂದಿಗೆ ಸಹಯೋಗ ಹೊಂದಿರುವ ಸಂಸ್ಥೆಯು ಅಂತರರಾಷ್ಟ್ರೀಯ ಮಟ್ಟದ ಚಿಕಿತ್ಸಾ ಮಾನದಂಡಗಳನ್ನು ಅನುಸರಿಸುತ್ತದೆ.


**ಭವಿಷ್ಯದ ದೃಷ್ಟಿಕೋನ:** ಆಟಿಸಂ ಹೊಂದಿರುವ ಮಕ್ಕಳಿಗೆ ಇನ್ನಷ್ಟು ಕೇಂದ್ರಗಳನ್ನು ತೆರೆಯುವುದು, ಆನ್‌ಲೈನ್ ಮೂಲಕ ಪೋಷಕರಿಗೆ ತರಬೇತಿ ಕಾರ್ಯಕ್ರಮಗಳನ್ನು ರೂಪಿಸುವುದು ಮತ್ತು ಆರೋಗ್ಯಕ್ಕೆ ಸಂಬಂಧಿಸಿದಂತೆ ಹೊಸ ಕೋರ್ಸ್‌ಗಳನ್ನು ಪರಿಚಯಿಸುವುದು.

ಸಂಸ್ಥೆಗೆ ಸೇರಿದ ಸಂವಾದ್ ಫೌಂಡೇಶನ್ ಟ್ರಸ್ಟ್‌ನ ಮುಖಾಂತರ, ಬಡ ಕುಟುಂಬಗಳಿಗೆ ಕಡಿಮೆ ದರದಲ್ಲಿ ಅಥವಾ ಉಚಿತವಾಗಿ ಚಿಕಿತ್ಸೆಯನ್ನು ಒದಗಿಸಲಾಗುತ್ತಿದೆ. ಪಾರ್ಶ್ವವಾಯುವಿನಿಂದ ಬಳಲುವ ವಯಸ್ಕರಿಗೆ ಉಚಿತ ಸ್ಪೀಚ್ ಥೆರಪಿಯನ್ನು ನೀಡಲಾಗುತ್ತಿದೆ. ಕನಿಷ್ಠ ಆರು ತಿಂಗಳ ನಿರಂತರ ಚಿಕಿತ್ಸೆಯ ಫಲವಾಗಿ ಅನೇಕರು ಚೇತರಿಸಿಕೊಂಡು ಮತ್ತೆ ಕೆಲಸಕ್ಕೆ ಮರಳಿದ್ದಾರೆ.

ಸಮಾಜದ ವಿವಿಧ ವರ್ಗಗಳನ್ನೂ ತಲುಪುವಂತೆ ಸಂಸ್ಥೆ ಕೈಗೊಂಡಿರುವ ಈ ಪ್ರಯತ್ನ, ನೂರಾರು ಕುಟುಂಬಗಳಿಗೆ ಹೊಸ ಭರವಸೆಯ ಬೆಳಕು ನೀಡಲಿದೆ ಎಂಬ ಆಶಾಭಾವನೆ ರಾಧಿಕಾ ಅವರದು.

ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳು ಈ ಚಿಕಿತ್ಸೆಗಳ ನೆರವು ಪಡೆಯಲು ಹಾಗೂ ಚಿಕಿತ್ಸೆಯ ಬಗ್ಗೆ ಹೆಚ್ಚಿನ ಮಾಹಿತಿ ಪಡೆಯಲು ಈ ಮೊಬೈಲ್ ಸಂಖ್ಯೆಗಳನ್ನು ಸಂಪರ್ಕಿಸಬಹುದು: 9663388623/ 9480295004

ಕಾಳಜಿ



# ಕಣ್ಣುಗಳು ಜೋಪಾನ

ಬೆರಗುಗೊಳಿಸುವ ದೀಪಗಳು ಹಾಗೂ ಪಟಾಕಿಗಳ ನಡುವೆಯೂ ಕಣ್ಣುಗಳ ಬಗ್ಗೆ ಜಾಗ್ರತೆ ವಹಿಸುವುದು ಬಹುಮುಖ್ಯ. ಪಟಾಕಿಗಳಲ್ಲಿರುವ ರಾಸಾಯನಿಕ ಅಂಶಗಳು ಕಣ್ಣಿನ ಮೇಲೆ ನೇರವಾದ ಪರಿಣಾಮ ಬೀರಬಹುದು. ಸಾಮಾನ್ಯ ಪಟಾಕಿಗಳು, ಸುರುಸುರುಬತ್ತಿ ಅಷ್ಟೇ ಅಲ್ಲದೇ ಚಕ್ರ ಪಟಾಕಿಗಳು ಕಣ್ಣಿಗೆ ಹಾನಿ ಮಾಡಬಲ್ಲವು. ಪಟಾಕಿ ಹೊಡೆಯುವವರಷ್ಟೆ ಅಲ್ಲದೇ ಹಾದಿಹೋಕರೂ ಕೂಡ ಪಟಾಕಿಗಳಿಂದ ಕಣ್ಣಿಗೆ ಗಾಯ ಮಾಡಿಕೊಂಡ ಉದಾಹರಣೆಗಳಿವೆ.

ಪಟಾಕಿಯ ಸಿಡಿತದಿಂದ ಕಣ್ಣಿಗೆ ಪೆಟ್ಟಾದರೆ ಸೌಮ್ಯವಾದ ಕಿರಿಕಿರಿಯಿಂದ ಕಾರ್ನಿಯಲ್ ಸವೆತ, ರೆಟಿನಲ್‌ನಲ್ಲಿ ತೊಂದರೆ ಕಾಣಿಸಿಕೊಳ್ಳಬಹುದು. ಪಟಾಕಿಯಲ್ಲಿ ಬೆರೆತಿರುವ ಸ್ಫೋಟಕ ಪದಾರ್ಥಗಳು, ರಾಸಾಯನಿಕಗಳಿಂದ ಶಾಶ್ವತ ಕುರುಡುತನ ಬರಬಹುದು. ಅಷ್ಟೆ ಅಲ್ಲದೇ ಪಟಾಕಿ ಸಿಡಿತದಿಂದಾಗುವ ಹೊಗೆಯು ಗಂಟಲು ಊತ ಮತ್ತು ಗಂಟಲು ಸೋಂಕುಗಳಿಗೆ ಕಾರಣವಾಗಬಹುದು. ಕಾಂಟ್ಯಾಕ್ಟ್ ಲೆನ್ಸ್ ಧರಿಸಿರುವವರು ಈ ಪಟಾಕಿಯಿಂದಾಗುವ ಶಾಖಕ್ಕೆ ನೇರವಾಗಿ ಒಡ್ಡಿಕೊಂಡರೆ ಕಣ್ಣುಗಳಲ್ಲಿ ಕಿರಿ ಕಿರಿ ಕಾಣಿಸಿಕೊಳ್ಳಬಹುದು. ಕಣ್ಣಿನ ಗುಡ್ಡೆಗೆ ಗಾಯ, ಕಣ್ಣಿನಸುತ್ತ ಮೂಗೇಟು, ಕಣ್ಣಿನ ಮುಂಭಾಗದಲ್ಲಿ ರಕ್ತಸ್ರಾವ, ಕಣ್ಣಿನ ಮುಂಭಾಗದಲ್ಲಿ ರಕ್ತಸ್ರಾವ ಉಂಟಾಗಬಹುದು.

**ಡಾ. ರವಿ ದೊರೈರಾಜ್,**
ನೇತ್ರತಜ್ಞರು, ಅಗರ್‌ವಾಲ್ ಕಣ್ಣಿನ ಆಸ್ಪತ್ರೆ

### ಏನು ಮಾಡಬೇಕು?

- ಪಟಾಕಿಯ ಕಿಡಿಗಳು ಕಣ್ಣಿನಲ್ಲಿ ತೂರಿದರೆ, ನಿಮ್ಮ ಕಣ್ಣು ರೆಪ್ಪೆಗಳನ್ನು ತೆರೆದಿಟ್ಟು ನಿರಂತರವಾಗಿ ನೀರಿನಿಂದ ತೊಳೆಯಿರಿ.
- ಕಣವನ್ನು ತೆಗೆದುಹಾಕಲು ಸಾಧ್ಯವಾಗದಿದ್ದರೆ, ಕಣ್ಣುಗಳನ್ನು ಮುಚ್ಚಿಟ್ಟು ಕೂಡಲೇ ವೈದ್ಯರನ್ನು ಭೇಟಿ ಮಾಡಿ.
- ಕಣ್ಣಿಗೆ ರಾಸಾಯನಿಕಗಳು ಸೋಕಿದರೆ, 30 ನಿಮಿಷಗಳ ಕಾಲ ತೊಳೆಯಿರಿ. ಕಣ್ಣಿನ ವೈದ್ಯರನ್ನು ಸಂಪರ್ಕಿಸಿ.
- ಪಟಾಕಿಗಳನ್ನು ನಿರ್ವಹಿಸುವಾಗ ರಕ್ಷಣಾತ್ಮಕ ಕನ್ನಡಕ ಅಥವಾ ಗಾಗಲ್ಸ್ ಧರಿಸಿ.
- ಸುರಕ್ಷಿತ ದೂರವನ್ನು ಕಾಯ್ದುಕೊಳ್ಳಲು ಪ್ರಯತ್ನಿಸಿಸಿ. ಕನಿಷ್ಠ 5 ಮೀಟರ್ ದೂರ ಕಾಯ್ದುಕೊಳ್ಳಿ.
- ಪಟಾಕಿ ಸಿಡಿಸುವ ಮೊದಲು ಕಾಂಟ್ಯಾಕ್ಟ್ ಲೆನ್ಸ್‌ಗಳನ್ನು ತೆಗೆದುಹಾಕಿ. ಬದಲಿಗೆ ರಕ್ಷಣಾತ್ಮಕ ಕನ್ನಡಕವನ್ನು ಬಳಸಿ.
- ಬಳಸಿದ ಪಟಾಕಿಗಳನ್ನು ವಿಲೇವಾರಿ ಮಾಡುವ ಮೊದಲು ಅವುಗಳನ್ನು ನೀರಿನಲ್ಲಿ ನೆನೆಸಿ ನಿಷ್ಕ್ರಿಯಗೊಳಿಸಿ.
- ಆಕಸ್ಮಿಕ ಬೆಂಕಿ ನಂದಿಸಲು ಹತ್ತಿರದಲ್ಲಿ ನೀರು ಅಥವಾ ಮರಳಿನ ಬಕೆಟ್ ಇರಿಸಿ.
- ಪಟಾಕಿಗಳನ್ನು ಮಕ್ಕಳಿಗೆ ತಲುಪದಂತೆ ಸುರಕ್ಷಿತವಾಗಿ ಸಂಗ್ರಹಿಸಿ.
- ಸುಟ್ಟ ಪಟಾಕಿಗಳ ಮೇಲೆ ಕಾಲಿಡುವುದನ್ನು ತಪ್ಪಿಸಲು ಗಟ್ಟಿ ಚಪ್ಪಲಿಗಳನ್ನು ಧರಿಸಿ.
- ಮಕ್ಕಳು ಪಟಾಕಿ ಹೊಡೆಯುತ್ತಿದ್ದರೆ, ಅವರ ಜತೆ ಇರಿ.

### ಏನು ಮಾಡಬಾರದು?

- ಕಣ್ಣುಗಳನ್ನು ಉಜ್ಜಬೇಡಿ ಅಥವಾ ಕೆರೆದುಕೊಳ್ಳಬೇಡಿ.
- ಗಾಯಗೊಂಡ ಕಣ್ಣಿಗೆ ಒತ್ತಡ ಹೇರಬೇಡಿ.
- ದೊಡ್ಡ ಕಣವನ್ನು ಅಥವಾ ಸಿಕ್ಕಿಹಾಕಿಕೊಂಡ ಕಣವನ್ನು ನೀವೇ ತೆಗೆದುಹಾಕಲು ಪ್ರಯತ್ನಿಸಬೇಡಿ.
- ಕಣ್ಣಿನ ಗಾಯಗಳಿಗೆ ಪೇನ್ ರಿಲೀವರ್‌ಗಳು ಸೇರಿದಂತೆ ಸ್ವಯಂ ಔಷಧ ತೆಗೆದಕೊಳ್ಳಬೇಡಿ.



# ಭುಜದ ನೋವು ನಿರ್ಲಕ್ಷ್ಯ ಸಲ್ಲ

ಆಗಾಗ್ಗೆ ನೀವು ಭುಜದ ನೋವಿನಿಂದ ಬಳಲುತ್ತಿದ್ದೀರಾ?. ಹಾಗಿದ್ದರೆ ನಿರ್ಲಕ್ಷ್ಯ ಮಾಡಬೇಡಿ. ಸದ್ಯಕ್ಕೆ ಭುಜದ ನೋವಿನ ಸಮಸ್ಯೆ ಬೆನ್ನುನೋವಿಗೆ ಪ್ರತಿಸ್ಪರ್ಧಿ ಎನಿಸಿಕೊಂಡಿದೆ.



ಡಾ. ಬನರ್ಜಿ

ಭಾರತೀಯ ಮೂಳೆಚಿಕಿತ್ಸಾ ಸಂಘದ ಸಂಶೋಧನೆಯ ಪ್ರಕಾರ 25ರಿಂದ 45 ವಯೋಮಿತಿಯಲ್ಲಿರುವ ವಿವಿಧ ಬಗೆಯ ವೃತ್ತಿಪರರಲ್ಲಿ ಶೇ 40ರಷ್ಟು ಮಂದಿ ಭುಜದ ಸಮಸ್ಯೆಯಿಂದ ನರಳುತ್ತಿದ್ದಾರೆ.

ದೀರ್ಘಕಾಲ ಮೇಜಿನ ಮುಂದೆ ಕುಳಿತು ಕೆಲಸ ಮಾಡುವುದು, ಕಳಪೆ ಭಂಗಿ, ನಿರಂತರ ಫೋನ್‌ಗಳ ಬಳಕೆ, ಭಾರವಾದ ಚೀಲಗಳನ್ನು ಹೊತ್ತುಕೊಂಡು ಭುಜ ಮತ್ತು ಬೆನ್ನಿನ ಸ್ನಾಯುಗಳ ಮೇಲೆ ಅಪಾರ ಒತ್ತಡ ಹೇರಡುವುದು, ವ್ಯಾಯಾಮ ಮಾಡದೇ ಇರುವ ಜಡ ಬದುಕು, ಸತತ ಗ್ಯಾಜೆಟ್ ಬಳಕೆಯೂ ಭುಜದ ನೋವಿಗೆ ಕಾರಣವಾಗಿರಬಹುದು ಎನ್ನುತ್ತದೆ ಸಂಶೋಧನೆ. ನಿರಂತರವಾಗಿ ಭುಜದಲ್ಲಿ ಸಣ್ಣಗೆ ನೋವು ಬರುತ್ತಿದ್ದರೆ ಅದು ಕ್ರಮೇಣ ದೊಡ್ಡ ಪ್ರಮಾಣದಲ್ಲಿ ನೋವಾಗಿ ಕಾಣಿಸಿಕೊಳ್ಳುವ ಸಾಧ್ಯತೆ ಇದೆ. ಫ್ರೋಜನ್ ಹಾಗೂ ರೋಟೇಟರ್ ಕಫ್‌ನಂಥ ಸಮಸ್ಯೆಗಳು ಕಾಣಿಸಿಕೊಳ್ಳಬಹುದು. ಭುಜದ ನೋವಿನಿಂದಾಗಿ ಕುತ್ತಿಗೆ ಅಥವಾ ಬೆನ್ನು ಭಾಗದಲ್ಲಿ ನೋವು ಉಲ್ಬಣಗೊಳ್ಳುವ ಸಾಧ್ಯತೆ ಇರುತ್ತದೆ.

### ಲಕ್ಷಣಗಳು ಹೀಗಿವೆ

- ವಿಶೇಷವಾಗಿ ಬೆಳಿಗ್ಗೆ ಸಮುಯದಲ್ಲಿ ನಿರಂತರ ನೋವು ಅಥವಾ ಬಿಗಿತ ಉಂಟಾಗಬಹುದು.
- ವಸ್ತುಗಳನ್ನು ಎತ್ತುವಾಗ ಭುಜದಲ್ಲಿ ನೋವು ಕಾಣಿಸಿಕೊಳ್ಳಬಹುದು
- ನಿರ್ದಿಷ್ಟ ಚಲನೆಗಳ ಸಮಯದಲ್ಲಿ ತೀಕ್ಷ್ಣವಾದ ಸೆಳೆತ ಉಂಟಾಗಬಹುದು.
- ಊತ, ಉರಿ ಕಾಣಿಸಿಕೊಳ್ಳಬಹುದು.
- ನೋವಿನಿಂದ ನಿದ್ರೆ ಬಾರದೇ ಇರಬಹುದು. ನೋವು ಕ್ರಮೇಣ ಭುಜದಿಂದ ಕುತ್ತಿಗೆ ಹಾಗೂ ತೋಳಿನ ಸ್ನಾಯುಗಳ ಮೇಲೂ ಪರಿಣಾಮ ಬೀರಬಹುದು.

### ಏನು ಮಾಡಬಹುದು?

- ಕೆಲಸದ ನಡುವೆ ಆಗಾಗ್ಗೆ ವಿರಾಮಗಳನ್ನು ತೆಗೆದುಕೊಳ್ಳಿ ಭುಜಗಳನ್ನು ಆಗಾಗ್ಗೆ ತಿರುಗಿಸಿ.
- ಮೇಜಿನ ಮುಂದೆ, ನೇರವಾಗಿ ಕುಳಿತುಕೊಳ್ಳಿ ಮತ್ತು ಬಾಗುವುದನ್ನು ತಪ್ಪಿಸಿ. ಕೆಲಸದ ಮಧ್ಯೆ ಸ್ವಲ್ಪ ತಲೆ-ಕುತ್ತಿಗೆಯ ಭಾಗದಲ್ಲಿ ಚಲನೆಗಳನ್ನು ಮಾಡಿ ಮತ್ತು ಕಣ್ಣುಗಳ ವಿಶ್ರಾಂತಿಗೆ 20-20-20 ನಿಯಮ ಅನುಸರಿಸಿ.
- ಎರಡು ವಾರಗಳಿಗಿಂತ ಹೆಚ್ಚು ಕಾಲ ಭುಜ ಹಾಗೂ ತೋಳಿನ ಭಾಗದಲ್ಲಿ ನೋವು ಕಾಣಿಸಿಕೊಂಡರೇ ತಜ್ಞವೈದ್ಯರನ್ನು ನೋಡಿ.

**ಡಾ. ಬನರ್ಜಿ ಬಿ.ಎಚ್.**
ಮೂಳೆತಜ್ಞ, ಸಾಕ್ರಾ ವರ್ಲ್ಡ್ ಆಸ್ಪತ್ರೆ

# ಬದಲಾಗುತ್ತಿದೆ ಅಂಚೆ ಕಿರು ಮಿಂಚಿನಂತೆ

• ಲತಾ ವಿಶ್ವನಾಥ್ ಉಪ್ಪೋಣಿ

ಜನಜೀವನ ಹಾಗೂ ಅಂಚೆಯ ಒಡನಾಟ ಇಂದು ನಿನ್ನೆಯದಲ್ಲ. ಅಂಚೆ ಡಬ್ಬಿಯ ಕೆಂಪು ಬಣ್ಣದ ಹೊಳಪಿಗೆ ಪತ್ರದ ಮಿಂಚು ಸೇರಿ ನೋಡುಗರಲ್ಲಿ ಪುಳಕ ಹುಟ್ಟಿಸುವುದು ದಿಟ.

ಹತ್ತು ಹಲವು ಭಾವನೆಗಳ ಸಾರ ಹೊತ್ತ ಪತ್ರಗಳನ್ನು ತನ್ನೊಳಗೆ ಹೊತ್ತ ಅಂಚೆಯ ಡಬ್ಬಿ, ಆ ಪತ್ರಗಳನ್ನು ಮನೆಮನೆಗೆ ತಲುಪಿಸುತ್ತಿದ್ದ ಅಂಚೆಯಣ್ಣ, ಊರಿನ ಗಲ್ಲಿಯಲ್ಲಿ ಅವನ ಸೈಕಲ್‌ನ ಟ್ರಿಣ್ ಟ್ರಿಣ್ ಸದ್ದು... ಕೇಳಿದವರ ಕಿವಿ ನಿಮಿರುತ್ತಿತ್ತು, ಕಣ್ಣು ಅರಳುತ್ತಿತ್ತು, ಭಾವತರಂಗಗಳು ಪುಟಿದೇಳುತ್ತಿದ್ದವು, ಕೆಲವೊಮ್ಮೆ ಅದೇನು ಸುದ್ದಿ ಬಂತೋ ಅನ್ನುವ ದಿಗಿಲು ಸಹ. ಹೀಗೆ ಭಾವನೆಗಳ ಜೊತೆಗೆ ಕಾಳಜಿ, ಪ್ರೀತಿ, ಮಮತೆಯ ಬಂಧಗಳನ್ನು ಜತನ ಮಾಡುತ್ತಾ ಬೆಸುಗೆಯನ್ನು ಗಟ್ಟಿಯಾಗಿಸುವಲ್ಲಿ ಪತ್ರ ಸಂವಹನವೇ ಮೂಲವಾಗಿದ್ದ ಕಾಲ ಒಂದಿತ್ತು.

ಅಂಚೆಯ ಲಕೋಟೆ, ಇನ್‌ಲ್ಯಾಂಡ್ ಪತ್ರದ ಮಾದರಿ, ಕಾರ್ಡಿನ ವಿನ್ಯಾಸ ಎಲ್ಲವೂ ಅಳಿಸಲಾಗದಂತೆ ನಮ್ಮ ಮನದಂಗಳದಲ್ಲಿ ಅಚ್ಚೊತ್ತಿವೆ. ಆದರೆ ಇತ್ತೀಚಿನ ದಿನಗಳಲ್ಲಿ ಸಾಮಾಜಿಕ ಮಾಧ್ಯಮಗಳ ಹಾವಳಿಯಲ್ಲಿ ಯುವಜನಾಂಗವು ಅಂಚೆ ವ್ಯವಸ್ಥೆಯಿಂದ ದೂರ ಸರಿದಿರುವುದು ದಿಟ. ಸಾಮಾಜಿಕ ಮಾಧ್ಯಮಗಳ ಮಿತಿಮೀರಿದ, ಅಸಮರ್ಪಕ ಬಳಕೆಯಿಂದ ಆಗುವ ಮಾನಸಿಕ ಹಾಗೂ ದೈಹಿಕ ಪರಿಣಾಮಗಳು ಬಹಳ. ಇದರಿಂದ ಬಾಂಧವ್ಯಗಳು ಯಾಂತ್ರಿಕ ಚೌಕಟ್ಟಿನೊಳಗೆ ಸೇರಿಹೋಗಿವೆ. ಇದನ್ನು ನೋಡಿದರೆ, ಅಂಚೆಯು ಅವಿನಾಭಾವ ಸಂಬಂಧಕ್ಕೆ ಮತ್ತು ಆರೋಗ್ಯಕರ ವಿಚಾರಧಾರೆಗಳಿಗೆ ನಿಲುಕುವ ಎಷ್ಟು ಅಪ್ಪಟ ವ್ಯವಸ್ಥೆ ಎನ್ನುವುದನ್ನು ಮನಗಾಣಬಹುದು.

ನಮಗೆ ಬಂದ ಪತ್ರವನ್ನು ಪಡೆದು, ಒಡೆದು ಓದುವಾಗ, ಸುತ್ತ ಮನೆ ಮಂದಿ ಕೂತು, ನಿಂತು, ಆತುಕೊಂಡು ಆಲಿಸುತ್ತಿದ್ದ ಪರಿ ನಿಜಕ್ಕೂ ಅವಿಸ್ಮರಣೀಯ, ಅನುಪಮ ಅನುಭವ. ಇಂತಹ ವಿನೂತನ ಚಾರಿತ್ರಿಕ ಅಂಚೆಯು ಪ್ರತಿವರ್ಷ ಅಕ್ಟೋಬರ್ 10ನ್ನು 'ವಿಶ್ವ ಅಂಚೆ ದಿನ'ವನ್ನಾಗಿ ಆಚರಿಸುತ್ತಾ ಬಂದಿದೆ. ಇಷ್ಟೊಂದು ಆಧುನಿಕ ಸಂವಹನ ವ್ಯವಸ್ಥೆಗಳು, ಪರ್ಯಾಯ ವ್ಯವಸ್ಥೆಗಳ ಅಬ್ಬರದ ನಡುವೆಯೂ ಅಂಚೆಗೆ ಅಂಚೆಯೇ ಉಪಮೆ ಅನ್ನುವುದೇ ವಿಶೇಷ.

ಹೆಮ್ಮೆಯ ವಿಚಾರವೆಂದರೆ, ಅಂಚೆ ಈಗ ಮೊದಲಿನಂತಿಲ್ಲ. 'ಹೊಸ ಚಿಗುರು ಹಳೆ ಬೇರು ಕೂಡಿರಲು ಮರ ಸೊಬಗು' ಎನ್ನುವ ಡಿ.ವಿ.ಜಿ. ಅವರ ಕಗ್ಗದ ಸಾಲಿನಂತೆ ತನ್ನ ಮೂಲ ಉದ್ದೇಶ ಹಾಗೂ ಅಸ್ತಿತ್ವದ ಗುರುತಾಗಿರುವ ಟಪಾಲು ನಿರ್ವಹಣೆಯ ಜೊತೆ ಜೊತೆಗೆ ಬಹುತೇಕ ಬ್ಯಾಂಕಿಂಗ್ ವ್ಯವಹಾರಗಳು, ವಿಮೆ, ಮಿಂಚಂಚೆ, ಆಧಾರ್ ಸೇವೆ, ಅಂಚೆಚೀಟಿ ಸಂಗ್ರಹದಂತಹ ಹೆಚ್ಚಿನ ಕ್ಷೇತ್ರಗಳಿಗೆ ತನ್ನ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದೆ. ಜೊತೆಗೆ ಸೇವಾ ನೈಪುಣ್ಯ ಹಾಗೂ ಓಡುವ ಜಗತ್ತಿನೊಡನೆ ಕೈಜೋಡಿಸಿ ಆನ್‌ಲೈನ್ ವ್ಯವಹಾರಕ್ಕೂ ಅಡಿಯಿಟ್ಟು ಯಶಸ್ವಿಯಾಗುತ್ತಿದೆ. ಇದು ಅದರ ಚಲನಶೀಲತೆಗೆ ಹಿಡಿದ ಕನ್ನಡಿಯೇ ಆಗಿದೆ.

ಅಂಚೆಯಣ್ಣನೂ ಕೈಯಲ್ಲೊಂದು ಡಿವೈಸ್ ಹಿಡಿದು ಮನೆ ಮನೆಗೆ ಎಡತಾಕುತ್ತಾ, ಹಣಕಾಸಿನ ವ್ಯವಹಾರಗಳು, ನಿವೃತ್ತ ಉದ್ಯೋಗಿಗಳ ಜೀವನ ಪ್ರಮಾಣಪತ್ರ ನೀಡುವುದು... ಹೀಗೆ ಡಿಜಿಟಲ್ ಯುಗದ ವೇಗಕ್ಕೆ, ಓಘಕ್ಕೆ ಒಗ್ಗಿ ಸೈ ಎನಿಸಿಕೊಂಡಿದ್ದಾನೆ.

ವಿದ್ಯಾರ್ಥಿಸ್ನೇಹಿ ಅಂಚೆ

ವಿದ್ಯಾರ್ಥಿಗಳನ್ನು ಈ ದಿಸೆಯಲ್ಲಿ ಹುರಿದುಂಬಿಸಲು ದೀನದಯಾಳ್ ಸ್ಪರ್ಶ ಯೋಜನೆಯಡಿ ವಿದ್ಯಾರ್ಥಿ ವೇತನವನ್ನು ಕೊಡಲಾಗುತ್ತಿದೆ. ಅಲ್ಲದೆ ಆಗಾಗ ಬಹುತೇಕ ಶಾಲಾ ಕಾಲೇಜುಗಳಲ್ಲಿ ಅಂಚೆ ಚೀಟಿ ಪ್ರದರ್ಶನ, ಅದೇ ರೀತಿ ಪತ್ರ ಸಂಸ್ಕೃತಿ ಅಭಿಯಾನದಡಿ ರಾಷ್ಟ್ರ, ರಾಜ್ಯ ಮಟ್ಟದ ಪತ್ರಲೇಖನ ಸ್ಪರ್ಧೆಗಳನ್ನೂ ಆಯೋಜಿಸಲಾಗುತ್ತಿದೆ. ಇದು ಶಿಕ್ಷಣ ಕ್ಷೇತ್ರದಲ್ಲಿ ಪ್ರೇರಣೆಯ ಕಿರಿ ಮಿಂಚಿನಂತೆ ಭಾಸವಾಗುತ್ತಿದೆ. ಇನ್ನು ವಿಮಾ ವಲಯಕ್ಕೆ ಸಂಬಂಧಿಸಿದಂತೆ ಅಪಘಾತ ವಿಮೆ, ಜೀವ ವಿಮೆ ಎರಡನ್ನೂ ಗ್ರಾಮ ಮಟ್ಟದವರೆಗೂ ವಿಸ್ತರಿಸಿ ದಾಖಲೆಯ ಪ್ರಗತಿ ಸಾಧಿಸಲಾಗಿದೆ. ಅಂತೆಯೇ ಪ್ರಧಾನಮಂತ್ರಿ ಸುರಕ್ಷಾ ಯೋಜನೆ, ಕೇಂದ್ರ ಹಾಗೂ ರಾಜ್ಯದ ಹತ್ತು ಹಲವು ಅನುದಾನಗಳು ಮಧ್ಯವರ್ತಿಗಳ ಹಾವಳಿಯಿಲ್ಲದೆ ಫಲಾನುಭವಿಗಳ ಖಾತೆಗೆ ನೇರವಾಗಿ ವರ್ಗಾವಣೆಗೊಳ್ಳುತ್ತಿರುವುದು ಅಂಚೆ ಇಲಾಖೆಯ ಸಾಮಾಜಿಕ ಬದ್ಧತೆಯನ್ನು ಎತ್ತಿ ಹಿಡಿಯುತ್ತದೆ.

ಅದೇ ರೀತಿ ಹಣಕಾಸು ಉಳಿತಾಯದ ವಿವಿಧ ಖಾತೆಗಳ ನಿರ್ವಹಣೆ ಅಚ್ಚುಕಟ್ಟಾಗಿ ಸಾಗುತ್ತಿದೆ. ಸಮಾಜದ ಅತ್ಯಂತ ಕೊನೆಯ ಮಟ್ಟಕ್ಕೂ ಎಟಕುವಂತೆ, ಅರ್ಥವಾಗುವಂತೆ, ಬಳಕೆಗೆ ಅನುಕೂಲವಾಗುವಂತೆ ಇರುವುದು ಅಂಚೆಯ ವಿಶೇಷ.

ಅಂಚೆಯು ರಿಜಿಸ್ಟರ್ಡ್ ಪತ್ರದ ಸೇವೆ ಸ್ಥಗಿತಗೊಳಿಸಿ, ಸ್ಪೀಡ್ ಪೋಸ್ಟ್ ಸೇವೆಯಲ್ಲೇ ಅದನ್ನು ವಿಲೀನಗೊಳಿಸಿರುವುದು ಇತ್ತೀಚಿನ ಬೆಳವಣಿಗೆ. ಆದರೆ ಇದು ಗ್ರಾಹಕ ವಲಯದಲ್ಲಿ ಕೊಂಚ ಗೊಂದಲ ಮೂಡಿಸಿದ್ದೂ ನಿಜ.



# ಮನೆಯೊಳಗೆ ನಳನಳಿಸಲಿ ಹಸಿರು





• ಅಶ್ವಿನಿ ಸಿ.

ಒಳಾಂಗಣ ಸಸ್ಯಗಳು ಎಂದರೆ ಕೇವಲ ಆಲಂಕಾರಿಕ ವಸ್ತುಗಳಲ್ಲ. ಇಡೀ ದಿನದ ಒತ್ತಡವನ್ನು ಮರೆಸಿ, ಮನಸ್ಸಿಗೆ ಮುದ ನೀಡುವಲ್ಲಿ ಈ ಸಸ್ಯಗಳ ಪಾತ್ರ ಪ್ರಮುಖವಾದುದು. ಹಸಿರನ್ನು ನೋಡುತ್ತಾ ಇದ್ದಷ್ಟೂ ಮನಸ್ಸು ನಿರಾಳವಾಗುವುದು ನಮ್ಮೆಲ್ಲರ ಅನುಭವಕ್ಕೂ ಬಂದಿರುತ್ತದೆ. ಆದರೆ, ಜನನಿಬಿಡ ಶಹರಗಳಲ್ಲಿ ಮನೆಯ ಅಂಗಳದಲ್ಲಿ ಗಿಡಮರಗಳು ಕಾಣಸಿಗುವುದು ವಿರಳ. ಅಂಥವರಿಗೆ ಮನೆ ಹಾಗೂ ಮನಸ್ಸಿನ ಪ್ರಶಾಂತತೆಯನ್ನು ಹೆಚ್ಚಿಸಿಕೊಳ್ಳಲು ಒಂದೊಳ್ಳೆ ಉಪಾಯವೆಂದರೆ, ಅದು ಒಳಾಂಗಣ ಸಸ್ಯಗಳು. ಯಾವ ಸಸ್ಯಗಳನ್ನು ಮನೆಯ ಒಳಗೆ ಉತ್ತಮವಾಗಿ ಬೆಳೆಸಬಹುದು ಎನ್ನುವ ಕೆಲವೊಂದಿಷ್ಟು ಮಾಹಿತಿ ಇಲ್ಲಿದೆ:

**ಹೊಯ (ವ್ಯಾಕ್ಸ್ ಪ್ಲ್ಯಾಂಟ್):** ನಕ್ಷತ್ರ ಆಕಾರದ, ಬಿಳಿ ಹೂವಿನ ಎಸಳಿನ ನಡುವೆ ಗುಲಾಬಿ ಬಣ್ಣವಿರುವ ಈ ವಿಶಿಷ್ಟ ಹೂವಿನ ಗಿಡವು ನೋಡುಗರ ಮನಸೂರೆಗೊಳ್ಳುವುದರಲ್ಲಿ ಸಂದೇಹವೇ ಇಲ್ಲ. ಆಕರ್ಷಕವಾಗಿರುವ ಈ ಗಿಡವನ್ನು ಬೆಳೆಸುವುದು ಕಷ್ಟದಾಯಕವೇನೂ ಅಲ್ಲ. ಕಡಿಮೆ ಬೆಳಕಿನಲ್ಲಿ ಬೆಳೆಯಬಹುದಾದ ಈ ಸಸ್ಯಕ್ಕೆ ನೀರಿನ ಅಗತ್ಯವೂ ಕಡಿಮೆ. ವರ್ಷದಲ್ಲಿ ಹಲವು ಬಾರಿ ಹೊಯ ಗಿಡದಲ್ಲಿ ಹೂಗಳು ಅರಳುತ್ತವೆ. ಗಾತ್ರದಲ್ಲೂ ಪುಟ್ಟದಾಗಿರುವ ಈ ಗಿಡವನ್ನು ಬುಟ್ಟಿಗಳಲ್ಲಿ, ಶೆಲ್ಫ್‌ಗಳ ಮೇಲೆ ಇಡಲು ಅನುವಾಗುವಂತೆ ಸಣ್ಣ ಪಾಟ್‌ಗಳಲ್ಲೂ ಬೆಳೆಸಬಹುದು.

**ಪೀಸ್ ಲಿಲ್ಲಿ:** ಸೂರ್ಯನ ನೇರ ಕಿರಣಗಳಿಲ್ಲದೆ, ನೆರಳಿನಲ್ಲಿಯೂ ಬೆಳೆಯಬಹುದಾದ ಈ ಗಿಡವನ್ನು ಹಲವರು ಶುಭದಾಯಕವೆಂದೂ ಪರಿಗಣಿಸುತ್ತಾರೆ. ವರ್ಷಪೂರ್ತಿ ಎಲ್ಲ ಋತುವಿನಲ್ಲೂ ಈ ಗಿಡದಲ್ಲಿ ಬಿಳಿ, ಗುಲಾಬಿ ಬಣ್ಣದ ಹೂಗಳನ್ನು ಕಾಣಬಹುದು. ಮನೆಯಲ್ಲಿ ಸ್ವಲ್ಪ ಗಾಳಿ ಬೆಳಕಿರುವ ಜಾಗದಲ್ಲಿ ಇಟ್ಟರೂ ಸೊಂಪಾಗಿ ಬೆಳೆಯಬಲ್ಲ ಈ ಗಿಡಕ್ಕೆ ಮಣ್ಣು ಒಣಗುತ್ತಿದೆ ಎನಿಸುವಾಗ ನೀರು ಹಾಕಿದರೂ ಸಾಕು.

**ಚೈನೀಸ್ ಎವರ್‌ಗ್ರೀನ್:** ಒಳಾಂಗಣ ಹಾಗೂ ಹೊರಾಂಗಣ ಎರಡರಲ್ಲಿಯೂ ಬೆಳೆಸಬಹುದಾದ ಗಿಡ ಇದಾಗಿದ್ದು, ಮಣ್ಣು ತೇವಾಂಶ ಹೊಂದಿದ್ದರೆ ಸಾಕು. ಅತಿಯಾದ ನೀರಿನ ಅವಶ್ಯಕತೆ ಈ ಗಿಡಕ್ಕಿಲ್ಲ. ನೀರು ಹೆಚ್ಚಾದರೆ ಗಿಡದ ಕಾಂಡ ಅಥವಾ ಬೇರು ಕೊಳೆಯುವ ಸಾಧ್ಯತೆ ಇರುತ್ತದೆ. ಚಳಿಗಾಲದಲ್ಲಿ ಕಡಿಮೆ ನೀರು ಹಾಕಬೇಕು. ಗಿಡದ ಎಲೆಗಳು ಬಿಳಿ ಬಣ್ಣಕ್ಕೆ ತಿರುಗಿದರೆ, ಬೇರು ಹಿಡಿದಿಟ್ಟುಕೊಂಡಿರುವ ನೀರು ಖಾಲಿಯಾಗುತ್ತಿದೆ ಎಂದು ಅರ್ಥ. 2ರಿಂದ 3 ಅಡಿಗಳಷ್ಟು ಎತ್ತರ ಬೆಳೆಯಬಲ್ಲ ಈ ಗಿಡವು ವಿಶಿಷ್ಟ ರೂಪಿನಿಂದ ಕೂಡಿದ ತನ್ನ ಎಲೆಗಳಿಂದಲೇ ಪ್ರಸಿದ್ಧಿಯಾಗಿದೆ.



**ಸ್ನೇಕ್ ಪ್ಲ್ಯಾಂಟ್:** ನೋಡುವುದಕ್ಕೆ ಹಾವಿನಂತೆ ಕಾಣುವ ಈ ಗಿಡವನ್ನು ಆಡುಭಾಷೆಯಲ್ಲಿ ಅತ್ತೆ ನಾಲಿಗೆ ಗಿಡ ಎಂದೂ ಕರೆಯಲಾಗುತ್ತದೆ. ಮನೆಯೊಳಗೆ ಉತ್ತಮ ಬೆಳಕಿರುವ ಜಾಗದಲ್ಲಿ ಈ ಗಿಡವನ್ನು ಬೆಳೆಸಬಹುದು. ವಿಶೇಷವೆಂದರೆ, ಮಂದ ಬೆಳಕು, ಕಡಿಮೆ ನೀರಿನಲ್ಲಿಯೂ ಈ ಗಿಡ ಬೆಳೆಯಬಲ್ಲದು. 6ರಿಂದ 20 ಇಂಚುಗಳಷ್ಟು ಎತ್ತರ ಬೆಳೆಯಬಲ್ಲ ಈ ಗಿಡಕ್ಕೆ ಪ್ರತಿನಿತ್ಯ ನೀರು ಹಾಕುವ ಅಗತ್ಯವಿಲ್ಲ. ಈ ಗಿಡದ ಬೇರು ಒಮ್ಮೆಗೇ ಸಾಕಷ್ಟು ನೀರನ್ನು ಹಿಡಿದಿಟ್ಟುಕೊಳ್ಳಬಲ್ಲದು. ದಿನನಿತ್ಯ ಆರೈಕೆ ಮಾಡುವ ಅಗತ್ಯವಿಲ್ಲದ ಕಾರಣ ಆರಾಮದಾಯಕವಾಗಿ ಈ ಗಿಡವನ್ನು ಬೆಳೆಸಬಹುದಾಗಿದೆ.

**ಆಲೋವೆರಾ (ಲೋಳೆಸರ):** ಸಾಮಾನ್ಯವಾಗಿ ಒಳಾಂಗಣ ಹಾಗೂ ಹೊರಾಂಗಣ ಎರಡು ಕಡೆಗಳಲ್ಲೂ ಈ ಗಿಡವನ್ನು ಬೆಳೆಸಬಹುದಾಗಿದೆ. ಔಷಧಿ ತಯಾರಿಕೆ, ಸೌಂದರ್ಯವರ್ಧಕಗಳ ತಯಾರಿಕೆಯಲ್ಲೂ ಲೋಳೆಸರವನ್ನು ಬಳಸುತ್ತಾರೆ. ಗಿಡದ ಎಲೆಯಲ್ಲಿ ಲೋಳೆಯ ಅಂಶ ಹೆಚ್ಚಾಗಿರುವ ಕಾರಣ ಇದನ್ನು ಲೋಳೆಸರ ಎಂದು ಕರೆಯಲಾಗುತ್ತದೆ. 12ರಿಂದ 24 ಇಂಚುಗಳ ಎತ್ತರದವರೆಗೆ ಈ ಗಿಡಗಳು ಬೆಳೆಯಬಲ್ಲವು. ಒಮ್ಮೆಗೆ ಹೆಚ್ಚಿನ ನೀರನ್ನು ಹಾಕಿದರೆ ಸಾಕು, ಪದೇ ಪದೇ ನೀರು ಹಾಕುವ ಅಗತ್ಯವಿಲ್ಲ. ಮಣ್ಣಿನಲ್ಲಿ ತೇವಾಂಶ ಕಡಿಮೆಯಾಗಿದೆ ಎನ್ನಿಸಿದಾಗ ನೀರು ಹಾಕಿದರೆ ಸಾಕು. ಸುಲಭವಾಗಿ ಈ ಗಿಡವನ್ನು ಬೆಳಸಬಹುದು.

# ‘ಸಂಬರಲ ಏಟಿಗಟ್ಟು’ ಗ್ಲಿಮ್ಸ್ ರಿಲೀಸ್




ಸಾಯಿ ದುರ್ಗಾ ತೇಜ್

**ತೆಲುಗಿನ ನಟ** ಸಾಯಿದುರ್ಗಾ ತೇಜ್ ನಟಿಸುತ್ತಿರುವ ಪ್ಯಾನ್-ಇಂಡಿಯಾ ಸಿನಿಮಾ ‘ಸಂಬರಲ ಏಟಿಗಟ್ಟು’ ಗ್ಲಿಮ್ಸ್ ಬಿಡುಗಡೆಯಾಗಿದೆ. ಪ್ರೈಮ್ ಶೋ ಎಂಟರ್‌ಟೈನ್ಮೆಂಟ್ ಯೂಟ್ಯೂಬ್ ಚಾನೆಲ್‌ನಲ್ಲಿ ಬಿಡುಗಡೆಯಾಗಿರುವ ಈ ಝಲಕ್‌ಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಭರ್ಜರಿ ಆ್ಯಕ್ಷನ್ ಮೂಲಕ ಅಬ್ಬರಿಸಿರುವ ಸಾಯಿದುರ್ಗಾ ತೇಜ್ ಮನರಂಜನಾತ್ಮಕವಾದ ಕಥೆಯೊಂದಿಗೆ ಪ್ರೇಕ್ಷಕರ ಎದುರಿಗೆ ಬರಲಿದ್ದಾರೆ. ಚಿತ್ರದಲ್ಲಿ ಸಾಯಿಗೆ ಜೋಡಿಯಾಗಿ ಐಶ್ವರ್ಯ ಲಕ್ಷ್ಮೀ ಸಾಥ್ ಕೊಟ್ಟಿದ್ದಾರೆ. ಜಗಪತಿ ಬಾಬು, ಸಾಯಿಕುಮಾರ್, ಶ್ರೀಕಾಂತ್ ಹಾಗೂ ಅನನ್ಯ ನಾಗಲ್ಲ ತಾರಾಬಳಗದಲ್ಲಿದ್ದಾರೆ. ಸಿನಿಮಾಗೆ ರೋಹಿತ್ ಕೆ.ಪಿ. ಆ್ಯಕ್ಷನ್ ಕಟ್ ಹೇಳಿದ್ದು, ವೆಟ್ರಿವೇಲ್ ಪಳನಿಸ್ವಾಮಿ ಛಾಯಾಚಿತ್ರಗ್ರಹಣ, ಬಿ.ಅಜನೀಶ್ ಲೋಕನಾಥ್ ಸಂಗೀತ ನಿರ್ದೇಶನ, ನವೀನ್ ವಿಜಯಕೃಷ್ಣ ಸಂಕಲನವಿದೆ.

‘ಹನುಮಾನ್’ನಂತಹ ಹಿಟ್ ಕೊಟ್ಟಿರುವ ಕೆ.ನಿರಂಜನ್ ರೆಡ್ಡಿ ಹಾಗೂ ಚೈತನ್ಯ ರೆಡ್ಡಿ ಪ್ರೈಮ್ ಶೋ ಎಂಟರ್‌ಟೇನ್ಮೆಂಟ್ ಬ್ಯಾನರ್‌ನಡಿ ಈ ಸಿನಿಮಾ ನಿರ್ಮಾಣವಾಗುತ್ತಿದೆ. ತೆಲುಗು, ಕನ್ನಡ, ಮಲಯಾಳ, ತಮಿಳು ಹಾಗೂ ಹಿಂದಿ ಭಾಷೆಯಲ್ಲಿ ಚಿತ್ರ ಬಿಡುಗಡೆಯಾಗಲಿದೆ.

# ಹಿಜಾಬ್ ಧರಿಸಿದ ದೀಪಿಕಾ ಚರ್ಚೆ ಹುಟ್ಟಿಸಿದ ನಡೆ



**ಯುನೈಟೆಡ್ ಅರಬ್** ಎಮಿರೇಟ್ಸ್ ದೇಶದ ಅಬುಧಾಬಿ ನಗರದ ಪ್ರವಾಸೋದ್ಯಮದ ಜಾಹೀರಾತಿನಲ್ಲಿ ನಟಿ ದೀಪಿಕಾ ಪಡುಕೋಣೆ ಅವರು ಹಿಜಾಬ್ ಧರಿಸಿ ಕಾಣಿಸಿಕೊಂಡಿರುವುದು ವಿವಾದಕ್ಕೆ ಕಾರಣವಾಗಿದೆ.

ದೀಪಿಕಾ ತಮ್ಮ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಇತ್ತೀಚೆಗೆ ಜಾಹೀರಾತಿನ ವಿಡಿಯೊವನ್ನು ಹಂಚಿಕೊಂಡಿದ್ದರು. ಈ ವಿಡಿಯೊದಲ್ಲಿ ನಟ ಹಾಗೂ ದೀಪಿಕಾ ಪತಿ ರಣವೀರ್ ಸಿಂಗ್ ಸಹ ಇದ್ದಾರೆ.

ಅಬುಧಾಬಿ ಸಿಟಿಯ ಪ್ರವಾಸೋದ್ಯಮ ಆಕರ್ಷಣೆಯ ಭಾಗವಾಗಿ ದೀಪಿಕಾ ಹಾಗೂ ರಣವೀರ್ ಅವರು ಅಲ್ಲಿನ ಶೇಖ್ ಜಾಯೆದ್ ಗ್ರ್ಯಾಂಡ್ ಮಸೀದಿಗೆ ಭೇಟಿ ನೀಡಿರುತ್ತಾರೆ. ಈ ವೇಳೆ ದೀಪಿಕಾ ಕೆಂಪು ಬಣ್ಣದ ಹಿಜಾಬ್ ಧರಿಸಿ ಕಾಣಿಸಿಕೊಂಡಿದ್ದರು.

ವಿಡಿಯೊದಲ್ಲಿ ಈ ಮಸೀದಿ ಸೇರಿದಂತೆ ಅಬುಧಾಬಿ ನಗರದ ಪ್ರವಾಸೋದ್ಯಮದ ಆಕರ್ಷಣೆಗಳ ಬಗ್ಗೆ ಹೇಳುತ್ತಾರೆ.

ದೀಪಿಕಾ ಹಿಜಾಬ್ ಧರಿಸಿರುವ ಬಗ್ಗೆ ಆನ್‌ಲೈನ್‌ನಲ್ಲಿ ಪರ–ವಿರೋಧದ ಚರ್ಚೆಗಳು ವ್ಯಾಪಕವಾಗಿ ನಡೆಯುತ್ತಿವೆ.

ಈ ಹಿಂದೆ 2015ರಲ್ಲಿ ದೀಪಿಕಾ ‘ಮೈ ಚಾಯ್ಸ್’ ಎಂಬ ಅಭಿಯಾನ ನಡೆಸಿ ಸುದ್ದಿಯಾಗಿದ್ದರು, ‘ನನ್ನ ಉಡುಗೆ, ನನ್ನ ಊಟ, ನನ್ನ ಇಷ್ಟಗಳು’ ಎಂದು ಪ್ರತಿಪಾದಿಸಿ ಸುದ್ದಿಯಾಗಿದ್ದರು. ಈಗ ಆ ಸಂಬಂಧದ ವಿಡಿಯೊವನ್ನು ಅನೇಕರು ದೀಪಿಕಾಗೆ ಟ್ಯಾಗ್ ಮಾಡಿ ‘ವೇರ್ ಈಸ್ ಯುವರ್ ಚಾಯ್ಸ್?’ ಎಂದು ಪ್ರಶ್ನಿಸಿದ್ದಾರೆ.

‘ನೀವೊಬ್ಬ ನಕಲಿ ಮಹಿಳಾವಾದಿ. ನಿಮ್ಮ ಇಷ್ಟದ ಪ್ರಕಾರ ಬಟ್ಟೆ ಹಾಕುವುದಾದರೆ ಅಬುಧಾಬಿಯಲ್ಲಿ ಅರಬ್ ಸಂಸ್ಕೃತಿಯನ್ನು ಪ್ರಚಾರ ಮಾಡುವ ರೀತಿಯಲ್ಲಿ ಹಿಜಾಬ್ ಧರಿಸಿ ಬೇರೆಯವರ ಮೇಲೆ ಪ್ರಭಾವ ಬೀರುವುದು ಏಕೆ? ಹಿಂದೂ ದೇವಸ್ಥಾನಗಳಿಗೆ ಭೇಟಿ ನೀಡಿದ್ದಾಗ ಈ ರೀತಿ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಉಡುಗೆ ತೊಡುವುದಿಲ್ಲವಲ್ಲ’ ಎಂದು ಪ್ರಶ್ನಿಸಿದ್ದಾರೆ.

ಇನ್ನು ಕೆಲವರು, ಹಿಂದೂ ಸಂಪ್ರದಾಯಗಳನ್ನು ದೀಪಿಕಾ ಈ ರೀತಿ ಪ್ರಚಾರ ಮಾಡುವುದಿಲ್ಲ ಏಕೆ ಎಂದು ಪ್ರಶ್ನಿಸಿದ್ದಾರೆ.

ದೀಪಿಕಾ ನಡೆಯನ್ನು ಕೆಲವರು ಸಮರ್ಥಿಸಿಕೊಂಡಿದ್ದಾರೆ. ಅಲ್ಲಿನ ಸಂಸ್ಕೃತಿಯನ್ನು ತೋರಿಸಿದರೆ ಏನು ತಪ್ಪು ಎಂದು ಕೇಳಿದ್ದಾರೆ. ದಿನಕ್ಕೆ 8 ಗಂಟೆ ಕೆಲಸದ ಅವಧಿ ನಿಗದಿ ಸೇರಿದಂತೆ ಕೆಲವು ಬೇಡಿಕೆಗಳನ್ನು ಇಟ್ಟ ಕಾರಣಕ್ಕೆ ದೀಪಿಕಾ ಅವರನ್ನು ಇತ್ತೀಚೆಗೆ ‘ಸ್ಪಿರಿಟ್’ ಚಿತ್ರದಿಂದ ತೆಗೆದುಹಾಕಿದ್ದು ಸುದ್ದಿಯಾಗಿತ್ತು.

# ನೀಲಿ ಸೀರೆಯಲ್ಲಿ ಕಂಗೊಳಿಸಿದ ಜಾಹ್ನವಿ






**ಬಹುನಿರೀಕ್ಷಿತ** ‘ಹೋಮ್‌ಬೌಂಡ್’ ಸಿನಿಮಾದ ಬಿಡುಗಡೆ ಕಾರ್ಯಕ್ರಮದಲ್ಲಿ ಜಾಹ್ನವಿ ಕಪೂರ್ ಅವರು ನೀಲಿ ಸೀರೆ ಧರಿಸಿ ನಟಿ ಶ್ರೀದೇವಿಯಂತೆ ಕಾಣಿಸಿಕೊಂಡಿರುವುದು ಪ್ರೇಕ್ಷಕರ ಗಮನ ಸೆಳೆದಿದೆ.

ವಿರಾಟ್ ಕೊಹ್ಲಿ ಹಾಗೂ ಅನುಷ್ಕಾ ಶರ್ಮಾ ವಿವಾಹದ ಸಂದರ್ಭದಲ್ಲಿ ಜಾಹ್ನವಿ ಕಪೂರ್ ಅವರ ತಾಯಿ ಶ್ರೀದೇವಿ ಇದೇ ಬಣ್ಣದ ಸೀರೆಯನ್ನು ಧರಿಸಿ ಮಿಂಚಿದ್ದರು. ಈ ಹಿನ್ನೆಲೆಯಲ್ಲಿ ಅವರ ಅಭಿಮಾನಿಗಳು ‘ತಾಯಿಯಂತೆ ಕಾಣಿಸುತ್ತಿದ್ದೀರ’ ಎಂದು ಅಭಿಪ್ರಾಯ ಹಂಚಿಕೊಳ್ಳುತ್ತಿದ್ದಾರೆ.

ಉತ್ತರ ಭಾರತದ ಹಳ್ಳಿಯೊಂದರಲ್ಲಿ ಇಬ್ಬರು ಯುವಕರು ಉದ್ಯೋಗಕ್ಕಾಗಿ ಪಡುವ ಕಷ್ಟವನ್ನು ಆಧರಿಸಿ ‘ಹೋಮ್‌ಬೌಂಡ್’ ಚಿತ್ರವನ್ನು ತಯಾರಿಸಲಾಗಿದೆ. ಈ ಸಿನಿಮಾವನ್ನು ನೀರಜ್ ಘಯ್ವಾನ್ ನಿರ್ದೇಶಿಸಿದ್ದು, ಇಶಾನ್ ಖಟ್ಟರ್, ವಿಶಾಲ್ ಜೇತ್ವಾ, ಜಾಹ್ನವಿ ಕಪೂರ್ ಸೇರಿದಂತೆ ಅನೇಕರು ನಟಿಸಿದ್ದಾರೆ.

# ವಾಷಿಂಗ್ ಮಷೀನ್‌ನಲ್ಲೂ ಎ.ಐ.!



ತಂತ್ರಜ್ಞಾನ


ಬಟ್ಟೆ ಒಗೆಯುವುದು ನಮ್ಮ ದೈನಂದಿನ ಕೆಲಸದ ಭಾಗವಾದರೂ ಸಮಯದ ಉಳಿತಾಯದ ನಿಟ್ಟಿನಲ್ಲಿ ಮನೆಯಲ್ಲಿ ವಾಷಿಂಗ್ ಮಷೀನ್ ಅನುಕೂಲಕರವೇ.

ಮಹಿಳೆಯರ ಮನದಿಂಗಿತ ಅರಿತ ಕೆಲ ಕಂಪನಿಗಳು ಅತ್ಯಾಧುನಿಕ ಸೌಲಭ್ಯಗಳ ವಾಷಿಂಗ್ ಮಷೀನ್‌ಗಳನ್ನು ಮಾರುಕಟ್ಟೆಗೆ ತಂದಿವೆ. ಮಧ್ಯಮ ವರ್ಗದವರನ್ನು ಗಮನದಲ್ಲಿಟ್ಟುಕೊಂಡು ಹೊರ ತಂದಿರುವ ಏಸರ್‌ನ ಬ್ಲಾಕ್ ಡೆಕರ್ ವಾಷಿಂಗ್ ಮಷೀನ್, ಎ.ಐ.ಆಧಾರಿತವಾಗಿದ್ದು, ವಿಶಿಷ್ಟವಾದ ಫೀಚರ್‌ಗಳನ್ನು ಹೊಂದಿವೆ. ಈ ವಾಷಿಂಗ್ ಮಷೀನ್ ಸಂಪೂರ್ಣ ಸ್ವಯಂಚಾಲಿತ, ಟಾಪ್-ಲೋಡಿಂಗ್ ಮತ್ತು ಫ್ರಂಟ್-ಲೋಡಿಂಗ್ ವಿಧಗಳಲ್ಲಿ ಲಭ್ಯ. ವಿವಿಧ ಸಾಮರ್ಥ್ಯಗಳಲ್ಲಿ ಸಿಗುವ ಈ ಬಟ್ಟೆ ಒಗೆಯುವ ಯಂತ್ರದಲ್ಲಿ 5 ಸ್ಟಾರ್ ರೇಟಿಂಗ್ ಹೊಂದಿರುವ 7 ಕೆ.ಜಿ. ಟಾಪ್ ಲೋಡ್ ಮಾದರಿ ಬಳಕೆದಾರಸ್ನೇಹಿಯಾಗಿದೆ. ವಿನ್ಯಾಸ ಸೊಗಸಾಗಿದೆ, ಗಾತ್ರದಲ್ಲಿ ಚಿಕ್ಕದಿದ್ದು, ಕಡಿಮೆ ಜಾಗದಲ್ಲಿ ಇಟ್ಟುಕೊಳ್ಳಬಹುದು. ವಿದ್ಯುತ್ ದಕ್ಷತೆಯನ್ನೂ ಒದಗಿಸುತ್ತದೆ. ಆಟೊ ಪವರ್ ಆಫ್ ವ್ಯವಸ್ಥೆಯಿದೆ.

ಈ ವಾಷಿಂಗ್ ಮಷೀನ್ 6.5 ಕೆಜಿ, 7 ಕೆ.ಜಿ ಮತ್ತು 8 ಕೆ.ಜಿ ಸಾಮರ್ಥ್ಯಗಳಲ್ಲಿ ಲಭ್ಯ ಸಿಗುತ್ತದೆ. ಫ್ರಂಟ್ ಲೋಡಿಂಗ್ ಮಾದರಿಯಲ್ಲಿ ಇನ್-ಬಿಲ್ಟ್ ಹೀಟರ್ ವ್ಯವಸ್ಥೆ ಇದ್ದು, ಸಂಪೂರ್ಣ ಆಟೊಮ್ಯಾಟಿಕ್ ಆಗಿದೆ. Amazon.in, Bajaj Finserv ಮತ್ತು Dealsmagnet.com ನಂತಹ ಆನ್‌ಲೈನ್ ಪ್ಲಾಟ್‌ಫಾರ್ಮ್‌ಗಳಲ್ಲಿ ಲಭ್ಯ. ಬೆಲೆ ಮಾದರಿಗೆ ಅನುಗುಣವಾಗಿ ₹ 17,000 , ₹ 22,000 ಸಾವಿರ . ಎರಡು ವರ್ಷ ವಾರಂಟಿ, ಹತ್ತು ವರ್ಷಗಳ ಮೋಟಾರ್ ವಾರಂಟಿಯನ್ನು ವಾಷಿಂಗ್ ಮಷೀನ್ ಹೊಂದಿದೆ.

## ಅತ್ಯಾಧುನಿಕ ಕ್ಯುಎಲ್‌ಡಿ ಟಿ.ವಿ.

ಆಧುನಿಕ ಮನೆಗಳಿಗೆ ಅತ್ಯಾಧುನಿಕವಾದ ಟಿ.ವಿ., ಫ್ರಿಜ್ ಮುಂತಾದ ಉತ್ಪನ್ನಗಳೇ ಬೇಕು. ಮನೆಯ ಒಳಾಂಗಣ ವಿನ್ಯಾಸ ಆಕರ್ಷಕವಾಗಿರುವಾಗ ಇದಕ್ಕೆ ತಕ್ಕುದಾದ ಟಿ.ವಿ. ಇಲ್ಲದಿದ್ದರೆ ಹೇಗೆ? ಬೆಲೆಯೂ ಕಡಿಮೆ ಇರಬೇಕು, ಹೊಸ ಹಾಗೂ ವಿಭಿನ್ನ ತಂತ್ರಜ್ಞಾನವನ್ನೊಳಗೊಂಡ ಟಿ.ವಿ.ಯನ್ನು ಬ್ಲಾಕ್ ಡೆಕರ್ ಸುಪ್ರೀಂ ಸೀರೀಸ್ ಅಡಿಯಲ್ಲಿ ಮಾರುಕಟ್ಟೆಗೆ ತಂದಿದೆ. ಫ್ರೇಮ್‌ಲೆಸ್ ಸ್ಲಿಮ್ ಮೆಟಲ್ ಡಿಸೈನ್ ಹೊಂದಿದ್ದು ಇದರ ವಿಶೇಷ. ಇದರಲ್ಲಿನ ಡ್ಯುಯಲ್ ಮೆಟಲ್ ಸ್ಟ್ಯಾಂಡ್ ಮನೆಯ ಕೊಠಡಿಗಳ ಹೊಸ ಲುಕ್ ಕೊಡುತ್ತದೆ. ಕೇವಲ 11.8 ಕೆ.ಜಿ. ತೂಕ ಹೊಂದಿರುವ ಈ ಟಿ.ವಿ.ಯನ್ನು ಗೋಡೆಗೆ ಫಿಕ್ಸ್ ಮಾಡಬಹುದು. ರಿಮೋಟ್ ಸುಂದರವಾಗಿದ್ದು, ನೆಟ್‌ಫ್ಲಿಕ್ಸ್, ಪ್ರೈಮ್ ವಿಡಿಯೊ, ಯೂಟ್ಯೂಬ್ ಮತ್ತು ಗೂಗಲ್ ಅಸಿಸ್ಟೆನ್ಸ್‌ಗೆ ವಿಶೇಷ ಕೀಗಳನ್ನು ಹೊಂದಿದೆ. ಡಿಸ್‌ಪ್ಲೇ ವಿಷನ್ ಚೆನ್ನಾಗಿದೆ. ಬೆಳಕು ಕಡಿಮೆ ಇರುವ ಕೊಠಡಿಗಳಲ್ಲೂ ದೃಶ್ಯವೈಭವ ಚೆನ್ನಾಗಿ ಕಾಣಿಸುತ್ತದೆ, ಇದಕ್ಕೆ ಕಾರಣ ಇದರ ಎ.ಐ. ಸಾಮರ್ಥ್ಯ. ಆಡಿಯೊ ವ್ಯವಸ್ಥೆ ಅಪೂರ್ವವಾಗಿದ್ದು, ಅದರಂತೆ ಟಿ.ವಿಯನ್ನು ರೂಪಿಸಲಾಗಿದೆ ಎಂಬುದು ಕಂಪನಿ ವಿವರಣೆ.



**ಸ್ಮಾರ್ಟ್ ಫೀಚರ್:** ಎ.ಐ.ಚಾಲಿತ ಟ್ವಿನ್ ಪ್ರೊಸೆಸರ್ (ಎ 75 + ಎ55), 2 ಜಿಬಿ ರ‍್ಯಾಮ್ ಮತ್ತು 16 ಜಿಬಿ ಸ್ಟೋರೇಜ್ ಲಭ್ಯವಿದೆ.

ಗೂಗಲ್ ಟಿವಿ ಆ್ಯಂಡ್ರಾಯ್ಡ್ 14ನಲ್ಲಿ ಕಾರ್ಯನಿರ್ವಹಿಸುತ್ತದೆ. ನೆಟ್‌ಫ್ಲಿಕ್ಸ್, ಜಿಯೋ ಹಾಟ್ ಸ್ಟಾರ್ ಆ್ಯಪ್‌ಗಳು ಕೇವಲ ಎರಡು ಸೆಕೆಂಡ್‌ಗಳಲ್ಲಿ ತೆರೆದುಕೊಳ್ಳುತ್ತವೆ. 55 ಇಂಚುಗಳ ಕ್ಯುಎಲ್‌ಡಿ ಟಿ.ವಿ. ಬೆಲೆ 44,999 ರೂಪಾಯಿ.

# ರಸ್ತೆ ಸುರಕ್ಷತೆ ಕುರಿತು ಅರಿವು



ಹೊಸ್ಮಟ್ ಹಾಸ್ಪಿಟಲ್ಸ್ ಸಿಬ್ಬಂದಿಯಿಂದ ರಸ್ತೆ ಸುರಕ್ಷತೆ ಜಾಗೃತಿ

**ಹೊಸ್ಮಟ್ ಹಾಸ್ಪಿಟಲ್ಸ್** ರಸ್ತೆ ಸುರಕ್ಷತೆ ಮತ್ತು ಅಪಘಾತಗಳ ಬಗ್ಗೆ ಜಾಗೃತಿ ಮೂಡಿಸುವ ಸಲುವಾಗಿ ಹೆಣ್ಣೂರು ಜಂಕ್ಷನ್‌ನಲ್ಲಿ ಫ್ಲ್ಯಾಷ್ ಮಾಬ್ ಆಯೋಜನೆ ಮಾಡಿತ್ತು.

ಈ ಸಂದರ್ಭದಲ್ಲಿ ಆಸ್ಪತ್ರೆಯ ಸಿಬ್ಬಂದಿ ಸಂಚಾರ ನಿಯಮಗಳನ್ನು ಪಾಲಿಸಲು, ಸುರಕ್ಷಿತ ಹೆಲ್ಮೆಟ್‌ವೊಂದನ್ನು ಕಡ್ಡಾಯವಾಗಿ ಧರಿಸಲು, ವೇಗದ ಚಾಲನೆ ತಪ್ಪಿಸುವಂತೆ ವಿನಂತಿಸಿತು.

ಹೆಣ್ಣೂರು ಪೊಲೀಸ್ ಸಿಬ್ಬಂದಿಗೆ ಆಸ್ಪತ್ರೆಯ ತುರ್ತು ಚಿಕಿತ್ಸಾ ವಿಭಾಗದ ಮುಖ್ಯಸ್ಥ ಡಾ. ಶಾಂತಿಪ್ರಿಯ ಅವರ ನೇತೃತ್ವದಲ್ಲಿ ತುರ್ತು ಚಿಕಿತ್ಸೆಯ ಬಗ್ಗೆ ತರಬೇತಿ ಶಿಬಿರವನ್ನು ನೀಡಲಾಯಿತು. ಹೆಣ್ಣೂರು ಪೊಲೀಸ್ ಠಾಣೆಯ 50ಕ್ಕೂ ಹೆಚ್ಚು ಅಧಿಕಾರಿಗಳಿಗೆ ಪ್ರಾಯೋಗಿಕ ತಂತ್ರಗಳ ಮೂಲಕ ಜೀವ ರಕ್ಷಣಾ ತಂತ್ರಗಳನ್ನು ಕಲಿಸಲಾಯಿತು. 2025ರ ಮೊದಲ ಆರು ತಿಂಗಳಲ್ಲಿ ಭಾರತದ ರಾಷ್ಟ್ರೀಯ ಹೆದ್ದಾರಿಗಳಲ್ಲಿ 29,000ಕ್ಕೂ ಹೆಚ್ಚು ಜೀವಗಳು ಪ್ರಾಣ ಕಳೆದುಕೊಂಡಿವೆ. ಈ ಸಂಖ್ಯೆಯು ಕಳೆದ ವರ್ಷದ ಒಟ್ಟು ಸಾವಿನ ಸಂಖ್ಯೆಗಿಂತ ಶೇ 50ರಷ್ಟು ಹೆಚ್ಚು ಎಂದು ಅಂದಾಜಿಸಲಾಗಿದೆ. ಬೆಂಗಳೂರಿನಲ್ಲಿ 2024ರಲ್ಲಿ 4,784 ರಸ್ತೆ ಅಪಘಾತಗಳು ಸಂಭವಿಸಿದ್ದು, ಅದರಲ್ಲಿ 893 ಜನರು ಮೃತಪಟ್ಟಿದ್ದಾರೆ. ಬೆಂಗಳೂರಿನಲ್ಲಿ ನಡೆದ ರಸ್ತೆ ಅಪಘಾತಗಳಲ್ಲಿ ಶೇ 70ರಷ್ಟು ವಾಹನಗಳು ದ್ವಿಚಕ್ರ ವಾಹನಗಳಾಗಿವೆ.

ಈ ಸಂದರ್ಭದಲ್ಲಿ ಮಾತನಾಡಿದ ಡಾ. ಶಾಂತಿಪ್ರಿಯಾ, ‘ವಿಶ್ವ ಆಘಾತ ನಿಯಂತ್ರಣ ದಿನದ ಪ್ರಯುಕ್ತ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಪ್ರತಿ ಕ್ಷಣವೂ ಅಮೂಲ್ಯ. ಅಪಘಾತ ಯಾವಾಗ ಬೇಕಾದರೂ ಸಂಭವಿಸಬಹುದು. ಸಹಾಯಕ್ಕೆ ಒದಗುವ ಪ್ರತಿಯೊಬ್ಬರು ಈ ಸಂದರ್ಭದಲ್ಲಿ ದೈವಸ್ವರೂಪಿಗಳು’ ಎಂದು ಹೇಳಿದರು.

ಪೊಲೀಸ್ ಇನ್‌ಸ್ಪೆಕ್ಟರ್ ದೀಪಕ್ ಎಲ್., ‘ ಅಧಿಕಾರಿಗಳಿಗೆ ನೀಡಿದ ಪ್ರಾಯೋಗಿಕ ತರಬೇತಿ ಉಪಯುಕ್ತ. ಹೃದಯ ಸ್ತಂಭನ ಪ್ರಕರಣಗಳಲ್ಲಿ ಯಾವ ರೀತಿಯ ತುರ್ತು ಚಿಕಿತ್ಸೆ ನೀಡಬೇಕು ಎಂಬುದು ಮನದಟ್ಟಾಗಿದೆ. ತಕ್ಷಣವೇ ನೆರವಿಗೆ ಧಾವಿಸುವವರಾಗಿರುವ ನಮಗೆ ಈ ತರಬೇತಿಯು ಬಹಳ ಉಪಯುಕ್ತ’ ಎಂದು ಶ್ಲಾಘಿಸಿದರು.

ಸಬ್ ಇನ್‌ಸ್ಪೆಕ್ಟರ್‌ಗಳಾದ ಪರಶುರಾಮ ಬಿ. ಮತ್ತು ನರಸಿಂಹಲು ಇದ್ದರು.

# ಹಾಸನಾಂಬೆ ದರ್ಶನ ಪಡೆದ ಟಿ.ಎ.ಶರವಣ

**ಹಾಸನ :** ರಾಜ್ಯದ ಸುಪ್ರಸಿದ್ಧ ಧಾರ್ಮಿಕ ಕ್ಷೇತ್ರಗಳಲ್ಲಿ ವಿಶೇಷ ಮಹತ್ವ ಹೊಂದಿರುವ, ವರ್ಷಕ್ಕೆ ಒಮ್ಮೆ ಮಾತ್ರ ಭಕ್ತರಿಗೆ ದರ್ಶನ ಭಾಗ್ಯ ಕಲ್ಪಿಸುವ ಪವಾಡ ಪ್ರಸಿದ್ಧ ಕ್ಷೇತ್ರ ಹಾಸನದ ಅಧಿದೇವತೆ ಶ್ರೀಹಾಸನಾಂಬೆ ದೇವಸ್ಥಾನಕ್ಕೆ ವಿಧಾನ ಪರಿಷತ್ ಸದಸ್ಯರಾದ ಟಿಎ.ಶರವಣ ಅವರು ಕುಟುಂಬ ಸಮೇತ ಭೇಟಿ ನೀಡಿ, ವಿಶೇಷ ಪೂಜೆ ಸಲ್ಲಿಸಿದರು. ವರ್ಷಕ್ಕೊಮ್ಮೆ ಆಶ್ವಯುಜ ಮಾಸದ ಹುಣ್ಣಿಮೆಯ ನಂತರ ಕೆಲವೇ ದಿನಗಳ ಕಾಲ ತೆರೆಯುವ ಈ ಶಕ್ತಿಪೀಠ ಇಷ್ಟಾರ್ಥಗಳನ್ನು ಈಡೇರಿಸುವ ಪ್ರತೀತಿ ಹೊಂದಿದೆ. ಈ ಶಕ್ತಿಪೀಠಕ್ಕೆ ಟಿಎ. ಶರವಣ ಮತ್ತವರ ಕುಟುಂಬ ಭೇಟಿ ನೀಡಿ, ತಾಯಿಯ ದರ್ಶನ ಪಡೆದರು.

ಈ ವೇಳೆ ಮಾತನಾಡಿದ ವಿಧಾನ ಪರಿಷತ್ ಸದಸ್ಯರಾದ ಟಿಎ. ಶರವಣ ಅವರು, 'ಹಾಸನಾಂಬೆ ತಾಯಿಯ ದರ್ಶನದಿಂದ ನಿಜಕ್ಕೂ ಪುನೀತರಾದೆವು. ಕೋಟ್ಯಾಂತರ ಭಕ್ತರ ನಂಬಿಕೆ ಮತ್ತು ಶ್ರದ್ಧೆಯ ಪ್ರತೀಕವಾಗಿರುವ ಈ ನಂದಾದೀಪದ ಪವಾಡ ಮನಸ್ಸಿಗೆ ಅಪಾರ ಶಾಂತಿ ನೀಡುತ್ತದೆ. ತಾಯಿಯ ಆಶೀರ್ವಾದ ನಮ್ಮ ಕುಟುಂಬದ ಮೇಲೆ ಮಾತ್ರವಲ್ಲದೇ, ನಾಡಿನ ಸಮಸ್ತ ಜನತೆಯ ಮೇಲೆ ಸದಾ ಇರಲಿ. ಎಲ್ಲರೂ ಸುಖ, ನೆಮ್ಮದಿ ಮತ್ತು ಸಮೃದ್ಧಿಯಿಂದ ಬಾಳಲಿ ಎಂದು ಹೃತ್ಪೂರ್ವಕವಾಗಿ ಪ್ರಾರ್ಥಿಸಿದ್ದೇನೆ' ಎಂದು ತಿಳಿಸಿದರು.



ಕುಟುಂಬ ಸಮೇತ ಹಾಸನಾಂಬೆ ದೇಗುಲಕ್ಕೆ ಭೇಟಿ ನೀಡಿ ದರ್ಶನ ಪಡೆದ ವಿಧಾನ ಪರಿಷತ್ ನಾಯಕ ಟಿ.ಎ.ಶರವಣ ; ನಾಡಿನ ಒಳಿತಿಗೆ, ಮಾಜಿ ಪ್ರಧಾನಿ ಎಚ್‌ಡಿ.ದೇವೇಗೌಡರ ಮತ್ತು ಕೇಂದ್ರ ಸಚಿವ ಎಚ್‌ಡಿ.ಕುಮಾರಸ್ವಾಮಿಯವರ ಆರೋಗ್ಯ ವೃದ್ಧಿಗೆ ಪ್ರಾರ್ಥನೆ

**ದೇವೇಗೌಡರು ಮತ್ತು ಕುಮಾರಸ್ವಾಮಿ ಆರೋಗ್ಯ ವೃದ್ಧಿಗೆ ವಿಶೇಷ ಪ್ರಾರ್ಥನೆ!:** ಹಾಸನಾಂಬೆಗೆ ವಿಶೇಷ ಪೂಜೆ ಸಲ್ಲಿಸಿದ ವಿಧಾನ ಪರಿಷತ್ ಸದಸ್ಯ ಟಿಎ.ಶರವಣರವರು, ಮಾಜಿ ಪ್ರಧಾನಿ ಎಚ್‌ಡಿ.ದೇವೇಗೌಡರು ಮತ್ತು ಕೇಂದ್ರ ಸಚಿವರಾದ ಎಚ್‌ಡಿ.ಕುಮಾರಸ್ವಾಮಿಯವರ ಆರೋಗ್ಯ ವೃದ್ಧಿಗಾಗಿ ಪ್ರಾರ್ಥಿಸಿದರು. ನಾಡಿಗಾಗಿ ಹಗಲಿರುಳು ಶ್ರಮಿಸುವ ಎರಡು ಮಹಾನ್ ನಾಯಕರ ಆರೋಗ್ಯ ಸದಾ ಚೈತನ್ಯದಾಯವಾಗಿರಲೆಂದು ಪ್ರಾರ್ಥನೆ ಸಲ್ಲಿಸಿದರು.